ಮಂಗಳೂರು
ಶುಕ್ರವಾರ, 3 ಏಪ್ರಿಲ್ 2026
ಸಂಪುಟ 48, ಸಂಚಿಕೆ 15, ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ರಕ್ಷಣಾ ರಫ್ತು ದಾಖಲೆ ಏರಿಕೆ | ೦೨
ಮೋದಿ ರಾಜತಾಂತ್ರಿಕತೆ: ಕೈ ನಾಯಕ ಶ್ಲಾಘನೆ | ೦೨
ಬೂಕರ್: ಅಂತಿಮ ಪಟ್ಟಿಗೆ ಭಾರತೀಯ ಲೇಖಕಿ | ೦೨

## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಚಿತ್ರೆ

### ದಿನದ ಮಾತು

ಬಂದ ಸುಖವ ಬಿಡಬೇಡ. ಬಾರದುದನ್ನು ಬೇಕೆಂದು ಬಯಸಬೇಡ.

▲ ರತ್ನಾಕರವರ್ಣಿ

### ಕಾರ್ಯಕರ್ತನೇ? ಆತ ಬಂಗಾಳದಲ್ಲಿದ್ದಾನೆ!

ಉಘೇ ವೀರ ಭೂಮಿಗೆ

• ಸಂತೋಷ್ ತಮ್ಮಯ್ಯ

• ಪುಟ ೬

## ಕಿರುಸುದ್ದಿ

### ಬುಡಕಟ್ಟು ಕ್ರೀಡಾ ಪ್ರತಿಭೆ: ನಮ್ಮ ರಾಷ್ಟ್ರೀಯ ಹೆಮ್ಮೆ

• ದ್ರೌಪದಿ ಮುರ್ಮು, ರಾಷ್ಟ್ರಪತಿ

ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮಕ್ಕಳು ಹೆಚ್ಚಿನ ಸಮಯವನ್ನು ಪ್ರಕೃತಿಯ ಮಡಿಲಿನಲ್ಲಿ ಕಳೆಯುತ್ತಾರೆ ಎಂಬುದು ಗಮನಿಸಿದ್ದೇನೆ. ಆಟವಾಡಲು ಅವರು ಸರಳ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ನೆಲದ ಮೇಲೆ ಗೆರೆಗಳನ್ನು ಎಳೆದು, ಆಕಾರಗಳನ್ನು ರಚಿಸಿ ಆಟದ ಅಖಾಡಗಳನ್ನು ತಯಾರಿಸುತ್ತಾರೆ. ಒಣಗಿದ ಹಣ್ಣಿನ ಬೀಜಗಳನ್ನು ಪಗಡೆ ಮತ್ತು ಚಿಕ್ಕ ತುಂಡುಗಳಾಗಿ ಬಳಸುತ್ತಾರೆ. ಒಣ ಎಲೆಗಳು, ಮರದ ಬೇರುಗಳು ಮತ್ತು ಹಳೆಯ ಬಟ್ಟೆಯ ತುಂಡುಗಳಿಂದ ಚೆಂಡುಗಳನ್ನು ತಯಾರಿಸುತ್ತಾರೆ. ಬಿದಿರನ್ನು ಬಳಸಿ ಅವರು ಹಾಕಿ ಮತ್ತು ಫುಟ್ಬಾಲ್ ಗೋಲ್‌ಪೋಸ್ಟ್‌ಗಳನ್ನು ನಿರ್ಮಿಸುತ್ತಾರೆ. ಹೀಗೆ ವಿವಿಧ ನೈಸರ್ಗಿಕ ವಸ್ತುಗಳನ್ನು ಬಳಸಿ ತಮ್ಮದೇ ಕ್ರೀಡಾ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ಅನೇಕ ಮಕ್ಕಳು ಚಪ್ಪಲಿ ಅಥವಾ ಜೆರ್ಸಿ ಇಲ್ಲದೆಯೇ ಉತ್ಸಾಹದಿಂದ ಆಟವಾಡುತ್ತಾರೆ. ಕೆರೆ ಮತ್ತು ಸರೋವರಗಳಲ್ಲಿ ಈಜಾಡುತ್ತಾರೆ.

• ಪುಟ ೧೧

### ಸಂಸತ್ ಭವನದಲ್ಲಿ ಆಜಾದ್ ಭಾರತ್ ಸಿನಿಮಾ ಪ್ರದರ್ಶನ

• **ಹೊಸದಿಲ್ಲಿ:** ದೇಶಭಕ್ತಿ, ರಾಷ್ಟ್ರೀಯ ಸೇವಾ ಮೌಲ್ಯಗಳಿಗೆ ಸದಾ ಪ್ರೇರಣೆಯಾಗಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಗೌರವಾರ್ಥ ಕರ್ನಾಟಕದ ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿದ ಆಜಾದ್ ಭಾರತ್ ಹಿಂದಿ ಚಲನಚಿತ್ರ ಪ್ರದರ್ಶನಕ್ಕೆ ಸಂಸತ್ ಭವನ ಸಾಕ್ಷಿಯಾಯಿತು.

• ಪುಟ ೫

### ಆಡಳಿತ ವ್ಯವಸ್ಥೆಗಳ ನಿರಂತರ ಸುಧಾರಣೆ ಅಗತ್ಯ: ಮೋದಿ

• ಪುಟ ೨

### ಹನುಮಾನ್ ಮಂದಿರ ಮೇಲೆ ಧ್ವಜಾರೋಹಣ

• ಪುಟ ೨

### ಆಪ್‌ನ ಉಪನಾಯಕ ಸ್ಥಾನದಿಂದ ಛಡ್ಡಾ ಹೊರಕ್ಕೆ!

• ಪುಟ ೨

### ಪೆಟ್ರೋಕೆಮಿಕಲ್ಸ್ ಮೇಲಿನ ಕಸ್ಟಮ್ಸ್ ಸುಂಕ ಕೈಬಿಟ್ಟ ಕೇಂದ್ರ

• ಪುಟ ೨

ನ್ಯಾಯಾಂಗ ಅಧಿಕಾರಿಗಳ ಮೇಲೆ ದಾಳಿಗೆ ಕಿಡಿ | ತನಿಖೆಗೆ ಆದೇಶ

# ದೀದಿಗೆ ಸುಪ್ರೀಂ ಛೀಮಾರಿ




• **ಹೊಸದಿಲ್ಲಿ/ಕೋಲ್ಕತ್ತಾ:** ಪಶ್ಚಿಮ ಬಂಗಾಳವನ್ನು "ದೇಶದಲ್ಲೇ ಅತ್ಯಂತ ಧ್ರುವೀಕೃತ ರಾಜ್ಯ" ಎಂದು ಕಿಡಿಕಾರಿದ ಸುಪ್ರೀಂ ಕೋರ್ಟ್, ಮಾಲ್ಡಾ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ(ಎಸ್‌ಐಆರ್) ಕಾರ್ಯದಲ್ಲಿ ತೊಡಗಿದ್ದ ಏಳು ನ್ಯಾಯಾಂಗ ಅಧಿಕಾರಿಗಳನ್ನು ಪ್ರತಿಭಟನಾಕಾರರು ಗಂಟೆಗಳ ಕಾಲ ಸುತ್ತುವರಿದು ಬಂಧಿಸಿದ ಘಟನೆಯನ್ನು ತೀವ್ರವಾಗಿ ಖಂಡಿಸಿದೆ. ಇದೇ ವೇಳೆ ಈ ಪ್ರಕರಣದ ತನಿಖೆಯನ್ನು ಸಿಬಿಐ ಅಥವಾ ಎನ್‌ಐಎಗೆ ವಹಿಸಲು ಆದೇಶಿಸಿದೆ.

ಈ ಘಟನೆ ರಾಜ್ಯ ಸರಕಾರದ 'ಸಂಪೂರ್ಣ ವಿಫಲತೆ' ಹಾಗೂ ನಿರ್ಲಕ್ಷ್ಯವನ್ನು ತೋರಿಸುತ್ತದೆ ಎಂದು ಕೋರ್ಟ್ ಗಂಭೀರವಾಗಿ ಆಕ್ಷೇಪಿಸಿದೆ. ನ್ಯಾಯಾಂಗ ಅಧಿಕಾರಿಗಳ ಮೇಲೆ ನಡೆದ ದಾಳಿ ಮತ್ತು ಸುತ್ತುವರಿಕೆ "ಅತ್ಯಂತ ದುರಂತಕರ' ಎಂದು ಅಭಿಪ್ರಾಯಪಟ್ಟಿದೆ.

ಮಾಲ್ಡಾ ಜಿಲ್ಲೆಯ ಕಾಳಿಯಾಚೌಕ್ ಪ್ರದೇಶದಲ್ಲಿ ಬುಧವಾರ ಸಂಜೆ 3:30ರಿಂದ ಆರಂಭವಾದ ಈ ಘಟನೆಯಲ್ಲಿ, ಏಳು ನ್ಯಾಯಾಂಗ ಅಧಿಕಾರಿಗಳನ್ನು ಅಭಿವೃದ್ಧಿ ಕಚೇರಿಯಲ್ಲಿ ಕೆಲ ದುಷ್ಕರ್ಮಿಗಳು ಸುತ್ತುವರಿದು, ಒಂಬತ್ತು ಗಂಟೆಗಳಿಗೂ ಹೆಚ್ಚು ಕಾಲ ಒತ್ತೆಯಿಟ್ಟುಕೊಂಡಿದ್ದರು. ಆಹಾರ ಹಾಗೂ ನೀರಿಲ್ಲದೇ ಅವರು ಸಂಕಷ್ಟಕ್ಕೆ ಸಿಲುಕಿದ್ದರು.


ಭದ್ರತಾ ಪಡೆಗಳು ಮಧ್ಯರಾತ್ರಿ ವೇಳೆಗೆ ಅಧಿಕಾರಿಗಳನ್ನು ರಕ್ಷಿಸಿವೆ. ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದುಹಾಕಲಾಗಿದೆ ಎಂಬ ಆರೋಪವೇ ಈ ಗದ್ದಲಕ್ಕೆ ಕಾರಣವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ➡ಪುಟ ೪

### ಏನಿದರ ಹಿನ್ನೆಲೆ?

**ಮತದಾರರ ಪಟ್ಟಿಯ ಎಸ್‌ಐಆರ್ ಪ್ರಕ್ರಿಯೆಯಲ್ಲಿ 60 ಲಕ್ಷಕ್ಕೂ ಹೆಚ್ಚು ಆಕ್ಷೇಪಣೆಗಳನ್ನು ಪರಿಶೀಲಿಸಲು ಪಶ್ಚಿಮ ಬಂಗಾಳ, ಒಡಿಶಾ ಹಾಗೂ ಜಾರ್ಖಂಡ್ ರಾಜ್ಯಗಳಿಂದ ಸುಮಾರು 700 ನ್ಯಾಯಾಂಗ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅದರಂತೆ ಬುಧವಾರ ಮಾಲ್ಡಾ ಜಿಲ್ಲೆಗೆ ನ್ಯಾಯಾಂಗ ಅಧಿಕಾರಿಗಳು ತೆರಳಿದ್ದರು.**

### ನ್ಯಾಯಪೀಠ ಗರಂ

**ಈ ಘಟನೆ "ಸಾಮಾನ್ಯ ಘಟನೆ ಅಲ್ಲ; ನ್ಯಾಯಾಂಗ ಅಧಿಕಾರಿಗಳನ್ನು ಬೆದರಿಸಲು ರೂಪಿಸಿದ ಸಂಚು" ಎಂದು ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿದೆ. "ಇದು ರಾಜಕೀಯವಲ್ಲದ ಪ್ರತಿಭಟನೆ ಎಂದಾದರೆ, ರಾಜಕೀಯ ನಾಯಕರು ಅಲ್ಲಿ ಏನು ಮಾಡುತ್ತಿದ್ದರು? ಕಾನೂನು ಸುವ್ಯವಸ್ಥೆ ಕಾಪಾಡುವುದು ಅವರ ಕರ್ತವ್ಯವಲ್ಲವೇ?" ಎಂದು ನ್ಯಾಯಪೀಠ ಪ್ರಶ್ನಿಸಿದೆ.**



### ಆಗಿದ್ದೇನು?

ಮಾಲ್ಡಾ ಜಿಲ್ಲೆಯಲ್ಲಿ ಮತದಾರರ ಪಟ್ಟಿಯ ಪರಿಷ್ಕರಣೆ ವೇಳೆ ನ್ಯಾಯಾಂಗ ಅಧಿಕಾರಿಗಳನ್ನು ಗುಂಪೊಂದು ಸುತ್ತುವರಿದು ಒಂಬತ್ತು ಗಂಟೆಗಳ ಕಾಲ ಬಂಧಿಸಿತ್ತು. ಭದ್ರತಾ ಪಡೆಗಳು ಮಧ್ಯರಾತ್ರಿ ಅವರನ್ನು ರಕ್ಷಿಸಿವೆ.

### ಅಧಿಕಾರಿಗಳಿಗೆ ನೋಟಿಸ್

**ರಾಜ್ಯದ ಮುಖ್ಯ ಕಾರ್ಯದರ್ಶಿ, ಡಿಜಿಪಿ, ಮಾಲ್ಡಾ ಡಿಸಿ, ಎಸ್‌ಎಸ್‌ಪಿ ಅವರಿಗೆ ನಿಮ್ಮ ವಿರುದ್ಧ ಏಕೆ ಕ್ರಮ ಕೈಗೊಳ್ಳಬಾರದು ಎಂದು ಕಾರಣ ಸೂಚಿಸಲು ಕೋರ್ಟ್ ನೋಟಿಸ್ ನೀಡಿದೆ. ಏ.6ರಂದು ಸದರಿ ಅಧಿಕಾರಿಗಳು ಆನ್‌ಲೈನ್ ಮೂಲಕ ವಿಚಾರಣೆಗೆ ಹಾಜರಾಗಬೇಕೆಂದು ಸೂಚಿಸಲಾಗಿದೆ.**

### ಸುಪ್ರೀಂ ಆದೇಶವೇನು?

ಪ್ರಕರಣದ ತನಿಖೆಯನ್ನು ಸಿಬಿಐ ಅಥವಾ ಎನ್‌ಐಎಗೆ ವಹಿಸಿ, ಕೇಂದ್ರ ಪಡೆ ನಿಯೋಜನೆ ಹಾಗೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಬಗ್ಗೆ ಪರಿಶೀಲಿಸಲು ಸುಪ್ರೀಂ ಕೋರ್ಟ್ ಸೂಚಿಸಿದೆ.

### ರಾಜಕೀಯ ಆರೋಪ-ಪ್ರತ್ಯಾರೋಪ

- ಸಿಎಂ ಮಮತಾ ಈ ಘಟನೆಯಿಂದ ದೂರ ಉಳಿದು, ಕಾನೂನು ಸುವ್ಯವಸ್ಥೆ ವೈಫಲ್ಯಕ್ಕೆ ಚುನಾವಣಾ ಆಯೋಗವೇ ಕಾರಣ ಎಂದಿದ್ದಾರೆ
- ಬಿಜೆಪಿ ನಾಯಕ ಸುವೇಂದು ಅಧಿಕಾರಿಯವರು ಈ ಘಟನೆ ಟಿಎಂಸಿ ರೂಪಿಸಿದ ಸಂಚು ಎಂದು ಆರೋಪಿಸಿದ್ದಾರೆ
- ಬಿಜೆಪಿ ವಕ್ತಾರ ಗೌರವ್ ಭಾಟಿಯಾ ಇದನ್ನು "ದೇಶದ ಇತಿಹಾಸದ ಕಪ್ಪು ಅಧ್ಯಾಯ" ಎಂದು ಟೀಕಿಸಿದ್ದಾರೆ


ಹಾರ್ಮುಜ್ ಸಂಚಾರ ಬಗ್ಗೆ ಇರಾನ್ ಭರವಸೆ

# ಸುರಕ್ಷಿತ ಕೈಗಳಲ್ಲಿದ್ದಾರೆ ಭಾರತೀಯ ಸ್ನೇಹಿತರು



• **ಟೆಹ್ರಾನ್/ಹೊಸದಿಲ್ಲಿ:** ಇರಾನ್ ತನ್ನ 'ಭಾರತೀಯ ಸ್ನೇಹಿತರಿಗೆ' ಹಾರ್ಮುಜ್ ಜಲಸಂಧಿ ಮೂಲಕ ಸಾಗಾಟದ ಬಗ್ಗೆ ಯಾವುದೇ ಚಿಂತೆಯಿಲ್ಲ ಎಂದು ಭರವಸೆ ನೀಡಿದ್ದು, ಅವರು 'ಸುರಕ್ಷಿತ ಕೈಗಳಲ್ಲಿ' ಇದ್ದಾರೆ ಎಂದು ಹೇಳಿದೆ.

ಹಾರ್ಮುಜ್ ಜಲಸಂಧಿ ಪರಿಸ್ಥಿತಿಯ ಬಗ್ಗೆ ಭಾರತೀಯರು ಚಿಂತಿಸಬೇಕಾಗಿಲ್ಲ, "ನಮ್ಮ ಭಾರತೀಯ ಸ್ನೇಹಿತರು ಸುರಕ್ಷಿತ ಕೈಗಳಲ್ಲಿ ಇದ್ದಾರೆ, ಯಾವುದೇ ಚಿಂತೆ ಬೇಡ," ಎಂದು ಇರಾನ್‌ನ ಭಾರತದಲ್ಲಿನ ರಾಯಭಾರಿ ಕಚೇರಿ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದೆ. ಅಂತೆಯೇ "ಹಾರ್ಮುಜ್ ಜಲಸಂಧಿಯ ಭವಿಷ್ಯವನ್ನು ಕೇವಲ ಇರಾನ್ ಮತ್ತು ಒಮಾನ್ ನಿರ್ಧರಿಸುತ್ತವೆ" ಎಂದೂ ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿದೆ.




ಇರಾನ್, ಅಮೆರಿಕ ಮತ್ತು ಇಸ್ರೇಲ್ ಜತೆಗಿನ ನಡೆಯುತ್ತಿರುವ ಸಂಘರ್ಷದ ನಡುವೆ ಹಾರ್ಮುಜ್ ಜಲಸಂಧಿ ಮೂಲಕ ತನ್ನ ಹಡಗುಗಳನ್ನು ಸಾಗಿಸಲು ಅನುಮತಿ ಪಡೆದ ಕೆಲವು ರಾಷ್ಟ್ರಗಳಲ್ಲಿ ಭಾರತವು ಇರಾನ್‌ನ ಒಂದಾಗಿದೆ. ಸೈನಿಕ ಉದ್ವಿಗ್ನತೆ ಹೆಚ್ಚಾಗಿದ್ದರೂ, ಟೆಹ್ರಾನ್ ಈ ಪ್ರಮುಖ ಸಮುದ್ರ ಮಾರ್ಗವನ್ನು ಬಳಸಲು ಅವಕಾಶ ನೀಡಿತ್ತು. ಈ ಬೆಳವಣಿಗೆ, ಭಾರತ, ಇರಾನ್ ನಡುವಿನ ಇಂಧನ ಸಹಕಾರದ ಪುನರುಜ್ಜೀವನದ ನಡುವೆಯೇ ಬಂದಿದೆ. ಬ್ಲೂಂಬರ್ಗ್ ವರದಿ ಪ್ರಕಾರ, 2018ರ ನಂತರ ಮೊದಲ ಬಾರಿಗೆ ಭಾರತ ಇರಾನ್‌ನಿಂದ ಎಲ್‌ಪಿಜಿ ಖರೀದಿಸಿದೆ. 2019ರಲ್ಲಿ ಪಾಶ್ಚಾತ್ಯ ನಿರ್ಬಂಧಗಳ ನಂತರ ಈ ಆಮದು ನಿಲ್ಲಿಸಲಾಗಿತ್ತು. ಹಾರ್ಮುಜ್ ಜಲಸಂಧಿ ಜಾಗತಿಕ ತೈಲ ಸಾಗಾಟದ ಪ್ರಮುಖ ಮಾರ್ಗವಾಗಿದೆ. ಅಮೆರಿಕ-ಇಸ್ರೇಲ್ ದಾಳಿ ಹಿನ್ನೆಲೆ ಇದು ಇನ್ನಷ್ಟು ಅಸ್ಥಿರವಾಗಿದೆ. ಇರಾನ್ ಪ್ರತಿದಾಳಿಗಳು ಈ ಜಲಮಾರ್ಗವನ್ನು ತಡೆಹಿಡಿಯುವ ಸಾಧ್ಯತೆ ಉಂಟು ಮಾಡಿದ್ದು, ದೀರ್ಘಕಾಲದ ಅಡಚಣೆ ಜಾಗತಿಕ ಇಂಧನ ಸರಬರಾಜಿಗೆ ಗಂಭೀರ ಪರಿಣಾಮ ಬೀರುವ ಭೀತಿಯನ್ನು ಹೆಚ್ಚಿಸಿದೆ.

### ಇರಾನ್ ಯುದ್ಧ ಶೀಘ್ರ ಪೂರ್ಣ: ಟ್ರಂಪ್

• ಪುಟ ೨

### ಭಾರತದ ಹಡಗುಗಳಿಗೆ ಸುಂಕ ವಿಧಿಸುವ ಬಗ್ಗೆ ಚರ್ಚೆ ಆಗಿಲ್ಲ: ಎಂಇಎ

**ಇರಾನ್‌ನೊಂದಿಗೆ ಹಾರ್ಮುಜ್ ಜಲಸಂಧಿಯಲ್ಲಿ ಭಾರತೀಯ ಹಡಗುಗಳಿಗೆ ಟೋಲ್ ವಿಧಿಸುವ ಬಗ್ಗೆ ಯಾವುದೇ ಚರ್ಚೆ ನಡೆದಿಲ್ಲ ಎಂದು ಕೇಂದ್ರ ಸರ್ಕಾರ ಗುರುವಾರ ಸ್ಪಷ್ಟಪಡಿಸಿದೆ. ಪಶ್ಚಿಮ ಏಷ್ಯಾದ ಉದ್ವಿಗ್ನ ಪರಿಸ್ಥಿತಿಯಲ್ಲಿ ಹರಿದಾಡುತ್ತಿದ್ದ ವರದಿಗಳನ್ನು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಖಂಡಿಸಿದ್ದು, ಇಂತಹ ಯಾವುದೇ ಚರ್ಚೆ ನಡೆದಿಲ್ಲ ಎಂದು ಅವರು ಹೇಳಿದರು. ಇತ್ತೀಚೆಗೆ ಇರಾನ್‌ನ ಸರ್ಕಾರಿ ಮಾಧ್ಯಮಗಳು, ಹಾರ್ಮುಜ್ ಜಲಸಂಧಿ ಮೂಲಕ ಸಾಗುವ ಹಡಗುಗಳ ಮೇಲೆ ಸುಂಕ ವಿಧಿಸುವ ಪ್ರಸ್ತಾವನೆ ಅಂಗೀಕರಿಸಲಾಗಿದೆ ಎಂದು ವರದಿ ಮಾಡಿದ್ದವು.** ➡ಪುಟ ೪

ಸ್ಥಳ ನಿಯುಕ್ತಿಗೊಳಿಸದೇ ನೌಕರರ ವರ್ಗಾವಣೆ ಮಾಡಿದರೆ ಕ್ರಮ

# ಸಕ್ಷಮ ಪ್ರಾಧಿಕಾರದಿಂದ ವೇತನ ಭತ್ಯೆ

• **ಬೆಂಗಳೂರು:** ಸ್ಥಳ ನಿಯುಕ್ತಿಗೊಳಿಸದೇ ಸರ್ಕಾರಿ ನೌಕರರನ್ನು ವರ್ಗಾವಣೆ ಮಾಡಿದರೆ, ಸ್ಥಳ ನಿರೀಕ್ಷೆಯಲ್ಲಿರಿಸಿದರೆ, ಅಂತಹವರಿಗೆ ಆ ಸಮಯದಲ್ಲಿ ನೀಡುವ ವೇತನವನ್ನು ಹಾಗೂ ಭತ್ಯೆಯನ್ನು ಸಂಬಂಧಿಸಿದ ಸಕ್ಷಮ ಪ್ರಾಧಿಕಾರದಿಂದಲೇ ವಸೂಲಿ ಮಾಡಲು ಸರ್ಕಾರ ನಿರ್ಧರಿಸಿದೆ.



ಈ ಕುರಿತು ಸುತ್ತೋಲೆ ಹೊರಡಿಸಿರುವ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು, ಯಾವುದೇ ಸರ್ಕಾರಿ ನೌಕರನನ್ನು ವರ್ಗಾವಣೆ ಮಾಡಿದ ಬಳಿಕ, ಸ್ಥಳ ನಿಯುಕ್ತಿಗಾಗಿ ಕಾಯುವಂತೆ ಮಾಡದೆ ಕಡ್ಡಾಯವಾಗಿ ಹುದ್ದೆ ನೀಡಬೇಕು ಎಂದು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಸೂಚಿಸಿದ್ದಾರೆ. ಅಲ್ಲದೇ, ಈ ಸೂಚನೆಯನ್ನು ಉಲ್ಲಂಘಿಸಿ ಸ್ಥಳ ನಿಯುಕ್ತಿ ಮಾಡದೆ, ಕಡ್ಡಾಯ ನಿರೀಕ್ಷಣೆಯಲ್ಲಿ ಇರಿಸಿದರೆ ಇತ್ತೀಚೆಗೆ ಹೈಕೋರ್ಟ್ ನೀಡಿರುವ ನಿರ್ದೇಶನದಂತೆ, ಅಂತಹ ಅಧಿಕಾರಿ, ನೌಕರರಿಗೆ ನಿರೀಕ್ಷಣೆಯ ಅವಧಿಗೆ ಪಾವತಿಸಿದ ವೇತನ ಮತ್ತು ಭತ್ಯೆಯನ್ನು ಸಂಬಂಧಿತ ಸಕ್ಷಮ ಪ್ರಾಧಿಕಾರಗಳಿಂದ ವಸೂಲಿ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ. ➡ಪುಟ ೪

### ಹುದ್ದೆ ತೋರದೇ ವರ್ಗಾವಣೆಯಿಂದ ಸರ್ಕಾರಕ್ಕೆ ನಷ್ಟ


**ಹುದ್ದೆ ತೋರಿಸದೆ ಅಧಿಕಾರಿಗಳನ್ನು ವರ್ಗಾಯಿಸುವಂತಿಲ್ಲ. ಈ ರೀತಿಯ ಕ್ರಮಗಳಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗಲಿದೆ ಎಂದು ಕರ್ನಾಟಕ ಹೈಕೋರ್ಟ್‌ನ ವಿಭಾಗೀಯ ಪೀಠ ಮಹತ್ವದ ಆದೇಶ ಮಾಡಿತ್ತು. ಈ ರೀತಿಯ ವರ್ಗಾವಣೆಗಳಿಂದ ತೆರಿಗೆದಾರರ, ಸಾರ್ವಜನಿಕರ ಹಣ ದುರ್ವಿನಿಯೋಗವಾದಂತಾಗಲಿದೆ.** ➡ಪುಟ ೪

ಪಾಕಿಸ್ತಾನಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಖಡಕ್ ಎಚ್ಚರಿಕೆ

# ಗಡಿಯಲ್ಲಿ ದುಷ್ಕೃತ್ಯ ನಡೆಸಿದರೆ ಹುಷಾರ್

• **ತಿರುವನಂತಪುರಂ:** ಗಡಿಯಲ್ಲಿ ಯಾವುದೇ ದುಷ್ಕೃತ್ಯ ನಡೆಸಿದರೆ ಭಾರತ ತಕ್ಕ ಪ್ರತಿಕ್ರಿಯೆ ನೀಡುವುದು ಖಚಿತ ಎಂದು ಪಾಕಿಸ್ತಾನಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಪಾಕಿಸ್ತಾನದಿಂದ ಯಾವುದೇ ದೇಶವಿರೋಧಿ ಚಟುವಟಿಕೆ ನಡೆದರೆ,



ಭಾರತದ ಪ್ರತಿಕ್ರಿಯೆಯನ್ನು ಅವರು ಊಹಿಸಲಸಾಧ್ಯ, ಅಷ್ಟರ ಮಟ್ಟಿಗೆ ನಮ್ಮ ಪ್ರತಿಕ್ರಿಯೆ ತೀಕ್ಷ್ಣವಾಗಿರುತ್ತದೆ ಎಂದು ಎಚ್ಚರಿಸಿದರು.

ಸೈನಿಕ ಸಮ್ಮೇಳನವನ್ನುದ್ದೇಶಿಸಿ ಮಾತನಾಡಿದ ಅವರು, ಕೇಂದ್ರದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಭಯೋತ್ಪಾದನೆಯ ಬಗ್ಗೆ ಶೂನ್ಯ ಸಹಿಷ್ಣುತೆ ಹೊಂದಿದೆ. ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದಲ್ಲಿ ರಾಷ್ಟ್ರೀಯ ಭದ್ರತೆಯನ್ನು ಬಲಪಡಿಸಲಾಗಿದೆ. ಸರ್ಕಾರದ ವರ್ತನೆ ಮತ್ತು ಕಾರ್ಯವಿಧಾನಗಳು ಬದಲಾಗಿವೆ ಎಂದು ಹೇಳಿದರು. ➡ಪುಟ ೪

### ಇಂಧನ ಕೊರತೆ ಇಲ್ಲ

**ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಸಂಘರ್ಷದ ಹೊರತಾಗಿಯೂ ಭಾರತವು ಇಂಧನ ತಕ್ಷಣದ ಕೊರತೆಯನ್ನು ಎದುರಿಸುತ್ತಿಲ್ಲ ಎಂದು ರಾಜನಾಥ್ ಸಿಂಗ್ ಹೇಳಿದ್ದಾರೆ. ಮುಂಬರುವ ಯಾವುದೇ ಸಂಭಾವ್ಯ ಬಿಕ್ಕಟ್ಟನ್ನು ನಿಭಾಯಿಸಲು ದೇಶವು ಸಂಪೂರ್ಣವಾಗಿ ಸಿದ್ಧವಾಗಿದೆ ಎಂದು ಹೇಳಿದರು. ಪ್ರಧಾನಿ ಮೋದಿಯವರು ಕೊಲ್ಲಿ ಪ್ರದೇಶದಲ್ಲಿ ಭಾರತದ ಹಿತಾಸಕ್ತಿಗಳನ್ನು ರಕ್ಷಿಸಲು ತಮ್ಮ ರಾಜತಾಂತ್ರಿಕ ಕೌಶಲಗಳನ್ನು ಬಳಸುತ್ತಿದ್ದಾರೆ ಎಂದು ಹೇಳಿದರು.**

### ಭಾರತೀಯರ ರಕ್ಷಣೆಗೆ ಆದ್ಯತೆ

• ಪುಟ ೨

# ಏ.16ರಿಂದ ಮತ್ತೆ ಅಧಿವೇಶನ

- ಅನಿರ್ದಿಷ್ಟಾವಧಿಗೆ ಕಲಾಪ ಮುಂದೂಡಿಕೆ ಇಲ್ಲ, ನಿರ್ದಿಷ್ಟ ಅವಧಿಗೆ ಮಾತ್ರ ಮುಂದಕ್ಕೆ
- 2 ರಿಂದ 3 ದಿನ ಮತ್ತೆ ಸಭೆ ಸೇರುವ ಬಗ್ಗೆ ರಿಜಿಜು ಸುಳಿವು
- ಮಹಿಳಾ ಮಸೂದೆ ಜಾರಿಗೆ ತರುವ ಬಗ್ಗೆ ಚರ್ಚೆ



• **ಹೊಸದಿಲ್ಲಿ:** ಸಂಸತ್ತಿನ ಬಜೆಟ್ ಅಧಿವೇಶನವು ಸ್ವಲ್ಪ ವಿರಾಮದ ನಂತರ ಏ.16ರಂದು ಪುನರಾರಂಭವಾಗಲಿದೆ. ಮಹಿಳಾ ಮೀಸಲಾತಿ ಕಾಯ್ದೆಯನ್ನು ಶೀಘ್ರ ಜಾರಿಗೆ ತರುವ ಉದ್ದೇಶದಿಂದ ಲೋಕಸಭೆ ಸದಸ್ಯರ ಸಂಖ್ಯೆಯನ್ನು 543ರಿಂದ 816ಕ್ಕೆ ಹೆಚ್ಚಿಸಲು ವಿಧೇಯಕಗಳನ್ನು ಅಂಗೀಕರಿಸಲು ಈ ಅಧಿವೇಶನ ನಡೆಯಲಿದೆ. ಮೂಲಗಳ ಪ್ರಕಾರ, ಉಭಯ ಸದನಗಳು (ಲೋಕಸಭೆ ಮತ್ತು ರಾಜ್ಯಸಭೆ) 2 ಅಥವಾ 3 ದಿನಗಳ ಕಾಲ ಮರು ಅಧಿವೇಶನಗೊಂಡು ಪ್ರಸ್ತಾವಿತ ವಿಧೇಯಕಗಳನ್ನು ಪರಿಗಣಿಸಲಿವೆ. ➡ಪುಟ ೪

### ಸಿಎಂ ಗುಣಗಾನ ಮಾಡಿದ ಲಾಡ್

• **ಬಾಗಲಕೋಟೆ:** ಸಚಿನ್, ವಿರಾಟ್ ಕೊಹ್ಲಿ, ಬ್ರಿಯಾನ್ ಲಾರಾ ಸಹಿತ ಅನೇಕರು ಸೇರಿ ಒಬ್ಬರು ಸಿದ್ದರಾಮಯ್ಯ ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್



ಗುಣಗಾನ ಮಾಡಿದರು. ಬಾಗಲಕೋಟೆಯಲ್ಲಿ ಗುರುವಾರ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಬಗ್ಗೆ ಬಿಜೆಪಿಗರು ಹಗುರವಾಗಿ ಮಾತುಗಳನ್ನಾಡುತ್ತಾರೆ. ಗುಜರಾತ್‌ಗೂ ಕರ್ನಾಟಕಕ್ಕೂ ಹೋಲಿಕೆ ಮಾಡಿ ನೋಡಿ ಸಾಕು ಎಂದರು. ➡ಪುಟ ೪



ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,36,500 (2,46,500) ಅಪರಂಜಿ ಚಿನ್ನ 15,010 (15,150) ಆಭರಣ ಚಿನ್ನ: 13,880 (14,020) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)


ಷೇರು ಸೂಚ್ಯಂಕ ಬಿಎಸ್‌ಇ 73,319 (185↑) ಎನ್‌ಎಸ್‌ಇ 22,713 (33↑)

$1 = ₹94.84

### ಅಮೆರಿಕದ ಸೇನಾಪಡೆಗಳು ಶೀಘ್ರದಲ್ಲೇ ಕಾರ್ಯಾಚರಣೆ ಮುಗಿಸಲಿವೆ: ದೇಶವನ್ನು ಉದ್ದೇಶಿಸಿ ಟ್ರಂಪ್ ಭಾಷಣ

# ಇರಾನ್ ಯುದ್ಧ ಶೀಘ್ರ ಪೂರ್ಣ

**ವಾಷಿಂಗ್ಟನ್:** ಇರಾನ್ ವಿರುದ್ಧದ ಯುದ್ಧ ಆರಂಭವಾಗಿ 32 ದಿನಗಳಾಗಿದ್ದು, ಅಮೆರಿಕದ ಪ್ರಮುಖ ಕಾರ್ಯತಂತ್ರದ ಗುರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ. ಅಮೆರಿಕದ ಸೇನಾಪಡೆಗಳು ಶೀಘ್ರದಲ್ಲೇ ತಮ್ಮ ಗುರಿಯನ್ನು ತಲುಪಲಿವೆ ಎಂದು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬುಧವಾರ ಘೋಷಿಸಿದ್ದಾರೆ. ಆದರೆ ಅವರು ಇರಾನ್‌ನಲ್ಲಿ ಸೇನಾ ನಿಯೋಜನೆ, ನ್ಯಾಟೋದಿಂದ ಹೊರಬರುವ ಬಗ್ಗೆ ಚಕಾರವೆತ್ತಿಲ್ಲ.



## ಅಮೆರಿಕದ ಕಾರ್ಯತಂತ್ರದ ಗುರಿಗಳು

ಯುದ್ಧ ಪ್ರಾರಂಭವಾದ ನಂತರ ಮೊದಲ ಬಾರಿಗೆ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದ ಅಧ್ಯಕ್ಷ ಟ್ರಂಪ್, ಅಮೆರಿಕದ ಮಿಲಿಟರಿ ಗುರಿಗಳು ನಿರೀಕ್ಷೆಗೂ ಮೀರಿ ಈಡೇರಿವೆ, ಎಂದು ತಿಳಿಸಿದರು. ಮುಂದಿನ ಎರಡು ಮೂರು ವಾರಗಳವರೆಗೆ ಇರಾನ್ ಮೇಲೆ ತೀವ್ರ ದಾಳಿಗಳು ಮುಂದುವರಿಯಲಿವೆ. ಅಮೆರಿಕದ ಬಿ-2 ಬಾಂಬರ್‌ಗಳು ಇರಾನ್‌ನ ಪರಮಾಣು ಕೇಂದ್ರಗಳನ್ನು ಧ್ವಂಸಗೊಳಿಸಿದ್ದು, ಅವುಗಳು ಸದ್ಯ ಉಪಗ್ರಹದ ಕಣ್ಗಾವಲಿನಲ್ಲಿವೆ ಎಂದು ಅವರು ಹೇಳಿದರು. ಆದರೆ, ಇರಾನ್ ನೆಲದಲ್ಲಿ ಸೇನೆಯ ನಿಯೋಜನೆ ಅಥವಾ ಮಾತುಕತೆಯ ಬಗ್ಗೆ ಅವರು ಯಾವುದೇ ಉಲ್ಲೇಖ ಮಾಡಲಿಲ್ಲ.

## ಜಾಗತಿಕ ಆರ್ಥಿಕತೆಯ ಮೇಲೆ ಪರಿಣಾಮ

ಟ್ರಂಪ್ ಭಾಷಣದ ಬೆನ್ನಲ್ಲೇ ಹಣಕಾಸು ಮಾರುಕಟ್ಟೆಗಳಲ್ಲಿ ತಲ್ಲಣ ಉಂಟಾಗಿದ್ದು, ತೈಲ ಬೆಲೆ ಶೇ. 4 ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಏಷ್ಯಾದ ಷೇರು ಮಾರುಕಟ್ಟೆಗಳು ಕುಸಿತ ಕಂಡಿವೆ. ಫೆ.28ರಂದು ಯುದ್ಧ ಪ್ರಾರಂಭವಾದಾಗಿನಿಂದ ಬ್ರೆಂಟ್ ಕಚ್ಚಾ ತೈಲ ಬೆಲೆ ಶೇ. 40 ಕ್ಕಿಂತ ಹೆಚ್ಚು ಏರಿಕೆಯಾಗಿದೆ. ಇಂಧನ ಮತ್ತು ಆಹಾರ ಪದಾರ್ಥಗಳ ಬೆಲೆ ಏರಿಕೆಯಿಂದ ಸಾರ್ವಜನಿಕರು ಕಷ್ಟ ಅನುಭವಿಸುತ್ತಿದ್ದು, ಅಮೆರಿಕದ ಮಿಲಿಟರಿ ಹಸ್ತಕ್ಷೇಪ ಮಿತಿಮೀರಿದೆ ಎಂದು ಅನೇಕ ಅಮೆರಿಕನ್ನರೇ ಅಭಿಪ್ರಾಯಪಟ್ಟಿದ್ದಾರೆ ಎಂದು ಸಮೀಕ್ಷೆಗಳು ತಿಳಿಸಿವೆ.

## ಅಂತಾರಾಷ್ಟ್ರೀಯ ಸಂಬಂಧಗಳು

ಹಾರ್ಮುಜ್ ಜಲಸಂಧಿಯ ಮೂಲಕ ತೈಲ ಆಮದು ಮಾಡಿಕೊಳ್ಳುವ ದೇಶಗಳು ಆ ಪ್ರದೇಶದ ನಿಯಂತ್ರಣವನ್ನು ತಾವೇ ತೆಗೆದುಕೊಳ್ಳಬೇಕು ಎಂದು ಟ್ರಂಪ್ ಕರೆ ನೀಡಿದ್ದಾರೆ. ಈ ನಿಟ್ಟಿನಲ್ಲಿ ದಕ್ಷಿಣ ಕೊರಿಯಾ, ಜಪಾನ್ ಮತ್ತು ಚೀನಾ ದೇಶಗಳು ಹೆಚ್ಚಿನ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಅವರು ಹೇಳಿದ್ದಾರೆ. 20 ನಿಮಿಷಗಳ ತಮ್ಮ ಭಾಷಣದಲ್ಲಿ ಅವರು ನ್ಯಾಟೋ ಮೈತ್ರಿಕೂಟದ ಬಗ್ಗೆ ಯಾವುದೇ ಪ್ರಸ್ತಾಪ ಮಾಡಲಿಲ್ಲ.

### ಮಿಲಿಟರಿ ಕಾಲಮಿತಿ

ಪ್ರಸ್ತುತ ಸಂಘರ್ಷ 32 ದಿನಗಳಿಂದ ನಡೆಯುತ್ತಿದೆ. ಈ ಅವಧಿಯನ್ನು ಮೊದಲ ಮಹಾಯುದ್ಧ ಮತ್ತು ಎರಡನೇ ಮಹಾಯುದ್ಧದ ಅವಧಿಗೆ ಹೋಲಿಸಿದ ಟ್ರಂಪ್, ಮಿಷನ್ ಪೂರ್ಣಗೊಳಿಸಲು ಹೆಚ್ಚಿನ ಸಮಯ ನೀಡುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದರು. ಅವರು, ಕೊರಿಯಾ, ವಿಯೆಟ್ನಾಂ ಮತ್ತು ಇರಾಕ್ ಯುದ್ಧಗಳ ಉದಾಹರಣೆ ನೀಡಿದರು.

## ಇರಾನ್ ಪ್ರತಿಕ್ರಿಯೆ

ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅಮೆರಿಕದ ನಾಗರಿಕರಿಗೆ ಪತ್ರ ಬರೆದಿದ್ದು, ಈ ಯುದ್ಧದಿಂದ ಅಮೆರಿಕನ್ನರ ಯಾವ ಹಿತಾಸಕ್ತಿಗಳು ಈಡೇರುತ್ತಿವೆ ಎಂದು ಪ್ರಶ್ನಿಸಿದ್ದಾರೆ. ಇರಾನ್ ಕದನ ವಿರಾಮಕ್ಕೆ ಕೋರಿದೆ ಎಂಬ ವರದಿಗಳನ್ನು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ನಿರಾಕರಿಸಿದ್ದಾರೆ. ಹಾರ್ಮುಜ್ ಜಲಸಂಧಿಯನ್ನು ತೆರೆಯಲು ಏಪ್ರಿಲ್ 6ರ ಗಡುವು ಸಮೀಪಿಸುತ್ತಿದ್ದಂತೆ, ಸಾವಿರಾರು ಹೆಚ್ಚುವರಿ ಅಮೆರಿಕನ್ ಸೈನಿಕರು ಮಧ್ಯಪ್ರಾಚ್ಯದತ್ತ ಸಾಗುತ್ತಿದ್ದಾರೆ. ಖಾರ್ಗ್ ದ್ವೀಪದ ತೈಲ ರಫ್ತು ಕೇಂದ್ರದ ಮೇಲೆ ಅಮೆರಿಕಾ ದಾಳಿ ನಡೆಸುವ ಬೆದರಿಕೆ ಇದ್ದು, ಇದು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ಮತ್ತಷ್ಟು ಆತಂಕ ಮೂಡಿಸಿದೆ.

## ಮೋದಿ ರಾಜತಾಂತ್ರಿಕತೆಗೆ ಕಾಂಗ್ರೆಸ್ ನಾಯಕನ ಶ್ಲಾಘನೆ

- ಮಧ್ಯಪ್ರಾಚ್ಯ ಸಂಘರ್ಷದಲ್ಲಿ ಭಾರತದ ಪಾತ್ರ
- ಮೋದಿ ಸರ್ಕಾರದಿಂದ ಪ್ರಬುದ್ಧ ನಡೆ
- ಮಾಜಿ ವಿದೇಶಾಂಗ ಸಚಿವರಿಂದಲೇ ಶಹಬ್ಬಾಸ್

**ಹೊಸದಿಲ್ಲಿ:** ಅಮೆರಿಕ-ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷದ ಸಂದರ್ಭದಲ್ಲಿ ಭಾರತ ಸರ್ಕಾರ ಅನುಸರಿಸುತ್ತಿರುವ ರಾಜತಾಂತ್ರಿಕ ನಡೆ ಬಗ್ಗೆ ಕಾಂಗ್ರೆಸ್ ನಾಯಕ ಮತ್ತು ಮಾಜಿ ವಿದೇಶಾಂಗ ಸಚಿವ ಆನಂದ್ ಶರ್ಮ ಶ್ಲಾಘಿಸಿದ್ದಾರೆ. ಈ ಮೂಲಕ ತಮ್ಮದೇ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ವಾದ್ರಾ ಅವರ ಸರೆಂಡರ್ ಆರೋಪಕ್ಕೆ ತಿರುಗೇಟು ನೀಡಿದಂತಾಗಿದೆ.

ಯುದ್ಧದ ಹೊತ್ತಲ್ಲಿ ಕೇಂದ್ರ ಸರ್ಕಾರವು ಅತ್ಯಂತ ಪ್ರಬುದ್ಧ ಮತ್ತು ಕೌಶಲ್ಯದ ಹೆಜ್ಜೆ ಇರಿಸಿದೆ. ಗ್ಲೋಬಲ್ ಸೌತ್ ರಾಷ್ಟ್ರಗಳ ಲೆಕ್ಕಾಚಾರದಲ್ಲಿ ಭಾರತದ ನಡೆಯು ಅತ್ಯಂತ ಮಹತ್ವದ್ದಾಗಿದ್ದು, ಇದಕ್ಕೆ ತಕ್ಕಂತೆಯೇ ವರ್ತಿಸುತ್ತಿದೆ ಎಂದು ಹೇಳಿದ್ದಾರೆ. ವಿಶೇಷವೆಂದರೆ, ಯುದ್ಧದ ವಿಚಾರದಲ್ಲಿ ಕಾಂಗ್ರೆಸ್, ಕೇಂದ್ರ ಸರ್ಕಾರದ ವಿರುದ್ಧ ಟೀಕೆ ವ್ಯಕ್ತಪಡಿಸುತ್ತಿದ್ದರೂ, ಅದೇ ಪಕ್ಷದ ನಾಯಕರು ಶ್ಲಾಘಿಸಿರುವುದು ಗಮನಾರ್ಹ.

ಯುದ್ಧ ಶುರುವಾದ ಮೇಲೆ ಕೇಂದ್ರ ಸರ್ಕಾರವು, ಎಲ್ಲ ಭಾಗೀದಾರರೊಂದಿಗೆ ನಿರಂತರ ಮಾತುಕತೆಯಲ್ಲಿದೆ. ಅಲ್ಲದೆ, ಯಾವುದೇ ಸಂಭಾವ್ಯ, ಅಹಿತಕರ ಸಂಗತಿಗಳಾಗದಂತೆ ರಾಜತಾಂತ್ರಿಕ ಮಟ್ಟದಲ್ಲಿ ಹೆಜ್ಜೆ ಇಡಲಾಗುತ್ತಿದೆ. ಯುದ್ಧದ ವಿಚಾರದಲ್ಲಿ ಏನನ್ನೂ ನಿರೀಕ್ಷಿಸದ ಹೊತ್ತಿನಲ್ಲಿ ಕೇಂದ್ರ ಸರ್ಕಾರವು ಸರ್ವ ಪಕ್ಷಗಳ ನಾಯಕರ ಜತೆಗೆ ಮಾತನಾಡಿ, ಪರಿಸ್ಥಿತಿ ಬಗ್ಗೆ ವಿವರಿಸಿದೆ ಎಂದು ಹೇಳಿದ್ದಾರೆ.

ಮುಂದೆಯೂ ರಾಷ್ಟ್ರೀಯ ಮಟ್ಟದಲ್ಲಿ ಮಾತುಕತೆಗಳು ಮುಂದುವರಿಯಬೇಕು. ರಾಷ್ಟ್ರೀಯ ಹಿತಾಸಕ್ತಿಗೆ ಪೂರಕವಾಗಿ ರಾಷ್ಟ್ರೀಯ ಒಗ್ಗಟ್ಟು ಮತ್ತು ಪ್ರಬುದ್ಧ ಪ್ರತಿಕ್ರಿಯೆಗಳು ಬರಬೇಕು. ಯುದ್ಧ ನಿಲ್ಲಿಸುವ, ಜಾಗತಿಕ ಶಾಂತಿ ಸ್ಥಾಪಿಸುವ ನಿಟ್ಟಿನಲ್ಲಿ ಗ್ಲೋಬಲ್ ಸೌತ್ ದೇಶಗಳನ್ನು ಒಟ್ಟಾಗಿಸಬೇಕು ಎಂದೂ ಅವರು ಸಲಹೆ ನೀಡಿದ್ದಾರೆ.

ಈಗಾಗಲೇ ಕಾಂಗ್ರೆಸ್ ನಾಯಕರಾದ ಶಶಿ ತರೂರ್ ಮತ್ತು ಮನೀಶ್ ತಿವಾರಿ ಅವರು ಕೇಂದ್ರ ಸರ್ಕಾರದ ರಾಜತಾಂತ್ರಿಕ ನಡೆಯನ್ನು ಶ್ಲಾಘಿಸಿದ್ದು, ಆನಂದ್ ಶರ್ಮ ಮೂರನೇಯವರಾಗಿದ್ದಾರೆ.

## ಹಾರ್ಮುಜ್ ಪುನರಾರಂಭಿಸಲು ಅಂತಾರಾಷ್ಟ್ರೀಯ ಸಭೆಗೆ ಭಾರತ

**ಲಂಡನ್:** ಇರಾನ್ ವಿರುದ್ಧದ ಅಮೆರಿಕ-ಇಸ್ರೇಲ್ ಯುದ್ಧದಿಂದ ಮುಚ್ಚಲ್ಪಟ್ಟಿರುವ ಹಾರ್ಮುಜ್ ಜಲಸಂಧಿಯನ್ನು ಪುನರಾರಂಭಿಸಲು ರಾಜತಾಂತ್ರಿಕ ಮತ್ತು ರಾಜಕೀಯ ಒತ್ತಡ ಹೇರುವ ಉದ್ದೇಶದಿಂದ ಸುಮಾರು 35 ದೇಶಗಳ ವಿದೇಶಾಂಗ ಸಚಿವರು ಗುರುವಾರ ಸಭೆ ನಡೆಸಿದ್ದಾರೆ. ಈ ಮಧ್ಯೆ 35 ರಾಷ್ಟ್ರಗಳ ಮಾತುಕತೆಗೆ ಭಾರತಕ್ಕೆ ಬ್ರಿಟನ್ ಆಹ್ವಾನ ಕೂಡ ನೀಡಿದೆ. ಬ್ರಿಟಿಷ್ ವಿದೇಶಾಂಗ ಕಾರ್ಯದರ್ಶಿ ಯೆವೆಟ್ಟೆ ಕೂಪರ್ ಈ ವರ್ಚುವಲ್ ಸಭೆಯ ಅಧ್ಯಕ್ಷತೆ ವಹಿಸಿದ್ದು, ಮುಕ್ತ ನೌಕಾಯಾನವನ್ನು ಮರುಸ್ಥಾಪಿಸಲು ಮತ್ತು ಸಿಲುಕಿಕೊಂಡಿರುವ ಹಡಗುಗಳ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕ್ರಮಗಳನ್ನು ಪರಿಶೀಲಿಸುತ್ತಿದ್ದಾರೆ. ಈ ಸಭೆಯಲ್ಲಿ ಅಮೆರಿಕ ಭಾಗವಹಿಸುತ್ತಿಲ್ಲ ಇಂಗ್ಲೆಂಡ್, ಫ್ರಾನ್ಸ್, ಜರ್ಮನಿ, ಇಟಲಿ, ಕೆನಡಾ,



ಜಪಾನ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಸೇರಿದಂತೆ ಹಲವು ದೇಶಗಳು ಜಲಸಂಧಿಯನ್ನು ತಡೆಯುವುದನ್ನು ನಿಲ್ಲಿಸುವಂತೆ ಇರಾನ್ ಅನ್ನು ಒತ್ತಾಯಿಸಿವೆ ಮತ್ತು ಸುರಕ್ಷಿತ ಸಂಚಾರಕ್ಕೆ ಬೆಂಬಲ ನೀಡಲು ಒಪ್ಪಿವೆ.

**ಭದ್ರತೆ ಮತ್ತು ಮೈತ್ರಿಕೂಟಗಳು:** ಯುದ್ಧದ ನಂತರದ ಹಡಗು ಸಂಚಾರದ ಭದ್ರತೆಯ ಬಗ್ಗೆ ಮಿಲಿಟರಿ ನಾಯಕರು ಶೀಘ್ರದಲ್ಲೇ ಚರ್ಚಿಸಲಿದ್ದಾರೆ ಎಂದು ಪ್ರಧಾನ ಮಂತ್ರಿ ಕೀರ್ ಸ್ಟಾರ್ಮರ್ ತಿಳಿಸಿದ್ದಾರೆ. ಅಮೆರಿಕ ನ್ಯಾಟೊ ಮೈತ್ರಿಕೂಟದಿಂದ ಹೊರಬರುವ ಸಾಧ್ಯತೆಯ ಬಗ್ಗೆ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೂಚನೆ ನೀಡಿದ ಬೆನ್ನಲ್ಲೇ, ಈ ಒಕ್ಕೂಟ ಪ್ರಾದೇಶಿಕ ಭದ್ರತೆಗೆ ಯುರೋಪಿನ ಬದ್ಧತೆ ಪ್ರದರ್ಶಿಸುವ ಗುರಿ ಹೊಂದಿದೆ ಎನ್ನಲಾಗಿದೆ.

## ಹಾರ್ಮುಜ್ ಜಲಸಂಧಿ ಬಿಕ್ಕಟ್ಟು

ಸುಮಾರು 24 ವಾಣಿಜ್ಯ ಹಡಗುಗಳ ಮೇಲೆ ಇರಾನ್ ದಾಳಿ ಮಾಡಿದ್ದರಿಂದ ಹಾರ್ಮುಜ್ ಜಲಸಂಧಿಯ ಮೂಲಕ ನಡೆಯುವ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದೆ. ಜಿ7 (7) ರಾಷ್ಟ್ರಗಳು ಮತ್ತು ಗಲ್ಫ್ ದೇಶಗಳು ಸೇರಿದಂತೆ 35 ರಾಷ್ಟ್ರಗಳ ಒಕ್ಕೂಟ ನೌಕಾಯಾನವನ್ನು ಪುನರಾರಂಭಿಸುವ ಬಗ್ಗೆ ಗುರುವಾರ ಚರ್ಚೆ ನಡೆಸಿದೆ. ವಿಶ್ವದ ಒಟ್ಟು ತೈಲ ವ್ಯಾಪಾರದ ಶೇ.20ರಷ್ಟು ಈ ಮಾರ್ಗದ ಮೂಲಕ ನಡೆಯುತ್ತದೆಯಾದರೂ, ಯಾವುದೇ ರಾಷ್ಟ್ರ ಬಲವಂತವಾಗಿ ಜಲಸಂಧಿಯನ್ನು ತೆರೆಯಲು ಮುಂದಾಗಿಲ್ಲ.

## ಕೈಗಾರಿಕಾ ವಲಯದ ಮೇಲೆ ಪರಿಣಾಮ

ಏ.1ರ ಈ ನಿರ್ದೇಶನ ಪ್ಯಾಕೇಜಿಂಗ್, ಆಹಾರ ಮತ್ತು ಪಾನೀಯ, ವೇಗವಾಗಿ ಮಾರಾಟವಾಗುವ ಗ್ರಾಹಕ ಸರಕುಗಳು (ಎಫ್‌ಎಂಸಿಜಿ) ಮತ್ತು ಕಾಂಡೋಮ್ ಉತ್ಪಾದನಾ ವಲಯಗಳಿಗೆ ಬೆಂಬಲ ನೀಡುವ ಗುರಿ ಹೊಂದಿದೆ. ಮಾರ್ಚ್ 9ರ ಆದೇಶದಂತೆ ಎಲ್ಲಾ ಸಿ3 ಮತ್ತು ಸಿ4 ಹೈಡ್ರೋಕಾರ್ಬನ್ ಸ್ಟ್ರೀಮ್‌ಗಳನ್ನು ಕೇವಲ ಎಲ್‌ಪಿಜಿ ಉತ್ಪಾದನೆಗೆ ಬಳಸಬೇಕೆಂದು ಕಡ್ಡಾಯಗೊಳಿಸಿದ್ದರಿಂದ ಈ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿದ್ದವು. ಸರ್ಕಾರ ಕೆಲವು ಪೆಟ್ರೋಕೆಮಿಕಲ್ ಆಮದುಗಳ ಮೇಲಿನ ಕಸ್ಟಮ್ಸ್ ಸುಂಕವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದೆ.

**ಎಲ್‌ಪಿಜಿ ಪೂರೈಕೆ ಹೊಂದಾಣಿಕೆ :** ಈ ಕ್ರಮ, ದೇಶೀಯ ಎಲ್‌ಪಿಜಿ ಫೀಡ್‌ಸ್ಟಾಕ್ ಮೇಲೆ ಪರಿಣಾಮ ಬೀರಿದರೂ, ಗೃಹಬಳಕೆಯ ಗ್ರಾಹಕರಿಗೆ ಪೂರೈಕೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ನೋಡಿಕೊಳ್ಳಲಾಗುವುದು, ಎಂದು ಜಂಟಿ ಕಾರ್ಯದರ್ಶಿ ಸುಜಾತಾ ಶರ್ಮಾ ತಿಳಿಸಿದ್ದಾರೆ.



### ಎಲ್‌ಪಿಜಿ ಫೀಡ್‌ಸ್ಟಾಕ್ ಮಾರ್ಗ ಬದಲಾವಣೆ

ಅಡುಗೆ ಅನಿಲ ಉತ್ಪಾದನೆಗೆ ಬಳಸಲಾಗುವ ಪ್ರೊಪಿಲೀನ್ ಫೀಡ್‌ಸ್ಟಾಕ್ ಅನ್ನು ಪ್ರಸ್ತುತ ತೀವ್ರ ಪೆಟ್ರೋಕೆಮಿಕಲ್ ಕೊರತೆ ಎದುರಿಸುತ್ತಿರುವ ಕೈಗಾರಿಕೆಗಳಿಗೆ ವರ್ಗಾಯಿಸುವಂತೆ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯ ತೈಲ ಸಂಸ್ಕರಣಾಗಾರಗಳಿಗೆ ನಿರ್ದೇಶನ ನೀಡಿದೆ.

## ಇಸ್ರೇಲ್ ,ಗಲ್ಫ್ ರಾಷ್ಟ್ರಗಳ ಮೇಲೆ ಇರಾನ್ ದಾಳಿ

**ದುಬೈ:** ಇರಾನ್‌ನ ಮಿಲಿಟರಿ ಬೆದರಿಕೆ ಬಹುತೇಕ ಅಂತ್ಯಗೊಂಡಿದೆ ಎಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪ್ರತಿಪಾದನೆಯ ನಡುವೆಯೇ, ಇರಾನ್ ಗುರುವಾರ ಇಸ್ರೇಲ್ ಮತ್ತು ಗಲ್ಫ್ ಅರಬ್ ರಾಷ್ಟ್ರಗಳ ಮೇಲೆ ಸರಣಿ ಕ್ಷಿಪಣಿ ದಾಳಿಗಳನ್ನು ನಡೆಸಿದೆ.ಬುಧವಾರ ರಾತ್ರಿ ಅಧ್ಯಕ್ಷ ಟ್ರಂಪ್ ಭಾಷಣ ಮಾಡಿದ ಬೆನ್ನಲ್ಲೇ ದುಬೈ ಮತ್ತು ಇಸ್ರೇಲ್‌ನಲ್ಲಿ ಸ್ಫೋಟದ ಶಬ್ದಗಳು ಕೇಳಿಬಂದಿದ್ದು, ವಾಯು ರಕ್ಷಣಾ ವ್ಯವಸ್ಥೆಗಳು ಕ್ಷಿಪಣಿಗಳನ್ನು ತಡೆಹಿಡಿದಿವೆ. ಅಮೆರಿಕದ ನೌಕಾಪಡೆಯ 5ನೇ ಫ್ಲೀಟ್ ಇರುವ ಬಹ್ರೇನ್‌ನಲ್ಲಿಯೂ ಎಚ್ಚರಿಕೆಯ ಸೈರನ್‌ಗಳು ಮೊಳಗಿವೆ. ಅಮೆರಿಕದ ಗುರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ ಎಂದು ಟ್ರಂಪ್ ಹೇಳಿದ್ದರೆ.






ಇರಾನ್ ಮಿಲಿಟರಿ ವಕ್ತಾರ ಲೆಫ್ಟಿನೆಂಟ್ ಕರ್ನಲ್ ಇಬ್ರಾಹಿಂ ಜೊಲ್ಫಾಘರಿ, ತಮ್ಮ ಕಾರ್ಯತಂತ್ರದ ಉತ್ಪಾದನಾ ಘಟಕಗಳು ಸುರಕ್ಷಿತವಾಗಿವೆ. ಕಾರ್ಯಾಚರಣೆ ನಡೆಸುತ್ತಿವೆ ಎಂದಿದ್ದಾರೆ. ಈ ಯುದ್ಧದಲ್ಲಿ ಈವರೆಗೆ ಇರಾನ್‌ನಲ್ಲಿ 1,900ಕ್ಕೂ ಹೆಚ್ಚು ಮಂದಿ, ಇಸ್ರೇಲ್‌ನಲ್ಲಿ 19 ಮಂದಿ ಮತ್ತು 13 ಅಮೆರಿಕನ್ ಸೈನಿಕರು ಸಾವನ್ನಪ್ಪಿದ್ದಾರೆ. ಲೆಬನಾನ್‌ನಲ್ಲಿ 1,200ಕ್ಕೂ ಹೆಚ್ಚು ಜನರು ಮೃತಪಟ್ಟಿದ್ದು, 10 ಲಕ್ಷಕ್ಕೂ ಹೆಚ್ಚು ಮಂದಿ ನಿರಾಶ್ರಿತರಾಗಿದ್ದಾರೆ.

## ಕಿರುಸುದ್ದಿ

### ಬೂಕರ್ ಪ್ರಶಸ್ತಿ ಅಂತಿಮ ಪಟ್ಟಿಗೆ ಭಾರತೀಯ ಲೇಖಕಿ

**ಹೊಸದಿಲ್ಲಿ :** ಭಾರತೀಯ ಮೂಲದ ಕೆನಡಾ-ಅಮೆರಿಕನ್ ಲೇಖಕಿ ಪದ್ಮಾ ವಿಶ್ವನಾಥನ್, ಪೋರ್ಚುಗೀಸ್ ಭಾಷೆಯ ಕಿರು ಕಾದಂಬರಿಯೊಂದನ್ನು ಇಂಗ್ಲಿಷ್‌ಗೆ ಅನುವಾದ ಮಾಡಿದಕ್ಕಾಗಿ 2026ರ ಅಂತಾರಾಷ್ಟ್ರೀಯ ಬೂಕರ್ ಪ್ರಶಸ್ತಿಯ ಅಂತಿಮ ಪಟ್ಟಿಗೆ ಆಯ್ಕೆಯಾಗಿದ್ದಾರೆ. ಬ್ರೆಜಿಲ್ ಮೂಲದ ಲೇಖಕ ಅನಾ ಪೌಲಾ ಮಯ್ಯಾ ಅವರ ಕೃತಿ ಆನ್ ಅರ್ಥ್ ಆ್ಯಸ್ ಇಟ್ ಈಸ್ ಬೆನೀತ್ ಅತ್ಯಂತ ಕ್ರೂರ ಮತ್ತು ಕಾಡುವಂತಹ , ಹಿಪ್ನೋಟಿಕ್ ಕಾದಂಬರಿ ಎಂದು ತೀರ್ಪುಗಾರರು ಬಣ್ಣಿಸಿದ್ದಾರೆ.

### ಇಂಡೋನೇಷ್ಯಾ ಭೂಕಂಪ: ಓರ್ವ ಸಾವು

**ಜಕಾರ್ತ:** ಪೂರ್ವ ಇಂಡೋನೇಷ್ಯಾದ ಕರಾವಳಿಯಲ್ಲಿ 7.4 ತೀವ್ರತೆಯ ಭೂಕಂಪ ಸಂಭವಿಸಿ ಓರ್ವ ಮೃತಪಟ್ಟಿದ್ದಾನೆ. ಮುಂಜಾನೆ ಸುಲವೇಸಿ ಮತ್ತು ಮಾಲುಕು ದ್ವೀಪಗಳ ನಡುವಿನ ಮೊಲುಕ್ಕಾ ಸಮುದ್ರದಲ್ಲಿ 35 ಕಿಮೀ ಆಳದಲ್ಲಿ ಕಂಪನ ಸಂಭವಿಸಿದೆ ಎಂದು ಯುಎಸ್ ಭೂವೈಜ್ಞಾನಿಕ ಸಮೀಕ್ಷೆ (ಯುಎಸ್‌ಜಿಎಸ್) ತಿಳಿಸಿದೆ.

## ಪೆಟ್ರೋಕೆಮಿಕಲ್ ಕಸ್ಟಮ್ ಸುಂಕ ಕೈ ಬಿಟ್ಟ ಸರ್ಕಾರ

**ಹೊಸದಿಲ್ಲಿ:** ಪೂರೈಕೆ ವ್ಯವಸ್ಥೆಯಲ್ಲಿ ಸ್ಥಿರತೆ ಕಾಯ್ದುಕೊಳ್ಳುವ ಜತೆ ಅಂತಿಮ ಉತ್ಪನ್ನಗಳ ಬಳಕೆದಾರರನ್ನು ನಿರಾಳಗೊಳಿಸುವ ನಿಟ್ಟಿನಲ್ಲಿ, ಅಪೂರ್ವ ಪೆಟ್ರೋಕೆಮಿಕಲ್ ಉತ್ಪನ್ನಗಳ ಆಮದು ಮೇಲಿನ ಕಸ್ಟಮ್ಸ್ ಸುಂಕವನ್ನು ಸರಕಾರ ಕೈಬಿಟ್ಟಿದೆ ಅಥವಾ ಮೂರು ತಿಂಗಳವಧಿಗೆ ಜೂ.30ರ ತನಕ ವಿನಾಯಿತಿ ಘೋಷಿಸಿದೆ. ಪ್ಲಾಸ್ಟಿಕ್‌ಗಳು, ಪ್ಯಾಕೇಜಿಂಗ್, ಜವುಳಿ, ಫಾರ್ಮಾಸ್ಯುಟಿಕಲ್‌ಗಳು, ಕೆಮಿಕಲ್, ಆಟೋಮೊಟಿವ್ ಬಿಡಿಭಾಗಗಳು ಇತ್ಯಾದಿ ಪೆಟ್ರೋಕೆಮಿಕಲ್ ಫೀಡ್‌ಸ್ಟಾಕ್‌ನ್ನು ಅವಲಂಬಿಸಿರುವ ರಂಗಗಳಿಗೆ ಪ್ರಸ್ತುತ ಕಸ್ಟಮ್ಸ್ ಸುಂಕ ವಿನಾಯಿತಿಯಿಂದ ಪ್ರಯೋಜನವಾಗಲಿದೆ. ಏಕಕಾಲಕ್ಕೆ ಸರಕಾರದ ಬೊಕ್ಕಸಕ್ಕೆ ಬರೋಬ್ಬರಿ 1800 ಕೋಟಿ ರೂ. ಹೊರೆಯಾಗಲಿದೆ. ಪ.ಏಷ್ಯಾದಲ್ಲಿ ಮುಂದುವರೆದಿರುವ ಸಂಘರ್ಷ ಮತ್ತು ಜಾಗತಿಕ ಪೂರೈಕೆ ವ್ಯವಸ್ಥೆಯಲ್ಲಿ ವ್ಯತ್ಯಯವಾಗಿರುವ ಹಿನ್ನೆಲೆಯಲ್ಲಿ ಸರಕಾರ ಅಪೂರ್ವ ಪೆಟ್ರೋಕೆಮಿಕಲ್ ಉತ್ಪನ್ನಗಳ ಮೇಲೆ ಪೂರ್ಣ ಕಸ್ಟಮ್ಸ್ ಸುಂಕ ವಿನಾಯಿತಿಗೆ ನಿರ್ಧರಿಸಿದೆ. ಜೂ.30ರ ತನಕ ಈ ವಿನಾಯಿತಿ ಮುಂದುವರೆಯುವುದು ಎಂದು ಹಣಕಾಸು ಖಾತೆ ಹೇಳಿಕೆಯಲ್ಲಿ ತಿಳಿಸಿದೆ. ದೇಶೀ ಉದ್ಯಮಗಳಿಗೆ ನಿರಂತರವಾಗಿ ಸಂಕ್ಲಿಷ್ಟ ಪೆಟ್ರೋಕೆಮಿಕಲ್ ಕಚ್ಚಾವಸ್ತುಗಳು ಲಭಿಸಬೇಕು. ಸಣ್ಣ ಪುಟ್ಟ ಉದ್ಯಮಗಳನ್ನು ಬಾಧಿಸುವ ವೆಚ್ಚದ ಒತ್ತಡಗಳನ್ನು ಕುಗ್ಗಿಸುವುದು ಹಾಗೂ ದೇಶದಲ್ಲಿ ಪೂರೈಕೆ ಸ್ಥಿರತೆ ಕಾಯ್ದುಕೊಳ್ಳುವುದು ಸರಕಾರದ ಪ್ರಸ್ತುತ ನಿರ್ಧಾರ ಹಿಂದಿನ ಆಶಯವಾಗಿದೆ. ಅಂತಿಮ ಉತ್ಪನ್ನಗಳ ಬಳಕೆದಾರರೂ ಇದರಿಂದ ನಿರಾಳರಾಗಲಿದ್ದಾರೆ ಎಂದು ಹೇಳಿಕೆ ತಿಳಿಸಿದೆ.

## ನುಸುಳುಕೋರರಿಗೆ ಮಾತ್ರ ವಿರೋಧ, ಮುಸ್ಲಿಮರಿಗಲ್ಲ

**ಗುವಾಹಟಿ:** ಬಿಜೆಪಿ ಅಸ್ಸಾಂನಲ್ಲಿ ಅಕ್ರಮ ನುಸುಳುಕೋರರನ್ನು ಗುರುತಿಸಿ ಹೊರಹಾಕುವುದಕ್ಕೆ ಬದ್ಧವಾಗಿದೆ ಎಂದು ಒತ್ತಿ ಹೇಳಿದ ಕೇಂದ್ರ ಗೃಹಸಚಿವ ಅಮಿತ್ ಶಾ ಅವರು, ಪಕ್ಷವು ದೇಶೀಯ ಮುಸ್ಲಿಮರನ್ನು ವಿರೋಧಿಸಿಲ್ಲ ಎಂದು ಸ್ಪಷ್ಟಪಡಿಸಿದರು. ಅವರು ಅಸ್ಸಾಂನಲ್ಲಿ ಚುನಾವಣಾ ರ‍್ಯಾಲಿಗಳನ್ನುದ್ದೇಶಿಸಿ ಮಾತನಾಡಿ, ಬಿಜೆಪಿಗೆ ಸ್ವದೇಶಿ ಮುಸ್ಲಿಮರು ಮತ್ತು ಅಕ್ರಮ ನುಸುಳುಕೋರರ ನಡುವಣ ವ್ಯತ್ಯಾಸದ ಅರಿವಿದೆ.ಅಸ್ಸಾಂನಲ್ಲಿ ಅಕ್ರಮ ನುಸುಳುಕೋರರನ್ನು ಪತ್ತೆಹಚ್ಚಿ , ಅವರ ಮತದಾನ ಹಕ್ಕನ್ನು ತೆಗೆದುಹಾಕಿ ಅವರನ್ನು ಗಡೀಪಾರುಗೊಳಿಸಲಾಗುವುದು. ಆದರೆ ಕಾಂಗ್ರೆಸ್ ಪಕ್ಷವು ಕೇವಲ ವೋಟ್‌ಬ್ಯಾಂಕ್‌ಗಾಗಿ ದೇಶದ ಸುರಕ್ಷತೆಯನ್ನೇ ನಿರ್ಲಕ್ಷಿಸುತ್ತಿರುವುದು ಆಘಾತಕಾರಿ ಎಂದರು. ದೇಶೀಯ ಮುಸ್ಲಿಮರಿಗೂ , ವಿದೇಶಿ ನುಸುಳುಕೋರರಿಗೂ ವ್ಯತ್ಯಾಸವಿದೆ.ಈ ಬಗ್ಗೆ ಬಿಜೆಪಿಗೆ ಸ್ಪಷ್ಟ ಅರಿವಿದೆ.ಬಿಜೆಪಿ ಅಕ್ರಮ ನುಸುಳುಕೋರರನ್ನು ಒಪ್ಪಲು ಸಾಧ್ಯವೇ ಇಲ್ಲ. ಮುಂದಿನ 5ವರ್ಷದೊಳಗೆ ಈ ಅಕ್ರಮ ನುಸುಳುಕೋರರನ್ನು ಹೊರಕಳುಹಿಸಬೇಕು.

ಈ ಅಕ್ರಮ ನುಸುಳುಕೋರರಿಂದಾಗಿ ಕೆಲವು ಜಿಲ್ಲೆಗಳ ಜನಸಂಖ್ಯಾ ಸಮತೋಲನವೇ ವ್ಯತ್ಯಾಸವಾಗಿರುವುದು ಗಂಭೀರ ವಿಷಯ . ಈಗಾಗಲೇ ಇಂತಹ ಅಕ್ರಮ ನುಸುಳುಕೋರರ ಅತಿಕ್ರಮಣದಿಂದ 1.25ಲಕ್ಷ ಎಕರೆ ಭೂಮಿಯನ್ನು ಮುಕ್ತಗೊಳಿಸಲಾಗಿದ್ದು, ಸ್ಥಳೀಯ ಜನರ ಭೂಮಿಯನ್ನು ರಕ್ಷಿಸಲು ಇನ್ನಷ್ಟು ಕ್ರಮ ಕೈಗೊಳ್ಳುವುದಾಗಿ ಜನತೆಗೆ ಭರವಸೆ ನೀಡಿದರು. ಸ್ಥಳೀಯ ಸಂಸ್ಕೃತಿ ಮತ್ತು ಸ್ಥಳೀಯ ಜನತೆಯ ಹಕ್ಕುಗಳನ್ನು, ಬುಡಗಟ್ಟು ಜನರ ಹಿತಾಸಕ್ತಿಯನ್ನು ರಕ್ಷಿಸಲಾಗುವುದು ಎಂದು ಅವರು ಘೋಷಿಸಿದರು.

## ಆಪ್‌ನ ಉಪನಾಯಕ ಸ್ಥಾನದಿಂದ ಛಡ್ಡಾ ಹೊರಕ್ಕೆ!

**ಹೊಸದಿಲ್ಲಿ :** ರಾಜ್ಯಸಭೆ ಉಪ ನಾಯಕ, ಆಮ್ ಆದ್ಮಿ ಪಕ್ಷದ ಸಂಸದ ರಾಘವ ಛಡ್ಡಾರನ್ನು ಹುದ್ದೆಯಿಂದ ಪದಚ್ಯುತಗೊಳಿಸಲಾಗಿದೆ. ತೆರವಾದ ಜಾಗಕ್ಕೆ ಪಂಜಾಬ್ ಸಂಸದ ಆಶೋಕ್ ಮಿತ್ತಲ್ ಅವರನ್ನು ನಿಯುಕ್ತಿಗೊಳಿಸಲಾಗಿದೆ.

ರಾಜ್ಯಸಭಾ ಸಂಸದರೂ ಆಗಿರುವ ಛಡ್ಡಾ ಅವರಿಗೆ ಆಪ್ ಕೋಟಾದಲ್ಲಿ ಸದನದಲ್ಲಿ ಮಾತನಾಡಲು ಅವಕಾಶ ಕೊಡಕೂಡದು ಎಂದು ಪತ್ರದಲ್ಲಿ ಆಗ್ರಹಿಸಲಾಗಿತ್ತು. ಆಪ್‌ಗೆ ಸಂಬಂಧಿತ ವಿಚಾರವಾಗಿ ಸದನದಲ್ಲಿ ಛಡ್ಡಾ ಮಾತನಾಡದಿರುವುದು ಮತ್ತು ಆಪ್ ನಾಯಕ ಅರವಿಂದ ಕೇಜ್ರಿವಾಲ್ ನೇತೃತ್ವದ ಹಲವು ಸಾರ್ವಜನಿಕ ಕಾರ್ಯಕ್ರಮಗಳಿಗೆ ಛಡ್ಡಾ ಗೈರುಹಾಜರಿ ಮಧ್ಯೆ ಆಪ್ ನಾಯಕತ್ವ ಪ್ರಸ್ತುತ ನಿರ್ಧಾರಕ್ಕೆ ಬಂದಿದೆ ಎಂದು ಮೂಲಗಳು ತಿಳಿಸಿವೆ.

ಒಂದು ಕಾಲದಲ್ಲಿ ಕೇಜ್ರಿವಾಲ್ ಅವರ ಅತ್ಯಂತ ನಂಬಿಗಸ್ಥ ಸಂಸದ ಮತ್ತು ದೇಶದ ಕಿರಿಯ ಸಂಸದರಲ್ಲೋರ್ವರಾಗಿರುವ ಛಡ್ಡಾ, ಮುಖ್ಯವಾಗಿ ಪಂಜಾಬ್‌ನಲ್ಲಿ ಪಕ್ಷದ ಚಟುವಟಿಕೆಗಳ ನಿಭಾಯಿಸುವಲ್ಲಿ ಮತ್ತು ದಿಲ್ಲಿಯಲ್ಲಿ ಆಪ್ ಆಡಳಿತವಿದ್ದಾಗಲೂ ಪಕ್ಷ ಸಂಬಂಧಿತ ವಿಚಾರಗಳಲ್ಲಿ ನಿರ್ಣಾಯಕ ಪಾತ್ರವಹಿಸಿದ್ದರು. ಆದರೆ ಈಚಿನ ತಿಂಗಳಲ್ಲಿ ಛಡ್ಡಾ ಚಟುವಟಿಕೆಗಳಲ್ಲಿ ಬದಲಾವಣೆಗಳಾಗಿದ್ದವು.

ಅಬಕಾರಿ ನೀತಿ ಪ್ರಕರಣದಲ್ಲಿ ಕೇಜ್ರಿವಾಲ್ 2024 ಮಾರ್ಚ್‌ನಲ್ಲಿ ಬಂಧಿಸಲ್ಪಟ್ಟಾಗ ಛಡ್ಡಾ ವೈದ್ಯಕೀಯ ಕಾರಣಗಳಿಗಾಗಿ ಹೊರದೇಶದಲ್ಲಿದ್ದರು. ಕೇಜ್ರಿವಾಲ್ ಆರು ತಿಂಗಳು ಜೈಲಲ್ಲಿದ್ದಾಗಲೂ ಛಡ್ಡಾ ಕೇಜ್ರಿವಾಲ್‌ರಿಂದ ಅಂತರ ಕಾಯ್ದುಕೊಂಡಿದ್ದರು ಮೋದಿ ಸರಕಾರದ ಯೋಜನೆಗಳನ್ನು ಟೀಕಿಸದೆ ಆಪ್ ನಾಯಕತ್ವದ ಕೆಂಗಣ್ಣಿಗೆ ಗುರಿಯಾಗಿದ್ದರು.

## ಹನುಮಾನ್ ಮಂದಿರ ಮೇಲೆ ಧ್ವಜಾರೋಹಣ



**ಅಯೋಧ್ಯೆ:** ಹನುಮಾನ್ ಜಯಂತಿಯ ನಿಮಿತ್ತವಾಗಿ ಅಯೋಧ್ಯೆಯ ಶ್ರೀ ರಾಮ ಜನ್ಮಭೂಮಿ ಮಂದಿರದ ಆವರಣದಲ್ಲಿ ಗುರುವಾರ ಮಹಾಬಲಿ ಹನುಮಾನ್ ಮಂದಿರದ ಮೇಲೆ ಧ್ವಜಾರೋಹಣ ಮಾಡಲಾಯಿತು. ಬಜರಂಗದಳ ಸಂಸ್ಥಾಪಕರಾದ ವಿನಯ್ ಕಟಿಯಾರ್ ಸೇರಿದಂತೆ ಬಜರಂಗದಳದ ಪೂರ್ವ ರಾಷ್ಟ್ರೀಯ ಸಂಯೋಜಕರು ಧ್ವಜಾರೋಹಣ ಕಾರ್ಯಕ್ರಮವನ್ನು ನೇರವೇರಿಸಿದರು. ಈ ಸಂದರ್ಭದಲ್ಲಿ ಜೈಭನ್ ಸಿಂಗ್ ಪವಯ್ಯ, ಪ್ರಕಾಶ್ ಶರ್ಮಾ, ಸುರೇಂದ್ರ ಜೈನ್, ನೀರಜ್ ದೊನೇರಿಯಾ, ಗೋಪಾಲ ಜಿ, ಸಾಧು ಸಂತರು ಹಾಗೂ ಶ್ರೀ ರಾಮ ಜನ್ಮಭೂಮಿ ತೀರ್ಥಕ್ಷೇತ್ರ ಟ್ರಸ್ಟ್ ಪದಾಧಿಕಾರಿಗಳು ಮತ್ತು ಗಣ್ಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

### ಜನಸೇವೆಯನ್ನು ನಾಗರಿಕರ ಅಗತ್ಯಗಳಿಗನುಸಾರ ಹೆಚ್ಚು ಶಕ್ತಗೊಳಿಸಬೇಕು: ಮೋದಿ

## ಆಡಳಿತ ವ್ಯವಸ್ಥೆಗಳನ್ನು ಸುಧಾರಿಸುವುದು ಅಗತ್ಯ

**ಹೊಸದಿಲ್ಲಿ:** ಜನರ ಬದುಕನ್ನು ಸುಗಮಗೊಳಿಸುವುದಕ್ಕಾಗಿ ಆಡಳಿತ ವ್ಯವಸ್ಥೆಯನ್ನು ನಿರಂತರ ಸುಧಾರಣೆಗೊಳಪಡಿಸುವುದು ಅತ್ಯಗತ್ಯವೆಂದು ಪ್ರಧಾನಿ ನರೇಂದ್ರ ಮೋದಿ ಸರಕಾರಿ ನೌಕರರನ್ನು ಉದ್ದೇಶಿಸಿ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇಡೀ ದೇಶದ ಆಡಳಿತ ವ್ಯವಸ್ಥೆಯಿಂದು ಪ್ರಮುಖ ಮಂತ್ರ ನಾಗರಿಕ ದೇವೋ ಭವ ವನ್ನು ಆಧರಿಸಿದೆ. ಸಾರ್ವಜನಿಕ ಸೇವೆ ಅಥವಾ ಜನಸೇವೆಯನ್ನು ನಾಗರಿಕರ ಅಗತ್ಯಗಳಿಗನುಸಾರ ಹೆಚ್ಚು ಶಕ್ತ ಮತ್ತು ಸೂಕ್ಷ್ಮ ಸಂವೇದಿಯಾಗಿ ಪುನರಪಿ ಸುಧಾರಣೆಗೊಳಪಡಿಸಲಾಗಿದೆ. ಸಂಪೂರ್ಣ ನಾಗರಿಕ ಕೇಂದ್ರಿತವಾಗಿಸುವ ಮುಖೇನ ಆಡಳಿತ ವ್ಯವಸ್ಥೆಗೆ ಹೊಸ ಅಸ್ಮಿತೆ ನೀಡಲಾಗುತ್ತಿದೆ ಎಂದು ಪ್ರಧಾನಿ ಮೋದಿ ಸಾಧನಾ ಸಪ್ತಾಹಕ್ಕೆ ಚಾಲನೆ ನೀಡಿ ವಿಡಿಯೋ ಸಂದೇಶದಲ್ಲಿ ತಿಳಿಸಿದ್ದಾರೆ.



**ನಿತ್ಯ ಹೊಸತನ್ನು ಕಲಿಯಿರಿ:** ಜನರ ಬದುಕನ್ನು ಸುಗಮಗೊಳಿಸುವಲ್ಲಿ, ಬದುಕಿನ ಗುಣಮಟ್ಟ ಸುಧಾರಿಸುವಲ್ಲಿ ಆಡಳಿತ ವ್ಯವಸ್ಥೆಯು ಪ್ರಮುಖ ಮಾನದಂಡವಾಗಬೇಕು. ಹಾಗಾಗಿ ಪ್ರತೀ ನಿತ್ಯ ಏನಾದರು ಹೊಸತನ್ನು ಕಲಿತುಕೊಳ್ಳಬೇಕು ಎಂದು ಸರಕಾರಿ ನೌಕರರಿಗೆ ಕರೆಯಿತ್ತರು. ಜನರ ಬದುಕಿನ ಗುಣಮಟ್ಟ ದಿನೇ ದಿನೇ ಸುಧಾರಿಸುವ ನಿಟ್ಟಿನಲ್ಲಿ ಆಡಳಿತ ವ್ಯವಸ್ಥೆ ಕಾರ್ಯತತ್ಪರವಾಗಬೇಕು. ಇದೇ ನಮ್ಮ ನೈಜ ಮಾನದಂಡ ಎಂದು ಪ್ರಧಾನಿ ಮೋದಿ ವಿಶ್ಲೇಷಿಸಿದರು. ಆಡಳಿತಾತ್ಮಕ ಸಂಸ್ಕೃತಿಯಲ್ಲಿ ಮೂಲಭೂತ ಪರಿವರ್ತನೆಗೆ ಕರೆಯಿತ್ತ ಪ್ರಧಾನಿ , ಹಳೆ ವ್ಯವಸ್ಥೆಯಲ್ಲಿ ತಾನೋರ್ವ ಅಧಿಕಾರಿ ಎಂಬುದಕ್ಕೇ ಮಿತಿಮೀರಿ ಪ್ರಾಧಾನ್ಯತೆಯಿತ್ತು. ಆದರೆ ಇಂದು ಕರ್ತವ್ಯತತ್ಪರತೆಯತ್ತ ದೇಶದ ಗಮನ ದೃಢವಾಗಿ ನೆಟ್ಟಿದೆ ಎಂದು ವಿವರಿಸಿದರು.

**ನಿರಂತರ ಪರಿಣಾಮ:** ತನ್ನ ಕರ್ತವ್ಯವು ಏನನ್ನು ಅಪೇಕ್ಷಿಸುತ್ತಿದೆ ಎಂಬ ಚಿಂತನೆ ಆಧಾರದಲ್ಲಿ ನೀವು ಕೈಗೊಳ್ಳುವ ಪ್ರತಿಯೊಂದು ನಿರ್ಧಾರಗಳು ತನ್ನಿಂತಾನೇ ನಿರಂತರವಾಗಿ ಬಹುಪಟ್ಟು ಪರಿಣಾಮಗಳ ಬೀರುತ್ತಿರುತ್ತೆ. ಕ್ಷಿಪ್ರಗತಿಯಿಂದ ಬದಲಾಗುತ್ತಿರುವ ಜಾಗತಿಕ ವ್ಯವಸ್ಥೆಗಳ ಮಧ್ಯೆ ಭಾರತ ತ್ವರಿತಗತಿಯಿಂದ ಮುನ್ನಡೆ ಸಾಧಿಸುತ್ತಿದೆ. ಈ ವಾಸ್ತವದ ಹಿನ್ನೆಲೆಯಲ್ಲಿ ಭಾರತದ ಆಡಳಿತ ವ್ಯವಸ್ಥೆಯಲ್ಲೂ ನಿರಂತರ ಸುಧಾರಣೆಗಳು ಅಗತ್ಯವೆಂದು ಪ್ರತಿಪಾದಿಸಿದರು.

**ಜನರ ವಿಶ್ವಾಸ ಕಾಪಾಡಿ:** ಜನಸಾಮಾನ್ಯರಿಗೆ ಸ್ಥಳೀಯ ಸರ್ಕಾರಿ ಕಚೇರಿಗಳೇ ಸಮಗ್ರ ಸರಕಾರವಾಗಿರುತ್ತೆ. ಪ್ರಜಾಸತ್ತೆ ಮತ್ತು ಸಾಂವಿಧಾನಿಕ ಸಂಸ್ಥೆಗಳ ಬಗ್ಗೆ ಜನರಿಗೆ ನೇರ ವಿಶ್ವಾಸ ಮೂಡುವುದು ಅಧಿಕಾರಿಗಳ ಕರ್ತವ್ಯ ಶೈಲಿ ಮತ್ತು ನಡತೆಗಳಿಂದ. ಯಾವುದೇ ಸ್ತರದಲ್ಲಿ ನಾವೇನೇ ಮಾಡಲಿ, ಜನವಿಶ್ವಾಸ ಕಾಪಾಡೋದು ನಮ್ಮ ಕರ್ತವ್ಯ ಮತ್ತು ಇದೇ ಪ್ರಜಾಸತ್ತೆಯ ಬುನಾದಿ ಎಂದು ಪ್ರಧಾನಿ ಮೋದಿ ಹೇಳಿದರು. ರಾಷ್ಟ್ರದ ಯಶಸ್ಸು ಅದರ ಎಲ್ಲಾ ರಾಜ್ಯಗಳ ಸಮಗ್ರ ಯಶಸ್ಸೆಂದು ಬಣ್ಣಿಸಿದರು.

**ನಮ್ಮೆಲ್ಲರ ಹೊಣೆಗಾರಿಕೆ:** ಸಂಪನ್ನ ಭಾರತದ ವಿಸ್ತೃತ ವಿಷನ್‌ನ ಸಾಕಾರಕ್ಕೆ ತ್ವರಿತ ಆರ್ಥಿಕ ಬೆಳವಣಿಗೆ, ಆಧುನಿಕ ಮೂಲಸೌಕರ್ಯ, ತಂತ್ರಜ್ಞಾನಗಳ ಅಳವಡಿಕೆ, ಬೃಹತ್ ಪ್ರಮಾಣದ ಕೌಶಲಯುಕ್ತ ಕಾರ್ಮಿಕ ಪಡೆಯ ಅಗತ್ಯವಿದೆ. ಇವೆಲ್ಲ ಗುರಿಗಳ ಸಾಕಾರದಲ್ಲಿ ಸಾರ್ವಜನಿಕ ಸಂಸ್ಥೆಗಳು ಮತ್ತು ಸರಕಾರಿ ನೌಕರರ ಪಾತ್ರ ನಿರ್ಣಾಯಕ. ಇಂದಿನ ಭಾರತ ತುಂಬು ಆಶೋತ್ತರಯುಕ್ತ ರಾಷ್ಟ್ರವಾಗಿದೆ. ಪ್ರತಿಯೋರ್ವ ಪ್ರಜೆಗೂ ಕನಸುಗಳಿವೆ, ಧ್ಯೇಯಗಳಿವೆ ಮತ್ತು ಇವುಗಳ ಸಾಕಾರಕ್ಕೆ ಗರಿಷ್ಠ ಬೆಂಬಲ ಒದಗಿಸುವ ಹೊಣೆಗಾರಿಕೆ ನಮ್ಮೆಲ್ಲರ ಮೇಲಿದೆ.

### 2026ನೇ ಹಣಕಾಸು ವರ್ಷದಲ್ಲಿ ಮಹತ್ತರ ಸಾಧನೆ ನಿರೀಕ್ಷೆ

## ರಕ್ಷಣಾ ರಫ್ತು ದಾಖಲೆಯ ಏರಿಕೆ

**ಹೊಸದಿಲ್ಲಿ:** ಭಾರತದ ವಾರ್ಷಿಕ ರಕ್ಷಣಾ ರಫ್ತು 2025-26ನೇ ಹಣಕಾಸು ವರ್ಷದಲ್ಲಿ 38,424 ಕೋಟಿ ರೂ. ಗಳ ಸಾರ್ವಕಾಲಿಕ ದಾಖಲೆ ತಲುಪಿದ್ದು, ಶೇ. 62.66ರಷ್ಟು ಬೆಳವಣಿಗೆ ಕಂಡಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಘೋಷಿಸಿದ್ದಾರೆ.



ಕಳೆದ ಹಣಕಾಸು ವರ್ಷಕ್ಕೆ ಹೋಲಿಸಿದರೆ ಒಟ್ಟು ರಫ್ತು ಮೌಲ್ಯವು 14,802 ಕೋಟಿ ರೂ. ಗಳಷ್ಟು ಹೆಚ್ಚಾಗಿದೆ. 2024-25ರಲ್ಲಿ 23,622 ಕೋಟಿ ರೂ. ಹಾಗೂ 2023-24ರಲ್ಲಿ 21,083 ಕೋಟಿ ರೂ.ಗಳ ರಫ್ತು ದಾಖಲಾಗಿತ್ತು. ಇತ್ತೀಚಿನ ಈ ಅಂಕಿಅಂಶ, ಕಳೆದ ಐದು ವರ್ಷಗಳಲ್ಲಿ ರಕ್ಷಣಾ ರಫ್ತು ಸುಮಾರು ಮೂರು ಪಟ್ಟು ಹೆಚ್ಚಿರುವುದನ್ನು ಸೂಚಿಸುತ್ತದೆ.

**ವಿವಿಧ ವಲಯಗಳ ಕೊಡುಗೆ:** ರಕ್ಷಣಾ ಸಾರ್ವಜನಿಕ ವಲಯದ ಉದ್ದಿಮೆಗಳು (ಡಿಪಿಎಸ್‌ಯುಗಳು) 21,071 ಕೋಟಿ ರೂ. ಗಳ ಕೊಡುಗೆ ನೀಡಿದ್ದು, ಇದು ಒಟ್ಟು ರಫ್ತಿನ ಶೇ. 54.84 ರಷ್ಟಿದೆ. ಉಳಿದ ಶೇ. 45.16 ರಷ್ಟು ಪಾಲನ್ನು ಖಾಸಗಿ ವಲಯ ಹೊಂದಿದ್ದು, ಇದರ ಮೌಲ್ಯ 17,353 ಕೋಟಿ ರೂ.ಗಳಾಗಿದೆ. ಹಿಂದಿನ ವರ್ಷದಲ್ಲಿ ಡಿಪಿಎಸ್‌ಯುಗಳ ಕೊಡುಗೆ 8,389 ಕೋಟಿ ರೂ. ಮತ್ತು ಖಾಸಗಿ ಉದ್ದಿಮೆಗಳ ಪಾಲು 15,233 ಕೋಟಿ ರೂ. ಗಳಾಗಿತ್ತು.

ಭಾರತ ಪ್ರಸ್ತುತ 80 ಕ್ಕೂ ಹೆಚ್ಚು ದೇಶಗಳಿಗೆ ರಕ್ಷಣಾ ಉಪಕರಣಗಳನ್ನು ರಫ್ತು ಮಾಡುತ್ತಿದೆ. 2025-26ರ ಅವಧಿಯಲ್ಲಿ ರಫ್ತುದಾರರ ಸಂಖ್ಯೆ 128 ರಿಂದ 145 ಕ್ಕೆ ಏರಿದ್ದು, ಶೇ. 13.3 ರಷ್ಟು ಹೆಚ್ಚಳವಾಗಿದೆ. ರಫ್ತು ಪರವಾನಿಗೆಗಾಗಿ ಸರಳೀಕೃತ ನಿಯಂತ್ರಕ ಪ್ರಕ್ರಿಯೆಗಳು ಮತ್ತು ನವೀಕರಿಸಿದ ಆನ್‌ಲೈನ್ ಪೋರ್ಟಲ್ ಈ ಬೆಳವಣಿಗೆಗೆ ಕಾರಣ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

**ಸರ್ಕಾರದ ದೂರದೃಷ್ಟಿ:** ಭಾರತವನ್ನು ವಿಶ್ವದ ಪ್ರಮುಖ ರಕ್ಷಣಾ ರಫ್ತುದಾರ ರಾಷ್ಟ್ರಗಳ ಪಟ್ಟಿಯಲ್ಲಿ ಸ್ಥಾನ ಪಡೆಯುವಂತೆ ಮಾಡುವ ಪ್ರಧಾನಿ ನರೇಂದ್ರ ಮೋದಿ ಆಶಯಕ್ಕೆ ಅನುಗುಣವಾಗಿ ಈ ಮೈಲಿಗಲ್ಲು ಸಾಧಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಹೇಳಿದೆ. ಈ ಏರಿಕೆ ಅಂತಾರಾಷ್ಟ್ರೀಯ ಪೂರೈಕೆ ಸರಪಳಿಯಲ್ಲಿ ದೇಶೀಯ ಉದ್ಯಮಗಳ ಸಾಧನೆ ಮತ್ತು ಭಾರತೀಯ ನಿರ್ಮಿತ ರಕ್ಷಣಾ ಉತ್ಪನ್ನಗಳಿಗೆ ಜಾಗತಿಕ ಮಟ್ಟದಲ್ಲಿ ಹೆಚ್ಚುತ್ತಿರುವ ಮನ್ನಣೆಯನ್ನು ಪ್ರತಿಬಿಂಬಿಸುತ್ತದೆ ಎಂದು ಸರ್ಕಾರ ಹೇಳಿದೆ.

## ಕಿರುಸುದ್ದಿ

### ಬಾಲಸುಬ್ರಹ್ಮಣ್ಯ ಪಿ.ಎಸ್.ಗೆ ಪಿಎಚ್‌ಡಿ

• **ಪುತ್ತೂರು:** ಬೆಳ್ಳಾರೆ ಡಾ.ಕೆ.ಶಿವರಾಮ ಕಾರಂತ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಪ್ರಿನ್ಸಿಪಾಲ್ ಬಾಲಸುಬ್ರಹ್ಮಣ್ಯ ಪಿ.ಎಸ್. ಅವರು ಮಂಡಿಸಿದ 'ದಿ ಸ್ಟಡಿ ಆಫ್ ದ ಪಾಲಿಸೀಸ್ ಆ್ಯಂಡ್ ಪರ್ಸ್ಪೆಕ್ಟಿವ್ಸ್ ಆಫ್ ಟೋನಿ ಬ್ಲೇರ್ಸ್ ಲೇಬರ್ ಗವರ್ನಮೆಂಟ್ ಟುವರ್ಡ್ಸ್ ಯುರೋಪಿಯನ್ ಯೂನಿಯನ್' ಎಂಬ ಮಹಾಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯ ಡಾಕ್ಟರೇಟ್ ನೀಡಿದೆ. ಇತ್ತೀಚೆಗೆ ಮಂಗಳೂರು ವಿಶ್ವವಿದ್ಯಾಲಯದ ಮಂಗಳ ಸಭಾಂಗಣದಲ್ಲಿ ನಡೆದ 44ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಪಿಎಚ್ ಡಿ ಪ್ರದಾನ ಮಾಡಿದರು. ಇವರು ಮಂಗಳೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರಾಗಿರುವ ಡಾ.ಜಯರಾಜ್ ಅಮೀನ್ ಮಾರ್ಗದರ್ಶನದಲ್ಲಿ ಈ ಮಹಾ ಪ್ರಬಂಧವನ್ನು ಸಿದ್ಧಪಡಿಸಿದ್ದರು. ಬಾಲಸುಬ್ರಹ್ಮಣ್ಯ ಪಿ.ಎಸ್. ಅವರು ಪುತ್ತೂರು ಸಂಪ್ಯದ ನಿವಾಸಿ ನಿವೃತ್ತ ಸಹಾಯಕ ಪೊಲೀಸ್ ಉಪ ನಿರೀಕ್ಷಕರಾದ ಸದಾನಂದ ಪಿ. ಹಾಗೂ ರತ್ನಾವತಿ ದಂಪತಿ ಪುತ್ರ.



### ಸುಬೇದಾರ್ ಯಶವಂತ್ ನಿಡುಬೆ ನಿವೃತ್ತಿ

• **ಸುಳ್ಯ:** ಭೂಸೇನೆಯ 195 ಫೀಲ್ಡ್ ರೆಜಿಮೆಂಟ್‌ನ ಎಂಎಸಿಪಿ ಸುಬೇದಾರ್ ಯಶವಂತ್ ನಿಡುಬೆ ಅವರು ಮಾ.30ರಂದು ನಿವೃತ್ತಿ ಹೊಂದಿದರು. 2002 ಮಾರ್ಚ್ 13ರಂದು ಸಿಪಾಯಿಯಾಗಿ ಭೂ ಸೇನೆಯ ಕರ್ತವ್ಯಕ್ಕೆ ಸೇರಿದ ಅವರು ಹೈದರಾಬಾದ್‌ನಲ್ಲಿ ತರಬೇತಿ ಪಡೆದು ಬಳಿಕ ಸಿಯಾಚಿನ್, ಜೆಮ್ ಶೆಡ್‌ಪುರ, ಜಮ್ಮುವಿನ ಅಕ್ನೂರು ಸೆಕ್ಟರ್, ಅಲಹಾಬಾದ್, ಲೇಹ್ ಲಡಾಕ್, ಉತ್ತರ ಪ್ರದೇಶದ ಜಾನ್ಸಿ, ಉತ್ತರ ಖಂಡದ ಬರೇಲಿ, ಪಶ್ಚಿಮ ಬಂಗಾಳದ ಬೀನಾಗುಡಿ, ಶ್ರೀನಗರ, ಕುಪ್ವಾರ ಸೆಕ್ಟರ್, ಕೊಯಮತ್ತೂರು ನಲ್ಲಿ ಕರ್ತವ್ಯ ಪೂರೈಸಿದ್ದಾರೆ. ಸುದೀರ್ಘ 24 ವರ್ಷಗಳ ದೇಶ ಸೇವೆ ಸಲ್ಲಿಸಿ ನಿವೃತ್ತರಾದರು. ಅವರು ಕಲ್ಮಕಾರು ಗ್ರಾಮದ ನಿಡುಬೆ ಜನಾರ್ದನ ಗೌಡ ಮತ್ತು ನೇತ್ರಾವತಿ ದಂಪತಿಯ ಪುತ್ರ.



ಪುತ್ತೂರು ವಿವೇಕಾನಂದ ಪದವಿಪೂರ್ವ ಕಾಲೇಜಿನ ಪೊಲಿಟಿಕಲ್ ಸೈನ್ಸ್ ವಿಭಾಗದ ಉಪನ್ಯಾಸಕಿಯಾದ ಡಾ.ಕವಿತಾ ಬಿ. ಅವರಿಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಂಡೋಸಲ್ಫಾನ್ ಕುರಿತಂತೆ ಒಂದು ಅಧ್ಯಯನವಾದ "ಅಗ್ರಿಕಲ್ಚರ್ ಪಾಲಿಸೀಸ್ -ಸೋಷಿಯಲ್ ರೆಸ್ಪಾನ್ಸ್ ಅಂಡ್ ಇಟ್ಸ್ ಇಂಪ್ಲಿಕೇಷನ್ಸ್ ಇನ್ ಕರ್ನಾಟಕ ಎಂಬ ಸಂಶೋಧನೆಗಾಗಿ ಪಿಎಚ್‌ಡಿ ಪದವಿ ಲಭಿಸಿದೆ. ಪ್ರೊ.ದಯಾನಂದ ನಾಯ್ಕ್ ಅವರ ಮಾರ್ಗದರ್ಶನದಲ್ಲಿ ಡಾ.ಕವಿತಾ ಅವರು ಈ ಸಂಶೋಧನೆ ಕೈಗೊಂಡಿದ್ದರು.




ಭಾರತೀಯ ಸೇನೆಯಲ್ಲಿ 24 ವರ್ಷ ಸೇವೆ । ನಿವೃತ್ತಿ ಪಡೆದು ಮರಳಿದ ಯೋಧಗೆ ಹುಟ್ಟೂರ ಗೌರವ

# ಸಿಂದೂರ ವೀರಗೆ ಪುಷ್ಪವೃಷ್ಟಿಯ ಸ್ವಾಗತ

• **ಕಾರ್ಕಳ:** ಭಾರತೀಯ ಸೇನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿ ಹುಟ್ಟೂರಿಗೆ ಹಿಂತಿರುಗಿದ ವೀರ-ಯೋಧ ಹೆಬ್ರಿ ತಾಲೂಕಿನ ಆನಂದ ಕಬ್ಬಿನಾಲೆ ಅವರಿಗೆ ಜನರು ಭವ್ಯ ಸ್ವಾಗತ ಕೋರಿದ್ದಾರೆ.

ದೇಶ ಕಾಯುವ ಸೈನಿಕ ತನ್ನ ಮನೆ, ಕುಟುಂಬ ಎಲ್ಲವನ್ನು ಮರೆತು ತನ್ನ ಜೀವದ ಹಂಗನ್ನು ತೊರೆದು ದೇಶ ಕಾಯುವುದಕ್ಕೆ ಹೋಗುತ್ತಾನೆ... ದೇಶ ಕಾಯುವುದಕ್ಕೆ ಹೋದ ಸೈನಿಕನಿಗೆ ನಿವೃತ್ತಿಯ ನಂತರ ತನ್ನ ತವರಿನಲ್ಲಿ ಭರ್ಜರಿ ಸ್ವಾಗತ ಸಂದರ್ಭದಲ್ಲಿ ಅವರ ಕಣ್ಣಿನ ಅಂಚಿನಲ್ಲಿ ನೀರು ಬಂದದ್ದು ಅವರ ಸಂಭ್ರಮವನ್ನು ಮತ್ತಷ್ಟು ಹೆಚ್ಚು ಮಾಡಿತ್ತು.

ಮುನಿಯಲು ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗಲೇ ತಾನು ಸೈನ್ಯಕ್ಕೆ ಸೇರಬೇಕು ಅಂದುಕೊಂಡಿದ್ದ ಇವರ ಕನಸು ನನಸಾಗಿ ಇಂದು 24 ವರ್ಷಗಳ ಕಾಲ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದಾರೆ.

**ಆಪರೇಷನ್ ಸಿಂದೂರ್‌ನಲ್ಲಿ ಭಾಗಿ**

ದೇಶದ ಭದ್ರತೆಗಾಗಿ ತನ್ನ ಜೀವವನ್ನೇ ಪಣಕ್ಕಿಟ್ಟು, ಪಾಕಿಸ್ತಾನದ ವಿರುದ್ಧದ ಯುದ್ಧ ತುಕಡಿಯನ್ನು ಮುನ್ನಡೆಸಲು ಎಲ್ಲಾ ಉಪಕರಣಗಳೊಂದಿಗೆ ಸಜ್ಜಾಗಿ ಪಠಾಣ್ ಕೋಟ್‌ನಲ್ಲಿ ಕರ್ತವ್ಯ ನಿರ್ವಹಿಸಿದ್ದ ಅವರ ಧೈರ್ಯ ಮತ್ತು ತ್ಯಾಗ ಅಪಾರ. 'ಆಪರೇಷನ್ ಸಿಂದೂರ್'ನಲ್ಲಿ ಭಾಗವಹಿಸುವ ಮೂಲಕ ಅವರು ತಮ್ಮ ಶೌರ್ಯವನ್ನು ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಸಮಾರಂಭದಲ್ಲಿ ಉದ್ಯಮಿ ಉದಯ ಶೆಟ್ಟಿ ಮುನಿಯಾಲು, ಮುನಿಯಾಲು ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಗೋಪಿನಾಥ್ ಭಟ್, ಸುಧಾಕರ ಶೆಟ್ಟಿ, ಡಾ. ಸುದರ್ಶನ ಹೆಬ್ಬಾರ್, ಡಾ. ಅಮರಜಿತ್, ರಮೇಶ್ ಸುವರ್ಣ, ಮಂಜುನಾಥ, ಕೃಷ್ಣ ಶೆಟ್ಟಿಗಾರ್, ಕೆಪಿಎಸ್ ವಿದ್ಯಾ ಸಂಸ್ಥೆಯ ಪ್ರಾಂಶುಪಾಲರಾದ ಬೇಬಿ ಶೆಟ್ಟಿ, ಪ್ರಕಾಶ್ ಪೂಜಾರಿ, ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.





**ಅಭಿನಂದನಾ ಸಮಾರಂಭ**

ಹೆಮ್ಮೆಯ ಯೋಧ 'ಆನಂದ ಕಬ್ಬಿನಾಲೆ' ಅವರನ್ನು ಮುನಿಯಾಲು ಪೇಟೆಯಲ್ಲಿ ಮುನಿಯಾಲು ಕ್ರೀಡಾ ಸಾಂಸ್ಕೃತಿಕ ಸಂಘ ಹಾಗೂ ಗ್ರಾಮಸ್ಥರಿಂದ ಭವ್ಯ ಸ್ವಾಗತ ಹಾಗೂ ನಂತರ ಮುನಿಯಾಲು ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಅಭಿನಂದನಾ ಸಮಾರಂಭವು ಬುಧವಾರ ನಡೆಯಿತು. ಯೋಧ ಆನಂದ ಕಬ್ಬಿನಾಲೆ ಅವರನ್ನು ಅವರ ಪತ್ನಿ ಸರಿತಾ ಹಾಗೂ ಅವರ ತಂದೆ ತಾಯಿ ಸಂಜೀವ ಹಸಳ ಮತ್ತು ಗಿರಿಜಾ ಅವರ ಸಮ್ಮುಖದಲ್ಲಿ ಮುನಿಯಾಲು ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಈಗಾಗಲೇ ನಿವೃತ್ತಿ ಹೊಂದಿದ ಯೋಧರುಗಳಾದ ಪ್ರವೀಣ್ ಶೆಟ್ಟಿ, ವಿಶ್ವನಾಥ ಶೆಟ್ಟಿ, ಜಯ ಶೆಟ್ಟಿಗಾರ್, ಶ್ರೀನಿವಾಸ ಅವರುಗಳಿಗೆ ಶಾಲು ಹೊದಿಸಿ ಗೌರವಿಸಲಾಯಿತು.

**ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣ**

ದೇಶದ ವಿವಿಧ ಭಾಗಗಳಲ್ಲಿ ದೇಶ ಸೇವೆ ಸಲ್ಲಿಸಿ, ಮಾರ್ಚ್ 31ರಂದು ನಿವೃತ್ತಿಯಾದ ಬಳಿಕ ಗ್ರಾಮಕ್ಕೆ ಆಗಮಿಸುತ್ತಿದ್ದಂತೆ ಗ್ರಾಮಸ್ಥರು ಯೋಧನನ್ನು ಭಕ್ತಿ ಭಾವದಿಂದ ಪೂರ್ಣ ಕುಂಭ ಹಾಗೂ ದಾರಿ ಉದ್ದಕ್ಕೂ ಪುಷ್ಪವೃಷ್ಟಿ ಸುರಿಸಿ, ಪಟಾಕಿ ಸಿಡಿಸಿ, ಸಿಹಿ ತಿಂಡಿ ತಿನಿಸಿ ಕುಟುಂಬಸ್ಥರು ಹಾಗೂ ಅಭಿಮಾನಿಗಳು ಭರ್ಜರಿ ಸ್ವಾಗತ ಮಾಡಿದರು.

"ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಸೈನ್ಯಕ್ಕೆ ಸೇರಬೇಕು, ಭಾರತ ಮಾತೆಗೆ ಸೇವೆ ಸಲ್ಲಿಸಿ ದೇಶ ಭಕ್ತಿ ಮೈಗೂಡಿಸಿಕೊಳ್ಳಬೇಕು. ಈಗಿನ ಯುವಕರಿಗೆ ಅಗ್ನಿಪಥ್ ಅಡಿಯಲ್ಲಿ ಸೈನ್ಯಕ್ಕೆ ಸೇರಲು ಒಳ್ಳೆಯ ಅವಕಾಶ ಸಿಗುತ್ತಿದೆ. ಪ್ರಧಾನಿಯವರು ದೂರದೃಷ್ಟಿಯ ಆಲೋಚನೆ ಮಾಡಿದ್ದಾರೆ. ಇದು ಒಳ್ಳೆಯ ವಿಧಾನ. ನಮ್ಮ ಗ್ರಾಮದಲ್ಲಿ ನನಗೆ ಇಷ್ಟು ಅದ್ದೂರಿಯಾಗಿ ಸ್ವಾಗತ ಕೋರಿದ್ದು ನನಗೆ ತುಂಬಾ ಸಂತೋಷವಾಗಿದೆ.

■ ಆನಂದ ಕಬ್ಬಿನಾಲೆ, ನಿವೃತ್ತ ಯೋಧರು, ಮುನಿಯಾಲು

# ಏ.6-7: 'ಎಸ್‌ಡಿಎಂ ಉದ್ಯೋಗಂ 2026'

• **ಬೆಳ್ತಂಗಡಿ:** ಉಜಿರೆಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು (ಸ್ವಾಯತ್ತ), ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ತಾಂತ್ರಿಕ ಮಹಾವಿದ್ಯಾಲಯ ಹಾಗೂ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪಾಲಿಟೆಕ್ನಿಕ್ ಕಾಲೇಜು ಸಹಯೋಗದಲ್ಲಿ ಉಜಿರೆಯಲ್ಲಿ ಏ. 6 ಮತ್ತು 7 ರಂದು 'ಎಸ್‌ಡಿಎಂ ಉದ್ಯೋಗಂ 2026' ಬೃಹತ್ ಉದ್ಯೋಗ ಮೇಳ ನಡೆಯಲಿದೆ ಎಂದು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಪ್ರಾಚಾರ್ಯ ಪ್ರೊ. ವಿಶ್ವನಾಥ ಪಿ. ಅವರು ಕಾಲೇಜಿನಲ್ಲಿ ಗುರುವಾರ ಕರೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಉದ್ಯೋಗ ಮೇಳದಲ್ಲಿ ಈಗಾಗಲೇ 100ಕ್ಕೂ ಅಧಿಕ ಕಂಪನಿಗಳು ನೊಂದಾಯಿಸಿಕೊಂಡಿದ್ದು; ಒಟ್ಟು 4,000 ಕ್ಕೂ ಅಧಿಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳುವ ಸಲುವಾಗಿ ಅಭ್ಯರ್ಥಿಗಳ ಸಂದರ್ಶನ ನಡೆಸಲಿವೆ. ಉಜಿರೆ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಬೆಳಗ್ಗೆ 9.30ರಿಂದ ಬೃಹತ್ ಉದ್ಯೋಗ ಮೇಳ ಆರಂಭವಾಗಲಿದ್ದು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಸಮೂಹ ಆಯೋಜಿಸಿರುವ ಉದ್ಯೋಗ ಮೇಳದಲ್ಲಿ ಎಲ್ಲಾ ಉದ್ಯೋಗಾಕಾಂಕ್ಷಿಗಳಿಗೆ ಉಚಿತವಾಗಿ ನೋಂದಣಿ ಮಾಡಿಕೊಳ್ಳುವ ಅವಕಾಶ ನೀಡಲಾಗಿದೆ ಎಂದು ಅವರು ತಿಳಿಸಿದರು. ಐಟಿ ಮತ್ತು ಸಾಫ್ಟ್‌ವೇರ್ ಡೆವಲಪ್‌ಮೆಂಟ್, ಫಾರ್ಮಾಸ್ಯೂಟಿಕಲ್ಸ್, ಬ್ಯಾಂಕಿಂಗ್ ಮತ್ತು ಫೈನಾನ್ಸ್, ಐಟಿ ಮತ್ತು ಐಟಿಇಎಸ್, ಸೇಲ್ಸ್ ಮತ್ತು ಮಾರ್ಕೆಟಿಂಗ್, ರೀಟೈಲ್ ಮತ್ತು ಸೇಲ್ಸ್, ಶಿಕ್ಷಣ, ಪ್ರವಾಸೋದ್ಯಮ



ಮತ್ತು ಆತಿಥ್ಯ, ಅಕೌಂಟಿಂಗ್ ಮತ್ತು ಟ್ಯಾಕ್ಸ್ ಕನ್ಸಲ್ಟೆನ್ಸಿ, ಉತ್ಪಾದನೆ, ಆಟೋಮೊಬೈಲ್, ಟೆಲಿಕಾಂ ಮತ್ತು ಮೀಡಿಯಾ, ಕನ್‌ಸ್ಟ್ರಕ್ಷನ್ ಮತ್ತು ಇನ್‌ಫ್ರಾಸ್ಟ್ರಕ್ಚರ್ ಹಾಗೂ ಫೈನಾನ್ಶಿಯಲ್ ಕನ್‌ಸಲ್ಟೆನ್ಸಿ ಸೇರಿದಂತೆ ಹಲವು ವರ್ಗಗಳಿಗೆ ಸಂಬಂಧಿಸಿದ ಕಂಪನಿಗಳು ಈ ಉದ್ಯೋಗ ಮೇಳದಲ್ಲಿ ಭಾಗವಹಿಸಲಿದ್ದು; ಉದ್ಯೋಗಾಕಾಂಕ್ಷಿಗಳಿಗೆ ವಿಸ್ತೃತ ಆಯ್ಕೆಯ ಅವಕಾಶವನ್ನು ಒದಗಿಸಿವೆ. ಪಿಯುಸಿ, ಬಿ.ಎ, ಬಿ.ಬಿ.ಎ, ಬಿಕಾಂ, ಬಿಸಿಎ, ಬಿಎಸ್ಸಿ, ಬಿವೋಕ್, ಐಟಿಐ, ಡಿಪ್ಲೋಮಾ, ಇಂಜಿನಿಯರಿಂಗ್, ಬಿಟೆಕ್, ಬಿಎಡ್, ಎಂಎ, ಎಂಸಿಜೆ, ಎಂಎಸ್‌ಡಬ್ಲ್ಯು, ಎಂಕಾಂ, ಎಂಸಿಎ, ಎಂಎಸ್ಸಿ, ಎಂಬಿಎ, ಮತ್ತು ಜಿಎನ್‌ಎಂ ನರ್ಸಿಂಗ್ ಸೇರಿದಂತೆ ಯಾವುದೇ ಶೈಕ್ಷಣಿಕ ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಕೂಡಾ 'ಎಸ್‌ಡಿಎಂ ಉದ್ಯೋಗಂ-2026'ದಲ್ಲಿ ಭಾಗವಹಿಸಬಹುದಾಗಿದ್ದು, ಇದರ ಜೊತೆಗೆ ತಾಲೂಕಿನಾದ್ಯಂತವಿರುವ ವಿವಿಧ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಂತಿಮ ಪದವಿ ಹಂತದಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳೂ ಪಾಲ್ಗೊಳ್ಳುವ ಮುಕ್ತ ಅವಕಾಶ ಒದಗಿಸಲಾಗಿದೆ ಎಂದು ಅವರು ತಿಳಿಸಿದರು. ಉದ್ಯೋಗ ಮೇಳದಲ್ಲಿ ಭಾಗವಹಿಸುವ ಅಭ್ಯರ್ಥಿಗಳು ನೊಂದಾಯಿಸಿಕೊಳ್ಳುವ ಸಲುವಾಗಿ ಗೂಗಲ್ ಫಾರ್ಮ್ ಲಿಂಕ್ ಸೃಷ್ಟಿಸಿದ್ದು, ಅದರ ಮೂಲಕ ಮೂರು ಸಾವಿರಕ್ಕೂ ಅಧಿಕ ಉದ್ಯೋಗಾಕಾಂಕ್ಷಿಗಳು ಈಗಾಗಲೇ ರಿಜಿಸ್ಟರ್ ಮಾಡಿಕೊಂಡಿದ್ದಾರೆ. ಸಂಪೂರ್ಣ ಉದ್ಯೋಗ ಮೇಳದ ನೊಂದಣಿ ಮತ್ತು ಆಯ್ಕೆ ಪ್ರಕ್ರಿಯೆಯನ್ನು ಪೇಪರ್ ರಹಿತವಾಗಿಸಿದ್ದು, ಆನ್‌ಲೈನ್ ಮೂಲಕವೇ ಎಲ್ಲಾ ನೋಂದಣಿ ಮಾಡಿಕೊಳ್ಳಲಾಗುತ್ತಿದೆ. ಇದರ ಜೊತೆಗೆ ಎಸ್‌ಡಿಎಂ ಉದ್ಯೋಗ ಮೇಳಂ ಸಲುವಾಗಿ ವಿಶೇಷ ಸಾಫ್ಟ್‌ವೇರ್ ರೂಪಿಸಲಾಗಿದ್ದು, ಅದರ ಮೂಲಕ ಸಂದರ್ಶನ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅಭ್ಯರ್ಥಿಗಳಿಗೆ ತಮ್ಮ ಸಂದರ್ಶನದ ಫಲಿತಾಂಶವನ್ನು ಮೊಬೈಲ್ ಮೂಲಕವೇ ತಿಳಿದುಕೊಳ್ಳುವಂತಹ ವ್ಯವಸ್ಥೆಯನ್ನೂ ಮಾಡಲಾಗಿದ್ದು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳು ಪ್ರಥಮ ಬಾರಿಗೆ ಇಂತಹ ಉದ್ಯೋಗ ಮೇಳ ಆಯೋಜಿಸಿದ್ದು; ಎರಡು ದಿನಗಳ ಬೃಹತ್ ಉದ್ಯೋಗ ಮೇಳದಲ್ಲಿ ಉದ್ಯೋಗಾಕಾಂಕ್ಷಿಗಳೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸದುಪಯೋಗಪಡಿಸಿಕೊಳ್ಳಬೇಕೆಂದು ಪ್ರೊ. ವಿಶ್ವನಾಥ ಪಿ. ವಿನಂತಿಸಿದರು.

ಗೋಷ್ಠಿಯಲ್ಲಿ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪಾಲಿಟೆಕ್ನಿಕ್ ಪ್ರಾಚಾರ್ಯ ಸಂತೋಷ್, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಐಟಿ ಕಾಲೇಜಿನ ಪ್ರಾಂಶುಪಾಲರ ಪ್ರತಿನಿಧಿ ಗಿರೀಶ್ ಕುಮಾರ್, ಸುಬ್ರಹ್ಮಣ್ಯ ತೋಳ್ಪಾಡಿತ್ತಾಯ, ಅಮರೇಶ್ ಹೆಬ್ಬಾರ್, ಡಾ. ನಾಗರಾಜ ಪೂಜಾರಿ ಮತ್ತಿತರರು ಉಪಸ್ಥಿತರಿದ್ದರು. ಪತ್ರಿಕೋದ್ಯಮ ವಿಭಾಗದ ಸುನಿಲ್ ಹೆಗ್ಡೆ ಸ್ವಾಗತಿಸಿದರು.



# ದೈತ್ಯ ಬೆಟ್ಟ ತಡಿಯಂಡಮೋಳ್‌ನ್ನು 100 ಬಾರಿ ಏರಿದ ಸಾಧಕ ಅರೆಯಡ ಗಿರೀಶ್

• **ಮಡಿಕೇರಿ :** ಪ್ರಕೃತಿ ಪ್ರಿಯರ ಸ್ವರ್ಗ, ಕಾವೇರಿ ನದಿಯ ತವರು ಜಿಲ್ಲೆ ಕೊಡಗಿನ ದೈತ್ಯ ಬೆಟ್ಟ ತಡಿಯಂಡಮೋಳ್‌ನ್ನು 100 ಬಾರಿ ಏರಿದ ಸಾಧನೆಯನ್ನು ನಾಪೋಕ್ಲುವಿನ ಯವಕಪಾಡಿ ಗ್ರಾಮದ ಅರೆಯಡ ಗಿರೀಶ್ ತಿಮ್ಮಯ್ಯ ಅವರು ಮಾಡಿದ್ದಾರೆ.

ಸಮುದ್ರ ಮಟ್ಟದಿಂದ 1748 ಮೀಟರ್ ಎತ್ತರದಲ್ಲಿರುವ ತಡಿಯಂಡಮೋಳ್‌ನ್ನು ಏರುವುದು ಸುಲಭದ ಮಾತಲ್ಲ, ಅದರಲ್ಲೂ 100 ಬಾರಿ ಬೆಟ್ಟವನ್ನೇರುವುದೆಂದರೆ ಅದು ಮಹಾ ಸಾಧನೆಯೇ ಸರಿ.

1994ರ ಅವಧಿಯಲ್ಲಿ ತಡಿಯಂಡಮೋಳ್ ಬೆಟ್ಟವನ್ನು ಏರಲೆಂದೇ ವಿದೇಶಿ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುತ್ತಿದ್ದರು. ಆ ಸಂದರ್ಭ ಯವಕಪಾಡಿ ಗ್ರಾಮದ ಅಪ್ಪಾರಂಡ ಅಪ್ಪಣ್ಣ ಎಂಬುವವರ ಮನೆಯಲ್ಲಿ ತಂಗಿದ್ದ ವಿದೇಶಿ ಪ್ರವಾಸಿಗರೊಬ್ಬರು ಹಣ ಪಡೆದು ಆಶ್ರಯ ಮತ್ತು ಆತಿಥ್ಯ ನೀಡುವಂತೆ 'ಹೋಂಸ್ಟೇ' ಪರಿಕಲ್ಪನೆಯನ್ನು ಪರಿಚಯಿಸಿದರು. ಅಂದಿನಿಂದ ಅಪ್ಪಾರಂಡ ಅಪ್ಪಣ್ಣ ಅವರು 'ಪ್ಯಾಲೇಸ್ ಎಸ್ಟೇಟ್' ಹೆಸರಿನ ಹೋಂಸ್ಟೇ ಮೂಲಕ ಚಿರಪರಿಚಿತರಾದರು. ಹೋಂಸ್ಟೇಗೆ ದಿನದಿಂದ ದಿನಕ್ಕೆ ಆಗಮಿಸುವ ಪ್ರವಾಸಿಗರ ಸಂಖ್ಯೆ ಹೆಚ್ಚಾದಂತೆ ತಡಿಯಂಡಮೋಳ್‌ಗೆ ಸಾಗುವ ಪ್ರವಾಸಿಗರಿಗೆ ಗೈಡ್ ಒಬ್ಬರ ಅಗತ್ಯವಿತ್ತು. ಆಗ ಯವಕಪಾಡಿ ಗ್ರಾಮದಲ್ಲೇ ತೋಟದ ಕಾರ್ಯ ನಿರ್ವಹಿಸುತ್ತಿದ್ದ ಅರೆಯಡ ಗಿರೀಶ್ ಅವರನ್ನು ಅಪ್ಪಾರಂಡ ಅಪ್ಪಣ್ಣ ಅವರು ಗೈಡ್ ಆಗಿ ನೇಮಿಸಿಕೊಂಡರು.

ಅಂದಿನಿಂದ ತಡಿಯಂಡಮೋಳ್ ಬೆಟ್ಟವನ್ನು ಏರಲು ಆರಂಭಿಸಿದ ಅರೆಯಡ ಗಿರೀಶ್ ಅವರು ಇಲ್ಲಿಯವರೆಗೆ 100 ಕ್ಕೂ ಅಧಿಕ ಬಾರಿ ಬೆಟ್ಟ ಹತ್ತಿದ್ದಾರೆ.

ಕೆಲವು ವರ್ಷಗಳ ಹಿಂದೆ ಬೆನ್ನು ಹುರಿ ಸರ್ಜರಿ ಆದ ನಂತರ ಬೆಟ್ಟ ಏರುವುದನ್ನು ಸಂಪೂರ್ಣ ನಿಲ್ಲಿಸಿದ್ದೇನೆ. ಬೆಟ್ಟ ಹತ್ತುವುದು ಸುಲಭ, ಆದರೆ ಇಳಿಯುವುದು ಕಷ್ಟ, ನನ್ನ ಬೆನ್ನು ನೋವಿಗೆ ಇದೂ ಒಂದು ಕಾರಣ ಇರಬಹುದು ಎಂದು ಅರೆಯಡ ಗಿರೀಶ್ ಅಭಿಪ್ರಾಯ ಹಂಚಿಕೊಂಡಿದ್ದಾರೆ.

ತಡಿಯಂಡಮೋಳ್ ಹತ್ತುವಾಗ ದಾರಿಯಲ್ಲಿ ಆನೆಗಳ ಹಿಂಡು, ಕಡವೆಗಳ ಓಟ, ಹುಲಿ ಮಲ-ಹಿಕ್ಕೆ, ಅದರ ದುರ್ವಾಸನೆ ಎದುರಾಗುತ್ತದೆ. ವನ್ಯಜೀವಿಗಳು ದೂರ ಸರಿಯಲೆಂದು ಕೂಗುತ್ತಾ, ಅರಚುತ್ತಾ, ಚಪ್ಪಾಳೆ ತಟ್ಟುತ್ತಾ ಸಾಗುವಾಗ ಜೀವ ಬಾಯಿಗೆ ಬಂದಂತೆ ಆಗುವ ಅನುಭವ ರೋಮಾಂಚಕ ಎಂದು ಹೇಳುತ್ತಾರೆ.

ಪ್ರವಾಸಿಗರನ್ನು ಮಾತ್ರವಲ್ಲದೆ ಶಾಲಾ, ಕಾಲೇಜು ವಿದ್ಯಾರ್ಥಿಗಳನ್ನು ಕೂಡ ತಡಿಯಂಡಮೋಳ್‌ಗೆ ಕರೆದುಕೊಂಡು ಹೋಗಿದ್ದಾರೆ. ಮಳೆ, ಚಳಿ, ಬೇಸಿಗೆ ಕಾಲ ಎನ್ನದೆ ಎಲ್ಲಾ ದಿನಗಳಲ್ಲಿಯೂ ಇವರು ಕರ್ತವ್ಯ ನಿರ್ವಹಿಸಿದ್ದಾರೆ ಮತ್ತು ಪ್ರಕೃತಿಯೊಂದಿಗೆ ಬೆರೆತಿದ್ದಾರೆ. ಇವರು ಪ್ರೌಢಶಾಲಾ ದಿನಗಳಿಂದಲೇ ಅಥ್ಲೆಟಿಕ್, ಉದ್ದ ಜಿಗಿತ, ಎತ್ತರ ಜಿಗಿತ ಮತ್ತಿತರ ಕ್ರೀಡಾಕೂಟಗಳಲ್ಲಿ ಭಾಗವಹಿಸಿ ಬಹುಮಾನ ಗೆದ್ದಿದ್ದಾರೆ. ಉತ್ತಮ ಹಾಕಿಪಟು ಕೂಡ ಆಗಿದ್ದು, ಕಕ್ಕಬ್ಬೆ ಪ್ರೌಢಶಾಲಾ ಮೈದಾನದಲ್ಲಿ ಹಾಕಿ ಕೋಚಿಂಗ್ ಕ್ಯಾಂಪ್‌ನಲ್ಲಿ ಮುಖ್ಯ ತರಬೇತುದಾರರಾಗಿ ಸೇವೆ ಸಲ್ಲಿಸಿ ಜನಮನ್ನಣೆ ಗಳಿಸಿದ್ದಾರೆ.

ಅಲ್ಲದೆ ಕೊಡವ ಕೌಟುಂಬಿಕ ಹಾಕಿ ನಮ್ಮೆಯಲ್ಲೂ ಪಾಲ್ಗೊಂಡು ಕ್ರೀಡಾ ಪ್ರತಿಭೆ ಮೆರೆದಿದ್ದಾರೆ. ತೀರ್ಪುಗಾರರಾಗಿ, ತಾಂತ್ರಿಕ ವರ್ಗದಲ್ಲಿ 2002 ರಿಂದ ಕಳೆದ 2025ರ ಮುದ್ದಂಡ ಹಾಕಿ ನಮ್ಮೆಯವರೆಗೆ ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ಹಲವು ಕ್ರೀಡಾಕೂಟಗಳಲ್ಲಿ ತೊಡಗಿಸಿಕೊಂಡಿದ್ದ ಅವರು, ಕೂರ್ಗ್ ಹಾಕಿ ಅಸೋಸಿಯೇಷನ್, ಹಾಕಿ ಕೂರ್ಗ್, ನೆಸ್ಲೆ ಕಪ್ ಹಾಕಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ.

ಸಮಾಜ ಸೇವೆಯಲ್ಲೂ ಮುಂಚೂಣಿಯಲ್ಲಿರುವ ಅರೆಯಡ ಗಿರೀಶ್ ಸಿಎನ್‌ಸಿ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆ. ಛಾಯಾಗ್ರಹಣ ಇವರ ಹವ್ಯಾಸವಾಗಿದೆ.



**ಪರಿಚಯ**

ಅರೆಯಡ ಪೊನ್ನು ಗಣಪತಿ ಹಾಗೂ ಅರೆಯಡ ಲಕ್ಷ್ಮಿ ಸುಬ್ಬವ್ವ ದಂಪತಿಯ ಪುತ್ರ ಅರೆಯಡ ಗಿರೀಶ್ ತಿಮ್ಮಯ್ಯ (58) ಅವರು ಮೈಸೂರು ವಿಶ್ವವಿದ್ಯಾಲಯ ಮಹಾರಾಜ ಜೂನಿಯರ್ ಕಾಲೇಜ್ ನಲ್ಲಿ ಶಿಕ್ಷಣ ಪಡೆದರು. ಬೆಂಗಳೂರು ಸೇರಿದಂತೆ ವಿವಿಧೆಡೆ ಖಾಸಗಿ ಉದ್ಯೋಗ ನಿರ್ವಹಿಸಿದ ಅವರು ಕೃಷಿ ಕಾರ್ಯದಲ್ಲಿ ತಂದೆಗೆ ಸಹಕಾರಿಯಾಗಲೆಂದು ಯವಕಪಾಡಿ ಗ್ರಾಮಕ್ಕೆ ಮರಳಿದರು. ಅರೆಯಡ ಸವಿತಾ ತಿಮ್ಮಯ್ಯ (ತಾಮನೆ ಅಲ್ಲಾರಂಡ ನಾಲಡಿ ಗ್ರಾಮ) ಅವರನ್ನು ವಿವಾಹವಾದರು. ಪುತ್ರ ಅರೆಯಡ ಸಾವನ್ ಕೊಡವ ಪ್ರಸ್ತುತ ಬಿ.ಬಿ.ಎ ಶಿಕ್ಷಣ ಪಡೆಯುತ್ತಿದ್ದಾರೆ. ಅರೆಯಡ ಗಿರೀಶ್ ಅವರ ಮೊಬೈಲ್ ಸಂಖ್ಯೆ : 9740663111.



**ಸಂದ ಪ್ರಶಸ್ತಿ, ಗೌರವ**

ಇವರು ಒಬ್ಬ ಹಿರಿಯ ಸಾಹಿತಿಯೂ ಆಗಿದ್ದು, 1985 ರಿಂದ ಬ್ರಹ್ಮಗಿರಿ ಕೊಡವ ತಕ್ಕ್ ವಾರಪತ್ರಿಕೆಯ ಪಳಮೆ - ಪುದುಮೆ ಕಾಲಂನಿಂದ ಬರವಣಿಗೆ ಆರಂಭಿಸಿದ್ದು, ಇದು ನಿರಂತರವಾಗಿ ಸಾಗುತ್ತಲೇ ಇದೆ. ಹನಿ ಗವನ, ಕವಿತೆ, ಕಥೆ, ಕಾದಂಬರಿ, ಬ್ರಹ್ಮಗಿರಿ ಪುತ್ತರಿ ಸಂಚಿಕೆ, ಪೂಮಾಲೆ ಚಂಗ್ರಾಂದಿ ಪಟ್ಟೋಲೆ ಸಂಚಿಕೆ, ಕೊಡವ ತಕ್ ಎಲ್ತ್ ಕಾರಡ ಕೂಟ, ಪೂಮಾಲೆ ಬೊಳಚಿ ಕೂಟ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಸ್ಪರ್ಧೆ, ಸಂಕಲನ, ಮಾಸ ಪತ್ರಿಕೆಗಳಲ್ಲಿ ಇವರ ಬರಹಗಳು ಪ್ರಕಟವಾಗಿದ್ದು, ಹಲವು ಪ್ರಶಸ್ತಿಗಳು ಕೂಡ ಬಂದಿವೆ. ಮಂಗಳೂರು ವಿಶ್ವವಿದ್ಯಾಲಯದ ವಾಣಿಜ್ಯ ಕಾವೇರಿ 3 ರ ಬಿಕಾಂ ಕೊಡವ, ಮೂರನೇ ಸೆಮಿಸ್ಟರ್ ಪುಸ್ತಕದಲ್ಲಿ, ಪುಟ ಸಂಖ್ಯೆ 48 - 51 ರಲ್ಲಿ 'ತೃಪ್ತಿ' ಎನ್ನುವ ಕಥೆಯನ್ನು ಸೇರಿಸಿ ಇವರ ಬರಹಕ್ಕೆ ಗೌರವ ನೀಡಲಾಗಿದೆ.

ಕಾಡುತ್ತಿದೆ ಪ್ರೆಶರ್ ಕೊರತೆ । ಮುಗಿಯದ ಡ್ರೈನೇಜ್ ಗೋಳು

# ನಗರದ ಹೃದಯಭಾಗಕ್ಕೂ 2ದಿನಕ್ಕೊಮ್ಮೆ ನೀರು!

▸ ಸುರೇಶ್ ಡಿ. ಪಳ್ಳಿ

• ಚಿತ್ರ: ರಾಜೇಶ್ ಶೆಟ್ಟಿ ಬಳ್ಳಾಲ್‌ಬಾಗ್

ದಿಗಂತ ವಾಟರ್ ಚೆಕ್




• **ಮಂಗಳೂರು:** ಇಲ್ಲಿ, ಸಾವಿರಾರು ಕ್ರೀಡಾಪಟುಗಳ ಪ್ರತಿಭೆಯನ್ನು ಅನಾವರಣಗೊಳಿಸಿದ ಮಂಗಳಾ ಕ್ರೀಡಾಂಗಣವಿದೆ. ಮಂಗಳೂರು ಮಹಾನಗರ ಪಾಲಿಕೆ ಕಟ್ಟಡವಿದೆ. ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರು ಇದೇ ವಾರ್ಡಿನಲ್ಲಿದ್ದಾರೆ. ಆದರೆ ಕುಡಿಯುವ ನೀರಿನ ಸಮಸ್ಯೆ ಮಾತ್ರ ತಪ್ಪಿಲ್ಲ!


ಇಷ್ಟು ಹೇಳಿದ ಮೇಲೆ ಇದು ಮಣ್ಣಗುಡ್ಡ ವಾರ್ಡ್ ಎಂದು ನೀವು ತಟ್ಟನೆ ಹೇಳಿಬಿಡಬಹುದು. ಹೌದು, ನಗರದ ಹೃದಯ ಭಾಗದಲ್ಲಿರುವ ಮಣ್ಣಗುಡ್ಡ ವಾರ್ಡ್‌ನಲ್ಲೂ ಕುಡಿಯುವ ನೀರಿನ ಸಮಸ್ಯೆ ಇದೆ. ಇಲ್ಲಿಯೂ ಇತರ ವಾರ್ಡ್‌ಗಳಂತೆ ಎರಡು ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದೆ. ನೀರು ಬರುವಾಗ ಸಂಗ್ರಹಿಸಿಟ್ಟುಕೊಳ್ಳಲು ಮನೆಯಲ್ಲೊಬ್ಬರು ಇರಲೇಬೇಕು. ವಾತಾವರಣದಲ್ಲಿನ ಉಷ್ಣಾಂಶ ಹೆಚ್ಚುತ್ತಲೇ ಇರುವುದರಿಂದ ನೀರಿನ ಕೊರತೆಯೂ ಜನತೆಯನ್ನು ಅತಿಯಾಗಿ ಕಾಡುತ್ತಿದೆ.

**▸ ಪ್ರೆಶರ್ ಇಲ್ಲ**

ನೀರೇನೋ ಬರುತ್ತಿದೆ ಆದರೆ ಪ್ರೆಶರ್ ಇಲ್ಲ. ನಿಧಾನವಾಗಿ ಬರುವ ನೀರನ್ನು ತುಂಬಿಸಿಕೊಳ್ಳಲು ಸಾಕಷ್ಟು ಸಮಯ ಕಾಯಬೇಕು. ಒಮ್ಮೆ ಮಳೆ ಬಂದರೆ ಸಾಕು ಎನ್ನುವಂತಾಗಿದೆ ಎನ್ನುತ್ತಾರೆ ಇಲ್ಲಿನ ನಿವಾಸಿಗಳು. 'ಟ್ಯಾಂಕರ್ ನೀರನ್ನಾದರೂ ಒದಗಿಸಿ ಎಂದು ಜನತೆಯಿಂದ ಬೇಡಿಕೆ ಬರುತ್ತಿದೆ. ಪೂರೈಕೆಯಾಗುವ ನೀರಿನ ಪ್ರೆಶರ್ ಹೆಚ್ಚಾದರೆ ಸಮಸ್ಯೆ ಅಷ್ಟಾಗಿ ಕಾಡದು' ಎನ್ನುತ್ತಾರೆ ಇಲ್ಲಿನ ನಿಕಟಪೂರ್ವ ಕಾರ್ಪೋರೇಟರ್ ಸಂಧ್ಯಾ ಅವರು.




**ಡ್ರೈನೇಜ್ ಸಮಸ್ಯೆ ಬಗೆಹರಿಯಲಿ**



ನಮ್ಮ ವಾರ್ಡ್‌ನಲ್ಲಿ ಬಹುವಾಗಿ ಕಾಡುವುದು ಡ್ರೈನೇಜ್ ಸಮಸ್ಯೆ ಮೊದಲು ಇದಕ್ಕೆ ಮುಕ್ತಿ ದೊರೆಯಬೇಕು. ಕುಡಿಯುವ ನೀರು ಎರಡು ದಿನಕ್ಕೊಮ್ಮೆ ಬರುತ್ತಿದೆ. ಪ್ರತಿ ವರ್ಷ ಈ ಸಮಸ್ಯೆ ಇರುತ್ತದೆ. ನೀರಿನ ಪ್ರೆಶರ್ ಕೊರತೆ ಇಲ್ಲಿನ ಜನತೆಯನ್ನು ಸದಾ ಕಾಡುತ್ತಿದೆ.

■ ಗುರುಚರಣ್, ಮಣ್ಣಗುಡ್ಡ

**ಕುಡಿಯುವ ನೀರು ಪೋಲಾಗಬಾರದು**



ವಾರ್ಡ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಸ್ವಲ್ಪಮಟ್ಟಿಗೆ ಇದೆ. ಎರಡು ದಿನಕ್ಕೊಮ್ಮೆ ನೀರು ಬರುತ್ತಿದೆ. ಟ್ಯಾಂಕರ್ ಮೂಲಕ ನೀರು ಪೂರೈಸುವ ಸ್ಥಿತಿ ಇದುವರೆಗೆ ಬಂದಿಲ್ಲ. ನೀರಿನ ಸಮಸ್ಯೆ ಇರುವ ಈ ಬೇಸಿಗೆ ಕಾಲದಲ್ಲಿ ಸಾರ್ವಜನಿಕರು ನೀರು ಪೋಲು ಮಾಡುವುದಕ್ಕೆ ಕಡಿವಾಣ ಹಾಕಬೇಕು.

■ ಸಂಧ್ಯಾ, ನಿಕಟಪೂರ್ವ ಕಾರ್ಪೋರೇಟರ್



**ಡ್ರೈನೇಜ್ ಸಮಸ್ಯೆ**

ಮಣ್ಣಗುಡ್ಡ ವಾರ್ಡನ್ನು ಬಹುವಾಗಿ ಕಾಡುವಂತದ್ದು ಡ್ರೈನೇಜ್. ಬಹುತೇಕ ಕಡೆಗಳಲ್ಲಿ ಕೊಳಚೆ ನೀರನ್ನು ನೇರವಾಗಿ ಚರಂಡಿಗೆ ಬಿಡಲಾಗುತ್ತಿದೆ. ಈ ಸಮಸ್ಯೆಗೆ ಮುಕ್ತಿ ದೊರೆಯಬೇಕು ಎನ್ನುತ್ತಾರೆ ಸ್ಥಳೀಯರು. 2011ರ ಜನಗಣತಿಯ ಪ್ರಕಾರ ಈ ವಾರ್ಡ್‌ನಲ್ಲಿ 7,632 ಜನಸಂಖ್ಯೆಯಿದೆ. ಈ ಪೈಕಿ 3752 ಪುರುಷರು ಮತ್ತು 3880 ಮಹಿಳೆಯರಿದ್ದಾರೆ. ಆಸ್ಪತ್ರೆ, ಕ್ರೀಡಾಂಗಣ ಸೇರಿದಂತೆ ಸಕಲ ವ್ಯವಸ್ಥೆಯನ್ನು ಒಳಗೊಂಡಿರುವ ವಾರ್ಡ್ ಇದಾಗಿದೆ.



**ಎಲ್ಲೆಂದರಲ್ಲಿ ತ್ಯಾಜ್ಯ**

ಬಹುತೇಕ ಪ್ರಜ್ಞಾವಂತ ನಾಗರಿಕರೇ ಹೆಚ್ಚಾಗಿರುವ ವಾರ್ಡ್ ಇದು. ಆದರೆ ರಸ್ತೆ ಬದಿಗಳಲ್ಲಿ ತ್ಯಾಜ್ಯ ರಾಶಿ ಮಾತ್ರ ತಪ್ಪುವುದಿಲ್ಲ. ಫ್ಲ್ಯಾಟ್‌ಗಳ ಮಂದಿಯೂ ರಸ್ತೆ ಬದಿ ಕಸ ಸುರಿದು ಹೋಗುವವರಿದ್ದಾರೆ. ಇಂತಹವರ ಪತ್ತೆಗೆಂದೇ ಸಿಸಿ ಕ್ಯಾಮೆರಾ ಅಳವಡಿಸಿದರೂ ತ್ಯಾಜ್ಯ ಸುರಿಯುವವರ ಸಂಖ್ಯೆ ಕಡಿಮೆ ಆಗಿಲ್ಲ. ಸಿಸಿ ಕ್ಯಾಮೆರಾ ಅಳವಡಿಸಿದ ಸ್ಥಳದಲ್ಲಿಯೇ ಪ್ರತಿ ನಿತ್ಯ ತ್ಯಾಜ್ಯ ಸುರಿಯಲಾಗುತ್ತಿದೆ. ಕಳೆದ ಹಲವು ವರ್ಷದಿಂದ ಸಮಸ್ಯೆ ಇಲ್ಲಿನವರನ್ನು ಕಾಡುತ್ತಿದೆ.

ಮುಂದಿನ ವಾರ್ಡ್ -29
ಕಂಬ್ಳ ಪರಿಸರದ ಸ್ಥಿತಿಗತಿ

# ಉಪ ಚುನಾವಣೆಯಲ್ಲಿ ಬಿಜೆಪಿಗೆ ಗೆಲುವು: ಛಲವಾದಿ

• **ಬೆಂಗಳೂರು:** ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿಗೆ ಅಭೂತಪೂರ್ವ ಗೆಲುವು ಖಚಿತ. ಕಳ್ಳರಿಗೆಲ್ಲ ಸೋಲು ಖಚಿತವೆಂದು ಗೊತ್ತಾದ ಬಳಿಕ ಮುಖ್ಯಮಂತ್ರಿಗಳು ಐದು ದಿನ ಅಲ್ಲೇ ಠಿಕಾಣಿ ಹೂಡಿದ್ದಾರೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವ್ಯಂಗ್ಯವಾಡಿದ್ದಾರೆ.

ಗುರುವಾರ ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬಾಗಲಕೋಟೆಯಲ್ಲಿ ಮುಖ್ಯಮಂತ್ರಿಗಳು ಠಿಕಾಣಿ ಹೂಡಿದ್ದಾರೆ ಎನ್ನುವ ಕಾರಣಕ್ಕೆ



ಕೆಲವೆಡೆ ರಸ್ತೆಗಳನ್ನು ಕೆಂಪು ಮಣ್ಣಿನಿಂದ ಮುಚ್ಚಿದ್ದಾರೆ. ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಿಗುತ್ತಿಲ್ಲ. ಆದ್ದರಿಂದ ಸರ್ಕಾರಿ ನೌಕರರು, ಶಿಕ್ಷಕರನ್ನು ಬಳಸಿಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿ ಭೇಟಿಗೂ ಮೊದಲು ಒಂದೊಂದು ಹಳ್ಳಿಗೆ 50ರಿಂದ 10 ಲಕ್ಷ ಹಣ ಹಂಚುತ್ತಿದ್ದಾರೆ ಎಂದು ಆರೋಪಿಸಿದರು. ಚರಂತಿಮಠ ಅವರನ್ನು ಗೆಲ್ಲಿಸಲು ಜನರು ತೀರ್ಮಾನ ಮಾಡಿದ್ದು, ಮುಸಲ್ಮಾನರೂ ಬಿಜೆಪಿ ಬೆಂಬಲಕ್ಕೆ ನಿಂತಿದ್ದಾರೆ ಎಂದು ತಿಳಿಸಿದರು.

ದಾವಣಗೆರೆಯಲ್ಲಿ ಸಾದಿಕ್ ಪೈಲ್ವಾನ್ ಅವರನ್ನು ಕಾಂಗ್ರೆಸ್ಸಿನವರು ತೆಪ್ಪ ದಾರಿಗೆ ಎಳೆದ ಭಾವನೆ ಇದೆ. ಮುಸಲ್ಮಾನರು ಅಲ್ಲಿ ಮತ ಹಾಕದೇ ಇರಲು ತೀರ್ಮಾನಕ್ಕೆ ಬಂದಿದ್ದಾರೆ. ಎಸ್‌ಡಿಪಿಐ ಅಭ್ಯರ್ಥಿಯೂ ಇದ್ದಾರೆ. ನಲಪಾಡ್ ಮುಸಲ್ಮಾನರನ್ನೇ ಬೈದಿದ್ದಾರೆ. ಇದರಿಂದ ಮುಸಲ್ಮಾನರು ಇನ್ನಷ್ಟು ಕೋಪಗೊಂಡಿದ್ದಾರೆ. ಇವೆಲ್ಲವೂ ಕಾಂಗ್ರೆಸ್ಸಿನ ಸೋಲಿಗೆ ಕಾರಣ ಆಗಬಹುದೆಂದು ವಿಶ್ಲೇಷಿಸಿದರು. ಕಾಂಗ್ರೆಸ್ಸಿನಲ್ಲಿ ಅಭ್ಯರ್ಥಿ ವಿಚಾರದಲ್ಲಿ ಅಸಮಾಧಾನವಿದೆ. ಕಾಂಗ್ರೆಸ್ಸಿನವರೇ ಸೇರಿ ಬಿಜೆಪಿಯನ್ನು ಎರಡೂ ಕಡೆ ಗೆಲ್ಲಿಸಬಹುದು ಎಂದರು. ರಾಹುಲ್ ಗಾಂಧಿ ಬಾಯಿಗೆ ಬಂದ ಹಾಗೆ ಅಸಂಬದ್ಧವಾಗಿ ಮಾತನಾಡುತ್ತಿದ್ದಾರೆ. ಅಷ್ಟು ಕೆಟ್ಟದಾಗಿ ಮಾತನಾಡುವುದಕ್ಕೂ ನರೇಂದ್ರ ಮೋದಿ ಕಾರಣರೇ ಎಂದು ಪ್ರಶ್ನಿಸಿದರು.

# ಕೇಂದ್ರದಿಂದ ಷರತ್ತುಬದ್ಧ ಒಪ್ಪಿಗೆ

• **ಬೆಂಗಳೂರು:** ಎತ್ತಿನಹೊಳೆ ಕುಡಿಯುವ ನೀರಿನ ಯೋಜನೆಯಲ್ಲಿ ಗುರುತ್ವಾಕರ್ಷಣ ಕಾಲುವೆ ನಿರ್ಮಾಣಕ್ಕಾಗಿ ಹಾಸನ ಮತ್ತು ತುಮಕೂರು ಜಿಲ್ಲೆಯಲ್ಲಿ 111.0277 ಹೆಕ್ಟೇರ್ ಅರಣ್ಯ ಭೂಮಿ ಬಳಸಲು ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯ ಬುಧವಾರ ಷರತ್ತು ಬದ್ಧ ಅನುಮತಿ ನೀಡಿದೆ.

ಹಾಸನ, ತುಮಕೂರು ಜಿಲ್ಲೆಗಳಲ್ಲಿ ಗುರುತ್ವಾ ಕಾಲುವೆಯ ನಿರ್ಮಾಣಕ್ಕೆ 0 ರಿಂದ 261.690 ಕಿ.ಮೀ.ವರೆಗಿನ 173.3105 ಹೆಕ್ಟೇರ್ ಅರಣ್ಯ ಭೂಮಿ ಬಳಕೆಗೆ ವಿಶ್ವೇಶ್ವರಯ್ಯ ಜಲ ನಿಗಮದ ಪರವಾಗಿ ರಾಜ್ಯ ಸರ್ಕಾರ 2025ರ ಮಾ.18ರಂದು ಪೂರ್ವಾನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿತ್ತು. ಈ ಪೈಕಿ 111.0277 ಹೆಕ್ಟೇರ್ ಅರಣ್ಯ ಭೂಮಿ ಉಪಯೋಗಿಸುವುದಕ್ಕೆ ಷರತ್ತುಬದ್ಧ ಅನುಮತಿ ನೀಡಲಾಗಿದೆ.

ಕೇಂದ್ರ ಅರಣ್ಯ ಮತ್ತು ಪರಿಸರ ಮಂತ್ರಾಲಯವು ಎರಡು ಹಂತಗಳಲ್ಲಿ 35 ಷರತ್ತುಗಳನ್ನು ವಿಧಿಸಿದೆ. ಅವುಗಳಲ್ಲಿ ಕೆಲವು ಅರಣ್ಯ ಭೂಮಿ ಬಳಕೆಗೆ ಮೊದಲು ಪೂರೈಸಬೇಕಿದ್ದರೆ, ಇನ್ನು ಕೆಲವು ಬಳಕೆಯ ಬಳಿಕ ಅನುಸರಿಸಬೇಕಿದೆ. ಮುಖ್ಯವಾಗಿ ಪರಿಪತ್ರದಿಂದ ಅರಣ್ಯ ಭೂಮಿಯ ಕಾನೂನು ಸ್ಥಿತಿ ಬದಲಾಗದೆ ಮೊದಲಿನಂತೆಯೇ ಉಳಿಯುತ್ತದೆ. ಬಳಕೆ ಮಾಡುವ ಅರಣ್ಯ ಭೂಮಿಯಷ್ಟೇ ಪ್ರಮಾಣದಲ್ಲಿ ಅರಣ್ಯೇತರ ಭೂಮಿಯಲ್ಲಿ ಪರಿಹಾರ ಅರಣ್ಯೀಕರಣ ಮಾಡಬೇಕು. ಪರಿಹಾರ ಅರಣ್ಯೀಕರಣಕ್ಕಾಗಿ ಗುರುತಿಸಲಾದ ಅರಣ್ಯೇತರ ಭೂಮಿಯನ್ನು ರಾಜ್ಯ ಅರಣ್ಯ ಇಲಾಖೆಯ ಪರವಾಗಿ ಅರಣ್ಯ ಭೂಮಿಯಾಗಿ ವರ್ಗಾಯಿಸಿ, ಪರಿವರ್ತಿಸಬೇಕು. ಅದನ್ನು ಭಾರತೀಯ ಅರಣ್ಯ ಕಾಯ್ದೆ, 1927 ರ ಸೆಕ್ಷನ್– 29 ರಡಿಯಲ್ಲಿ ಅಥವಾ ಸ್ಥಳೀಯ ಅರಣ್ಯ ಕಾಯ್ದೆಯ ಸಂಬಂಧಿತ ಸೆಕ್ಷನ್‌ಗಳಡಿಯಲ್ಲಿ ಸಂರಕ್ಷಿತ ಅರಣ್ಯಗಳೆಂದು ಅಧಿಸೂಚಿಸಬೇಕು. ಪರಿಹಾರ ಅರಣ್ಯೀಕರಣವನ್ನು 10 ವರ್ಷಗಳ ಕಾಲ ನಿರ್ವಹಣೆ ಮಾಡಬೇಕು.


ಪೂರ್ವಾನುಮತಿ ಇಲ್ಲದೆ ಬಳಸಿರುವ ಉಳಿದ ಅರಣ್ಯ ಪ್ರದೇಶವನ್ನು ಜಲ ನಿಗಮದಿಂದ ವಾಪಸ್ ಪಡೆದು ಸೂಕ್ತ ಮರು ಸ್ಥಾಪನೆ ಮಾಡಬೇಕು. ಇದಕ್ಕೆ ತಗಲುವ ವೆಚ್ಚವನ್ನು ಜಲ ನಿಗಮದಿಂದಲೇ ವಸೂಲಿ ಮಾಡಬೇಕು. ವಿಶ್ವೇಶ್ವರಯ್ಯ ಜಲ ನಿಗಮವು ನಿಯಮ ಉಲ್ಲಂಘಿಸಿ ಬಳಸಿದ ಅರಣ್ಯ ಪ್ರದೇಶಕ್ಕೆ ದಂಡ ವಸೂಲಿ ಮಾಡಲಾಗುತ್ತದೆ. ಈ ಮೊತ್ತವು ಅರಣ್ಯ ಭೂಮಿಯ ಈಗಿನ ಒಟ್ಟು ಮೌಲ್ಯದ (ಎನ್‌ಪಿವಿ) ಐದು ಪಟ್ಟು ಆಗಿರುತ್ತದೆ. ಈ ಮೊತ್ತವನ್ನು ಕಾಂಪಾ ಖಾತೆಗೆ ವರ್ಗಾವಣೆ ಮಾಡುವವರೆಗೆ ಶೇ. 12 ಬಡ್ಡಿ ವಸೂಲಿ ಮಾಡಬೇಕು.

ವನ್ಯಜೀವಿಗಳ ಸಂರಕ್ಷಣೆಗಾಗಿ ವನ್ಯಜೀವಿ ಸಂರಕ್ಷಣಾ ಯೋಜನೆಯನ್ನು ರಾಜ್ಯ ಸರ್ಕಾರ ಸಲ್ಲಿಸಬೇಕು. ಇದನ್ನು ಭಾರತೀಯ ವನ್ಯಜೀವಿ ಸಂಸ್ಥೆಯಿಂದ ಪರಿಶೀಲನೆಗೆ ಒಳಪಡಿಸಬೇಕು. ಸಂಪೂರ್ಣ ಅನುಸರಣಾ ವರದಿಯನ್ನು ಪರಿವೇಶ್ ಇ-ಪೋರ್ಟಲ್‌ನಲ್ಲಿ ಅಪ್‌ಲೋಡ್ ಮಾಡಬೇಕು.

# ಭಾಗ್ಯಗಳ ತಡೆಗೆ ಕೋರ್ಟ್ ನಕಾರ

• **ಬೆಂಗಳೂರು:** ನ್ಯಾಯಾಲಯ ಮಾಡುವ ಯಾವುದೇ ಆದೇಶವು ಅಂತಿಮವಾಗಿ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಹಾನಿ ಮಾಡಲಿದೆ. ರಾಜ್ಯ ಸರ್ಕಾರ ನೀತಿ ಜಾರಿಗೊಳಿಸಿದ್ದು, ಅದನ್ನು ಮುಂದುವರಿಸುತ್ತಿದೆ ಎಂದಿರುವ ಹೈಕೋರ್ಟ್ ಗ್ಯಾರಂಟಿ ಯೋಜನೆಗಳ ಭಾಗವಾಗಿ ನಗದು ಬಿಡುಗಡೆ ಮಾಡದಂತೆ ತಡೆ ನೀಡಬೇಕು ಎಂಬುದಕ್ಕೆ ನಿರಾಕರಿಸಿದೆ.

ಆರೆಂಟು ತಿಂಗಳಿಂದ ಗ್ಯಾರಂಟಿ ಯೋಜನೆಗಳ ಭಾಗವಾಗಿ ನಗದು ಬಿಡುಗಡೆಯನ್ನು ತಡೆಹಿಡಿಯಲಾಗಿದೆ. ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವಾಗ ಉಪಚುನಾವಣೆಯನ್ನು



ಕೇಂದ್ರೀಕರಿಸಿ ಏಕಕಾಲಕ್ಕೆ ಬಾಕಿ ಪಾವತಿಸುವ ಮೂಲಕ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ ಎಂದು ಆಕ್ಷೇಪಿಸಿ ದಾವಣಗೆರೆ ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿರುವ ಗೌತಮ್ ಕುಮಾರ್ ಜೈನ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಶಂಕರ್ ಮಗದುಮ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು.

ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರು ಚುನಾವಣಾ ಆಯೋಗವು ಶಕ್ತಿಯುತವಾಗಿದ್ದು, ಕಾನೂನಿನ ಅನ್ವಯ ಅವರು ಕ್ರಮಕೈಗೊಳ್ಳಲಿದ್ದಾರೆ. ಆರು ತಿಂಗಳಿಂದ ಗ್ಯಾರಂಟಿ ಯೋಜನೆಗಳ ಹಣ ನೀಡಲಾಗಿಲ್ಲ ಎಂಬುದಕ್ಕೆ ದಾಖಲೆ ಸಲ್ಲಿಸಬೇಕು. ಅದನ್ನು ನಾವು ತೋರಿಸಿದರೆ ಅರ್ಜಿದಾರರಿಗೆ ದಂಡ ಹಾಕಬೇಕು, ಫೆಬ್ರವರಿವರೆಗೆ ಎಲ್ಲವನ್ನೂ ವಿತರಿಸಿರುವುದಕ್ಕೆ ದಾಖಲೆ ಸಲ್ಲಿಸುತ್ತೇವೆ ಎಂದರು. ಅರ್ಜಿದಾರರ ಪರ ಹಿರಿಯ ವಕೀಲ ಎಂ.ಅರುಣ್ ಶ್ಯಾಮ್ ಅವರು ಗೃಹಲಕ್ಷ್ಮೀ, ಯುವನಿಧಿ, ಅನ್ನಭಾಗ್ಯ ಯೋಜನೆಗಳನ್ನು ಸರ್ಕಾರವು ಸಂಯಾನ ಜಾರಿಗೊಳಿಸಿಲ್ಲ. ಆರು ತಿಂಗಳಿಂದ ಅನ್ನಭಾಗ್ಯ ನೀಡಲಾಗಿಲ್ಲ. ನೀತಿ ಸಂಹಿತೆ ಜಾರಿಯಾದ ಮೇಲೆ ಹಣ ನೀಡುವುದೇ ಅಥವಾ ನೀತಿ ಸಂಹಿತೆ ಜಾರಿಯಾಗುವುದಕ್ಕೆ ಮೊದಲೇ ನೀಡುವುದೇ ಎಂಬುದು ಇಲ್ಲಿ ವಿಷಯವಾಗಿದೆ. ಫಲಾನುಭವಿಗಳಿಗೆ ಹಣ ಬಿಡುಗಡೆ ಮಾಡುವುದಕ್ಕೂ ಮುನ್ನ ಸರ್ಕಾರವು ಆಯೋಗದಿಂದ ಅನುಮತಿ ಪಡೆದಿಲ್ಲ. ಚುನಾವಣೆ ಮುಗಿಯುವವರೆಗೆ ಹಣ ಬಿಡುಗಡೆ ಮಾಡಬಾರದು ಎಂಬುದು ನಮ್ಮ ಕೋರಿಕೆ.

## ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮೋದಿಯ ಆರ್ಥಿಕ ನೀತಿ, ವಿದೇಶ ನೀತಿ ವಿಫಲವಾಗಿದೆ. ಅವರ ಯಾವ ನೀತಿಯೂ ಅನುಕೂಲವಾಗಿಲ್ಲ – **ಮಲ್ಲಿಕಾರ್ಜುನ ಖರ್ಗೆ**

**– ಪಕ್ಷ ನಿಷ್ಠೆಯ ದೃಷ್ಟಿಯಲ್ಲಿ ನೋಡಿದಾಗ ವಿಫಲವೆಂದು ಕಾಣಿಸಿರಬಹುದು, ಆದರೆ ದೇಶ ನಿಷ್ಠೆಯ ದೃಷ್ಟಿಯಲ್ಲಿ ನೋಡಿದಾಗ ಸಂಪೂರ್ಣ ಸಫಲವೆಂಬುದನ್ನು ಕಾಣಬಹುದು!**

## ದಿನ ಭವಿಷ್ಯ

**ಮೇಷ**
ವೃತ್ತಿಯಲ್ಲಿ ವಿಘ್ನ ತಲೆದೋರಿದರೂ ಹೆಚ್ಚಿನ ಹಾನಿ ತರದು. ಆಪ್ತರ ಸೂಕ್ತ ಸಹಕಾರ ಸಿಗಲಿದೆ. ಖರ್ಚು ನಿಮ್ಮ ಮಿತಿಯೊಳಗಿರಲಿ.

**ವೃಷಭ**
ವೃತ್ತಿಯಲ್ಲಿ ಪ್ರಗತಿ. ಬಾಕಿ ಉಳಿದ ಕಾರ್ಯ ಪೂರ್ಣ. ಪ್ರೀತಿಯಲ್ಲೂ ಸಂತೋಷದ ಬೆಳವಣಿಗೆ. ವಿವಾಹ ಸಂಬಂಧ ಕೂಡಿಬರಬಹುದು.

**ಮಿಥುನ**
ನಿಮ್ಮ ಉತ್ತಮ ನಿರ್ವಹಣೆಗೆ ಸೂಕ್ತ ಪ್ರತಿಫಲ ಸಿಗಲಿದೆ. ಸಂತಾನ ಅಪೇಕ್ಷಿತರಿಗೆ ಶುಭಪ್ರದ ಬೆಳವಣಿಗೆ. ಆದಾಯ ಹೆಚ್ಚಳ.

**ಕಟಕ**
ಸಣ್ಣ ವಿಷಯ ಹೆಚ್ಚು ಜಟಿಲಗೊಳಿಸಬೇಡಿ. ಸಂತೋಷ ಪಡಲು ನಿಮ್ಮ ಮನಸ್ಥಿತಿ ಬದಲಿಸುವುದೂ ಅಗತ್ಯ. ವೃತ್ತಿಯಲ್ಲಿ ಅಧಿಕ ಹೊಣೆಗಾರಿಕೆ.

**ಸಿಂಹ**
ದಿನವಿಡೀ ಉತ್ಸಾಹ. ಹೊಣೆಗಾರಿಕೆ ಮುಗಿದು ನಿರಾಳತೆಯ ಭಾವ. ಬಯಸಿದ ಗುರಿ ಸಾಧಿಸುವಿರಿ. ಆದಾಯದಲ್ಲಿ ಹೆಚ್ಚಳ

**ಕನ್ಯಾ**
ವೃತ್ತಿ ಒತ್ತಡ ಅಧಿಕವಿದ್ದರೂ ಕುಟುಂಬದ ಸಂಗಡ ಆತ್ಮೀಯ ಕಾಲ ಕಳೆಯುವ ಅವಕಾಶವೂ ಸಿಗಲಿದೆ. ಆರ್ಥಿಕ ಒತ್ತಡ.

**ತುಲಾ**
ಆದಾಯದಲ್ಲಿ ಹೆಚ್ಚಳ. ಆಪ್ತರ ಜತೆಗಿನ ಭಿನ್ನಮತ ಸುಗಮ ಪರಿಹಾರ. ಕಠಿಣ ಕಾರ್ಯ ಇಂದು ಕೈಗೆತ್ತಿಕೊಳ್ಳಬೇಡಿ. ಕಾದುನೋಡಿರಿ.

**ವೃಶ್ಚಿಕ**
ಯಾರದೋ ಮಾತು ಮನಸ್ಸು ಕೆಡಿಸಬಹುದು. ಅಂತಹ ಮಾತಿಗೆ ಆಸ್ಪದ ಕೊಡದಂತೆ ವರ್ತಿಸಿರಿ. ದೌರ್ಬಲ್ಯಕ್ಕೆ ಸುಲಭ ಬಲಿಯಾಗಬೇಡಿ.

**ಧನು**
ನೀವು ಹಿಂದೆ ತೋರಿದ ಧೋರಣೆಗೆ ಕೆಲವರ ಅತೃಪ್ತಿ, ಟೀಕೆ. ಬಳಿಕ ಸರಿಯಾಗಲಿದೆ. ಆತ್ಮೀಯರ ಸಂಗದಲ್ಲಿ ನಿರಾಳತೆ.

**ಮಕರ**
ಮನೆ ವ್ಯವಹಾರಕ್ಕೆ ಸಂಬಂಧಿಸಿ ಮಹತ್ವದ ನಿರ್ಧಾರ ತಾಳಬೇಕಾದೀತು. ಆರ್ಥಿಕ ಪ್ರಗತಿ. ಅನಾರೋಗ್ಯ ನಿವಾರಣೆ. ಧನಪ್ರಾಪ್ತಿ.

**ಕುಂಭ**
ನೀವು ಅಚ್ಚರಿಪಡುವ ಬೆಳವಣಿಗೆ ಉಂಟಾದೀತು. ವೃತ್ತಿಯಲ್ಲಿ ಕಿರುಕುಳ ಎದುರಿಸುವಿರಿ. ಕುಟುಂಬ ಸಂಬಂಧ ಬಲಗೊಳಿಸಿ. ಭಾವುಕತೆ ನಿಯಂತ್ರಿಸಿ.

**ಮೀನ**
ಚಿಂತೆ ತಂದಿದ್ದ ವಿಷಯ ಇತ್ಯರ್ಥ. ಆತ್ಮವಿಶ್ವಾಸ ಹೆಚ್ಚಿಸುವ ಪ್ರಸಂಗ. ಆರ್ಥಿಕ ವ್ಯವಹಾರದಲ್ಲಿ ಲಾಭ. ಕೌಟುಂಬಿಕ ಸೌಹಾರ್ದ.

**ರಾಹುಕಾಲ: 10.30–12.00**
**ಗುಳಿಕಕಾಲ: 7.30–9.00**

ಅದೃಷ್ಟ ಸಂಖ್ಯೆ : 1,8,3,6

### ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್

# ಗರ್ಭಿಣಿಯರಲ್ಲಿ ರಕ್ತಹೀನತೆ

• **ಬೆಂಗಳೂರು:** ಮಹಿಳೆಯರ ಆರೋಗ್ಯದ ವಿಚಾರದಲ್ಲಿ ಇಂದು ನಾವು ಎದುರಿಸುತ್ತಿರುವ ಅತ್ಯಂತ ಗಂಭೀರ ಸವಾಲು ಎಂದರೆ ರಕ್ತಹೀನತೆ (ಅನಿಮಿಯಾ). ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ವರದಿಯಲ್ಲಿ ತಿಳಿಸಿದಂತೆ, ನಮ್ಮ ರಾಜ್ಯದಲ್ಲಿ ಶೇ. 67ಕ್ಕಿಂತ ಹೆಚ್ಚು ಗರ್ಭಿಣಿಯರು ರಕ್ತಹೀನತೆಯಿಂದ ಬಳಲುತ್ತಿರುವುದು ಆತಂಕಕಾರಿ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಹೇಳಿದರು.

ಗುರುವಾರ ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ವತಿಯಿಂದ ಹಮ್ಮಿಕೊಂಡಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ಮಾತನಾಡಿದ ಅವರು, ತಾಯಿಯಿಂದ ಹುಟ್ಟುವ ಮಕ್ಕಳಿಗೂ ರಕ್ತಹೀನತೆ ಸಮಸ್ಯೆದ ಬಗ್ಗೆ ಗಂಭೀರವಾಗಿ ಚಿಂತಿಸಬೇಕಿದ್ದು, ಆರೋಗ್ಯಕರ ಪೀಳಿಗೆಯನ್ನು ನಿರ್ಮಿಸುವ ಮೊದಲು ಮಹಿಳೆಯರ ಆರೋಗ್ಯವನ್ನು ಕಾಪಾಡುವುದು ನಮ್ಮ ಆಗತ್ಯವಾಗಬೇಕು ಎಂದರು.

ನಮ್ಮಲ್ಲಿ ಹಲವು ಮಹಿಳೆಯರಿಗೆ ಅಪಾರ ಪ್ರತಿಭೆ ಇದೆ. ಆದರೆ, ನಮ್ಮ ಸುತ್ತಮುತ್ತಲಿನ ಕುಟುಂಬದ ಸದಸ್ಯರಿಂದ ಬೆಂಬಲ ಸಿಗುವುದಿಲ್ಲ. ಬೆಂಬಲ ಸಿಕ್ಕರೆ ಸಾಧನೆಗಳಿಗೆ ಅಂತ್ಯವೇ ಇಲ್ಲ. ನಮ್ಮ ದೇಶದ ಸಾಂಪ್ರದಾಯಿಕ ವೈದ್ಯ ಪದ್ಧತಿಗಳಲ್ಲಿ ಸರಳ ಮತ್ತು ಪರಿಣಾಮಕಾರಿ ತಡೆಗಟ್ಟುವಿಕೆ ಹಾಗೂ ಚಿಕಿತ್ಸಾ ವಿಧಾನಗಳಿದ್ದು, ಅವುಗಳನ್ನು ನಾವು ಮರೆತಿರುವುದೇ ಇಂದಿನ ಅನೇಕ ಆರೋಗ್ಯ ಸಮಸ್ಯೆಗಳ ಮೂಲ ಕಾರಣವಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ವೈದ್ಯಕೀಯ ಶಿಕ್ಷಣಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಮೊಹಮ್ಮದ್ ಮೊಹ್ಸಿನ್ ಮಾತನಾಡಿ, ಈಗ ಮಹಿಳೆಯರ ಸಾಧನೆಗಳನ್ನು ಸಡಗರದಿಂದ ಆಚರಿಸುವ ಸಮಯ ಬಂದಿದೆ. ಮಹಿಳೆಯರು ಆಡಳಿತದಲ್ಲಿ, ರಾಜಕೀಯದಲ್ಲಿ ಮತ್ತು ಜೀವನದ ಎಲ್ಲ ಕ್ಷೇತ್ರಗಳಲ್ಲಿ ಇನ್ನಷ್ಟು ಸಕ್ರೀಯವಾಗಿ ಭಾಗವಹಿಸುವಂತಾಗಬೇಕು. ಎಲ್ಲರಿಗೂ ಸಮಾನ ಅವಕಾಶ ದೊರಕುವ ದಿನಗಳು ಇನ್ನಷ್ಟು ವೇಗವಾಗಿ ಬರಬೇಕು ಎಂದು ಅಭಿಪ್ರಾಯಪಟ್ಟರು.

ಇದೇ ವೇಳೆ ವೈದ್ಯಕೀಯ, ದಂತ ವೈದ್ಯಕೀಯ, ಫಾರ್ಮಸಿ, ಯುನಾನಿ ಸೇರಿದಂತೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆಗೈದ ಹಲವು ಮಹಿಳೆಯರಿಗೆ ಪ್ರಶಸ್ತಿ ನೀಡಿ ಗೌರವ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಪದ್ಮಶ್ರೀ ಪ್ರಶಸ್ತಿ ವಿಜೇತೆ ಡಾ. ಪ್ರೇಮ ಧನರಾಜ್, ಕುಲಪತಿ ಡಾ. ಭಗವಾನ್ ಬಿ.ಸಿ., ಕುಲಸಚಿವ ಅರ್ಜುನ್ ಒಡೆಯರ್ ಸೇರಿದಂತೆ ಇತರರಿದ್ದರು.




### ವೈದ್ಯರಲ್ಲಿ ಮೃದುತ್ವ ಗುಣ ಮುಖ್ಯ

**ರೋಗಿಗಳನ್ನು ಗುಣಪಡಿಸಲು ವೈದ್ಯರಲ್ಲಿ ಮೃದುತ್ವ ಗುಣ ಬಹಳ ಮುಖ್ಯವಾಗಿದೆ. ಇದರಿಂದ ಸಹಜವಾಗಿಯೇ ಎದುರಿನ ವ್ಯಕ್ತಿಯ ನೋವು ಮತ್ತು ಅದರ ಆಳವನ್ನು ಅರ್ಥಮಾಡಿಕೊಳ್ಳುವ ಸಾಮರ್ಥ್ಯ ಇರುತ್ತದೆ. ಪ್ರೀತಿ, ಮಾನವೀಯತೆ, ಮಮಕಾರ, ಅಕ್ಕರೆ ಹಾಗೂ ಆರೈಕೆ ಇವು ಮಹಿಳೆಯರ ಸಹಜ ಗುಣಗಳು. ವೈದ್ಯಾಧಿಕಾರಿಗಳು ಮತ್ತು ವೈದ್ಯರು ಈ ಗುಣಗಳನ್ನು ಅಳವಡಿಸಿಕೊಂಡರೆ ಮಾತ್ರ ಅವರು ನಿಜವಾದ ಅರ್ಥದಲ್ಲಿ ವೈದ್ಯರಾಗಲು ಸಾಧ್ಯ ಎಂದು ಶಾಲಿನಿ ರಜನೀಶ್ ಹೇಳಿದರು.**

**ಸೂಪರ್ ವುಮೆನ್ ಎಂಬುದು ಒಂದು ಭ್ರಮೆ. ಅದೊಂದು ಅಸಾಧ್ಯ ನಿರೀಕ್ಷೆಗಳ ಭಾರ. ಅದಕ್ಕೆ ಈಡಾಗಬೇಡಿ. ನಾವೆಲ್ಲರೂ ನಮ್ಮದೇ ಆದ ಸಾಮರ್ಥ್ಯಗಳು ಮತ್ತು ಮಿತಿಗಳಿರುವ ಸಾಮಾನ್ಯ ಮನುಷ್ಯರು. ಈ ಸತ್ಯವನ್ನು ಒಪ್ಪಿಕೊಳ್ಳುವುದರಿಂದ ಜೀವನದಲ್ಲಿ ಸಮತೋಲನ ಮತ್ತು ಶಾಂತಿ ದೊರೆಯುತ್ತದೆ.**
■ **ಡಾ. ಭಗವಾನ್ ಬಿ.ಸಿ, ಕುಲಪತಿ, ರಾಜೀವ್ ಗಾಂಧಿ ಆರೋಗ್ಯ ವಿವಿ**

### ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ

# ಗ್ಯಾರಂಟಿಗೆ 52 ಸಾವಿರ ಕೋಟಿ ರೂ. ಮೀಸಲು

• **ದಾವಣಗೆರೆ:** ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳು ಸಮರ್ಪಕವಾಗಿ ಜಾರಿಯಾಗುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.



ನಗರದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಪರವಾಗಿ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಯಾವುದೇ ಚುನಾವಣೆಯಾದರೂ, ನಮ್ಮ ಗ್ಯಾರಂಟಿಗಳು ನಿರಂತರವಾಗಿ ಮುಂದುವರಿದಿದೆ. ಇದಕ್ಕಾಗಿ 52 ಸಾವಿರ ಕೋಟಿ ರೂ. ಮೀಸಲಿಟ್ಟಿದ್ದು, ಈವರೆಗೆ 1.31 ಸಾವಿರ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ ಎಂದರು.

**ಜಿಎಸ್‌ಟಿ ಇಳಿಕೆಯಿಂದ ರಾಜ್ಯ ಬೊಕ್ಕಸಕ್ಕೆ ನಷ್ಟ**

ರಾಜ್ಯ ಸರ್ಕಾರ ಮಿತಿಯೊಳಗೆ ಸಾಲ ಮಾಡಬೇಕು. ಆರ್ಥಿಕ ಹೊಣೆಗಾರಿಕೆ ಕಾಯ್ದೆಯ ಮಾನದಂಡದಂತೆ ರಾಜ್ಯದ ಜಿಡಿಪಿಯ ಶೇ.25 ಮಿತಿಯೊಳಗೆ ಸಾಲದ ಮೊತ್ತವಿದೆ. ನಮ್ಮ ವಿತ್ತೀಯ ಕೊರತೆ 2.95 ರಷ್ಟಿದೆ. ಕೇಂದ್ರದಿಂದ ರಾಜ್ಯಕ್ಕೆ ಬರ ಬೇಕಾದ ನ್ಯಾಯಬದ್ಧ ಅನುದಾನಗಳು ಬರದ ಕಾರಣ ರೆವಿನ್ಯೂ ಸಾಧನೆ ಸಾಧ್ಯ ವಾಗಲಿಲ್ಲ. ಬಿಹಾರ ಚುನಾವಣೆಯ ಸಂಬಂಧ ಜಿಎಸ್‌ಟಿ ದರವನ್ನು ಕಡಿತಗೊಳಿಸಿದರು. ಇದರಿಂದಾಗಿ ರಾಜ್ಯದ ಬೊಕ್ಕಸಕ್ಕೆ 10,000 ಕೋಟಿ ರೂ. ನಷ್ಟವಾಗಿದೆ. ಜಿ.ಎಸ್.ಟಿ ಕಡಿತದ ಮುಂಚೆ ಶೇ.10 ಇದ್ದ ಬೆಳವಣಿಗೆ ಈಗ ಶೇ.4ಕ್ಕೆ ಕುಸಿದಿದೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಜಿಎಸ್‌ಟಿ ಪರಿಹಾರ ಅನುದಾನ ನೀಡಿಲ್ಲ ಎಂದು ಆರೋಪಿಸಿದರು. ರಾಜ್ಯದ ಆರ್ಥಿಕತೆಯ ಸ್ಥಿತಿಗತಿಗಳ ಎಲ್ಲ ಅಂಶಗಳ ದಾಖಲೆಗಳನ್ನು ಬಜೆಟ್ ನಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಬಿಜೆಪಿಯವರಅವಧಿಯಲ್ಲಿಗುತ್ತಿಗೆದಾರರ29 ಸಾವಿರ ಕೋಟಿಯಷ್ಟು ಬಾಕಿ ಉಳಿಸಲಾಗಿತ್ತು. ಅದರಲ್ಲಿ 24 ಸಾವಿರ ಕೋಟಿ ರೂ. ಬಾಕಿ ಬಿಲ್ ಪಾವತಿಸಿದ್ದು, ಈ ಬಗ್ಗೆ ದಾಖಲಾತಿಯ ಆಧಾರದಲ್ಲಿಸ್ಪಷ್ಟಉತ್ತರವನ್ನುಅಧಿವೇಶನದಲ್ಲಿ ನೀಡಲಾಗಿದೆ ಎಂದರು.

### ಬೆಲೆ ಏರಿಕೆ ನಿಯಂತ್ರಿಸುವ ಹೊಣೆಗಾರಿಕೆ ಕೇಂದ್ರದ್ದು

**ಬೆಲೆ ಏರಿಕೆ ನಿಯಂತ್ರಿಸುವ ಹೊಣೆಗಾರಿಕೆ ಕೇಂದ್ರ ಸರ್ಕಾರಕ್ಕೆ ಸೇರಿದ್ದು. ನೆರೆರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಬೆಲೆಗಳು ಕಡಿಮೆ ಇವೆ. ರಾಜ್ಯದಲ್ಲಿ ಒಳಮೀಸಲಾತಿ ಜಾರಿಗೊಳಿಸಲು ಸರ್ಕಾರ ಬದ್ಧವಾಗಿದೆ. ಬಿಜೆಪಿಯವರಿಗೆ ಅಹಿಂದ ವರ್ಗಗಳ ಮೇಲೆ ಕಾಳಜಿಯಿಲ್ಲ. ಬಿಜೆಪಿಯವರು ಎಂದಿಗೂ ಶ್ರೀಮಂತರ ಪರ. ನಮ್ಮ ಸರ್ಕಾರ ತಳಸಮುದಾಯದವರಿಗೆ ಅನುಕೂಲ ಕಲ್ಪಿಸುತ್ತಿದೆ. ಸರ್ವರಿಗೂ ಗ್ಯಾರಂಟಿ ಯೋಜನೆಗಳನ್ನು ನೀಡುವ ಮೂಲಕ ಬಡತನ ರೇಖೆಗಿಂತ ಕೆಳಗಿನ ಜನರನ್ನು ಸಬಲೀಕರಣಗೊಳಿಸಲಾಗುತ್ತಿದೆ ಎಂದು ಅವರು ಹೇಳಿದರು.**

# ಏ.16ರಿಂದ ಮತ್ತೆ ಅಧಿವೇಶನ

ಪುಟ 0 ➜ ಸಂಸತ್ತಿನ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಅವರು ಗುರುವಾರ ರಾಜ್ಯಸಭೆಯಲ್ಲಿ ಮಾತನಾಡುವ ವೇಳೆ, ಪ್ರಮುಖ ವಿಧೇಯಕವೊಂದನ್ನು ಪರಿಗಣಿಸಲು ಸದನವು ಶೀಘ್ರದಲ್ಲೇ ಮರುಸಭೆ ಸೇರಲಿದೆ ಎಂದು ತಿಳಿಸಿದ್ದಾರೆ.

ನಮ್ಮ ಬಳಿ ಕೆಲವು ವಿಧೇಯಕಗಳು ಮತ್ತು ಪ್ರಮುಖ ವಿಷಯಗಳಿವೆ ಮತ್ತು ಇದನ್ನು ನಾವು ವಿರೋಧ ಪಕ್ಷದೊಂದಿಗೆ ಹಂಚಿಕೊಂಡಿದ್ದೇವೆ. ಮುಂದಿನ ಎರಡು–ಮೂರು ವಾರಗಳಲ್ಲಿ ನಾವು ಬಹಳ ಮಹತ್ವದ ವಿಧೇಯಕವೊಂದನ್ನು ತರಲಿದ್ದೇವೆ ಎಂದು ರಿಜಿಜು ಹೇಳಿದರು.

ಮೂಲತಃ ಏಪ್ರಿಲ್ 2ರಂದು ಮುಕ್ತಾಯಗೊಳ್ಳಬೇಕಿದ್ದ ಅಧಿವೇಶನವನ್ನು ಅನಿರ್ದಿಷ್ಟಾವಧಿಗೆ ಅಂತ್ಯಗೊಳಿಸದೆ, ವಿರಾಮ ನೀಡಿ ಶೀಘ್ರದಲ್ಲೇ 'ನಿರ್ದಿಷ್ಟ ಅವಧಿಗೆ' ಮತ್ತೆ ಕರೆಯಲಾಗುತ್ತದೆ. ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ಚರ್ಚೆಯ ಕುರಿತು ನೇರವಾಗಿ ಉಲ್ಲೇಖಿಸದಿದ್ದರೂ, 'ಈ ದೇಶದ ಮಹಿಳೆಯರಿಗೆ ಸಂಸತ್ತು ಕೊಟ್ಟ ಮಾತನ್ನು ನಿಭಾಯಿಸುವುದು ನಮ್ಮ ಕರ್ತವ್ಯ ಎಂದು ಹೇಳಿದರು.

ಇದಕ್ಕೆ ಮಧ್ಯೆ, ಅಧಿವೇಶನದ ಅವಧಿ ಕುರಿತು ಸ್ಪಷ್ಟತೆ ನೀಡಬೇಕು ಎಂದು ಕಾಂಗ್ರೆಸ್ ಹಲವು ಬಾರಿ ಒತ್ತಾಯಿಸಿತು. ರಾಜ್ಯ ಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ಮಾಧ್ಯಮ ವರದಿಗಳನ್ನು ಉಲ್ಲೇಖಿಸಿ ಅಧಿವೇಶನ ವಿಸ್ತರಣೆ ಕುರಿತು ಪ್ರಶ್ನಿಸಿದರು. ಸದನ ನಾಯಕ ಜೆ.ಪಿ. ನಡ್ಡಾ, ಸರ್ಕಾರ ಉತ್ತರ ನೀಡಲಿದೆ ಎಂದು ತಿಳಿಸಿದ್ದಾರೆ.

ಮತ್ತೊಮ್ಮೆ ವಿಷಯ ಎತ್ತಿದ ರಮೇಶ್, ಅಧಿವೇಶನ ವೇಳಾಪಟ್ಟಿ ಬಗ್ಗೆ ಅನಿಶ್ಚಿತತೆ ಸಂಸತ್ತಿನ ಕಾರ್ಯಚಟುವಟಿಕೆಗಳಿಗೆ ಹಾನಿಕಾರಕ ಎಂದು ಹೇಳಿದ್ದಾರೆ. ಇದೇ ವೇಳೆ, ಎಐಸಿಸಿ ಅಧ್ಯಕ್ಷ ಹಾಗೂ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಏ.29ರ ಚುನಾವಣಾ ಪ್ರಕ್ರಿಯೆ ಬಳಿಕ ಸರ್ವಪಕ್ಷ ಸಭೆ ನಡೆಸಲು ರಿಜಿಜು ಅವರಿಗೆ ಪತ್ರ ಬರೆದಿರುವುದನ್ನೂ ಅವರು ಉಲ್ಲೇಖಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ರಿಜಿಜು, ಸರ್ಕಾರ ಈಗಾಗಲೇ ತನ್ನ ಶಾಸನ ಕಾರ್ಯಕ್ರಮವನ್ನು ವಿರೋಧ ಪಕ್ಷಗಳೊಂದಿಗೆ ಹಂಚಿಕೊಂಡಿದ್ದು, ವ್ಯಾಪಕ ಮಟ್ಟದಲ್ಲಿ ಚರ್ಚೆಗಳು ನಡೆದಿವೆ ಎಂದರು. ಮುಂದಿನ 2–3 ವಾರಗಳಲ್ಲಿ ಮಹತ್ವದ ಅಧಿವೇಶನ ನಡೆಯಲಿದ್ದು, ಸುಮಾರು ಶೇ.80 ರಾಜಕೀಯ ಪಕ್ಷಗಳು ಸಲಹೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರೆ ಎಂದು ಹೇಳಿದರು. ಕಾಂಗ್ರೆಸ್ ಮಾತ್ರ ಇದರಲ್ಲಿ ಭಾಗವಹಿಸಿಲ್ಲ ಎಂದು ಅವರು ಆರೋಪಿಸಿದ್ದಾರೆ.

# ಗಡಿಯಲ್ಲಿ ದುಷ್ಕೃತ್ಯ ನಡೆಸಿದರೆ ಹುಷಾರ್

ಪುಟ 0 ➜ ಪ್ರಸ್ತುತ ಪ್ರಾದೇಶಿಕ ಸಂಬಂಧ ಅಸ್ಥಿರವಾಗಿದ್ದು, ಹೆಚ್ಚುತ್ತಿರುವ ಅನಿಶ್ಚಿತ ಭೌಗೋಳಿಕ ರಾಜಕೀಯ ವಾತಾವರಣದಲ್ಲಿ ರಾಷ್ಟ್ರೀಯ ಭದ್ರತೆ ಮತ್ತು ಕಾರ್ಯತಂತ್ರದ ಹಿತಾಸಕ್ತಿಗಳನ್ನು ಕಾಪಾಡುವ ಸಂದರ್ಭದಲ್ಲಿ ಯಾವುದೇ ಪ್ರಚೋದನೆ ಎದುರಿಸಲು ಭಾರತ ಸಂಪೂರ್ಣವಾಗಿ ಸಿದ್ಧವಾಗಿದೆ ಎಂದರು.

### ಭಾರತೀಯರ ರಕ್ಷಣೆಗೆ ಆದ್ಯತೆ

**ನಾವು ಪಶ್ಚಿಮ ಏಷ್ಯಾದ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ**



**ಗಮನಿಸುತ್ತಿದ್ದೇವೆ. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸಿದ್ಧರಿದ್ದೇವೆ ಎಂದು ರಾಜನಾಥ್ ಸಿಂಗ್ ಹೇಳಿದರು. ಸಂಕಷ್ಟದಲ್ಲಿರುವ ತನ್ನ ನಾಗರಿಕರಿಗೆ ಸಹಾಯ ಮಾಡಲು ಭಾರತ ಏನು ಬೇಕಾದರೂ ಮಾಡುತ್ತದೆ ಎಂದು ಭರವಸೆ ನೀಡಿದ್ದಾರೆ.**

# ದೀದಿಗೆ ಛೀಮಾರಿ

ಪುಟ 0 ➜ **ಕೇಂದ್ರ ಪಡೆ ನಿಯೋಜನೆಗೆ ಸೂಚನೆ:** ನ್ಯಾಯಾಂಗ ಅಧಿಕಾರಿಗಳು ವಿಚಾರಣೆ ನಡೆಸುವ



ಎಲ್ಲಾ ಪ್ರದೇಶಗಳಲ್ಲಿ ಸಮರ್ಪಕ ಕೇಂದ್ರ ಪಡೆಗಳನ್ನು ನಿಯೋಜಿಸಲು ಚುನಾವಣಾ ಆಯೋಗಕ್ಕೆ ಸುಪ್ರೀಂ ಕೋರ್ಟ್ ಸೂಚಿಸಿದೆ. ಅದೇ ವೇಳೆ, ಘಟನೆಯ ತನಿಖೆಯನ್ನು ಸ್ವತಂತ್ರ ಸಂಸ್ಥೆಗೆ(ಸಿಬಿಐ ಅಥವಾ ಎನ್‌ಐಎ) ವಹಿಸಿ ಪ್ರಾಥಮಿಕ ವರದಿ ನೇರವಾಗಿ ಕೋರ್ಟ್‌ಗೆ ಸಲ್ಲಿಸಲು ಆದೇಶಿಸಿದೆ.

# ಸಕ್ಷಮ ಪ್ರಾಧಿಕಾರದಿಂದ ವೇತನ ಭತ್ಯೆ

ಪುಟ 0 ➜ ಈ ಹಿಂದೆ ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ತೀರ್ಪನ್ನು ಸುತ್ತೋಲೆಯಲ್ಲಿ ಉಲ್ಲೇಖಿಸಿರುವ ಶಾಲಿನಿ ರಜನೀಶ್, ಯಾವುದೇ ಸರ್ಕಾರಿ ನೌಕರ ವರ್ಗಾವಣೆಯಾದ ಸಂದರ್ಭಗಳಲ್ಲಿ ತಕ್ಷಣವೇ ಕಡ್ಡಾಯವಾಗಿ ಸ್ಥಳ ನಿಯುಕ್ತಿ ನೀಡಬೇಕೆಂದು ಈ ಹಿಂದೆಯೇ ಸ್ಪಷ್ಟವಾದ ಸೂಚನೆ ನೀಡಲಾಗಿದೆ. ಆದರೂ ಅಧಿಕಾರಿಗಳು ಇದನ್ನು ಪಾಲಿಸುತ್ತಿಲ್ಲ. ಇನ್ನು ಮುಂದೆ ಇದು ಪುನರಾವರ್ತನೆಯಾದರೆ, ಸಂಬಂಧಿಸಿದ ಅಧಿಕಾರಿಗಳೆ ಹೊಣೆಗಾರರು ಎಂದು ಹೇಳಿದ್ದಾರೆ.

### ಹುದ್ದೆ ತೋರದೇ ವರ್ಗಾವಣೆಯಿಂದ ಸರ್ಕಾರಕ್ಕೆ ನಷ್ಟ

ಪುಟ 0 ➜ **ಕೆಲಸ ಪಡೆಯದೇ ಮನೆಯಲ್ಲಿ ಕುಳಿತವರಿಗೆ ಸಂಬಳ ನೀಡಿದಂತಾಗುತ್ತದೆ. ಹೀಗಾಗಿ ಹುದ್ದೆ ತೋರಿಸುವವರೆಗೆ ಹಿಂದಿನ ಹುದ್ದೆಯಿಂದ ಬಿಡುಗಡೆ ಮಾಡದಂತೆ ಆದೇಶಿಸಿದೆ. ಅಬಕಾರಿ ಉಪ ಆಯುಕ್ತರಾಗಿದ್ದ ಕೆ. ಅರುಣ್ ಕುಮಾರ್ ಅವರನ್ನು ಹುದ್ದೆ ತೋರಿಸದೇ 2025ರ ಜ.29ರಂದು ವರ್ಗಾವಣೆ ಮಾಡಲಾಗಿತ್ತು. ಅಂದಿನಿಂದಲೂ ಹುದ್ದೆಯಿಲ್ಲದ ಕಾರಣ ಅವರು ಪೋಸ್ಟಿಂಗ್‌ಗಾಗಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು. ಅಲ್ಲದೆ, ಹುದ್ದೆ ತೋರಿಸದೇ ವರ್ಗಾವಣೆ ಮಾಡಿದರೆ ಇಲಾಖೆಯ ಮುಖ್ಯಸ್ಥರೇ ಹೊಣೆಗಾರರಾಗುತ್ತಾರೆ. ಕಾಯುವಿಕೆಯ ಅವಧಿಯ ವೇತನವನ್ನು ಸಂಬಂಧಿಸಿದ ಅಧಿಕಾರಿಯಿಂದಲೇ ವಸೂಲು ಮಾಡಿ ಎಂದು ನ್ಯಾ. ಎಸ್.ಜಿ. ಪಂಡಿತ್ ಮತ್ತು ನ್ಯಾ. ಕೆ.ವಿ. ಅರವಿಂದ್ ಅವರಿದ್ದ ಪೀಠ ಆದೇಶಿಸಿತ್ತು.**

# ಭಾರತದ ಹಡಗುಗಳಿಗೆ ಸುಂಕ ವಿಧಿಸುವ ಬಗ್ಗೆ ಚರ್ಚೆ ಆಗಿಲ್ಲ: ಎಂಇಎ

ಪುಟ 0 ➜ ಈ ಯೋಜನೆದಲ್ಲಿ ರಿಯಲ್ ಆಧಾರಿತ ಪಾವತಿ ವ್ಯವಸ್ಥೆ ಸೇರಿದಂತೆ ಕೆಲವು ಕ್ರಮಗಳನ್ನು ಒಳಗೊಂಡಿದ್ದು, ಒಮಾನ್ ದೇಶದೊಂದಿಗೆ ಸಹಕಾರದ ಮಾತುಕತೆಗಳೂ ಉಲ್ಲೇಖವಾಗಿದ್ದವು. ಜತೆಗೆ ಅಮೇರಿಕ ಮತ್ತು ಇಸ್ರೇಲ್ ವಿರುದ್ಧ ನಿರ್ಬಂಧಗಳ ಸಾಧ್ಯತೆಯನ್ನೂ ಸೂಚಿಸಲಾಗಿತ್ತು. ಈ ಮಧ್ಯೆ, ಭಾರತ ತನ್ನ ಹಡಗುಗಳ ಸುರಕ್ಷತೆಗಾಗಿ ಇರಾನ್ ಸೇರಿದಂತೆ ಇತರೆ ದೇಶಗಳೊಂದಿಗೆ ಸಂಪರ್ಕದಲ್ಲಿದೆ ಎಂದು ಜೈಸ್ವಾಲ್ ಹೇಳಿದರು. ಎಲ್‌ಪಿಜಿ, ಎಲ್‌ಎನ್‌ಜಿ ಸೇರಿದಂತೆ ನಮ್ಮ ಹಡಗುಗಳ ನಿರ್ಬಂಧರಹಿತ ಸಾಗಣೆಯನ್ನು ಖಚಿತಪಡಿಸಲು ಕ್ರಮ ಕೈಗೊಳ್ಳುತ್ತಿದ್ದೇವೆ ಎಂದರು. ಇತ್ತೀಚಿನ ದಿನಗಳಲ್ಲಿ ಆರು ಭಾರತೀಯ ಹಡಗುಗಳು ಸುರಕ್ಷಿತವಾಗಿ ಈ ಮಾರ್ಗವನ್ನು ದಾಟಿವೆ. ಹಾರ್ಮುಜ್ ಜಲಸಂಧಿ ಜಾಗತಿಕ ತೈಲ ಸಾಗಣೆಯಲ್ಲಿ ಪ್ರಮುಖ ಮಾರ್ಗವಾಗಿದ್ದು, ಇತ್ತೀಚಿನ ಸಂಘರ್ಷದಿಂದ ಸಾಗಣೆ ಪ್ರಮಾಣವು ಸುಮಾರು 95% ಇಳಿಕೆಯಾಗಿದೆ. ಇದು ಜಾಗತಿಕ ಇಂಧನ ಸರಬರಾಜಿನ ಮೇಲೆ ಆತಂಕ ಮೂಡಿಸಿದೆ. ಇದಲ್ಲದೆ, ಲೆಬನಾನ್‌ನಲ್ಲಿ ಯುಎನ್ ಶಾಂತಿಪಾಲನಾ ಪಡೆಗಳಲ್ಲಿ ಸುಮಾರು 600 ಭಾರತೀಯ ಸೈನಿಕರು ಸೇವೆ ಸಲ್ಲಿಸುತ್ತಿದ್ದಾರೆ ಎಂದು ಭಾರತ ತಿಳಿಸಿದೆ. ಅವರ ಸುರಕ್ಷತೆ ಅತ್ಯಂತ ಮುಖ್ಯವೆಂದು ಸರ್ಕಾರ ಒತ್ತಿಹೇಳಿದೆ.

# ಸಿಎಂ ಗುಣಗಾನ ಮಾಡಿದ ಲಾಡ್

ಪುಟ 0 ➜ ಚುನಾವಣೆ ವೇಳೆ ಮಾತ್ರ ಬಿಜೆಪಿಗರು ಗೋಮಾತೆ ಬಗ್ಗೆ ಮಾತನಾಡುತ್ತಾರೆ. ಇಡೀ ಜಗತ್ತಿನಲ್ಲಿ ನಮ್ಮ ದೇಶ ಗೋಮಾಂಸ ರಫ್ತಿನಲ್ಲಿ 2ನೇ ಸ್ಥಾನದಲ್ಲಿದೆ ಗೋಮಾತೆಯನ್ನ ರಾಷ್ಟ್ರೀಯ ಪ್ರಾಣಿ ಎಂದು ಘೋಷಿಸಿಬಿಡಿ ಎಂದು ಟಾಂಗ್ ಕೊಟ್ಟರು. ಗೋವು ಸಾಗಾಣಿಕೆ ತಡೆಯುವ ಹೆಸರಲ್ಲಿ ಹಣ ವಸೂಲಿ ಮಾಡಿದ್ದಾರೆ. ಅದರ ಹಣದಿಂದ 800 ಬಿಜೆಪಿ ಕಚೇರಿ ಕಟ್ಟಿದ್ದಾರೆ ಎಂದು ಸಚಿವ ಸಂತೋಷ್ ಲಾಡ್ ಆರೋಪಿಸಿದರು.

### ಪ್ರಶ್ನಿಸುವುದು ಸಹಜವಾದ ಹಕ್ಕು: ಸಚಿವ ಸಂತೋಷ್ ಲಾಡ್

**ನರೇಂದ್ರ ಮೋದಿಯವರು ದೇವರಾ? ಅವರನ್ನು ಪ್ರಶ್ನೆ ಮಾಡುವಂತಿಲ್ಲವೇ? ಎಂದು ಸಚಿವ ಸಂತೋಷ್ ಲಾಡ್ ಕಿಡಿಕಾರಿದರು. ನಗರದ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಜಾಪ್ರಭುತ್ವದಲ್ಲಿ ಯಾರನ್ನಾದರೂ ಪ್ರಶ್ನಿಸುವುದು ಸಹಜವಾದ ಹಕ್ಕು ಎಂದರು. ನರೇಂದ್ರ ಮೋದಿ ದೇವರಲ್ಲ. ಈ ದೇಶದಲ್ಲಿ ಪ್ರತಿಯೊಬ್ಬರನ್ನೂ ಪ್ರಶ್ನಿಸಬಹುದು. ಆದರೆ, ಇಲ್ಲಿ ಪ್ರಶ್ನೆ ಮಾಡುವವರನ್ನೇ ವಿರೋಧಿಗಳಂತೆ ನೋಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಳೆದ 12 ವರ್ಷಗಳಿಂದ ಮೋದಿಯವರೇ ಪ್ರಚಾರದಲ್ಲಿದ್ದಾರೆ. ಗ್ರಾಮ ಪಂಚಾಯಿತಿ, ತಾಲೂಕು ಪಂಚಾಯಿತಿ ಹಾಗೂ ಮುನ್ಸಿಪಾಲಿಟಿ ಮಟ್ಟದ ಚುನಾವಣೆಗಳು ಬರುವ ಸಾಧ್ಯತೆ ಇದ್ದು ಪ್ರಧಾನಿಯೇ ಪ್ರಚಾರಕ್ಕೆ ಬರಬೇಕು ಎಂದು ವ್ಯಂಗ್ಯವಾಡಿದರು. ಇದೇ ವೇಳೆ ಕೇಂದ್ರ ಸರ್ಕಾರದ ನೀತಿಗಳ ವಿರುದ್ಧ ಗಂಭೀರ ಆರೋಪಗಳನ್ನು ಮಾಡಿದ ಅವರು, ದೇಶದ ಸಂಪತ್ತನ್ನು ಕೆಲ ಉದ್ಯಮಿಗಳ ಕೈಯಲ್ಲಿ ಕೇಂದ್ರೀಕರಿಸಲಾಗಿದೆ ಎಂದು ಆರೋಪಿಸಿದರು.**

# ಮುಸ್ಲಿಮರಿಂದ ಕೈಗೆ ತಕ್ಕ ಪಾಠ: ವಿಜಯೇಂದ್ರ

• **ಶಿವಮೊಗ್ಗ:** ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಗೆಲ್ಲುವುದು ನಿಚ್ಚಳವಾಗಿದ್ದು, ಇದೊಂದು



ದಾಖಲೆಯಾಗಲಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಗುರುವಾರ ಸಂಜೆ ನಗರದ ಫ್ರೀಡಂ ಪಾರ್ಕ್ ನಲ್ಲಿ ಆಯೋಜಿಸಿದ್ದ ಶೆಟ್ಟರ ಸಂತೆ ಉದ್ಘಾಟಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿ, ಆ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ವಿರೋಧಿ ಮಾತುಗಳು ಕೇಳಿ ಬರುತ್ತಿವೆ. ಅದರಲ್ಲೂ ಮುಸ್ಲಿಮರೇ ಹೆಚ್ಚಿರುವ ದಾವಣಗೆರೆ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಉಲ್ಟಾ ಆಗಲಿದೆ ಎಂದರು. ಈ ಎರಡೂ ಕ್ಷೇತ್ರಗಳಲ್ಲಿ ಪ್ರಚಾರ ನಡೆಸಿರುವ ಸಿಎಂ ಸಿದ್ದರಾಮಯ್ಯನವರು ಅಲ್ಲಿನ ವಾತಾವರಣದಿಂದ ಹತಾಶರಾಗಿದ್ದಾರೆ. ಇದಕ್ಕಾಗಿಯೇ ಆ ಎರಡೂ ಕ್ಷೇತ್ರಗಳನ್ನು ಬಿಟ್ಟು ಹೋಗದಂತೆ ಹಲವು ಸಚಿವರಿಗೆ ತಾಕೀತು ಮಾಡಿದ್ದಾರೆ. ಆದರೂ ಮತದಾರರು ಒಲವು ಬಿಜೆಪಿ ಕಡೆ ಇದೆ ಎಂದು ತಿಳಿಸಿದರು.

# ಆಸ್ಟ್ರೇಲಿಯಾ ವಿವಿ ಜತೆ ಬೆಸ್ಕಾಂ ಒಪ್ಪಂದ

• **ಬೆಂಗಳೂರು:** ನವೀಕರಿಸಬಹುದಾದ ಇಂಧನ ವಲಯದ ನವೋದ್ಯಮಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತವು ಆಸ್ಟ್ರೇಲಿಯಾದ ನ್ಯೂ ಸೌತ್ ವೇಲ್ಸ್ ವಿಶ್ವವಿದ್ಯಾಲಯ, ಎಫ್‌ಎಸ್‌ಐಡಿ, ಐಐಎಂಬಿ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿದೆ.

ಬೆಸ್ಕಾಂ ಕಾರ್ಪೊರೇಟ್ ಕಚೇರಿಯಲ್ಲಿ ಗುರುವಾರ ಈ ಒಪ್ಪಂದಕ್ಕೆ ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಹಾಗೂ ಯುಎನ್‌ಎಸ್‌ಡಬ್ಲ್ಯು ಸಿಡ್ನಿಯ ಉಪ ಕುಲಪತಿ ಲಿಸಾ ಝೂಂಬರ್ಲಾನ್ ಅವರು ಸಹಿ ಹಾಕಿದರು. ಇದೇ ಸಂದರ್ಭದಲ್ಲಿ ಐಐಎಸ್‌ಸಿಯ ಎಫ್‌ಎಸ್‌ಐಡಿ, ಐಐಎಂಬಿ ಇನ್ನೋವೇಶನ್ ಎನ್‌ಎಸ್‌ಆರ್‌ಸಿಇಎಲ್ ಮುಖ್ಯಸ್ಥರು ಕ್ರೆಡಲ್ ಜತೆಗಿನ ಒಪ್ಪಂದ ಪತ್ರಕ್ಕೆ ಸಹಿ ಹಾಕಿದರು. ಇಂಧನ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಉಪಸ್ಥಿತರಿದ್ದರು.

ಸೌರ, ಪವನ, ಜೈವಿಕ ಶಕ್ತಿ ಮತ್ತು ಇಂಧನ ಸಂಗ್ರಹಣೆಯಲ್ಲಿ ನವೋದ್ಯಮಗಳನ್ನು ಬೆಂಬಲಿಸುವ ನಿಟ್ಟಿನಲ್ಲಿ ಈ ಒಪ್ಪಂದದ ಅನ್ವಯ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಕ್ರೆಡಲ್ ಬೆಂಗಳೂರಿನಲ್ಲಿ ಇನ್ಕ್ಯುಬೇಷನ್ ಮತ್ತು ತಂತ್ರಜ್ಞಾನ ನಾವೀನ್ಯತೆ ಕೇಂದ್ರವನ್ನು ಸ್ಥಾಪಿಸಲಿದೆ. ಮೂಲಸೌಕರ್ಯ ಮತ್ತು ಸ್ಥಳೀಯ ನಿಧಿಯನ್ನು ಕ್ರೆಡಲ್ ಒದಗಿಸಿದರೆ, ಸಾಮರ್ಥ್ಯ ವೃದ್ಧಿ, ತಾಂತ್ರಿಕ ಮಾರ್ಗದರ್ಶನವನ್ನು ಪಾಲುದಾರಿಕೆ ಸಂಸ್ಥೆಗಳು



ನೀಡಲಿವೆ. ಜತೆಗೆ, ಜಾಗತಿಕ ಸಂಶೋಧನಾ ಸಂಸ್ಥೆಗಳು ಮತ್ತು ನಾವೀನ್ಯತೆ ಜಾಲಗಳೊಂದಿಗೆ ಯುಎನ್‌ಎಸ್‌ಡಬ್ಲ್ಯು ಸಂಪರ್ಕ ಬೆಸೆಯಲಿದೆ.

ಈ ಉಪಕ್ರಮದಡಿ ಪ್ರತಿ ವರ್ಷ 20 ನವೋದ್ಯಮಗಳಿಗೆ ಬೆಂಬಲ ನೀಡಲಾಗುವುದು. ಕಾರ್ಯಕ್ರಮದ ಅವಧಿಯಲ್ಲಿ ಮೂಲ ಮಾದರಿ ಅಭಿವೃದ್ಧಿ ಹಾಗೂ ನವೋದ್ಯಮಗಳಿಗೆ ಕ್ರೆಡಲ್ ನೆರವು ನೀಡಲಿದೆ. ಕಾರ್ಯಕ್ರಮದ ವ್ಯಾಪ್ತಿ ವಿಸ್ತರಣೆಗೆ ಯುಎನ್‌ಎಸ್‌ಡಬ್ಲ್ಯು ಹೆಚ್ಚುವರಿ ಅಂತಾರಾಷ್ಟ್ರೀಯ ನಿಧಿ ಸಂಗ್ರಹಣೆಗೆ ಆದ್ಯತೆ ನೀಡಲಿದೆ. ಇದರಿಂದ ಈ ನವೋದ್ಯಮಗಳಿಗೆ ಜಾಗತಿಕ ಮಟ್ಟದ ಸಂಪರ್ಕ, ಸುಧಾರಿತ ಇನ್ಕ್ಯುಬೇಷನ್, ಅಂತಾರಾಷ್ಟ್ರೀಯ ಮಾನ್ಯತೆ ದೊರೆಯಲಿದೆ.

# ಗ್ರಾ.ಪಂ. ತೆರಿಗೆ ಸಂಗ್ರಹ ಏರಿಕೆ

**ಬೆಂಗಳೂರು:** ರಾಜ್ಯದ 5,943 ಗ್ರಾಮ ಪಂಚಾಯತಿಗಳ ತೆರಿಗೆ ಸಂಗ್ರಹವು ಕಳೆದ ಸಾಲಿಗಿಂತ ದಲ್ಲಿ ಈ ವರ್ಷ ಹೆಚ್ಚಾಗಿದ್ದು, ಹೆಚ್ಚಿನ ತೆರಿಗೆ ಸಂಗ್ರಹ ಮತ್ತು ಕಂದಾಯ ಕ್ರೋಡೀಕರಣವಾಗಿದೆ. ತೆರಿಗೆ ಸಂಗ್ರಹ ಸತತವಾಗಿ ಏರಿಕೆಯಾಗಿದೆ.

2024-25ನೇ ಆರ್ಥಿಕ ವರ್ಷದಲ್ಲಿ ಇಲಾಖೆಯ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಗ್ರಾಮ ಪಂಚಾಯ್ತಿಗಳು 1,272.54 ಕೋಟಿ ರೂ. ತೆರಿಗೆ ಸಂಗ್ರಹ ಮಾಡುವ



ಮೂಲಕ ಚಾಲ್ತಿ ಬೇಡಿಕೆಯ ಶೇ.80ರಷ್ಟು ತೆರಿಗೆ ವಸೂಲಿ ಮಾಡಿ ದಾಖಲೆ ಮಾಡಿತ್ತು. ರಾಯಚೂರು ಜಿಲ್ಲೆ ಶೇ.129ರಷ್ಟು ತೆರಿಗೆ ಸಂಗ್ರಹಿಸುವ ಮೂಲಕ ಮುನ್ನಡೆ ಸಾಧಿಸಿದೆ, ರಾಜ್ಯದ 11 ಜಿಲ್ಲೆಗಳು ಶೇ.100 ಕ್ಕಿಂತಲೂ ಹೆಚ್ಚು ಕರ ಸಂಗ್ರಹಿಸುವ ಮೂಲಕ ತೆರಿಗೆ ಸಂಗ್ರಹಣೆಯಲ್ಲಿ ಮುನ್ನಡೆ ಸಾಧಿಸಿವೆ. ತೆರಿಗೆ ಸಂಗ್ರಹ ಮತ್ತು ಕಂದಾಯ ಕ್ರೋಡೀಕರಣದಲ್ಲಿ ಕರ್ನಾಟಕ ರಾಜ್ಯವು ಕಳೆದ ವರ್ಷ ಅತ್ಯುತ್ತಮ ಸಾಧನೆ ಮಾಡುವ ಮೂಲಕ ರಾಷ್ಟ್ರ ಮಟ್ಟದಲ್ಲಿ ಮೊದಲ ಸ್ಥಾನವನ್ನು ಪಡೆದ ಹೆಗ್ಗಳಿಕೆಗೆ ಪಾತ್ರವಾಗಿತ್ತು.

**110.04 ಕೋಟಿ ರೂ. ವಸೂಲಿ:** 2025-26ನೇ ಸಾಲಿನಲ್ಲಿ 1382.57 ಕೋಟಿ ರೂ. ತೆರಿಗೆ ಸಂಗ್ರಹ ಮಾಡಲಾಗಿದ್ದು, 2024-25ನೇ ಸಾಲಿಗಿಂತ 110.04 ಕೋಟಿ ರೂ. ಅಧಿಕ ತೆರಿಗೆ ವಸೂಲಿ ಮಾಡಿದಂತಾಗಿದೆ, ಆ ಮೂಲಕ ಚಾಲ್ತಿ ಸಾಲಿನ ಬೇಡಿಕೆಯ ಶೇ.89ರಷ್ಟು ದಾಖಲೆಯ ತೆರಿಗೆ ಸಂಗ್ರಹಿಸಲಾಗಿದೆ ಎಂಬ ವಿವರಗಳನ್ನು ಸಚಿವ ಪ್ರಿಯಾಂಕ್ ಖರ್ಗೆ ನೀಡಿದ್ದಾರೆ.

> ತೆರಿಗೆ ಸಂಗ್ರಹಣೆಯಲ್ಲಿ ಉಂಟಾಗಿರುವ ಪ್ರಗತಿಯು ದಕ್ಷ ಆಡಳಿತ, ನಿಯಮಾವಳಿಗಳ ಕಟ್ಟುನಿಟ್ಟಿನ ಜಾರಿ ಮತ್ತು ಸುಧಾರಿತ ತೆರಿಗೆ ಸಂಗ್ರಹಣಾ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ.
> ■ ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಹಂಪಿ ರಥೋತ್ಸವ



ವಿಜಯನಗರ ವಿಶ್ವ ವಿಖ್ಯಾತ ಹಂಪಿಯಲ್ಲಿ ಲಕ್ಷಾಂತರ ಭಕ್ತ ಸಮೂಹದ ಮಧ್ಯೆ ಶ್ರೀ ಪಂಪಾ ವಿರೂಪಾಕ್ಷೇಶ್ವರ ಸ್ವಾಮಿ, ಚಂದ್ರಮೌಳೇಶ್ವರ ಸ್ವಾಮಿಯ ಬ್ರಹ್ಮರಥೋತ್ಸವ ಗುರುವಾರ ಸಂಜೆ ಅದ್ದೂರಿಯಾಗಿ ನೆರವೇರಿದರು.

# ವೈದ್ಯ ವಿದ್ಯಾರ್ಥಿನಿ ಆತ್ಮಹತ್ಯೆ

**ಚಿತ್ರದುರ್ಗ:** ಸಹಪಾಠಿಗಳ ಅಪಪ್ರಚಾರದಿಂದ ನೊಂದ ಬಿಎಎಂಎಸ್ ವಿದ್ಯಾರ್ಥಿನಿ ನಿಖಿತಾ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೊಳಲ್ಕೆರೆ ತಾಲೂಕಿನ ಮಲ್ಲಾಡಿಹಳ್ಳಿಯಲ್ಲಿ ನಡೆದಿದೆ. ಮೃತ ನಿಖಿತಾ (23) ಇಲ್ಲಿನ ಮಲ್ಲಾಡಿಹಳ್ಳಿಯ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಬಿಎಎಂಎಸ್ ಓದುತ್ತಿದ್ದರು. ಸಾವಿಗೂ ಮುನ್ನ ಡೆತ್‌ನೋಟ್ ಬರೆದಿಟ್ಟಿರುವ ನಿಖಿತಾ, ತನ್ನ ಸಾವಿಗೆ ಕಾರಣವಾಗಿರುವ ಕಾನೂನುಕ್ರಮ



ಜರಗಿಸುವಂತೆ ಮನವಿ ಮಾಡಿಕೊಂಡಿದ್ದಾರೆ. ಡೆತ್‌ನೋಟ್‌ನಲ್ಲಿ ಅಧ್ಯಾಪಕ ಮತ್ತು ಕೆಲ ವಿದ್ಯಾರ್ಥಿನಿಯರ ಹೆಸರನ್ನು ಉಲ್ಲೇಖಿಸಿದ್ದಾರೆ.

ನಿಖಿತಾ ತಂದೆ ಉಮಾಶಂಕರ್ ನೀಡಿರುವ ದೂರಿನಲ್ಲಿ ಪ್ರೊಫೆಸರ್ ಡಾ. ರಾಜು ಜತೆ ತಮ್ಮ ಮಗಳು ಒಳ್ಳೆಯ ಸಂಬಂಧ ಹೊಂದಿದ್ದಳು. ಆದರೆ, ಆಕೆಯ ಸಹಪಾಠಿಗಳು ಒಳ್ಳೆ ಬಾಂಧವ್ಯಕ್ಕೆ ಅಪಪ್ರಚಾರ ಮಾಡಿದ ರೆಂದು ತಿಳಿಸಿದ್ದಾರೆ. ನನ್ನ, ರಾಜು ಸರ್ ನಡುವೆ ಯಾವುದೇ ಸಂಬಂಧವಿಲ್ಲ. ವಿದ್ಯಾರ್ಥಿನಿಯಾಗಿ ಅವರ ಜತೆ ಒಳ್ಳೆಯ ಬಾಂಧವ್ಯ ಹೊಂದಿದ್ದೆ.

ಇದನ್ನು ತಪ್ಪಾಗಿ ಭಾವಿಸಿದ ನನ್ನ ಸಹಪಾಠಿಗಳು ಇಲ್ಲಸಲ್ಲದ ಆರೋಪ ಮಾಡಿದರು. ಇದನ್ನು ನಂಬಿದ ರಾಜು ಅವರ ಪತ್ನಿ ನಿಶಾ ಕೂಡ ಅನುಮಾನಪಟ್ಟರು. ನನ್ನ ಸಾವಿಗೆ ರಕ್ಷಾ, ಚಿನ್ಮಯಿ, ಅನುಷಾ, ಸಾಗರ್, ಗ್ರೀಷ್ಮಾ ಹಾಗೂ ನಿಶಾ ಕಾರಣ ಎಂದು ನಿಖಿತಾ ಡೆತ್ ನೋಟಲ್ಲಿ ಬರೆದಿದ್ದಾರೆ. ತಂದೆ ಉಮಾಶಂಕರ್ ದೂರಿನ ಮೇರೆಗೆ ಹೊಳಲ್ಕೆರೆ ಠಾಣೆಯಲ್ಲಿ ದೂರು ದಾಖಲಾಗಿದೆ.

### ತಂದೆ-ತಾಯಿಗೆ ಕ್ಷಮೆ ಕೇಳಿದ ನಿಖಿತಾ

ತಂದೆ-ತಾಯಿಗೆ ನಿಖಿತಾ ಕ್ಷಮೆಯಾಚಿಸಿದ್ದಾರೆ. ನೀವು ಅಂದುಕೊಂಡಿದ್ದನ್ನು ನನ್ನಿಂದ ಸಾಧಿಸಲು ಆಗಲಿಲ್ಲ. ರಾಜು ಸರ್ ತುಂಬಾ ಒಳ್ಳೆಯವರು. ಅವರ ವಿರುದ್ಧ ಅನಗತ್ಯ ಆರೋಪ ಮಾಡಬೇಡಿ. ನನ್ನ ಸಹಪಾಠಿಗಳನ್ನು ನಾನೆಂದಿಗೂ ಕ್ಷಮಿಸುವುದಿಲ್ಲ ಎಂದು ಡೆತ್ ನೋಟ್ ಬರೆದಿಟ್ಟು ನಿಖಿತಾ ಸಾವಿಗೆ ಶರಣಾಗಿದ್ದಾರೆ.

## ಕಿರುಸುದ್ದಿ

### ಎಸ್ಸಿ-ಎಸ್ಟಿ ನಿಧಿಗಳ ದುರುಪಯೋಗ

**ದಾವಣಗೆರೆ:** ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಹಿಂದ ಸಮುದಾಯವನ್ನು ನಿರ್ಲಕ್ಷಿಸಿದೆ. ಈ ಸರ್ಕಾರದಲ್ಲಿ ಎಸ್ಸಿ-ಎಸ್ಟಿ ನಿಧಿಗಳ ದುರುಪಯೋಗ ನಡೆದಿದೆ.



ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣವೇ ಇದಕ್ಕೆ ಸಾಕ್ಷಿ. ರಾಜ್ಯದಲ್ಲಿ ಭ್ರಷ್ಟಾಚಾರ ಮಿತಿ ಮೀರಿದ್ದು, ತಾಲೂಕು ಕಚೇರಿಯಿಂದ ಹಿಡಿದು ವಿಧಾನಸೌಧದವರೆಗೆ ಲಂಚಾವತಾರ ತಾಂಡವವಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಹೇಳಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪೊಲೀಸ್ ಠಾಣೆಗಳಲ್ಲೂ ಜನರಿಗೆ ತೊಂದರೆ ಹೆಚ್ಚಾಗಿದೆ. ಮಹಿಳೆಯರಿಗೆ ಸಮರ್ಪಕ ಭದ್ರತೆ ಇಲ್ಲ. ಗ್ಯಾರಂಟಿಗಳ ಹೆಸರಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಮೀಸಲಿಟ್ಟ ಹಣವನ್ನು ಬೇರೆಡೆಗೆ ವರ್ಗಾಯಿಸಲಾಗುತ್ತಿದೆ. ನಾವು ಅಧಿಕಾರಕ್ಕೆ ಬಂದರೆ ಈ ಯೋಜನೆಗಳನ್ನು ಇನ್ನಷ್ಟು ವ್ಯವಸ್ಥಿತವಾಗಿ ಜನರಿಗೆ ತಲುಪಿಸುತ್ತೇವೆ ಎಂದು ಭರವಸೆ ನೀಡಿದರು.

### ಬಿಜೆಪಿ ವಿರುದ್ಧ ಅಪಪ್ರಚಾರ ಸಲ್ಲದು: ಶ್ರೀರಾಮುಲು

**ದಾವಣಗೆರೆ:** ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣಕ್ಕೆ ಸಂಬಂಧಿಸಿದಂತೆ ನಿಗಮದ ಅಧ್ಯಕ್ಷರು ರಾಜೀನಾಮೆ ನೀಡಿರುವುದೇ ಸರ್ಕಾರದ ಭ್ರಷ್ಟಾಚಾರಕ್ಕೆ ಸಾಕ್ಷಿ. ಲೂಟಿ ಮಾಡಿದ ಹಣವನ್ನು ತೆಲಂಗಾಣ ಚುನಾವಣೆ ಹಾಗೂ ಲೋಕಸಭಾ ಚುನಾವಣೆಗಳಿಗೆ ಬಳಸಿಕೊಳ್ಳಲಾಗಿದೆ. ಸಿದ್ದರಾಮಯ್ಯನವರ ಇಡೀ ಸಚಿವ ಸಂಪುಟ ಭ್ರಷ್ಟಾಚಾರದ ಸುಳಿಯಲ್ಲಿ ಸಿಲುಕಿದೆ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ವಾಗ್ದಾಳಿ ನಡೆಸಿದರು. ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಸಿದ್ದರಾಮಯ್ಯ ಎಲ್ಲರ ತಲೆಮೇಲೆ, ಹುಟ್ಟುವ ಮಕ್ಕಳ ತಲೆ ಮೇಲೂ ಒಂದೂವರೆ ಲಕ್ಷ ರೂ. ಸಾಲ ಹೊರಿಸಿದ್ದಾರೆ. ಇವರಷ್ಟು ಯಾವೊಬ್ಬ ಮುಖ್ಯಮಂತ್ರಿಯೂ ಸಾಲ ಮಾಡಿಲ್ಲ ಎಂದರು. ಸಿದ್ದರಾಮಯ್ಯನವರ ಸರ್ಕಾರ ಹುಟ್ಟಿದ್ದೇ ಸುಳ್ಳಿನಿಂದ. ಆದಕ್ಕೆ ಈಗಲೂ ಅವರು ಸುಳ್ಳು ಹೇಳುತ್ತಿದ್ದಾರೆ. ಬಾಗಲಕೋಟೆ ಮತ್ತು ದಾವಣಗೆರೆಯಲ್ಲಿ ಬಿಜೆಪಿ ಗೆದ್ದರೆ ಗ್ಯಾರಂಟಿಗಳನ್ನು ಬಿಜೆಪಿಯವರು ಬಂದ್ ಮಾಡುತ್ತಾರೆ ಅಂತಾ ಅಪಪ್ರಚಾರ ಮಾಡುತ್ತಿದ್ದಾರೆ ಎಂದರು.

### ಪ್ರೇಮಿಗಳ ಆತ್ಮಹತ್ಯೆ

**ಹನೂರು:** ಯುವ ಪ್ರೇಮಿಗಳು ನೇಣಿಗೆ ಕೊರಳೊಡ್ಡಿ ಆತ್ಮಹತ್ಯೆ ಮಾಡಿಕೊಂಡ ಧಾರುಣ ಘಟನೆ ಹನೂರು ತಾಲೂಕಿನ ಪೊನ್ನಾಚಿ ಗ್ರಾಮದ ಹಾಡಿಯಲ್ಲಿ ನಡೆದಿದೆ. ಮೀಣ್ಯಂ ಗ್ರಾಪಂ ವ್ಯಾಪ್ತಿಯ ನಕ್ಕುಂದಿ ಗ್ರಾಮದ ಸೋಲಿಗರ ಹಾಡಿ ನಾಗೇಂದ್ರ(21) ಪಾಲಾರ್ ಗ್ರಾಮದ ನದಿಯಾ(19) ಆತ್ಮಹತ್ಯೆ ಮಾಡಿಕೊಂಡ ದುರ್ದೈವಿಗಳು. ಪೊನ್ನಾಚಿ ಗ್ರಾಮದಲ್ಲಿ ಕಳೆದ ಮೂರು ದಿನಗಳಿಂದ ಗ್ರಾಮ ದೇವತೆ ಮಾರಮ್ಮನ ಹಬ್ಬ ನಡೆಯುತ್ತಿತ್ತು. ಈ ಹಬ್ಬಕ್ಕೆ ತಾತಾ ಶಿವಮಾದಯ್ಯ ಎಂಬವರ ಮನೆಗೆ ನಾಗೇಂದ್ರ, ನದಿಯಾ ಕಳೆದ ಮೂರು ದಿನಗಳ ಹಿಂದೆ ಬಂದಿದ್ದರು ಎನ್ನಲಾಗಿದೆ. ಈ ನಡುವೆ ನದಿಯಾ ತಂದೆ ಮಹಾದೇವ್ ಮಲೆ ಮಹದೇಶ್ವರ ಬೆಟ್ಟ ಠಾಣೆಗೆ ಮಗಳು ಕಾಣೆಯಾದಳೆಂದು ದೂರು ಕೂಡ ಕೊಟ್ಟಿದ್ದರು. ಆದರೆ, ನಿನ್ನೆ ತಡರಾತ್ರಿ ನದಿಯಾ ಮತ್ತು ನಾಗೇಂದ್ರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪಾಲಾರ್ ನದಿಯ ಹಾಗೂ ನಕ್ಕುಂದಿ ಗ್ರಾಮದ ನಾಗೇಂದ್ರ ಪೊನ್ನಾಚಿ ಗ್ರಾಮದ ಹಬ್ಬಕ್ಕೆಂದು ತೆರಳಿ ತಾತನ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಪ್ರೇಮಿಗಳಿಬ್ಬರ ಸಾವಿಗೆ ನಿಖರವಾದ ಮಾಹಿತಿ ತಿಳಿದು ಬಂದಿಲ್ಲ. ಸ್ಥಳಕ್ಕೆ ಮಲೆ ಮಹದೇಶ್ವರ ಬೆಟ್ಟ ಪೊಲೀಸ್ ಇನ್ಸ್‌ಪೆಕ್ಟರ್ ಜಗದೀಶ್ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.

ಪದಕ ಪ್ರದಾನ ಸಮಾರಂಭದಲ್ಲಿ ಸಿಎಂ ಸಿದ್ದರಾಮಯ್ಯ ಸೂಚನೆ

# ಅಪರಾಧ ತಡೆಗೆ ಮುಂದಾಗಿ



> ರಾಜ್ಯದ ಆರ್ಥಿಕ ಬೆಳವಣಿಗೆಗೂ, ಜಿಡಿಪಿ ಪ್ರಗತಿಗೂ ರಾಜ್ಯದ ಕಾನೂನು ಸುವ್ಯವಸ್ಥೆಗೂ ನೇರಾ ನೇರಾ ಸಂಬಂಧ ಇರುತ್ತದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಪೊಲೀಸ್ ಇಲಾಖೆ ಕಾರ್ಯನಿರ್ವಹಿಸಿದರೆ ಆರ್ಥಿಕತೆಗೂ ದೊಡ್ಡ ಕೊಡುಗೆ ಕೊಟ್ಟಂತಾಗುತ್ತದೆ.
> ■ ಸಿದ್ದರಾಮಯ್ಯ, ಮುಖ್ಯಮಂತ್ರಿ

**ಬೆಂಗಳೂರು:** ಸೈಬರ್ ಅಪರಾಧಗಳು ಸೇರಿದಂತೆ ನಾನಾ ಅಪರಾಧಗಳಲ್ಲಿ ನಮ್ಮ ರಾಜ್ಯ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಿದ್ದು ಇದನ್ನು ಕಟ್ಟುನಿಟ್ಟಾಗಿ ತಡೆಗಟ್ಟಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೂಚಿಸಿದರು.

ಕೋರಮಂಗಲ ಪರೇಡ್ ಮೈದಾನದಲ್ಲಿ ಆಯೋಜಿಸಿದ್ದ ಪೊಲೀಸ್ ಧ್ವಜ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಪದಕ ಪ್ರದಾನ ಮಾಡಿ ಮಾತನಾಡಿದರು. ಯಾವುದೇ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಆಯಾ ಠಾಣಾಧಿಕಾರಿಯ ಗಮನಕ್ಕೆ ಬರದಂತೆ ಯಾವುದೇ ಅಪರಾಧಗಳು, ಕೆಟ್ಟ ವ್ಯವಹಾರಗಳು ನಡೆಯಲು ಸಾಧ್ಯವಿಲ್ಲ. ಹಲವು ರೀತಿಯ ಅಪರಾಧ ಪ್ರಕರಣಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸಿ ಶಿಕ್ಷೆ ಪ್ರಮಾಣದಲ್ಲಿ ರಾಜ್ಯ ಮುಂದಿದೆ. ಇದಕ್ಕಾಗಿ ಪೊಲೀಸ್ ಇಲಾಖೆಯನ್ನು ಅಭಿನಂದಿಸುವ ಜತೆಗೆ ಪ್ರಮಾಣ ಹೆಚ್ಚಾಗಿರುವ ಅಪರಾಧಗಳ ನಿಯಂತ್ರಣದಲ್ಲೂ ನಾವು ಶ್ರಮ ಹಾಕಬೇಕಿದೆ ಎಂದು ಸೂಚಿಸಿದರು.

**24 ಗಂಟೆಯೂ ಕರ್ತವ್ಯ ಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡಬೇಕು:** ಸೈಬರ್ ಅಪರಾಧಗಳು ಸೇರಿದಂತೆ ನಾನಾ ರೀತಿಯ ಅಪರಾಧಗಳನ್ನು ತಡೆಯಲು ತಂತ್ರಜ್ಞಾನದ ಅವಕಾಶ ಬಳಸಿಕೊಳ್ಳಬೇಕು. ಸಮಯದ ಮಿತಿ ಇಲ್ಲದಂತೆ ದಿನದ 24 ಗಂಟೆಯೂ ಕರ್ತವ್ಯಪ್ರಜ್ಞೆ ಇಟ್ಟುಕೊಂಡು ಕೆಲಸ ಮಾಡುವುದರಿಂದ ಸಮಾಜದಲ್ಲಿ ನೆಮ್ಮದಿ ಮತ್ತು ಸೌಹಾರ್ದತೆ ನೆಲೆಸಿದೆ. ಮಹಿಳೆಯರು, ಮಕ್ಕಳು ಮತ್ತು ದುರ್ಬಲರು ಹಾಗೂ ಅಸಹಾಯಕರ ರಕ್ಷಣೆಗೆ ನಮ್ಮ ಸರ್ಕಾರ ಮೊದಲ ಆದ್ಯತೆ ನೀಡುತ್ತಿದೆ. ಪೊಲೀಸರೂ ಇದನ್ನು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು ಎಂದರು.

**ಶಾಂತಿ ಕಾಪಾಡುವುದರಲ್ಲಿ ಪೊಲೀಸರು ಯಶಸ್ವಿ:** ಪೊಲೀಸ್ ಇಲಾಖೆಯು ಪ್ರತಿನಿತ್ಯ ಸವಾಲುಗಳನ್ನು ಎದುರಿಸುತ್ತದೆ. ಸವಾಲುಗಳ ಮಧ್ಯೆ ಕಳೆದ ಮೂರು ವರ್ಷಗಳಿಂದ ನಮ್ಮ ಸರ್ಕಾರವು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರಾಜ್ಯದಲ್ಲಿ ಶಾಂತಿ ಕಾಪಾಡುವುದರಲ್ಲಿ ಯಶಸ್ವಿಯಾಗಿದೆ. ರಾಜ್ಯಕ್ಕೆ ಬಂಡಾವಾಳ ಹೂಡಿಕೆಗೆ ಬರುವ ಜನ ಶಾಂತಿಣ ನೆಮ್ಮದಿಯನ್ನು ಬಯಸುತ್ತಾರೆ ಎಂದು ಹೇಳಿದರು.

### ಸೈಬರ್ ಕಮಾಂಡ್ ಯೂನಿಟ್‌ಗೆ ಹೆಚ್ಚು ಪ್ರೋತ್ಸಾಹ

ದೇಶದಲ್ಲಿ ಸೈಬರ್ ಕ್ರೈಂ ಹಾವಳಿ ಹೆಚ್ಚಾಗುತ್ತಿದೆ. ದೇಶದಲ್ಲೇ ಮೊಟ್ಟ ಮೊದಲ ಬಾರಿಗೆ ಕರ್ನಾಟಕವೂ ಸೈಬರ್ ಕಮಾಂಡ್ ಯೂನಿಟ್ ಸ್ಥಾಪಿಸಿ, ಡಿಜಿ ಶ್ರೇಣಿಯ ಅಧಿಕಾರಿಯನ್ನು ನೇಮಿಸಿದೆ. ಸೈಬರ್ ಕಮಾಂಡ್ ಯೂನಿಟ್‌ಗೆ ಹೆಚ್ಚು ಪ್ರೋತ್ಸಾಹಿಸಿ ಮೂಲಕ ಸೈಬರ್ ಅಪರಾಧಗಳನ್ನು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗಿದ್ದೇವೆ ಎಂದು ಡಾ.ಜಿ. ಪರಮೇಶ್ವರ ತಿಳಿಸಿದರು.

### 162 ಸಾಧಕರಿಗೆ ಮುಖ್ಯಮಂತ್ರಿಯವರ ಚಿನ್ನದ ಪದಕ ಪ್ರದಾನ

ಪೊಲೀಸ್ ಇಲಾಖೆಯಲ್ಲಿ ಅಪ್ರತಿಮ ಸೇವೆ, ಗಣನೀಯ ಕಾರ್ಯ ಹಾಗೂ ಅತ್ಯುತ್ತಮ ಕರ್ತವ್ಯ ನಿಷ್ಠೆ ಸಲ್ಲಿಸಿದ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರಿಗೆ 2025ನೇ ಸಾಲಿನ ಮುಖ್ಯಮಂತ್ರಿಯವರ ಚಿನ್ನದ ಪದಕಗಳನ್ನು ಎಸ್‌ಪಿಗಳಾದ ಡಾ. ಸುಮನ್ ಡಿ.ಪೆನ್ನೇ ಕರ್, ಡಾ. ಅರುಣ್ ಕೆ., ಶ್ರೀಹರಿಬಾಬು ಬಿ.ಎಲ್., ಪೃಥ್ವಿಕ್ ಶಂಕರ್, ಡಾ. ಗೋಪಾಲ ಎಂ. ಬ್ಯಾಕೋಡ ಸೇರಿದಂತೆ ಎಸಿಪಿ, ಪಿಐ ಹಾಗೂ 162 ಸಾಧಕರಿಗೆ ಸಿಎಂ ಸಿದ್ದರಾಮಯ್ಯ ಪ್ರದಾನ ಮಾಡಿದರು.

> ಪೊಲೀಸ್ ಇಲಾಖೆಯಲ್ಲಿ ವರ್ಗಾವಣೆ, ನೇಮಕಾತಿಯಲ್ಲಿ ಆಧುನಿಕತೆಯನ್ನು ಬಳಸಿಕೊಳ್ಳಲಾಗುವುದು. 8 ಸಾವಿರ ಕಾನ್ಸ್‌ಟೇಬಲ್, 600 ಪಿಎಸ್‌ಐ ಹುದ್ದೆ ನೇಮಕಾತಿಗೆ ಬಜೆಟ್‌ನಲ್ಲಿ ಸಿಎಂ ಅನುವು ಮಾಡಿಕೊಟ್ಟಿದ್ದಾರೆ.
> ■ ಡಾ.ಜಿ. ಪರಮೇಶ್ವರ, ಗೃಹ ಸಚಿವ

# ಸಮರ್ಪಕ ರಸಗೊಬ್ಬರ ಪೂರೈಕೆಗೆ ಕ್ರಮ: ಸಚಿವ

**ಬೆಂಗಳೂರು:** ಮಧ್ಯಪ್ರಾಚ್ಯದಲ್ಲಿ ನಡೆಯುತ್ತಿರುವ ಸಂಘರ್ಷದ ಹಿನ್ನಲೆಯಲ್ಲಿ ರಸಗೊಬ್ಬರ ಉತ್ಪಾದನೆಗೆ



ಅಗತ್ಯವಿರುವ ಕಚ್ಚಾ ವಸ್ತುಗಳ ಆಮದು ವ್ಯತ್ಯಯವಾಗುವ ಸಾಧ್ಯತೆ ಕಂಡುಬಂದಿದ್ದು, ರಾಜ್ಯದಲ್ಲಿ ರಸಗೊಬ್ಬರ ಪೂರೈಕೆಗೆ ಅಡ್ಡಿಯಾಗುವ ಆತಂಕ ವ್ಯಕ್ತವಾಗಿದೆ. ಮುಂಗಾರು ಹಂಗಾಮಿನ ರಸಗೊಬ್ಬರಗಳ ಸಮರ್ಪಕ ಪೂರೈಕೆ ಮತ್ತು ಪರಿಣಾಮಕಾರಿ ನಿರ್ವಹಣೆಗೆ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಉಸ್ತುವಾರಿಯಲ್ಲಿ ಕೃಷಿ ಇಲಾಖೆ ಬಹುಮುಖ ಕ್ರಮಗಳನ್ನು ಅನುಷ್ಠಾನಗೊಳಿಸಿದೆ.

ರಾಜ್ಯವು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ (ಕೆಎಸ್‌ಸಿಎಂಎಫ್), ಕರ್ನಾಟಕ ರಾಜ್ಯ ಬೀಜ ನಿಗಮ(ಕೆಎಸ್‌ಎಸ್‌ಸಿ) ಮುಖಾಂತರ ಕಾಪು ದಾಸ್ತಾನು ವ್ಯವಸ್ಥೆಯನ್ನು ಬಲಪಡಿಸಿದೆ. ಪ್ರಸ್ತುತ 28,224 ಮೆಟ್ರಿಕ್ ಟನ್ ಗೊಬ್ಬರ ಕಾಪು ದಾಸ್ತಾನಿನಲ್ಲಿ ಲಭ್ಯವಿದ್ದು, ಶೇ.25 ರಷ್ಟು ಕಡ್ಡಾಯವಾಗಿ ಯೂರಿಯಾ ಮತ್ತು ಡಿಎಪಿ ಗೊಬ್ಬರಗಳ ಸಂಗ್ರಹಿಸಲು ನಿರ್ದೇಶಿಸಲಾಗಿದೆ.

- 30.05 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಹಂಚಿಕೆ
- ಪ್ರಸ್ತುತ 11.42 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಸಂಗ್ರಹ
- 28,224 ಮೆಟ್ರಿಕ್ ಟನ್ ಕಾಪು ದಾಸ್ತಾನು ಲಭ್ಯ
- ಶೇ.25 ರಷ್ಟು ಯೂರಿಯಾ, ಡಿಎಪಿ ಕಡ್ಡಾಯ ಸಂಗ್ರಹ

ಕೇಂದ್ರ ಸರ್ಕಾರವು ರಾಜ್ಯಕ್ಕೆ ಒಟ್ಟು 30.05 ಲಕ್ಷ ಮೆಟ್ರಿಕ್ ಟನ್ ವಿವಿಧ ಗೊಬ್ಬರಗಳನ್ನು ಹಂಚಿಕೆ ಮಾಡಿದ್ದು, ಏಪ್ರಿಲ್ 1ರ ವೇಳೆಗೆ 11.42 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಲಭ್ಯವಿದೆ. 2026ರ ಜಿಲ್ಲಾವಾರು ಗೊಬ್ಬರ ಹಂಚಿಕೆ ಕಳೆದ 3 ವರ್ಷಗಳ ಸರಾಸರಿ ಬಳಕೆಯನ್ನು ಆಧಾರಿಸಿ ಮರು ನಿರ್ಧಾರ ಮಾಡಲಾಗಿದೆ. ಜೊತೆಗೆ ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಸೂಕ್ಷ್ಮ ಯೋಜನೆ ರೂಪಿಸಿ ಪೂರೈಕೆ ಸಮತೋಲನ ಕಾಯ್ದುಕೊಳ್ಳಲು ಕ್ರಮ ಕೈಗೊಳ್ಳಲಾಗಿದೆ ಎಂದರು.

### ಯೂರಿಯಾ ಗೊಬ್ಬರ ಹಂಚಿಕೆಗೆ ಆ್ಯಪ್ ಅಭಿವೃದ್ಧಿ

ರಾಜ್ಯದಲ್ಲಿ ಯೂರಿಯಾ ಬಳಕೆಯನ್ನು ನಿಯಂತ್ರಿಸಲು ಫ್ರೂಟ್ಸ್ ನೋಂದಣಿಯ ಆಧಾರದ ಮೇಲೆ ಡೇಟಾ ಬೇಸ್ ಆಧಾರಿತ ಯೂರಿಯಾ ಡಿಸ್ಟ್ರಿಬ್ಯೂಷನ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ರೈತರ ಭೂ ಹಿಡುವಳಿ ಮತ್ತು ಬೆಳೆ ಮಾದರಿಯನ್ನು ಆಧಾರಿಸಿ ಯೂರಿಯಾ ಮಾರಾಟವನ್ನು ನಿಯಂತ್ರಿಸಲಾಗುತ್ತಿದೆ. ಈ ಆ್ಯಪ್ಲಿಕೇಷನ್ ಈಗಾಗಲೇ ಎಂಟು ಜಿಲ್ಲೆಗಳಲ್ಲಿ ಪ್ರಯೋಗಿಕವಾಗಿ ಜಾರಿಯಲ್ಲಿದ್ದು, ಮುಂದಿನ ಮುಂಗಾರು ಹಂಗಾಮಿನಲ್ಲಿ ರಾಜ್ಯದ್ಯಾಂತ ವಿಸ್ತಾರಗೊಳ್ಳಲಿದೆ. ಕೃಷಿ ಹೊರತಾದ ಕೃಷಿ ಚಟುವಟಿಕೆಗಳಿಗೆ ಸಹಾಯಧನದ ಯೂರಿಯಾ ದುರುಪಯೋಗವನ್ನು ತಡೆಯಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ಸಮಿತಿಗಳನ್ನು ರಚಿಸಲಾಗಿದೆ. ಈ ನಿಯಮಗಳನ್ನು ಉಲ್ಲಂಘನೆ ಮಾಡಿದ್ದಲ್ಲಿ ಎಫ್‌ಸಿಓ 1985 ಮತ್ತು ಇಸಿಎ 1985 ನಿಯಮಗಳಡಿ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

# ಅಲ್ಪಸಂಖ್ಯಾತರ ಮತ ಸೆಳೆಯಲು ಬಿಜೆಪಿ ಯತ್ನ

**ದಾವಣಗೆರೆ:** ಮಾಜಿ ಸಿಎಂ ಸದಾನಂದಗೌಡರು ಹೇಳಿರುವ ಸೂಟ್‌ಕೇಸ್ ಎಷ್ಟು ದಪ್ಪ ಇದೆ, ಎಷ್ಟು ಅಗಲವಿದೆ ಎಂದು ಲೆಕ್ಕಾಚಾರ



ಹಾಕಿದ್ದಾರಾ? ಅವರೇ ಈ ಬಗ್ಗೆ ದೂರು ನೀಡಲಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ನಗರದಲ್ಲಿ ಗುರುವಾರ ಕಾಂಗ್ರೆಸ್ ಅಭ್ಯರ್ಥಿ ಪರ ಪ್ರಚಾರಕ್ಕೆ ಆಗಮಿಸಿದ್ದ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದಾನಂದಗೌಡರು ಪ್ರಚಾರಕ್ಕೆ ಬಂದಿದ್ದಾರಾ? ಸೂಟ್ ಕೇಸ್ ಬಗ್ಗೆ ಇನ್ನೂ ಯಾಕೆ ದೂರು ನೀಡಿಲ್ಲ? ಎಂದು ತಿರುಗೇಟು ನೀಡಿದರು. ಅಲ್ಪಸಂಖ್ಯಾತರ ಮತಗಳನ್ನು ಬಿಜೆಪಿಗೆ ಸೆಳೆಯುವಂತೆ ಸದಾನಂದಗೌಡರು ಹೇಳಿಕೆ ನೀಡಿರುವುದು ಬಹಳ ಸಂತೋಷ. ಅವರು ಎಲ್ಲರನ್ನೂ ಕರೆದುಕೊಳ್ಳಲಿ. ಇರುವ ಎಲ್ಲ 2.30 ಲಕ್ಷ ಮತಗಳನ್ನು ಅವರೇ ಹಾಕಿಸಿಕೊಳ್ಳಲಿ, ಬಹಳ ಸಂತೋಷ ಎಂದು ಡಿಕೆಶಿ ವ್ಯಂಗ್ಯವಾಡಿದರು. ಸಮರ್ಥ್ ಶಾಮನೂರು ಕಚೇರಿಯಿಂದ ಕರೆ ಬಂದಿದ್ದು, ಬಿಜೆಪಿ ಗೆದ್ದರೆ ಗ್ಯಾರಂಟಿ ಯೋಜನೆ ನಿಲ್ಲಿಸುತ್ತಾರೆ ಎಂಬ ಆಡಿಯೋ ಬಗ್ಗೆ ಪ್ರತಿಕ್ರಿಯಿಸಿದ ಅವರು, ಚುನಾವಣೆ ಸಮಯದಲ್ಲಿ ಸುಳ್ಳು ಸುದ್ದಿಗಳನ್ನು ಹಬ್ಬಿಸುತ್ತಾರೆ. ಇವೆಲ್ಲ ಮಾಮೂಲಿ ಎಂದರು.

# ಆಜಾದ್ ಭಾರತ್ ಸಿನಿಮಾ ಪ್ರದರ್ಶನ

**ಹೊಸದಿಲ್ಲಿ:** ದೇಶಭಕ್ತಿ, ರಾಷ್ಟ್ರೀಯ ಸೇವಾ ಮೌಲ್ಯಗಳಿಗೆ ಸದಾ ಪ್ರೇರಣೆಯಾಗಿರುವ ನೇತಾಜಿ ಸುಭಾಷ್‌ಚಂದ್ರ ಬೋಸ್ ಅವರ ಗೌರವಾರ್ಥ ಕರ್ನಾಟಕದ ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿದ ಆಜಾದ್ ಭಾರತ್ ಹಿಂದಿ ಚಲನಚಿತ್ರ ಪ್ರದರ್ಶನಕ್ಕೆ ಸಂಸತ್ ಭವನ ಸಾಕ್ಷಿಯಾಯಿತು.

ಸಂಸತ್ತಿನ ಗ್ರಂಥಾಲಯ ಕಟ್ಟಡದ ಜಿಎಂಸಿ ಬಾಲಯೋಗಿ ಸಭಾಂಗಣದಲ್ಲಿ ಸುಭಾಷ್‌ಚಂದ್ರ ಬೋಸ್ ಅವರಿಗೆ ಗೌರವ ಸಲ್ಲಿಸುವ ಪ್ರತೀಕವಾಗಿ ಹಿಂದಿ ಭಾಷೆಯಲ್ಲಿ ನಿರ್ಮಿಸಿದ ಆಜಾದ್ ಭಾರತ್ ಚಿತ್ರದ ವಿಶೇಷ ಪ್ರದರ್ಶನ ಆಯೋಜಿಸಲಾಗಿತ್ತು. ಸಂಸತ್ ಸದಸ್ಯರು ಮತ್ತು ಸಚಿವಾಲಯಗಳ ಅನೇಕ ಅಧಿಕಾರಿಗಳು ಸಿನಿಮಾ ವೀಕ್ಷಿಸಿ ನೇತಾಜಿಗೆ ನಮನ ಸಲ್ಲಿಸಿದರು. ಈ ಚಲನಚಿತ್ರ ಸುಭಾಷ್ ಚಂದ್ರ ಬೋಸ್ ಅವರ ಅಪ್ಪಟ ದೇಶಭಕ್ತಿ ಮತ್ತು ರಾಷ್ಟ್ರೀಯ ಮೌಲ್ಯಗಳನ್ನು ಎತ್ತಿಹಿಡಿಯಲು ಯುವ ಪೀಳಿಗೆಯನ್ನು ಪ್ರೇರೇಪಿಸುವ ಗುರಿ ಹೊಂದಿದೆ. ರಾಷ್ಟ್ರೀಯ ಏಕತೆ, ಆದರ್ಶಗಳನ್ನು ಇಂದಿನ ಯುವ ಪೀಳಿಗೆಗೆ ತಲುಪಿಸುವಲ್ಲಿ ಇಂತಹ ಕಾರ್ಯಕ್ರಮಗಳು ಪ್ರಮುಖವಾಗಿವೆ. ನಮ್ಮ ವೀರ ಹೋರಾಟಗಾರರ ತ್ಯಾಗ ಎಲ್ಲರಿಗೂ ಸ್ಫೂರ್ತಿಯಾಗಲೆಂದು ಆಶಿಸಿದರು.

ಚಲನಚಿತ್ರ ಪ್ರದರ್ಶನಕ್ಕೂ ಮೊದಲು ಜೋಶಿ




ಚಿತ್ರನಿರ್ದೇಶಕ ಡಾ.ರೂಪಾ ಅಯ್ಯರ್, ಚಲನಚಿತ್ರದ ಇತರ ಕಲಾವಿದರನ್ನೂ ಸನ್ಮಾನಿಸಿದರು. ನಮ್ಮ ಕರ್ನಾಟಕದವರೇ ಆಗಿರುವ ರೂಪಾ ಅಯ್ಯರ್ ನಟಿಸಿ, ನಿರ್ದೇಶಿಸಿರುವುದು ಹೆಮ್ಮೆಯ ಸಂಗತಿ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

**ನೇತಾಜಿ ಮರಿಮೊಮ್ಮಗಳು ಚಿತ್ರ ವೀಕ್ಷಣೆ:** ಡಾ.ರೂಪಾ ಅಯ್ಯರ್ ನಿರ್ಮಿಸಿ, ನಿರ್ದೇಶಿಸಿದ ಈ ಚಲನಚಿತ್ರವನ್ನು ವಿಶೇಷವಾಗಿ ಲೋಕಸಭೆ, ರಾಜ್ಯಸಭೆ ಮತ್ತು ಸಚಿವಾಲಯ ಅಧಿಕಾರಿಗಳು ಮತ್ತವರ ಕುಟುಂಬ ಸದಸ್ಯರಿಗಾಗಿ ಆಯೋಜಿಸಲಾಗಿತ್ತು. ನೇತಾಜಿ ಮರಿಮೊಮ್ಮಗಳು ರಾಜ್ಯಶ್ರೀ ಚೌಧರಿ, ಕೇಂದ್ರದ ಮಾಜಿ ಸಚಿವೆ ಮೀನಾಕ್ಷಿ ಲೇಖಿ ಅವರು ಚಲನಚಿತ್ರ ಪ್ರದರ್ಶನವನ್ನು ಕಣ್ತುಂಬಿಕೊಂಡರು.

# ಮಗಳ ಸಾವಿಗೆ ನ್ಯಾಯ ಕೊಡಿಸಿ: ಶೈಲಜಾ ರೆಡ್ಡಿ

**ಶಿವಮೊಗ್ಗ:** ತಮ್ಮ ಮಗಳ ಸಾವಿಗೆ ನ್ಯಾಯ ಕೊಡಿಸಿ ಎಂದು ತ್ಯಾವರೆಕೊಪ್ಪದ ಹುಲಿ ಮತ್ತು ಸಿಂಹ ಧಾಮದಲ್ಲಿ ನೀರಾನೆ ದಾಳಿಗೆ ಬಲಿಯಾದ ಯುವ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿ ಅವರ ತಾಯಿ ಶೈಲಜಾ ರೆಡ್ಡಿ ಆಗ್ರಹಿಸಿದ್ದಾರೆ.

ತುಂಗಾನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿ ಮಾತನಾಡಿ, ವ್ಯವಸ್ಥೆಯ ನಿರ್ಲಕ್ಷ್ಯದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಸಮೀಕ್ಷಾಗೆ ಪ್ರಾಣಿಗಳೆಂದರೆ ಪ್ರಾಣವಾಗಿತ್ತು. ಅವಳು ಹಣಕ್ಕಾಗಿ ಈ ವೃತ್ತಿ ಆರಿಸಿಕೊಂಡವಳಲ್ಲ. ಅವಳಿಗಿದ್ದ ಆಸಕ್ತಿಯೇ ಇಂದು ಅವಳ ಸಾವಿಗೆ ಕಾರಣವಾಯ್ತು ಎಂದು ಕಣ್ಣೀರಿಟ್ಟಿದ್ದಾರೆ. ರಾತ್ರಿ 10 ಗಂಟೆ ನಂತರ ಅಂತಹ ಅಪಾಯಕಾರಿ ಜಾಗಕ್ಕೆ ಒಬ್ಬ ಹೆಣ್ಣು ಮಗಳನ್ನು ಕಳುಹಿಸುವ ಅವಶ್ಯಕತೆ ಏನಿತ್ತು? ಈ ಬೇಜವಾಬ್ದಾರಿತನಕ್ಕೆ ಹೊಣೆ ಯಾರು? ಎಂದು ಪ್ರಶ್ನಿಸಿರುವ ಅವರು, ಮುಂದೆ ಬರುವ ವಿದ್ಯಾರ್ಥಿಗಳಿಗಾದರೂ ಸುರಕ್ಷಿತ ನಿಯಮಗಳನ್ನು ಜಾರಿಗೆ ತನ್ನಿ ಎಂದು ಆಗ್ರಹಿಸಿದ್ದಾರೆ. ವ್ಯವಸ್ಥೆಯ ಈ ತಪ್ಪುಗಳಿಂದಾಗಿ ಇಂದು ಪೋಷಕರು ತಮ್ಮ ಮಕ್ಕಳನ್ನು ಪಶುವೈದ್ಯಕೀಯ ಕೋರ್ಸ್‌ಗೆ ಕಳುಹಿಸಲು ಭಯಪಡುವಂತಾಗಿದೆ. ಡಾ. ಸಮೀಕ್ಷಾ ಸಾವಿಗೆ ನ್ಯಾಯ ಸಿಗಲಿ ಎಂದು ಒತ್ತಾಯಿಸಿದರು.

ಪೂರ್ವಾನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಒಂದು ತಿಂಗಳ ಗಡುವು

# ರೋಹಿಣಿ ವಿರುದ್ಧ ತನಿಖೆಗೆ ಅನುಮತಿ ನೀಡಿ

**ಬೆಂಗಳೂರು:** ಪರಿಸರ ಸ್ನೇಹಿ, ಬಟ್ಟೆಯ ಕೈಚೀಲಗಳನ್ನು ಮಾರುಕಟ್ಟೆ ದರ 13ರೂ.ಗೆ ಬದಲಾಗಿ 52 ರೂ.ಗೆ ಖರೀದಿಸುವ ಮೂಲಕ ಕೋಟ್ಯಂತರ ರೂಪಾಯಿಭ್ರಷ್ಟಾಚಾರ ಎಸಗಿದ



ಆರೋಪಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ತನಿಖೆಗೆ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ ಅಡಿ ಪೂರ್ವಾ ನುಮತಿ ನೀಡಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಒಂದು ತಿಂಗಳ ಗಡುವು ವಿಧಿಸಿದೆ.

ರೋಹಿಣಿ ಸಿಂಧೂರಿ ವಿರುದ್ಧ ತನಿಖೆ ಕೈಗೊಳ್ಳಬೇಕೆಂಬ ಮೈಸೂರಿನ ವಕೀಲ ಎನ್.ಆರ್. ರವಿಚಂದ್ರೇಗೌಡ ಪೂರ್ವಾನುಮತಿ ಕೋರಿಕೆ ನಿರಾಕರಿ ಸಿದ್ದ, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಡಿಪಿಎಆರ್) ಆದೇಶವನ್ನು ನ್ಯಾ. ಎಂ.ನಾಗಪ್ರಸನ್ನ ಅವರ ಏಕಸದಸ್ಯ ಪೀಠ ವಜಾಗೊಳಿಸಿದೆ. ಕಾನೂನಿನ ಅನ್ವಯ ಪೂರ್ವಾನುಮತಿ ನೀಡುವುದನ್ನು ಪರಿಗಣಿಸುವಂತೆ ಸಮನ್ವಯ ಪೀಠವು ಈ ಹಿಂದೆ ನಿರ್ದೇಶಿಸಿದೆ. ಸರ್ಕಾರವು ಅರ್ಥಪೂರ್ಣವಾಗಿ ಮೌಲ್ಯಮಾಪನ ಮಾಡುವ ಬದಲು ತನ್ನ ಹಿಂದಿನ ನಿಲುವನ್ನು ಸಮರ್ಥಿಸಿದೆ. ಹೀಗಾಗಿ, ಪ್ರಕರಣವನ್ನು ಮತ್ತೆ ಸರ್ಕಾರಕ್ಕೆ ಮರಳಿಸುವುದರಿಂದ ಯಾವುದೇ ಲಾಭವಿಲ್ಲ. ಬದಲಿಗೆ ನ್ಯಾಯದಾನ ಮತ್ತಷ್ಟು ವಿಸ್ತರಣೆಯಾಗಲಿದೆ ಎಂದು ನ್ಯಾಯಾಲಯವು ಅರ್ಜಿ ಮಾನ್ಯ ಮಾಡುವುದಕ್ಕೆ ಸಮರ್ಥನೆ ನೀಡಿದೆ.

ಇಲಾಖಾ ವಿಚಾರಣೆಗಳು ಮತ್ತು ಕ್ರಿಮಿನಲ್ ವಿಚಾರಣೆಗಳು ವಿಭಿನ್ನ ತಳಹದಿಯಲ್ಲಿ ಕಾರ್ಯನಿರ್ವಹಿಸುತ್ತವೆ. ಇವುಗಳಲ್ಲಿ ಪರಿಗಣಿಸಲಾಗುವ ಪುರಾವೆ ಮತ್ತು ಉದ್ದೇಶದ ಮಾನದಂಡಗಳನ್ನು ಪ್ರತ್ಯೇಕ ಕಾನೂನುಗಳಿಂದ ನಿಯಂತ್ರಿಸಲಾಗುತ್ತದೆ. ಇಲಾಖಾ ವಿಚಾರಣೆಯಲ್ಲಿ ಅಧಿಕಾರಿಯನ್ನು ದೋಷಮುಕ್ತಗೊಳಿಸಿದ ಮಾತ್ರಕ್ಕೆ ಕ್ರಿಮಿನಲ್ ತನಿಖೆ ನಡೆಯುವುದನ್ನು ತಡೆಯಲು ಸಾಧ್ಯವಿಲ್ಲ ಎಂಬುದು ಈಗಾಗಲೇ ನ್ಯಾಯಾಂಗ ಪರಾಮರ್ಶೆಯಲ್ಲಿ ಇತ್ಯರ್ಥವಾಗಿರುವ ಅಂಶ ಎಂದು ನ್ಯಾಯಾಲಯ ಹೇಳಿದೆ.

ಸಾರ್ವಜನಿಕ ಸೇವಕರು ತಮ್ಮ ಅಧಿಕೃತ ಕಾರ್ಯ ಅಥವಾ ಕರ್ತವ್ಯಗಳನ್ನು ನಿರ್ವಹಿಸುವಾಗ ಮಾಡಿದ ಶಿಫಾರಸ್ಸುಗಳು, ನಿರ್ಧಾರಗಳಿಗೆ ಸಂಬಂಧಿಸಿದ ಅಪರಾಧಗಳ ವಿಚಾರಣೆ ಅಥವಾ ತನಿಖೆಗೆ ಅನುಮತಿ ನೀಡುವುದು ಸಾಂವಿಧಾನಿಕ ಮತ್ತು ಶಾಸನಬದ್ಧ ಕಡ್ಡಾಯ ನಿಲುವಾಗಿರಬೇಕು. ಯಾಕೆಂದರೆ, ಭ್ರಷ್ಟಾಚಾರ ಒಂದು ಪಿಡುಗು. ಇದನ್ನು ಕ್ಯಾನ್ಸರ್, ಪ್ಲೇಗ್ ಮತ್ತು ಸಾಂಕ್ರಾಮಿಕ ಎಂದು ವಿವಿಧ ರೀತಿಯಲ್ಲಿ ವರ್ಣಿಸಲಾಗಿದೆ ಎಂಬ ಸುಪ್ರೀಂ ಕೋರ್ಟ್ ತೀರ್ಪನ್ನು ಪೀಠ ಆದೇಶದಲ್ಲಿ ಉಲ್ಲೇಖಿಸಿದೆ.

### ಪ್ರಕರಣದ ಹಿನ್ನೆಲೆ

ಸ್ವಚ್ಛ ಭಾರತ ಅಭಿಯಾನದ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಪ್ಲಾಸ್ಟಿಕ್ ಮುಕ್ತ ವಾತಾವರಣ ನಿರ್ಮಿಸಬೇಕು ಮತ್ತು ಪ್ಲಾಸ್ಟಿಕ್ ಬಳಕೆಗೆ ಮುಕ್ತಾಯಹಾಡಿ ಬಟ್ಟೆಯ ಕೈಚೀಲಗಳನ್ನು ಬಳಸಬೇಕು ಎಂದು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಅವರು ಜಿಲ್ಲೆಯ ನಗರ, ಗ್ರಾಮಾಂತರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶಿಸಿದ್ದರು. ಈ ವೇಳೆ ಬಟ್ಟೆ ಚೀಲ ಖರೀದಿಯಲ್ಲಿ ಕ್ರಮ ಕಂಡುಬಂದಿತ್ತು. ಅಕ್ರಮದ ಕುರಿತಂತೆ, ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಬೇಕು ಎಂದು 2021ರ ಅಕ್ಟೋಬರ್ 13ರಂದು ಮೈಸೂರು ಜಿಲ್ಲಾ ಭ್ರಷ್ಟಾಚಾರ ನಿಗ್ರಹ ದಳಕ್ಕೆ (ಎಸಿಬಿ) ರವಿಚಂದ್ರೇಗೌಡ ದೂರು ನೀಡಿದ್ದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಭರವಸೆ

# ರೋಗಿ ಸುರಕ್ಷತೆಗೆ ಎಐ ಮತ್ತಷ್ಟು ಬಲ

**ಬೆಂಗಳೂರು:** ಪಿಪಿಪಿ ಮಾದರಿಯಲ್ಲಿ ಡಯಾಲಿಸಿಸ್ ಸೇವೆಗಳನ್ನು ವಿಸ್ತರಿಸುವಲ್ಲಿ ರಾಜ್ಯ ಸರ್ಕಾರ ಬದ್ಧವಾಗಿದ್ದು, ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ಮೇಲ್ವಿಚಾರಣಾ ವ್ಯವಸ್ಥೆಯ ಪರಿಚಯದಿಂದ ಚಿಕಿತ್ಸಾ ಗುಣಮಟ್ಟ ಮತ್ತು ರೋಗಿ ಸುರಕ್ಷತೆ ಮತ್ತಷ್ಟು ಬಲವಾಗಲಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನೆಫ್ರೋಪ್ಲಸ್ ಸಂಸ್ಥೆ ಜಾರಿಗೆ ತಂದಿರುವ ಎಐ ಆಧಾರಿತ ಸ್ಮಾರ್ಟ್ ಮೇಲ್ವಿಚಾರಣಾ ವ್ಯವಸ್ಥೆಯ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ವ್ಯವಸ್ಥೆಯ ಮೂಲಕ ಪಿಪಿಪಿ ಯೋಜನೆಯ ಅಡಿಯಲ್ಲಿ ನೀಡಲಾಗುವ ಡಯಾಲಿಸಿಸ್ ಸೇವೆಗಳು ಖಾಸಗಿ ಕ್ಷೇತ್ರದ ಮಟ್ಟಕ್ಕೆ ಸಮನಾಗುತ್ತಿವೆ ಎಂದು ಹೇಳಿದರು.

ಈಗಾಗಲೇ ಎರಡು ಖಾಸಗಿ ಸಂಸ್ಥೆಗಳೊಂದಿಗೆ ಸಹಭಾಗಿತ್ವದಲ್ಲಿ ಎಐ ಬಳಕೆ ಹೆಚ್ಚಿಸುತ್ತಿದ್ದು, ಇದರ ಉಪಯೋಗವನ್ನು 2 ತಿಂಗಳು ಪರಿಶೀಲಿಸಿ, ನಂತರ ಇತರೆ ಸರ್ಕಾರಿ ಆಸ್ಪತ್ರೆಗಳಲ್ಲೂ ವಿಸ್ತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದರು.

ನೆಫ್ರೋಪ್ಲಸ್ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರೋಹಿತ್ ಸಿಂಗ್ ಮಾತನಾಡಿ, ಡಯಾಲಿಸಿಸ್ ಚಿಕಿತ್ಸೆಯಲ್ಲಿ ನಿರಂತರ ಮೇಲ್ವಿಚಾರಣೆ ಅತ್ಯಗತ್ಯ. ಈ ಎಐ



ವ್ಯವಸ್ಥೆಯ ಮೂಲಕ ಎಲ್ಲಾ ಕೇಂದ್ರಗಳಲ್ಲಿಯೂ ಸಮಾನ ಗುಣಮಟ್ಟವನ್ನು ಕಾಪಾಡುವುದರ ಜತೆಗೆ, ರೋಗಿಗಳಿಗೆ ಹೆಚ್ಚು ಸುರಕ್ಷಿತ ಮತ್ತು ವಿಶ್ವಾಸಾರ್ಹ ಸೇವೆ ಒದಗಿಸಲು ಸಾಧ್ಯವಾಗುತ್ತಿದೆ ಎಂದು ಹೇಳಿದರು.

## ಸಂಪಾದಕೀಯ

### ಅರಾಜಕತೆಗಾಗಿಯೇ ಸಂಚು

ಮತ್ತೆ ಮತ್ತೆ ಹೇಳುವ ಸುಳ್ಳುಗಳು, ಕೆಲವೊಮ್ಮೆ ಸತ್ಯವಾಗಿಬಿಡುತ್ತವೆ ಎಂಬ ನಾಚಿಕೆಗೇಡಿನ ನಂಬಿಕೆಯೂ, ತೋಳ ಬಂತು ತೋಳ ಕತೆಯಂತಾದರೆ ನಂಬುವರೆ ಇಲ್ಲದಂತಾಗಬಹುದು ಎಂಬ ಕನಿಷ್ಠ ತಿಳಿವಳಿಕೆಯೂ ಇಲ್ಲದ ಕೆಲವು ವಿದ್ಯಮಾನಗಳಿಗೆ ದೇಶ ಸಾಕ್ಷಿಯಾಗುತ್ತಿದೆ. ಇಂಥ ಘಟನೆಗಳು ಒಂದು ರೀತಿಯಲ್ಲಿ ದೇಶವನ್ನು ಅರಾಜಕತೆಯತ್ತ ತಳ್ಳುವ ಪ್ರಯತ್ನಗಳು ಎಂಬುದು ಗೊತ್ತಿದ್ದೂ, ಸರ್ಕಾರಗಳು ನೋಡಿಕೊಂಡು ಸುಮ್ಮನಿವೆಯೇ ಎಂಬ ಅನುಮಾನವೂ ಜನಸಾಮಾನ್ಯರಲ್ಲಿ ಮೂಡುತ್ತಿರುವುದು ಸುಳ್ಳೇನಲ್ಲ.



ಇದು ವೋಟ್‌ಚೋರಿಯಿಂದ ಆರಂಭವಾದ ಸುಳ್ಳುಗಳ ಸರಮಾಲೆ. ಈಗ ಎಸ್‌ಐಆರ್ ಕಾಲದಲ್ಲಂತೂ ಇದು ಎಗ್ಗಿಲ್ಲದೇ ನಡೆಯುತ್ತಲೇ ಇದೆ. ಬಿಹಾರ ವಿಧಾನಸಭೆ ಚುನಾವಣೆ ಹೊತ್ತಲ್ಲಿ ಇಂಥ ಸುಳ್ಳುಗಳ ಸರಣಿಯೇ ಎದ್ದಿತ್ತು. ಬಿಹಾರದಲ್ಲಿ ಲಕ್ಷಾಂತರ ಮಂದಿಯನ್ನು ಮತದಾರರ ಪಟ್ಟಿಯಿಂದ ಹೊರಗಿಡಲಾಗಿದ್ದು, ಅಲ್ಲಿ ಧಮನಿತರು ಮತದಾನದಿಂದ ಹೊರಗುಳಿದರು ಎಂಬ ಸುಳ್ಳುಗಳನ್ನು ಹಬ್ಬಿಸಲಾಗಿತ್ತು. ಆದರೆ ಚುನಾವಣೆ ಮುಗಿದು, ಫಲಿತಾಂಶ ಬಂದರೂ ಈ ರಾಜ್ಯದಲ್ಲಿ ಮತದಾರರ ಪಟ್ಟಿಯಿಂದ ತಮ್ಮ ಹೆಸರು ಕಣ್ಮರೆಯಾಗಿದೆ ಎಂಬ ಒಂದೇ ಒಂದು ದೂರು ಎಲ್ಲಿಯೂ ಸಲ್ಲಿಕೆಯಾಗಲಿಲ್ಲ. ಈಗ ಪಶ್ಚಿಮ ಬಂಗಾಳದಲ್ಲೂ ಎಸ್‌ಐಆರ್ ಗದ್ದಲ ನಡೆಯುತ್ತಿದ್ದು ಇಲ್ಲೂ ಇದೇ ರೀತಿಯ ಸುಳ್ಳುಗಳನ್ನು ಪೋಣಿಸಲಾಗುತ್ತಿದೆ. ಅದರಲ್ಲೂ ಪ.ಬಂಗಾಳದಲ್ಲಿ ಸುಪ್ರೀಂಕೋರ್ಟ್ ಮೇಲ್ವಿಚಾರಣೆಯಲ್ಲೇ ನಡೆಯುತ್ತಿದ್ದು, ಹೀಗಿದ್ದರೂ ಮಮತಾ ಬ್ಯಾನರ್ಜಿ, ಮತ್ತವರ ಪಕ್ಷ ಪ್ರತಿದಿನವೂ ಒಂದೊಂದು ಹೈಡ್ರಾಮಾ ಮಾಡುತ್ತಲೇ ಇದೆ.

ಈ ಎಸ್‌ಐಆರ್ ಗದ್ದಲದ ಮಧ್ಯೆ, ಪ್ರಗತಿಪರರು ಎಂದು ಕರೆದುಕೊಳ್ಳುವ ಮತ್ತು ದೇಶವನ್ನ ಅರಾಜಕತೆಯತ್ತ ತಳ್ಳಲು ಯತ್ನಿಸುತ್ತಿರುವ ಗುಂಪೊಂದು ಕೆಲಸ ಮಾಡುತ್ತಲೇ ಇದೆ. ಯೋಗೇಂದ್ರ ಯಾದವ್, ನವೀನ್ ಚಾವ್ಲಾ, ಪ್ರಶಾಂತ್ ಭೂಷಣ್, ಪರಕಾಲ ಪ್ರಭಾಕರ ಮತ್ತಿತರರು ಆಂಧ್ರ ಪ್ರದೇಶ ವಿಧಾನಸಭೆ ಚುನಾವಣೆಯಲ್ಲಿ ಅಕ್ರಮಗಳಾಗಿವೆ ಎಂಬ ಆರೋಪ ಮಾಡಿದ್ದಾರೆ. ಅಂದರೆ, ಮಧ್ಯರಾತ್ರಿ 11.45ರಿಂದ 2 ಗಂಟೆವರೆಗೆ 3,500 ಬೂತ್‌ಗಳಲ್ಲಿ 17 ಲಕ್ಷ ಮತ ಚಲಾವಣೆಯಾಗಿದೆ. ಈ ಎಲ್ಲ ಮತಗಳು ಎನ್‌ಡಿಎಗೆ ಹೋಗಿವೆ ಎಂಬ ಆರೋಪ ಮಾಡಿದ್ದಾರೆ.

ಆದರೆ, ಇಂಥ ಆರೋಪಗಳನ್ನು ಮಾಡುವಾಗ ವಾಸ್ತವಿಕತೆಯ ಚಿತ್ರಣವನ್ನು ಮುಂದಿರಿಸಿಕೊಳ್ಳಬಹುದಿತ್ತು. ಚುನಾವಣಾ ರಾತ್ರಿ ಸ್ಟ್ರಾಂಗ್ ರೂಂಗಳನ್ನು ತೆಗೆದವರು ಯಾರು? ಹಾಗೆಯೇ ಪ್ರತಿ ಬಾರಿಯೂ ಚಲಾವಣೆಯಾದ ಮತದಾನದ ವಿವರಗಳು ಕ್ರೋಡೀಕರಣವಾಗಲು ಒಂದಷ್ಟು ಸಮಯ ಬೇಕೇಬೇಕು. ಇದು ಹಿಂದಿನಿಂದಲೂ ಚಾಲ್ತಿಯಲ್ಲಿರುವ ಪದ್ಧತಿ. ಇದು ಈಗಷ್ಟೇ ಆಗುತ್ತಿದೆ ಎಂಬುದೂ ಸುಳ್ಳಲ್ಲವೇ.

ಇಂಥ ಆರೋಪಗಳ ಹಿಂದೆ ಇರುವುದು ದೇಶದಲ್ಲಿ ಯಾವುದು ಸರಿಯಾಗಿಲ್ಲ ಎಂಬುದು ತೋರ್ಪಡಿಸುವ ಮಾರ್ಗಗಳಷ್ಟೇ. ನೆರೆಯ ಬಾಂಗ್ಲಾ ಮತ್ತು ನೇಪಾಳದಲ್ಲಿ ಚುನಾವಣೆ ಸರಿಯಾಗಿ ಆಗಿಲ್ಲ, ಅಕ್ರಮಗಳಾಗಿವೆ ಎಂದು ಬಿಂಬಿಸಿ, ಝೆನ್‌ಜಿಯಿಂದ ಕ್ರಾಂತಿ ಮಾಡಿಸಿದ ರೀತಿಯಲ್ಲೇ ಇಲ್ಲೂ ಮಾಡಬೇಕು ಎಂಬ ಸಂಚು ಇಂಥ ಆರೋಪಗಳ ಹಿಂದೆ ಇರುವಂತೆ ತೋರುತ್ತಿದೆ. ಈಗಾಗಲೇ ಕೆಲವು ಪ್ರತಿಪಕ್ಷಗಳ ನಾಯಕರು ಈ ಬಗ್ಗೆ ಮಾತನಾಡಿಯೂ ಆಗಿದೆ. ಆದರೆ, ಭಾರತದಂಥ ದೇಶದಲ್ಲಿ ಇಂಥ ಪ್ರಯತ್ನಗಳು ಸಾಕಾರವಾಗುವುದಿಲ್ಲ ಎಂಬುದನ್ನು ಮಾತ್ರ ಅರಾಜಕತೆಯನ್ನುಂಟುಮಾಡಲು ಯತ್ನಿಸುತ್ತಿರುವ ಮಂದಿಗೆ ಅರ್ಥವಾಗುತ್ತಿಲ್ಲ.

# ಕಾರ್ಯಕರ್ತನೇ? ಆತ ಬಂಗಾಳದಲ್ಲಿದ್ದಾನೆ!



ಉಫ್ಫೇ ವೀರಭೂಮಿಗೆ

ಸಂತೋಷ್ ತಮ್ಮಯ್ಯ
santoshthammaiah@gmail.com

ಮಾನವ ಸ್ವಭಾವ ಒಂದೆಡೆ ಕೋಪ ಮತ್ತು ದುರಾಸೆ, ಮತ್ತೊಂದೆಡೆ ಪ್ರೀತಿ ಮತ್ತು ತ್ಯಾಗ-ಎರಡೂ ಪ್ರವೃತ್ತಿಗಳನ್ನು ಹೊಂದಿರುತ್ತವೆ. ಒಬ್ಬ ಕಾರ್ಯಕರ್ತ ಪ್ರೀತಿ ಮತ್ತು ತ್ಯಾಗದ ಮಾರ್ಗವನ್ನು ಆರಿಸಿಕೊಳ್ಳಬೇಕು ಎಂದಿದ್ದರು ದೀನದಯಾಳ ಉಪಾಧ್ಯಾಯರು. ಅದಕ್ಕೂ ಹಿಂದೆ ಶ್ಯಾಮಪ್ರಸಾದ್ ಮುಖರ್ಜಿಯವರೂ ಕಾರ್ಯಕರ್ತನೇ ರಾಜಕೀಯ ಪಕ್ಷಗಳ ಶಕ್ತಿ ಎಂದು ನಂಬಿ ಕಾಂಗ್ರೆಸ್ ಬಿಟ್ಟು ಬಂದಿದ್ದರು. ಮುಂದೆ ಜನಸಂಘ ಮತ್ತು ಬಿಜೆಪಿಯ ಆಗಿಹೋದ ಅಧ್ಯಕ್ಷರು, ನಾಯಕರೆಲ್ಲರೂ ಕಾರ್ಯಕರ್ತನೇ ಆಧಾರಸ್ತಂಭ ಎಂದೇ ನಡೆದರು. ಹಾಗಾಗಿ ಇಂದಿಗೂ ಬಿಜೆಪಿಯನ್ನು ಕಾರ್ಯಕರ್ತರ ಪಕ್ಷ ಎಂದೇ ಗುರುತಿಸಲಾಗುತ್ತದೆ. ಬಿಜೆಪಿ ವಿರೋಧಿಗಳು ಕೂಡ ಆತನ ಶಕ್ತಿಗೆ ಹೆದರುತ್ತಾರೆ. ಅಂದಮಾತ್ರಕ್ಕೆ ಬಿಜೆಪಿಯಲ್ಲಿ ಕಾರ್ಯಕರ್ತನೆಂದರೆ ಇಷ್ಟೇ ಅಲ್ಲ. ಆತನ ಬಗ್ಗೆ ಅಲ್ಲಿ ವೈಚಾರಿಕವಾದ ಮಹಾ ವ್ಯಾಖ್ಯಾನಗಳಿವೆ. ಶಾಸ್ತ್ರಗ್ರಂಥಗಳಂತೆ ಆತನ ಗುಣ ಸ್ವಭಾವಗಳನ್ನು ಬಣ್ಣಿಸಲಾಗಿದೆ. ಆತನ ಗುರಿ-ದಾರಿಯ ಬಗ್ಗೆ ಬಿಜೆಪಿಗೆ ಜನಸಂಘದ ಕಾಲದಿಂದಲೂ ಸ್ಪಷ್ಟತೆಯಿದೆ. ಹಾಗಾಗಿ ಅಲ್ಲಿನ ನಾಯಕರೂ ಕಾರ್ಯಕರ್ತರೇ. ಪ್ರಧಾನಮಂತ್ರಿ, ರಾಷ್ಟ್ರಾಧ್ಯಕ್ಷರೂ ತಮ್ಮನ್ನು ಕಾರ್ಯಕರ್ತ ಎಂದೇ ಗುರುತಿಸಿಕೊಳ್ಳುತ್ತಾರೆ.

ಇಂಥದ್ದರ ನಡುವೆ ಸ್ವತಃ ಕಾರ್ಯಕರ್ತನೇ ಗೊಂದಲಗೊಳ್ಳುವ ಸಂದರ್ಭಗಳಿಲ್ಲವೇ? ಬಣ್ಣಬಣ್ಣದ ವ್ಯಾಖ್ಯಾನಗಳು ಬಣ್ಣಗೆಟ್ಟಿಲ್ಲವೇ? ನಮ್ಮ ಪಕ್ಷದಲ್ಲೂ ಯಾಕೆ ಹೀಗೆ? ಅವರೇಕೆ ಪುಕ್ಸಟೆ ಐಪಿಎಲ್ ಟಿಕೇಟ್ ಕೇಳಿದರು? ಇವರೇಕೆ ಬಣ್ಣಬದಲಿಸುತ್ತಾರೆ? ಮುಜ್ರಾ ಪರಂಪರೆ ಇಲ್ಲೂ ಯಾಕಿದೆ? ಅವರೇಕೆ ಅಗತ್ಯಕ್ಕಿಂತ ಹೆಚ್ಚು ಹೊಗಳಾರಂಭಿಸಿದ್ದಾರೆ? ಹಿಂದುತ್ವ ಆಚರಣೆಗಿಂತ ಪ್ರಚಾರದ ಸರಕೇಕಾಗಿದೆ? ಕಳ್ಳರೇಕೆ ಇಲ್ಲೂ ಇದ್ದಾರೆ?-ಇಂಥ ಪ್ರಶ್ನೆಗಳು ಸಹಜವಾಗಿ ಹುಟ್ಟುತ್ತವೆ. ಅವು ಹುಟ್ಟಲೇಬೇಕು. ಹುಟ್ಟದಿದ್ದರೆ ಆತನನ್ನೇ ಸಂಶಯಿಸಬೇಕು! ಆದರೆ ಇಂಥ ಅಪಸವ್ಯಗಳಿಂದ ಪಕ್ಷವನ್ನು ಅಳೆಯಬಹುದೇ? ಐಪಿಎಲ್ ಟಿಕೇಟು ಕೇಳಿದವರ ಪಕ್ಷದಲ್ಲೇ ಅದನ್ನು ನಿರಾಕರಿಸಿ ಆದರ್ಶ ಮೆರೆದವರೂ ಇದ್ದಾರೆ. ಮಂಡೆಯಲ್ಲಿ ಮೆದುಳಿಲ್ಲದವರಂತೆ ಪುಡಾರಿಗಳ ಹಿಂದೆ ತಿರುಗುವವರ ಮಧ್ಯೆ ವೈಯಕ್ತಿಕ ಜೀವನ ಕಳೆದುಕೊಂಡವರಿದ್ದಾರೆ. ಮನೆಯಿಂದ ತಂದ ಬುತ್ತಿಯನ್ನು ತಿನ್ನುವ ಬೂತ್ ಏಜಂಟನಿದ್ದಾನೆ. ವಿಚಿತ್ರವೆಂದರೆ ಇಂಥವನು ಬಿಜೆಪಿಯಲ್ಲಿ ಮಾತ್ರ ಇದ್ದಾನೆ. ಜನಸಂಘದ ನಾಯಕರು ಕಾರ್ಯಕರ್ತತನವನ್ನು ಎಷ್ಟೊಂದು ವಿಶದವಾಗಿ ವಿವರಿಸಿದ್ದಾರೆಂದರೆ ಅಪಸವ್ಯಗಳು ಹುಟ್ಟುವ ಸಂದರ್ಭಗಳನ್ನೂ ಹೇಳಿದ್ದಾರೆ. ದೇಶದ ಆಶಯಗಳನ್ನು ಪ್ರಜಾಪ್ರಭುತ್ವದ ಮೂಲಕ ಈಡೇರಿಸಲು ರಾಜಕಾರಣವೊಂದೇ ಮಾರ್ಗವಲ್ಲ ಎಂಬ ವಿಸ್ತಾರದ ನೋಟವನ್ನು ಹಿಂದಿನ ನಾಯಕರು ಹೊಂದಿದ್ದರು. ರಾಜಕಾರಣಕ್ಕೆ ಮೌಲ್ಯಗಳನ್ನು ತುಂಬಬೇಕು. ಕಾರ್ಯಕರ್ತ ಅದರ ವಾಹಕನಾಗಬೇಕು. ನಾಯಕ ಅನುಷ್ಠಾನಗೊಳಿಸಬೇಕು ಎಂಬ ಧ್ಯೇಯದಿಂದಲೇ ಜನಸಂಘ ಹುಟ್ಟಿತು. ಜನಸಂಘ ಬಿಜೆಪಿಯೂ ಆಯಿತು. ವಿಶೇಷವೆಂದರೆ ಅವರು ಹೀಗಂದಿದ್ದು ಎಲ್ಲಾ ಪಕ್ಷಗಳಿಗೆ! ಇಂದು ರಾಜಕಾರಣ ಬಹುದೂರ ಸಾಗಿದೆ. ಎಲ್ಲಾ ಪಕ್ಷಗಳೂ ತಮ್ಮ ಆದ್ಯತೆಗಳನ್ನು ಬದಲಿಸಿಕೊಂಡಿವೆ. ಅದನ್ನು ಅವರವರ ಪ್ರಾರಬ್ಧವೆಂದೇನೋ ಹೇಳಬಹುದು. ಆದರೆ ಬಿಜೆಪಿಗೆ ಹಾಗೆನ್ನುವ ಹೊತ್ತು ಬರಬಾರದು. ಅಲ್ಲಿ ಸಿದ್ಧಾಂತಕ್ಕಾಗಿ ಹಿರಿಯ ನಾಯಕರಿಂದ ಸಾಮಾನ್ಯ ಕಾರ್ಯಕರ್ತನವರೆಗೂ ಬಲಿದಾನಗಳಾಗಿವೆ. ಸ್ವಂತವನ್ನು ಮರೆತು ಧ್ಯೇಯಕ್ಕಾಗಿ ಬದುಕಿದವರಿದ್ದಾರೆ. ಉಳಿದ ಪಕ್ಷಗಳಲ್ಲಿ ಅಂಥವರಿಲ್ಲ. ಅವರೆಂದೂ ಅಧಿಕಾರಕ್ಕೇರಿದವರಲ್ಲ, ಅಧಿಕಾರಕ್ಕೇರುವವರೂ ಅಲ್ಲ. ಪುಕ್ಸಟೆ ಐಪಿಎಲ್ ಟಿಕೇಟು ಕೇಳುವ ನಾಯಕರು ಬಿಜೆಪಿಯಲ್ಲಿರಬಹುದು. ಆದರೆ ಅಂಥ ಕಾರ್ಯಕರ್ತ ಇಂದಿಗೂ ಬಿಜೆಪಿಯಲ್ಲಿಲ್ಲ.

ಪಶ್ಚಿಮ ಬಂಗಾಳದಲ್ಲಿ ಚುನಾವಣಾ ಪ್ರಕ್ರಿಯೆಗಳು ನಡೆಯುತ್ತಿರುವ ಹೊತ್ತಲ್ಲಿ ಈ ಕಾರ್ಯಕರ್ತ ಮತ್ತೆ ನೆನಪಾಗುತ್ತಾನೆ. ದೇಶದ ಯಾವ ರಾಜ್ಯಕ್ಕೂ ಹೋಲಿಸಲಾಗದ ರಾಜಕೀಯ ವಾತಾವರಣ ಬಂಗಾಳದ್ದು. ಬಿಜೆಪಿ ಕಾರ್ಯಕರ್ತ ಎಂಬ ಒಂದೇ ಕಾರಣ ಅಲ್ಲಿ ಪ್ರಾಣಕ್ಕೆ ಕಂಟಕವಾಗುತ್ತದೆ. ಇಡೀ ವ್ಯವಸ್ಥೆ ಆತನ ವಿರುದ್ಧವಿದೆ. ಆತನಿಗೆ ನೂರಾರು ಆಮಿಷಗಳಿವೆ. ಅವಕಾಶಗಳು ಆತನನ್ನು ಹುಡುಕಿ ಬರುತ್ತವೆ. ತಾನು ಬಿಜೆಪಿ ಕಾರ್ಯಕರ್ತನಲ್ಲ ಎಂದು ಹೇಳಿದರೂ ಆತ ನೆಮ್ಮದಿಯ ನಿದ್ರೆ ಮಾಡಬಹುದು. ಆದರೆ ಅದಕ್ಕಾತ ಮನಸೋತಿಲ್ಲ. ಸುಖದ ಬದುಕಿಗಿಂತ ಆತ ಕಾರ್ಯಕರ್ತತನವನ್ನೇ ಆರಿಸಿಕೊಳ್ಳುತ್ತಾನೆ. ಬಿಜೆಪಿ ಹಿಂದೆಯೂ ಆತನಿಗೇನೂ ಮಾಡಿಲ್ಲ. ಚುನಾವಣೆಯ ನಂತರ ಕೂಡ ಆತನಿಗೇನೋ ಮಾಡಿಬಿಡುತ್ತದೆಂಬ ನಂಬಿಕೆ ಆತನಿಗೂ ಇಲ್ಲ. ಆದರೂ ಆತ ಬಿಜೆಪಿ. ಆತನ ಊರಿಗೆ ಪೊಲೀಸ್ ನಾಕಾಬಂಧಿ ಹಾಕಲಾಗಿದೆ. ಆದರೂ ಆತ ದೂರದ ಡಾರ್ಜಲಿಂಗ್‌ನಿಂದ ಮೋದಿಯನ್ನು ನೋಡಲು ಕೋಲ್ಕತ್ತಾಕ್ಕೆ 20 ಗಂಟೆ ಪ್ರಯಾಣಿಸುತ್ತಾನೆ. ಮೂರು ದಿನಗಳ ಕರ್ಚುವೆಚ್ಚಗಳನ್ನೇನೂ ಆತನಿಗೆ ಪಕ್ಷ ನೀಡುವುದಿಲ್ಲ. ಏಕೆಂದರೆ ಪಶ್ಚಿಮ ಬಂಗಾಳದಲ್ಲಿನ್ನೂ ಕರ್ನಾಟಕದಂತೆ ಸಾಮ್ರಾಜ್ಯ ಕಟ್ಟಿಕೊಂಡ ನಾಯಕರಿಲ್ಲ. ಆತನಿಗೆ ಇರಾನಿನಲ್ಲೇನು ನಡೆಯುತ್ತಿದೆ ಎನ್ನುವುದು ತಿಳಿದಿಲ್ಲ. ಅದನ್ನು ತಿಳಿಯುವ ವ್ಯವಧಾನವೂ ಇಲ್ಲ. ಜೈಶಂಕರರ ರಾಜತಾಂತ್ರಿಕತೆಗೋ, ನಿರ್ಮಲಕ್ಕನ ತೆರಿಗೆ ನೀತಿಗೋ ಅವನು ಮನಸೋತಿಲ್ಲ. ಅದನ್ನು ತಿಳಿಸಲು ಪ.ಬಂಗಾಳ ಬಿಜೆಪಿ ಆತನಿಗೆ ಜಿಲ್ಲಾವಾರು ಅಭ್ಯಾಸವರ್ಗಗಳನ್ನೇನೂ ನಡೆಸಿಲ್ಲ. ಹಾಗಾಗಿ ಅವನು ದೊಡ್ಡ ಸಾಹೇಬರ ಕಣ್ಣೆದುರು ಬೀಳಲು ಸಾಹಸ ಮಾಡಿಲ್ಲ. ಆತ ನೆರೆಮನೆಯ ಪ್ರೇರಣೆಯಿಂದಲೋ ಅಥವಾ ಜಿಲ್ಲಾಧ್ಯಕ್ಷನ ವ್ಯಕ್ತಿತ್ವಕ್ಕೋ ಮಾರುಹೋಗಿ ಕಾರ್ಯಕರ್ತನಾಗಿಲ್ಲ. ಅಸಲಿಗೆ ಆತನ ನೆರೆಮನೆ, ಸಂಬಂಧಿಕರ ಮನೆ ಒಂದೋ ಇನ್ನೂ ಕುಟುಕು ಜೀವವಿಟ್ಟುಕೊಂಡ ಕಮ್ಯುನಿಸ್ಟ್ ಅಥವಾ ನುಂಗಲು ಬಾಯಿತೆರೆದು ಕುಳಿತ ತೃಣಮೂಲ! ಆ ಬಂಗಾಳಿ ಕಾರ್ಯಕರ್ತ ಶ್ಯಾಮಪ್ರಸಾದ ಮುಖರ್ಜಿ ಹೆಸರಿಗಿಂತಲೂ ಚಾರೂ ಮಜುಂದಾರನ ಹೆಸರನ್ನು ಕೇಳಿದವನು. ಆತ ಭಾಷಣಕಾರನಲ್ಲ. ಮತದಾರರ ಮನವೊಲಿಸಬಲ್ಲ ಚಾಣಾಕ್ಷ್ಯನಲ್ಲ. ಆದರೂ ಆತ ಬದಲಾವಣೆಗೆ ಹಂಬಲಿಸುವವನು. ತನ್ನ ಪರಿವರ್ತನೆ ಸುಧಾರಣೆಯೊಂದಕ್ಕೆ ಕಾರಣವಾಗುತ್ತದೆ ಎಂದು ನಂಬಿದವನು. ಆತ ಯಾವುದರಲ್ಲೂ ಪರಿಣತನಲ್ಲ. ಆದರೆ ಎಲ್ಲವನ್ನೂ ಮಾಡುವವನು. ತನ್ನ ಪ್ರಾಣಕ್ಕೆ ಕಂಟಕವಿದೆ ಎಂದು ತಿಳಿದೂ ಆತ ಬಿಜೆಪಿಗನಾದವನು. ತನ್ನಂತೆ ಇತರರೂ ಬಿಜೆಪಿಯವನಾಗಬೇಕೆಂಬುದು ಮಾತ್ರ ಅವನ ಆಶಯ. ಅದೇ ಆತನ ಸಿದ್ಧಾಂತ, ಪ್ರಣಾಳಿಕೆ. ಆತನಿಗೆ ಪಕ್ಷದಲ್ಲಿ ಪ್ರಭಾವಿಗಳಾರು ಎಂಬುದು ಇಂದಿಗೂ ತಿಳಿದಿಲ್ಲ. ಎಷ್ಟೋ ಪ್ರಭಾವಿ ನಾಯಕರು ಆತನ ಮನೆಗೆ, ಗ್ರಾಮಕ್ಕೆ ಬಂದುಹೋದರೂ ಅವರನ್ನು ಆತ ಗುರುತ್ತಿಸಿಲ್ಲ. ಭಾರತ ಬದಲಾಗಿದೆ, ಏನೋ ಹೊಸತನ ಹರಿಯುತ್ತಿದೆ, ಆದರೆ ತನ್ನ ಬಂಗಾಳ ನಿಂತ ನೀರಾಗಿದೆ ಎಂಬುದನ್ನು ಮಾತ್ರ ಆತ ಬಲ್ಲ. ಆತನಿಗೆ ಜವಾಬ್ದಾರಿಯ ಹಂಗಿಲ್ಲ. ತನ್ನಂಥವನಿಗೇ ಬಿಜೆಪಿಯಲ್ಲಿ ದೇವದುರ್ಲಭರೆಂದು ಕರೆಯುತ್ತಾರೆಂಬುದು ಕೂಡ ಆತನಿಗೆ ತಿಳಿದಿಲ್ಲ.

ಇಂಥ ಕಾರ್ಯಕರ್ತರ ಪಡೆ ಪ.ಬಂಗಾಳದಲ್ಲಿ ಹಿಂದೆಂದಿಗಿಂತಲೂ ಇಂದು ಹೆಚ್ಚು ಕಾಣುತ್ತಿದೆ. ಯಾವಾಗಲೂ ಬಂಗಾಳದ ಚುನಾವಣೆಗಳನ್ನು ದೇಶ ವಿಶೇಷವಾಗಿ ಗಮನಿಸುತ್ತದೆ. ಎಷ್ಟು ಮತಕೇಂದ್ರಗಳ ಮೇಲೆ ದಾಳಿಯಾಯಿತು ಎಂಬುದಕ್ಕಾದರೂ ದೇಶ ಅಲ್ಲಿನ ಚುನಾವಣೆಗಳ ಮೇಲೆ ಕುತೂಹಲವಿಟ್ಟುಕೊಳ್ಳುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಬಿಜೆಪಿ ಕಾರ್ಯಕರ್ತನ ಕಾರಣಕ್ಕೆ ಪ.ಬಂಗಾಳದ ಚುನಾವಣೆ ದೇಶದ ಗಮನ ಸೆಳೆಯುತ್ತಿದೆ. 2016ರ ವಿಧಾನಸಭಾ ಚುನಾವಣೆಯಲ್ಲೇ ಬಂಗಾಳದ ಬಿಜೆಪಿ ಕಾರ್ಯಕರ್ತ ಬಿರುಸುಗೊಂಡ. ಸಿಕ್ಕಿದ್ದು ಮೂರೇ ಸೀಟುಗಳಾದರೂ ಪಡೆದ ಮತಗಳ ಪ್ರಮಾಣದಲ್ಲಿ ಏರಿಕೆಯಾಯಿತು. 2018ರಲ್ಲಿ ಪಕ್ಷಗಳ ಚಿಹ್ನೆಗಳಡಿ ನಡೆಯುವ ಪಂಚಾಯತ್ ಚುನಾವಣೆಗಳಲ್ಲಿ ಬಿಜೆಪಿ ಕಾರ್ಯಕರ್ತ ತೃಣಮೂಲ ಕಾಂಗ್ರೆಸಿಗರ ದೌರ್ಜನ್ಯಗಳನ್ನು ಮೆಟ್ಟಿ ನಿಲ್ಲಲಾರಂಭಿಸಿದ. ಆ ಹೊತ್ತಲ್ಲಿ ಆತನ ರಕ್ಷಣೆಗಿದ್ದವರು ರಾಜ್ಯದಲ್ಲಿ ಮೂವರು ಶಾಸಕರು ಎಂಬುದು ಗಮನಾರ್ಹ! 2021ರಲ್ಲಿ 77 ಸೀಟುಗಳನ್ನು ಪಡೆದಿದ್ದರ ಜೊತೆಗೆ ಶೇ. 38ರಷ್ಟು ಮತಗಳು ಬಿಜೆಪಿಗೆ ಸಿಕ್ಕವು. 2024ರ ಲೋಕಸಭಾ ಚುನಾವಣೆಗಳಲ್ಲಿ 94 ಸೀಟುಗಳನ್ನು ಪಡೆಯಿತು. ಪ್ರತೀ ಚುನಾವಣೆಗಳಲ್ಲೂ ಬಿಜೆಪಿ ಕಾರ್ಯಕರ್ತ ಕೊಲೆಯಾದ. ಎಷ್ಟೋ ಗ್ರಾಮಗಳಲ್ಲಿ ಕಾರ್ಯಕರ್ತರನ್ನು ಮತದಾನ ಕೇಂದ್ರಕ್ಕೆ ಹೋಗಲೇ ಬಿಡಲಿಲ್ಲ. ಚುನಾವಣಾ ಪ್ರಚಾರ, ಚುನಾವಣಾ ದಿನ, ಫಲಿತಾಂಶ ದಿನ, ಫಲಿತಾಂಶದ ನಂತರ ಆತನ ಮೇಲೆ ಹಲ್ಲೆಗಳಾದವು. ಕೊಲೆಗಳು ನಡೆದವು. ಆತನ ಗದ್ದೆಗೆ ಬೆಂಕಿ ಇಡಲಾಯಿತು. ಎತ್ತುಗಳನ್ನು ಹತ್ಯೆ ಮಾಡಲಾಯಿತು. ಇವೆಲ್ಲವನ್ನೂ ಮಾಧ್ಯಮಗಳು ಸಣ್ಣ ಸುದ್ದಿಗಳಾಗಿ ಪ್ರಕಟಿಸಿ ಕೈತೊಳೆದುಕೊಳ್ಳುತ್ತವೆ. ಆದರೆ ಎಲ್ಲವೂ ಪೊಲೀಸ್ ಮತ್ತು ತೃಣಮೂಲ ಕಾಂಗ್ರೆಸಿನ ಗುಂಡಾಗಳಿಂದಲೇ ನಡೆಯುತ್ತವೆ ಎಂಬುದು ಹೊರಜಗತ್ತಿಗೆ ತಿಳಿಯುವುದಿಲ್ಲ. ಏಕೆಂದರೆ ಬಹುತೇಕ ಪ್ರಕರಣಗಳು ದಾಖಲಾಗುವುದಿಲ್ಲ. ಮನೆಯಲ್ಲೊಬ್ಬ ಬಿಜೆಪಿ ಕಾರ್ಯಕರ್ತನಿದ್ದರೆ ಆ ಮನೆಯ ಹೆಣ್ಣುಮಕ್ಕಳ ಮೇಲೆ ಕೂಡ ದೌರ್ಜನ್ಯ ಎಸಗಲಾಗುತ್ತದೆ. ಇಂಥ ಪ್ರಕರಣಗಳು ಪ.ಬಂಗಳದ ಪ್ರತೀ ವಿಧಾನಸಭಾ ಕ್ಷೇತ್ರಗಳಲ್ಲಿ ಕನಿಷ್ಠ ಹತ್ತಾದರೂ ಇರುತ್ತವೆ ಎಂದರೆ ಪರಿಸ್ಥಿತಿ ಅದೆಷ್ಟು ಭಯಾನಕವಾಗಿರಬಹುದು? ಪೂರ್ವ ಭಾಗದ ದಿನಾಟಾ ವಿಧಾನಸಭಾ ಕ್ಷೇತ್ರದಲ್ಲಿ ಶೇ. 60ರಷ್ಟು ಜನರು ಇಂದಿಗೂ ರಾತ್ರಿ ಮನೆಯಲ್ಲಿ ಮಲಗುತ್ತಿಲ್ಲ ಎಂದರೆ ಅಲ್ಲಿ ಪ್ರಜಾಪ್ರಭುತ್ವ ಇದೆ ಎನ್ನುವ ಸಂಶಯ ಬರುತ್ತದೆ. ಇಷ್ಟೆಲ್ಲಾ ಇದ್ದರೂ ಪ.ಬಂಗಾಳದಲ್ಲಿ ಕಾರ್ಯಕರ್ತ ಸಭೆ ನಡೆಸುತ್ತಾನೆ. ಮೆರವಣಿಗೆ ಹೊರಡುತ್ತಾನೆ, ಅಭ್ಯರ್ಥಿಗಳನ್ನು ಬೆಂಬಲಿಸುತ್ತಾನೆ. ಕೋಲ್ಕೊತ್ತಾ ರ್‍ಯಾಲಿಗೆ ಹೋಗುತ್ತಾನೆ. ಗೂಂಡಾಗಳಿಂದ ಸತ್ತವನ ಹೆಂಡತಿ ಪ್ರಚಾರದಲ್ಲಿ ತೊಡಗಿಸಿಕೊಳ್ಳುತ್ತಾಳೆ!

ಕಾರ್ಯಕರ್ತತನಕ್ಕೆ ಅನೇಕ ಭಾಷ್ಯಗಳಿರಬಹುದು. ಆದರೆ ಸ್ವರೂಪ ಒಂದೆ. ಮಮತಾ ಬ್ಯಾನರ್ಜಿ ಸರ್ಕಾರದ ಭ್ರಷ್ಟಾಚಾರ ಮತ್ತು ಮೇರೆಮೀರಿದ ಮುಸ್ಲಿಂ ತುಷ್ಟೀಕರಣದ ಬಿಸಿ ಹಿಂದುಗಳ ಬುಡಕ್ಕೆ ತಾಕುತ್ತಿದೆ. ಬಾಂಗ್ಲಾ ಮಿಯಾಗಳ ಅಟ್ಟಹಾಸ ಕೊನೆಯಾಗಲೇಬೇಕೆಂದು ಆತ ಬಯಸಿದ್ದಾನೆ. ಅದಕ್ಕೆ ಪರಿಹಾರ ಬಿಜೆಪಿಯಲ್ಲಿ ಮಾತ್ರ ಇದೆ ಎಂದು ಆತನಿಗನಿಸಿದೆ. ಜೊತೆಗೆ ಕಾಂಗ್ರೆಸ್-ಕಮ್ಯುನಿಸ್ಟ್-ತೃಣಮೂಲಗಳಿಂದ ನಂಬಿ ಕೆಟ್ಟೆವು ಎಂಬುದು ಆತನಿಗೆ ಅರ್ಥವಾಗಿದೆ. ಎಲ್ಲಾ ವ್ಯವಸ್ಥೆಗಳೂ ಬಾಂಗ್ಲಾ ಮಿಯಾಗಳ ಕೈಯಲ್ಲಿದ್ದರೆ ಏನಾಗುತ್ತದೆ ಎಂಬುದನ್ನು ಬಂಗಾಳ ಅರಿತ ಪರಿಣಾಮ ಈ ಚುನಾವಣೆ ಹಿಂದಿಗಿಂತ ಮಹತ್ವದ್ದು. ಇಡೀ ದೇಶ ಧುರಂಧರ್ ಸಿನೆಮಾದ "ಗುಸ್ ಕೆ ಮಾರೇಂಗೆ" ಡೈಲಾಗಿಗೆ ಮನಸೋಲುತ್ತಿದ್ದರೆ ಅತ್ತ ಬಂಗಾಳ ಹಳ್ಳಿಗಳಿಗೆ ನುಗ್ಗಿ, ಗಲಭೆಯೆಬ್ಬಿಸಿ ಬಾಂಗ್ಲಾ ಸೇರಿಕೊಳ್ಳುವ ವಾಸ್ತವವನ್ನು ಅನುಭವಿಸುತ್ತಿದೆ.

ಬಂಗಾಳದಲ್ಲಿ ಹೀಗೆಲ್ಲಾ ಇರುವುದರಿಂದ ಬಂಗಾಳ ಬಿಜೆಪಿಯಲ್ಲಿನ್ನೂ ಕಾರ್ಯಕರ್ತತನವಿದೆ. ಆದ್ದರಿಂದ ಶಕ್ತಿಯಿದೆ. ಬಹುಶಃ ಕಾರ್ಯಕರ್ತತನಕ್ಕೆ ಎಲ್ಲಾ ಮಾನದಂಡಗಳಿಗಿಂತ ಸವಾಲುಗಳಿರುವುದೇ ಮುಖ್ಯವೇನೋ! ವಾಸ್ತವವಾಗಿ ಸವಾಲುಗಳು ಬಂಗಾಳದ ಹೊರಗೂ ಇದೆ. ಆದರೆ ರಾಜಕಾರಣದಲ್ಲಿ ಮೌಲ್ಯಗಳನ್ನು ತಿಳಿಯದಿದ್ದರೆ ಸವಾಲುಗಳೂ ಗೋಚರಿಸು ವುದಿಲ್ಲ. ಹಾಗೆ ಸವಾಲುಗಳು ಗೋಚರವಾಗದಿದ್ದರೆ ಬಕೇಟುಗಳೇ ಕಾರ್ಯಕರ್ತತನದಂತೆ ಕಾಣಬಹುದು. ಕಾರ್ಯಕರ್ತನೂ ಬಕೇಟಿಗೆ ದಾಸನಾಗಬಹುದು. ಹಾಗಾಗಿ ಸಿಟುಗಳ ಪಟ್ಟಿಗಿಂತಲೂ ಬಂಗಾಳದ ಚುನಾವಣೆ ಮಹತ್ವದ್ದಾಗುತ್ತದೆ. ಉಳಿದ ರಾಜ್ಯಗಳಿಗೆ ಪಾಠವಾಗುತ್ತದೆ.

# ಇರಾನ್: ಅಮೆರಿಕದ ಭೂ ದಾಳಿಗೆ ಎದುರಾಗುವ ಸವಾಲುಗಳು

ಅಶ್ವಿನ್ ಬಿಲ್ವಪತ್ರ

ಅಮೆರಿಕವು 2002ರಲ್ಲಿ 250 ಮಿಲಿಯ ಡಾಲರ್ ವ್ಯಯಿಸಿ ಮಹತ್ವಾಕಾಂಕ್ಷಿ 'ವಾರ್‌ಗೇಮ್' ಒಂದನ್ನು ಪ್ರಾಯೋಜಿಸಿತು. ಅಮೆರಿಕದ ಮಾಜಿ ಮರೀನ್ ಲೆಫ್ಟಿನೆಂಟ್ ಜನರಲ್ ಪಾಲ್ ವಾನ್ ರೈಪರ್ ಎಂಬಾತನಿಗೆ ಒಂದು ಗುರಿ ನೀಡಲಾಯಿತು-ಪರ್ಷಿಯನ್ ಗಲ್ಫ್‌ನಲ್ಲಿ ಕಾಲ್ಪನಿಕ ದೇಶವೊಂದು ಅಮೆರಿಕದ ಸೇನೆಯನ್ನು ಯುದ್ಧದಲ್ಲಿ ಸೋಲಿಸಲು ಪ್ರಯತ್ನಿಸಬೇಕು.

ಫಲಿತಾಂಶವೇನು ಗೊತ್ತೆ ? ಆತ ಗೆದ್ದ!

ಸಂದೇಶ ರವಾನೆ ವೈರಿ ರಾಷ್ಟ್ರಕ್ಕೆ ತಿಳಿಯಬಾರದೆಂದು ಆತ ರೇಡಿಯೋ ಬದಲಾಗಿ ಮೋಟಾರ್ ಸೈಕಲ್‌ಗಳನ್ನು ಬಳಸಿದ್ದ. ಮಸೀದಿಯಿಂದ ಪ್ರಾರ್ಥನೆಗೆ ನೀಡುವ ಕರೆಯ ಮೂಲಕ ಆತ ತನ್ನ ಸೈನ್ಯಕ್ಕೆ ಗುಪ್ತ ಸಂಕೇತಗಳನ್ನು ರವಾನಿಸಿದ್ದ. ಯುದ್ಧದ ಸಮಯ ಬಂದಾಗ ಆತ 100 ಸಣ್ಣ ಸ್ಪೀಡ್‌ಬೋಟ್‌ಗಳನ್ನು ಕಳಿಸಿ ಹತ್ತು ನಿಮಿಷಗಳೊಳಗೆ 16 ಅಮೆರಿಕನ್ ಯುದ್ಧ ನೌಕೆಗಳನ್ನು ಮುಳುಗಿಸಿದ್ದ. ಆತನ ದಾಳಿಯಲ್ಲಿ ಸತ್ತ ಅಮೆರಿಕನ್ ಸೈನಿಕರ ಸಂಖ್ಯೆ ಅಂದಾಜು 20,000.

ಬಳಿಕ ಅಮೆರಿಕದ ಮಿಲಿಟರಿ ಈ ಗೇಮ್‌ನ ಸಿಮುಲೇಶನ್ ಬದಲಿಸಿತು. ಮುಳುಗಿದ ಹಡಗುಗಳನ್ನು ಮತ್ತೆ ತೇಲಿಸಿತು. ಇಂತಹ ತಂತ್ರವನ್ನು ಬಳಸುವಂತಿಲ್ಲ ಎಂದು ಆತನಿಗೆ ಹೇಳಿತು. ಆತ ಅದಕ್ಕೊಪ್ಪದೆ ಗೇಮ್‌ನಿಂದ ಹಿಂದೆ ಸರಿದ.

ಈಗ ಇರಾನ್‌ನಲ್ಲಿ ಸಮರ ಸ್ಫೋಟಿಸಿರುವಾಗ ಈ 'ವಾರ್ ಗೇಮ್' ಹೇಗೆ ಪ್ರಾಸಂಗಿಕವಾಗಬಲ್ಲುದು ಎಂದು ಚಿಂತಿಸುತ್ತಿದ್ದೇನೆ.

**ಈಗೇನು ನಡೆಯುತ್ತಿದೆ...**

ಮಾರ್ಚ್ ಅಂತ್ಯದ ವೇಳೆಗೆ ಅಮೆರಿಕವು 50,000 ಸೈನಿಕರನ್ನು ಮತ್ತು 200 ಯುದ್ಧ ವಿಮಾನಗಳನ್ನು ಇರಾನ್ ಸಮೀಪ ನಿಯೋಜಿಸಿದೆ. ಮೂರು ವಿಮಾನ ವಾಹಕ ನೌಕೆಗಳು ಇರಾನ್ ನತ್ತ ತೆರಳಿವೆ.ಅಬ್ರಹಾಂ ಲಿಂಕನ್ ಸಮರ ನೌಕೆ ಜನವರಿಯಿಂದ ಅರೇಬಿಯನ್ ಸಮುದ್ರದಲ್ಲಿದೆ. ಮತ್ತೊಂದು ಸಮರ ನೌಕೆ ಗ್ರೀಸ್‌ನ ಸೌದಾ ಕೊಲ್ಲಿಯಲ್ಲಿದೆ. ಇನ್ನೂ ಒಂದು ನೌಕೆ ಕೊಲ್ಲಿಯತ್ತ ಸಾಗುತ್ತಿದೆ. ಅಂದರೆ ಮೂರು ಸಮರ ನೌಕೆಗಳು ಏಕಕಾಲದಲ್ಲಿ ಕೊಲ್ಲಿ ಪ್ರದೇಶದಲ್ಲಿದ್ದು, ಅಮೆರಿಕ ಈ ರೀತಿ 3 ಸಮರ ನೌಕೆ ನಿಯೋಜಿಸಿರುವುದು ಕಳೆದ 20 ವರ್ಷಗಳಲ್ಲಿ ಇದೇ ಮೊದಲು.

ಇದರೊಂದಿಗೆ, ಮರೀನ್ ಫೋರ್ಸ್ ಸೈನಿಕರನ್ನು ಹೊತ್ತ ಎರಡು ನೌಕೆಗಳು ಕೊಲ್ಲಿಯಲ್ಲಿ ಬೀಡುಬಿಟ್ಟಿವೆ. 4,000 ಸೈನಿಕರನ್ನು ಹೊತ್ತ ಯುಎಸ್‌ಎಸ್ ಬಾಕ್ಸರ್ ನೌಕೆಯು ಮೂರು ವಾರಗಳ ಹಿಂದೆಯೆ ಕ್ಯಾಲಿಫೋರ್ನಿಯಾದಿಂದ ತೆರಳಿದೆ. ಮತ್ತೊಂದು ನೌಕೆಯಲ್ಲಿ 3500 ಸೈನಿಕರು ಕೊಲ್ಲಿಯತ್ತ ತೆರಳಿದ್ದಾರೆ. ಕ್ಷಿಪ್ರ ಕಾರ್ಯಾಚರಣೆ ನಡೆಸುವ ಸಾಮರ್ಥ್ಯವುಳ್ಳ ವಿಶೇಷ ಪಡೆ ಕೂಡಾ ಸಮರಕ್ಕೆ ಸಜ್ಜಾಗಿ ನಿಂತಿದೆ.

ಆರು ಬಿ-2 ಬಾಂಬರ್‌ಗಳು ಹಿಂದೂ ಮಹಾಸಾಗರದ ಡಿಯಾಗೋ ಗಾರ್ಸಿಯಾ ದ್ವೀಪದಲ್ಲಿವೆ. ಈ ವಿಮಾನಗಳು ರಾಡಾರ್ ಕಣ್ಣಿಗೆ ಸಿಲುಕದೆ ಸಂಚರಿಸಬಲ್ಲವು. 60 ಮೀಟರ್ ನೆಲದೊಳಕ್ಕೆ ತೂರಿ ಸ್ಫೋಟಿಸಬಲ್ಲ ಬಾಂಬುಗಳನ್ನು ಇವು ಹೊಂದಿವೆ. ಯುದ್ಧ ನೌಕೆಗಳು ಮತ್ತು ಸೈನಿಕರನ್ನು ಯಾವುದೇ ಕಾರಣವಿಲ್ಲದೆ ಈ ರೀತಿ ನಿಯೋಜಿಸುವುದಿಲ್ಲ.

ಅಮೆರಿಕವು ಇರಾನ್ ಸಂಗ್ರಹಿಸಿಟ್ಟಿರುವ ಪರಮಾಣು ಸಾಧನಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲಿದೆ ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋ ರುಬಿಯೋ ಹೇಳಿದ್ದಾರೆ. ಅವರು ಸಂಧಾನ ಅಥವಾ ನಿರ್ಬಂಧದ ಬಗ್ಗೆ ಮಾತನ್ನಾಡುತ್ತಿಲ್ಲ. ಸೈನ್ಯವನ್ನೇ ಕಳಿಸಿ ಯುರೇನಿಯಂ ವಶಪಡಿಸಿಕೊಳ್ಳುವ ಸಂಕೇತ ನೀಡುತ್ತಿದ್ದಾರೆ.ಇತ್ತ ಇರಾನಿನ ಪ್ರಮುಖ ಪತ್ರಿಕೆ ಕೂಡಾ "ನರಕಕ್ಕೆ ಸ್ವಾಗತ" ಎಂಬ ತಲೆಬರಹ ಪ್ರಕಟಿಸಿ ಅಮೆರಿಕದ ಭೂದಾಳಿಯನ್ನು ತಾನು ನಿರೀಕ್ಷಿಸುತ್ತಿರುವ ಸಂಕೇತ ನೀಡಿದೆ.

ಇರಾನ್‌ನ ವಿದೇಶಾಂಗ ಸಚಿವರು "ಅಮೆರಿಕವು ಕಳೆದ ಎರಡು ದಶಕಗಳಲ್ಲಿ ಅನುಭವಿಸಿದ ಸೋಲಿನ ಬಗ್ಗೆ ನಾವು ಸಾಕಷ್ಟು ಅಧ್ಯಯನ ನಡೆಸಿದ್ದೇವೆ. ನಮ್ಮ ಸೇನೆಯನ್ನು ಅದಕ್ಕೆ ತಕ್ಕಂತೆ ಸಿದ್ಧಗೊಳಿಸಿದ್ದೇವೆ" ಎಂದು ಹೇಳಿದ್ದಾರೆ.

**ನಿರ್ದಿಷ್ಟ ಗುರಿ ಸಾಧನೆಯ ಉದ್ದೇಶ**

ಅಮೆರಿಕವು ಈಗ ಇರಾನಿನ ಸುತ್ತ ನಿಯೋಜಿಸಿರುವ ಪಡೆಗಳು ಇರಾನನ್ನು ವಶಪಡಿಸಿಕೊಂಡು ಅಲ್ಲೇ ತಳವೂರಲು ಇರುವಂತಹುದಲ್ಲ. ಈ ಪಡೆಗಳು ಕ್ಷಿಪ್ರ ಕಾರ್ಯಾಚರಣೆ ನಡೆಸಿ ತಮ್ಮ ಗುರಿಗಳನ್ನು ಸಾಧಿಸಿ ತಕ್ಷಣ ಅಲ್ಲಿಂದ ವಾಪಸ್ ಬರುವ ಸಾಮರ್ಥ್ಯ ಹೊಂದಿರುವಂತಹವು.

ಅದರಂತೆ, ಅಮೆರಿಕದ ದಾಳಿಯ ಮೊದಲ ಗುರಿ ಖರ್ಗ್ ದ್ವೀಪ ಆಗಿರುವ ಸಾಧ್ಯತೆಗಳಿವೆ. ಇರಾನ್ ಕರಾವಳಿಯಿಂದ 15 ಮೈಲು ದೂರ ಇರುವ ಈ ದ್ವೀಪವು ಇರಾನಿನ ತೈಲ ರಫ್ತಿನ ಶೇ. 90ರಷ್ಟು ಸಂಗ್ರಹ ಹೊಂದಿದೆ. ಅಮೆರಿಕದ ಮರೀನ್ ಪಡೆ ಒಂದು ಗಂಟೆಯೊಗೆ ಈ ದ್ವೀಪವನ್ನು ತಲುಪಬಲ್ಲುದು.



ಅಮೆರಿಕದ ಎರಡನೇ ಗುರಿ ಖೇಶಂ ದ್ವೀಪವಾಗಿರುವ ಸಾಧ್ಯತೆಯಿದೆ. ಹೊರ್ಮುಜ್ ಜಲಸಂಧಿಯಲ್ಲಿರುವ ಈ ದ್ವೀಪದಲ್ಲಿ ಇರಾನ್ ಹಡಗುನಿರೋಧಕ ಕ್ಷಿಪಣಿಗಳನ್ನು ಭೂಗತ ಸುರಂಗಗಳಲ್ಲಿ ತುಂಬಿಸಿಟ್ಟಿದೆ. ಇವುಗಳನ್ನು ವಶಪಡಿಸಿಕೊಂಡರೆ ಹೊರ್ಮುಜ್ ಜಲಸಂಧಿ ಮುಚ್ಚುವ ಇರಾನ್‌ನ ಸಾಮರ್ಥ್ಯ ಕುಸಿದಂತಾಗುತ್ತದೆ.

"ಇಂತಹ ಕಾರ್ಯಾಚರಣೆಯನ್ನು ಸಮರ್ಥವಾಗಿ ಸಾಧಿಸಬಹುದಾಗಿದೆ. ಎಷ್ಟು ಕಾಲ ಹಿಡಿಯಬಹುದು ಎಂಬುದಷ್ಟೇ ಪ್ರಶ್ನೆ" ಎಂದು ಅಮೆರಿಕದ ಮಾಜಿ ವೈಸ್ ಅಡ್ಮಿರಲ್ ಕೆವಿನ್ ಡೊನೆಗನ್ ಹೇಳುತ್ತಾರೆ.

**ಪೂರ್ಣ ಪ್ರಮಾಣದ ಭೂದಾಳಿಯಾದರೆ...**

ಪೂರ್ಣ ಪ್ರಮಾಣದ ಭೂದಾಳಿ ನಡೆಸಲು ಪರಿಸ್ಥಿತಿ ಸಂಕೀರ್ಣವಾಗಿದೆ. ಇರಾನ್‌ಗೆ ದಾಳಿ ನಡೆಸುವುದಾದರೆ ಆರಂಭಿಕ ಹಂತದಲ್ಲೇ ಕನಿಷ್ಠ 5 ಲಕ್ಷ ಸೈನಿಕರು ಬೇಕು. ಪ್ರಸ್ತುತ ಅಮೆರಿಕದಲ್ಲಿ ಇರುವುದು 4,85,000 ಸೈನಿಕರು.

ಈ ಹಿಂದೆ ಇರಾಕ್‌ಗೆ ನುಗ್ಗಲು ಅಮೆರಿಕಕ್ಕೆ ಮೂರು ವಾರ ಬೇಕಾಗಿತ್ತು. ಇರಾನ್ ಇರಾಕ್‌ಗಿಂತ ನಾಲ್ಕು ಪಟ್ಟು ದೊಡ್ಡ ರಾಷ್ಟ್ರ. ಜತೆಗೆ ಇರಾಕಿನಂತೆ ಸಮತಟ್ಟು ಪ್ರದೇಶವಾಗಿರದೆ ಗುಡ್ಡಗಾಡುಗಳಿಂದ ತುಂಬಿರುವ ಪ್ರದೇಶ.ಪಶ್ಚಿಮದಲ್ಲಿ ಜಾಗ್ರೋಸ್ ಪರ್ವತಶ್ರೇಣಿ 1,600 ಕಿ.ಮೀ. ವ್ಯಾಪಿಸಿದೆ. ಇರಾಕಿನ ಕಡೆಯಿಂದ ನುಗ್ಗಬೇಕಾದರೆ ಇದೇ ದಾರಿ ಬಳಸಬೇಕಾಗುತ್ತದೆ. ಕಡಿದಾದ ದಾರಿ, ಮೈಕೊರೆಯು ಚಳಿ ಮುಂತಾದ ಪ್ರತಿಕೂಲ ಸನ್ನಿವೇಶಗಳನ್ನು ಸೈನ್ಯವು ಎದುರಿಸಬೇಕಾಗುತ್ತದೆ. 2003ರಲ್ಲಿ ಅಮೆರಿಕನ್ ಪಡೆಗಳು ಸಮತಟ್ಟಾದ ಇರಾಕ್‌ನಲ್ಲೇ ಬಾಗ್ದಾದ್ ತಲುಪಲು ಮೂರು ವಾರ ತೆಗೆದುಕೊಂಡಿದ್ದವು. ಆದರೆ ಇರಾನ್‌ನಲ್ಲಿ ಈ ರೀತಿ ನುಗ್ಗಲು ಎಂಟು ಪಟ್ಟು ಹೆಚ್ಚು ಕಾಲಾವಧಿ ಬೇಕಾದೀತು ಎಂದು ಹೇಳಲಾಗಿದೆ.ಅಮೆರಿಕವು ಇರಾನ್ ಮೇಲೆ ದಾಳಿ ಮಾಡುವುದಾದರೆ ಮೂರು ದಿಕ್ಕಿನಿಂದ ಮಾಡಬೇಕಾಗುತ್ತದೆ. ದಕ್ಷಿಣದಲ್ಲಿ ಸಮುದ್ರ ಮುಖೇನ ಪ್ರವೇಶಿಸಿದರೆ, ಪಶ್ಚಿಮದಲ್ಲಿ ಇರಾಕ್ ಗಡಿಯ ಮೂಲಕ ಒಳನುಗ್ಗಬೇಕು. ಮೂರನೆಯದಾಗಿ ವಾಯುಪ್ರದೇಶದ ಮೂಲಕ ಇರಾನ್‌ನೊಳಗೆ ಸೈನಿಕರನ್ನಿಳಿಸಬೇಕು.ಆದರೆ ಕಳೆದ 20 ವರ್ಷಗಳಿಂದ ಇರಾನ್ ಸೈನ್ಯವು ಇಂತಹ ಸಂಭವನೀಯ ದಾಳಿಯನ್ನು ಎದುರಿಸಲೆಂದೇ ಸಜ್ಜಾಗಿ ನಿಂತಿರುವುದನ್ನು ಮರೆಯುವಂತಿಲ್ಲ. ಇಂತಹ ದಾಳಿ ನಡೆದಲ್ಲಿ ಅಮೆರಿಕದ ಕಡೆಯಿಂದ ಸಾವಿರಾರು ಸೈನಿಕರು ಸಾಯಬಹುದೆಂದು ಅಂದಾಜಿಸಲಾಗಿದೆ.ಇರಾನ್ ಸೈನಿಕರ ಮತ್ತು ನಾಗರಿಕರ ಸಾವು ಅದಕ್ಕಿಂತಲೂ ದೊಡ್ಡ ಪ್ರಮಾಣದಲ್ಲಿ ಆಗಬಹುದು.ಇರಾನ್-ಇರಾಕ್ ಸಮರದ ವೇಳೆ ಇರಾಕ್ ಗಡಿ ಪ್ರದೇಶದಲ್ಲಷ್ಟೇ ನಡೆಸಿದ ದಾಳಿಯಲ್ಲಿ ಎಂಟು ವರ್ಷಗಳ ಅವಧಿಯಲ್ಲಿ 10 ಲಕ್ಷ ಜನರು ಸಾವಿಗೀಡಾಗಿದ್ದರು. ಹಾಗಿದ್ದೂ ಇರಾಕ್‌ಗೆ ಇರಾನ್‌ನ ಗಡಿ ಭೇದಿಸಿ ಮುನ್ನುಗ್ಗಲು ಆಗಿರಲಿಲ್ಲ.

> ಅಮೆರಿಕವು ಇರಾನಿನ ಮೇಲೆ ಭೂದಾಳಿ ನಡೆಸಿದರೆ ಸುಲಭ ಜಯ ನಿರೀಕ್ಷಿಸುವಂತಿಲ್ಲ...

**ಇರಾನಿನ ಸಿದ್ಧತೆ**

ಸದ್ದಾಂ ಹುಸೇನ್ ಆಡಳಿತವು ಪತನಗೊಂಡ ಬಳಿಕ ಇರಾನ್ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಅವಲೋಕಿಸುತ್ತಾ ಬಂದಿದೆ. ಸಾಮಾನ್ಯವಾಗಿ ದೇಶದ ಉನ್ನತ ಮುಖಂಡನನ್ನು ಕೊಂದರೆ ಅಲ್ಲಿಗೆ ಯುದ್ಧ ಮುಗಿದಂತೆ. ಅಂತಹ ಸಂಭವನೀಯ ಪರಿಸ್ಥಿತಿ ಏರ್ಪಡದಂತೆ ಇರಾನ್ ಮಿಲಿಟರಿ ಪರ್ಯಾಯ ವ್ಯವಸ್ಥೆ ಮಾಡಿದೆ. ಇದನ್ನು ಇರಾನ್ ಮೊಸಾಯಿಕ್ ರಕ್ಷಣಾ ವ್ಯವಸ್ಥೆ ಎಂದು ಬಣ್ಣಿಸುತ್ತಿದೆ. ಇರಾನ್‌ನ ಮಿಲಿಟರಿಯು 32 ಸ್ವತಂತ್ರ ಪ್ರಾದೇಶಿಕ ಘಟಕಗಳಾಗಿ ವಿಭಜಿಸಲ್ಪಟ್ಟಿದ್ದು, ಪ್ರತಿಯೊಂದು ಘಟಕವೂ ತನ್ನದೇ ಆದ ಶಸ್ತ್ರಾಸ್ತ್ರಗಳನ್ನು, ಗುಪ್ತಚರ ಕೇಂದ್ರಗಳನ್ನು ಮತ್ತು ಉನ್ನತ ಮಟ್ಟದಿಂದ ಆದೇಶ ಪಡೆಯದೇ ಹೋರಾಟ ಮುಂದುವರಿಸುವ ಅಧಿಕಾರವನ್ನು ಹೊಂದಿದೆ. ಇರಾನ್‌ನಲ್ಲಿ ಪರಮೋಚ್ಚ ನಾಯಕ ಖಮೇನಿ ಹತ್ಯೆಯಾದ ಹತ್ತು ದಿನದೊಳಗೆ ಅವರ ಪುತ್ರನನ್ನು ಅಧಿಕಾರಕ್ಕೇರಿಸಲಾಯಿತು ಹಾಗೂ ಮಿಲಿಟರಿಯು ಯಾವುದೇ ಅಡೆತಡೆಯಿಲ್ಲದೆ ತನ್ನ ಹೋರಾಟವನ್ನು ಮುಂದುವರಿಸಿಕೊಂಡು ಬಂದಿರುವುದು ಈ ವ್ಯವಸ್ಥೆಗೆ ನಿದರ್ಶನ.

ಕೊಲ್ಲಿಯು ಮುಕ್ತ ಜಲ ಪ್ರದೇಶವಲ್ಲ. ಅಲ್ಲಿನ ದಾರಿ ಇಕ್ಕಟ್ಟಾಗಿದೆ. ನೀರಿನ ಆಳವೂ ಕಡಿಮೆ. ಇರಾನ್ ಇದನ್ನೆಲ್ಲ ಸರಿಯಾಗಿ ಅಭ್ಯಸಿಸಿ ಅದರ ಆಧಾರದಲ್ಲೇ ತನ್ನ ರಣತಂತ್ರ ರೂಪಿಸಿದೆ. ಅಮೆರಿಕವನ್ನು ಮುಕ್ತ ಸಮುದ್ರದಲ್ಲಿ ಎದುರಿಸುವುದಕ್ಕಿಂತಲೂ ಎದುರಾಳಿ ನೌಕಾಪಡೆಯು ತನ್ನ ಪ್ರದೇಶದೊಳಗೆ ಬರುವಂತೆ ಮಾಡಿ ಅದನ್ನು ಮಣಿಸುವುದು ತಂತ್ರವಾಗಿದೆ. ಇಂತಹ ಸಣ್ಣ ಜಲ ಪ್ರದೇಶದಲ್ಲಿ ನಡೆಯುವ ಯುದ್ಧವು ಯಾವುದೇ ಅನಿರೀಕ್ಷಿತ ಫಲಿತಾಂಶ ನೀಡಬಹುದು.

ಯುದ್ಧ ಹೇಗೆ ಆರಂಭಗೊಳಿಸುವುದು ಎಂಬುದನ್ನು ಮಿಲಿಟರಿ ಶಕ್ತಿ ನಿರ್ಧರಿಸುತ್ತದೆ. ಯುದ್ಧ ಯಾವಾಗ, ಹೇಗೆ ಮುಗಿಸುವುದನ್ನು ಎಂಬುದನ್ನು ರಾಜಕೀಯ ಶಕ್ತಿ ನಿರ್ಧರಿಸುತ್ತದೆ. ಅಮೆರಿಕವಂತೂ, ಚುನಾವಣೆ, ಜನರ ಅಭಿಪ್ರಾಯ, ಮಿತ್ರ ರಾಷ್ಟ್ರಗಳ ಒತ್ತಡ ಮುಂತಾದವುಗಳನ್ನೆಲ್ಲ ಗಮನದಲ್ಲಿಟ್ಟುಕೊಂಡೇ ಹೋರಾಡಬೇಕಾಗಿದೆ. ಇರಾನ್‌ಗಾದರೆ ಅಂತಹ ಒತ್ತಡವಿಲ್ಲ.

ಈ ಲೆಕ್ಕಾಚಾರವು ಯುದ್ಧಾರಂಭಕ್ಕಿಂತಲೂ ನಂತರದ ಪರಿಸ್ಥಿತಿಯಲ್ಲಿ ಹೆಚ್ಚು ಗಣನೆಗೆ ಬರುತ್ತದೆ. ಯುದ್ಧ ದೀರ್ಘಾವಧಿ ಮುಂದುವರಿದಷ್ಟೂ ಶಕ್ತಿಗಿಂತಲೂ ಯುದ್ಧದ ವೆಚ್ಚ ನಿಭಾಯಿಸುವುದು ಪ್ರಮುಖವಾಗುತ್ತದೆ. ಇರಾನ್ ಇದರ ಸುತ್ತಲೇ ತನ್ನ ರಣತಂತ್ರ ರೂಪಿಸುತ್ತಿದೆ. ತಕ್ಷಣವೇ ಯುದ್ಧ ಗೆಲ್ಲುವುದು ಅದರ ಉದ್ದೇಶವಲ್ಲ. ಯುದ್ಧವನ್ನು ದೀರ್ಘಾವಧಿ ಎಳೆದು ಎದುರಾಳಿ ಬಸವಳಿಯುವಂತೆ ಮಾಡುವುದು ಅದರ ತಂತ್ರ. ಹಾಗಾಗಿ ಅಮೆರಿಕವು ಇರಾನಿನ ವಿರುದ್ಧ ಭೂದಾಳಿ ಆರಂಭಿಸಿದರೆ ಅದರ ಪರಿಣಾಮವು ಅದು ಹಿಂದೆ ನಡೆಸಿದ ಯುದ್ಧದಂತಿರಲಾರದು.

# ಕೇರಳ ಚುನಾವಣೆ: ನಿರ್ಣಾಯಕರು ಯಾರು?

ದಿನೇಶ

ಕೇರಳದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಯಲ್ಲಿ ಎಂದಿನಂತೆ ಎಡರಂಗ (ಎಲ್‌ಡಿಎಫ್) ಮತ್ತು ಸಂಯುಕ್ತರಂಗ (ಯುಡಿಎಫ್) ಮಧ್ಯೆ ನಿಕಟ ಸ್ಪರ್ಧೆ ಏರ್ಪಟ್ಟಿದೆ. ಇದರ ಮಧ್ಯೆಯೇ ಬಿಜೆಪಿ ತನ್ನ ನೆಲೆಯನ್ನು ವಿಸ್ತರಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

1982ರಿಂದಾರಂಭಿಸಿ ಕೇರಳದಲ್ಲಿ ಎಲ್‌ಡಿಎಫ್ ಮತ್ತು ಯುಡಿಎಫ್‌ಗಳು ಪರ್ಯಾಯವಾಗಿ ಸರಕಾರ ನಡೆಸಿವೆ. ಕೇರಳದ ಜನರು ಪ್ರತಿ ಐದು ವರ್ಷಗಳಿಗೊಮ್ಮೆ ಸರಕಾರ ಬದಲಿಸುತ್ತಾ ಬಂದಿದ್ದಾರೆ. ಆದರೆ ಕಳೆದ ಚುನಾವಣೆಯಲ್ಲಿ (2021) ಮಾತ್ರ ಎಡರಂಗವನ್ನೇ ಮರಳಿ ಅಧಿಕಾರಕ್ಕೇರಿಸಿದರು. ಇದೀಗ ಪಿಣರಾಯಿ ವಿಜಯನ್ ಹತ್ತು ವರ್ಷಗಳ ಆಡಳಿತ ಮುಗಿಸಿದ್ದಾರೆ. ಹಾಗಾಗಿ ಅವರ ಸರಕಾರದ ವಿರುದ್ಧ ಆಡಳಿತ ವಿರೋಧಿ ಅಲೆ ಇರುವುದು ಸುಳ್ಳಲ್ಲ. ಡಿಸೆಂಬರ್‌ನಲ್ಲಿ ನಡೆದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಯುಡಿಎಫ್ ಮೇಲುಗೈ ಸಾಧಿಸಿದ್ದೇ ಇದಕ್ಕೆ ನಿದರ್ಶನ.

**ಯಾರಿಗೆ ಬೆಂಬಲ?**

ಬಹುಕಾಲದಿಂದ ಕೇರಳದಲ್ಲಿ ಎಲ್‌ಡಿಎಫ್‌ನ್ನು ಬಹುಸಂಖ್ಯಾತರ ಪಕ್ಷ ಎಂದು ಹೇಳಲಾಗುತ್ತದೆ. ಹಿಂದುಗಳ ಬೆಂಬಲ ಅದಕ್ಕೆ ಹೆಚ್ಚು. ಯುಡಿಎಫ್‌ಗೆ ಅಲ್ಪಸಂಖ್ಯಾತರ ಬೆಂಬಲ ಅಧಿಕ. ಆದರೆ ಬಿಜೆಪಿ ಈಗ ರಾಜ್ಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದು, ಯುಡಿಎಫ್‌ನ ತೆಕ್ಕೆಯಿಂದ ಹಿಂದು ಮತಗಳನ್ನು ಸೆಳೆಯತೊಡಗಿದೆ. ಪ್ರಸ್ತುತ ಯುಡಿಎಫ್‌ನಲ್ಲಿರುವ ಮುಸ್ಲಿಂಲೀಗ್ ಮುಸ್ಲಿಮರ ಬೆಂಬಲವನ್ನು ಪಡೆದಿದ್ದರೆ, ಯುಡಿಎಫ್‌ನ ಮತ್ತೊಂದು ಅಂಗಪಕ್ಷವಾದ ಕೇರಳ ಕಾಂಗ್ರೆಸ್ ಕ್ರೈಸ್ತರ ಬೆಂಬಲ ಪಡೆದಿದೆ. ಕೇರಳದ ಚುನಾವಣೆಯ ಸ್ವರೂಪ ಅರಿಯಬೇಕಾದರೆ ಅದನ್ನು ವಲಯವಾರು ವಿಭಾಗದಲ್ಲಿ ಪರಿಶೀಲಿಸಬೇಕಾಗುತ್ತದೆ. ಕೇರಳ ವನ್ನು ಸ್ಥೂಲವಾಗಿ ಮೂರು ಭಾಗಗಳಲ್ಲಿ ಗುರುತಿಸಲಾಗುತ್ತದೆ.

**ಉತ್ತರ ಕೇರಳ (48 ಸ್ಥಾನಗಳು):** ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿದ್ದು ಶೇ. 47ರಷ್ಟಿದ್ದಾರೆ.

**ಮಧ್ಯ ಕೇರಳ (53 ಸ್ಥಾನಗಳು):** ಕ್ರೈಸ್ತರು ಪ್ರಾಬಲ್ಯ (ಶೇ. 28)ಹೊಂದಿರುವ ಪ್ರದೇಶ.

**ದಕ್ಷಿಣ ಕೇರಳ (39 ಸ್ಥಾನಗಳು):** ಹಿಂದು ಪ್ರಾಬಲ್ಯದ ಪ್ರದೇಶ. ಬಿಜೆಪಿ ಬಲಿಷ್ಠವಾಗಿರುವ ಪ್ರದೇಶವೂ ಹೌದು. ಕೇರಳದ ಮುಸ್ಲಿಂ ಜನಸಂಖ್ಯೆಯ ಶೇ. 63ರಷ್ಟು ಮಂದಿ ಉತ್ತರ ಕೇರಳದಲ್ಲಿ ವಾಸಿಸುತ್ತಾರೆ. ಶೇ. 56ರಷ್ಟು ಕ್ರೈಸ್ತರು ಮಧ್ಯ ಕೇರಳದಲ್ಲಿದ್ದಾರೆ. ಕೆಲವು ಜಿಲ್ಲೆಗಳೂ ಚುನಾವಣಾ ಫಲಿತಾಂಶ ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. 3 ಜಿಲ್ಲೆಗಳಾದ ಕಾಸರಗೋಡು, ಕೋಯಿಕ್ಕೋಡ್ ಮತ್ತು ಮಲಪ್ಪುರಂ ಶೇ. 30ರಷ್ಟು ಮುಸ್ಲಿಂ ಜನಸಂಖ್ಯೆ ಹೊಂದಿದ್ದು, 34 ಸ್ಥಾನಗಳನ್ನು ಹೊಂದಿದೆ. ಎರ್ನಾಕುಳಂ,ಇಡುಕ್ಕಿ, ಕೊಟ್ಟಾಯಂ, ಪಟ್ಟಣಂತಿಟ್ಟ ಜಿಲ್ಲೆಗಳು 33 ಸ್ಥಾನಗಳನ್ನು ಹೊಂದಿದ್ದು ಶೇ. 30ಕ್ಕಿಂತ ಹೆಚ್ಚು ಕ್ರೈಸ್ತ ಜನಸಂಖ್ಯೆ ಹೊಂದಿವೆ. ವಯನಾಡು, ಮಲಪ್ಪುರಂ, ಎರ್ನಾಕುಳಂ, ಇಡುಕ್ಕಿ ಮತ್ತು ಕೊಟ್ಟಾಯಂ- ಈ 5 ಜಿಲ್ಲೆಗಳು 47 ಸ್ಥಾನ ಹೊಂದಿದ್ದು ಶೇ. 50ಕ್ಕಿಂತ ಹೆಚ್ಚು ಅಲ್ಪಸಂಖ್ಯಾತ (ಮುಸ್ಲಿಂ ಮತ್ತು ಕ್ರೈಸ್ತ) ಜನಸಂಖ್ಯೆ ಹೊಂದಿವೆ.

9 ಜಿಲ್ಲೆಗಳಾದ ಕಾಸರಗೋಡು, ಕೊಯಿಕೋಡ್, ಕಣ್ಣೂರು, ಪಾಲಕ್ಕಾಡ್, ತ್ರಿಶ್ಶೂರು, ಆಲಪ್ಪುಳ, ಪಟ್ಟಣಂತಿಟ್ಟ, ಕೊಲ್ಲಂ ಮತ್ತು ತಿರುವನಂತಪುರ ಹಿಂದು ಜನಸಂಖ್ಯೆ ಹೆಚ್ಚು ಹೊಂದಿದ್ದು 93 ಸ್ಥಾನಗಳನ್ನು ಹೊಂದಿದೆ.

ಉತ್ತರ ಕೇರಳದಲ್ಲಿ ಕಾಂಗ್ರೆಸ್ ಬಲಿಷ್ಠವಾಗಿದೆ. ದಕ್ಷಿಣ ಕೇರಳವು ಬಿಜೆಪಿಯ ಬಲಿಷ್ಠ ಸ್ಥಾನ. ಈಗೀಗ ಬಿಜೆಪಿಯು ಕ್ರೈಸ್ತ ಬಹುಸಂಖ್ಯಾತರಿರುವ ಪ್ರದೇಶಗಳಲ್ಲೂ ಬಲವರ್ಧಿಸಿಕೊಂಡಿದೆ.ಕಳೆದ ಬಾರಿ ತ್ರಿಶ್ಶೂರು ಲೋಕಸಭಾ ಸ್ಥಾನ ಗೆದ್ದಿತ್ತು. ತಿರುವನಂತ ಪುರ ಮಹಾನಗರಪಾಲಿಕೆಯನ್ನೂ ಇತ್ತೀಚೆಗೆ ಗೆದ್ದುಕೊಂಡಿದೆ.

**ಸ್ಥಾನ ಗಳಿಕೆ**

2011ರಲ್ಲಿ ಯುಡಿಎಫ್ ನಿಕಟ ಸ್ಪರ್ಧೆಯಲ್ಲಿ ಚುನಾವಣೆ ಜಯಿಸಿತ್ತು. ಒಟ್ಟು 140 ಸ್ಥಾನಗಳಲ್ಲಿ ಯುಡಿಎಫ್‌ಗೆ 72 ಸ್ಥಾನ ಲಭಿಸಿತ್ತು. ಎಲ್‌ಡಿಎಫ್‌ಗೆ 68 ಸ್ಥಾನ ಸಿಕ್ಕಿತ್ತು. ಮುಸ್ಲಿಂ ಪ್ರಾಬಲ್ಯವಿರುವ ಕ್ಷೇತ್ರಗಳಲ್ಲಿ ಯುಡಿಎಫ್ 20 ಸ್ಥಾನ ಹಾಗೂ ಎಲ್‌ಡಿಎಫ್ 14 ಸ್ಥಾನ ಗೆದ್ದಿದ್ದವು. ಕ್ರೈಸ್ತ ಪ್ರಾಬಲ್ಯದ 33 ಸ್ಥಾನಗಳಲ್ಲಿ ಯುಡಿಎಫ್ 22, ಎಲ್‌ಡಿಎಫ್ 11 ಸ್ಥಾನ ಗೆದ್ದಿದ್ದವು. ಅಲ್ಪಸಂಖ್ಯಾತರು ಪ್ರಾಬಲ್ಯವಿರುವ 47 ಸ್ಥಾನಗಳಲ್ಲಿ ಯುಡಿಎಫ್ 37 ಹಾಗೂ ಎಲ್‌ಡಿಎಫ್ ಕೇವಲ 10 ಸ್ಥಾನ ಗೆದ್ದಿದ್ದವು. 2016ರ ಚುನಾವಣೆಯಲ್ಲಿ ಎಲ್‌ಡಿಎಫ್ 91 ಸ್ಥಾನ ಗಳಿಸಿ ಸರಕಾರ ರಚಿಸಿದರೆ.ಯುಡಿಎಫ್ 49 ಸ್ಥಾನ ಪಡೆದಿತ್ತು.

2021ರಲ್ಲಿ ಎಲ್‌ಡಿಎಫ್ ಅಧಿಕಾರ ಉಳಿಸಿಕೊಂಡಿತು. ಅದು 99 ಸ್ಥಾನ ಗೆದ್ದರೆ ಎಲ್‌ಡಿಎಫ್‌ಗೆ ಸಿಕ್ಕಿದ್ದು ಕೇವಲ 41. ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಎಲ್‌ಡಿಎಫ್ 18, ಯುಡಿಎಫ್ 16 ಸ್ಥಾನ ಗಳಿಸಿತು. ಕ್ರೈಸ್ತ ಪ್ರಾಬಲ್ಯದ 33 ಸ್ಥಾನಗಳಲ್ಲಿ ಯುಡಿಎಫ್ 14 ಗೆದ್ದರೆ, ಎಲ್‌ಡಿಎಫ್ 19 ಸ್ಥಾನ ಗೆದ್ದಿತು. ಅಲ್ಪಸಂಖ್ಯಾತರು ಪ್ರಾಬಲ್ಯವಿರುವ 47 ಸ್ಥಾನಗಳಲ್ಲಿ ಯುಡಿಎಫ್ 28 ಹಾಗೂ ಎಲ್‌ಡಿಎಫ್ ಕೇವಲ 19 ಸ್ಥಾನ ಗೆದ್ದಿದ್ದವು. ಒಟ್ಟಾಗಿ ಎಲ್‌ಡಿಎಫ್ ಶೇ. 50ರಷ್ಟು ಮುಸ್ಲಿಂ ಮತ ಮತ್ತು ಶೇ. 44ರಷ್ಟು ಕ್ರೈಸ್ತ ಮತ ಪಡೆದರೆ, ಯುಡಿಎಫ್ ಶೇ. 45 ಮುಸ್ಲಿಂ ಬೆಂಬಲ ಹಾಗೂ ಶೇ. 43 ಕ್ರೈಸ್ತ ಬೆಂಬಲ ಪಡೆಯಿತು.

ಈ ಬಾರಿಯ ಚುನಾವಣೆಯಲ್ಲಿ ಯುಡಿಎಫ್ ಮೇಲುಗೈ ಸಾಧಿಸುವುದೆಂದು ಚುನಾವಣಾ ಸಮೀಕ್ಷೆಗಳು ಹೇಳುತ್ತಿವೆ. 2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಶೇ. 19 ಮತ ಗಳಿಸಿದ್ದು, ಅದೇ ನಿರ್ವಹಣೆ ಈ ಬಾರಿ ಪುನರಾವರ್ತಿಸಿದರೆ ವಿಧಾನಸಭೆಯಲ್ಲಿ ತನ್ನ ಸ್ಥಾನ ಹೆಚ್ಚಿಸಿಕೊಳ್ಳಲಿದೆ. ಆದರೆ ಅದು ಎಲ್‌ಡಿಎಫ್‌ನಿಂದ ಹಿಂದು ಮತಗಳನ್ನು ಸೆಳೆದುಕೊಳ್ಳುವುದೇ ಅಥವಾ ಯುಡಿಎಫ್‌ಗೆ ಹೊಡೆತ ನೀಡುವುದೇ ಎಂಬುದನ್ನು ಕಾದು ನೋಡಬೇಕಾಗಿದೆ. ಇದೇವೇಳೆ, ಮುಸ್ಲಿಮರು, ಕ್ರೈಸ್ತರು ಯಾರನ್ನು ಬೆಂಬಲಿಸುವರು ಎಂಬ ಕುತೂಹಲವೂ ಅಡಗಿದೆ. ಮುಸ್ಲಿಮರು ಮತ್ತು ಕ್ರೈಸ್ತರಿಬ್ಬರೂ ಅಧಿಕ ಸಂಖ್ಯೆ ಯಲ್ಲಿರುವ 47 ಕ್ಷೇತ್ರಗಳ ಫಲಿತಾಂಶವು ಸರಕಾರ ಯಾರು ರಚಿಸುವರೆಂಬುದನ್ನು ನಿರ್ಧರಿಸಬಹುದು ಎನ್ನುತ್ತಾರೆ ವಿಶ್ಲೇಷಕರು.

## ಕಿರುಸುದ್ದಿ

### ಎಂಐಎಫ್‌ಎಸ್‌ಇ-ಮಿನರ್ವ ಕಾಲೇಜು: ಏ.4ರಂದು ಹೊಸ ಕೋರ್ಸ್‌ಗಳ ಉದ್ಘಾಟನೆ

**ಮಂಗಳೂರು:** ನಗರದ ಎಂಐಎಫ್‌ಎಸ್‌ಇ ಆ್ಯಂಡ್ ಮಿನರ್ವ ಕಾಲೇಜಿಗೆ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸಂಯೋಜನೆ ದೊರೆತಿದ್ದು, ವಿಟಿಯು ಸಂಯೋಜನೆಯ ಹೊಸ ಕೋರ್ಸ್‌ಗಳ ಉದ್ಘಾಟನಾ ಸಮಾರಂಭ ಏ.4ರಂದು ಬೆಳಗ್ಗೆ 10ಕ್ಕೆ ಅಡ್ಯಾರ್‌ನ ಎಂಐಎಫ್‌ಎಸ್‌ಇ ಮತ್ತು ಮಿನರ್ವ ಕಾಲೇಜು ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಸ್ಪೀಕರ್ ಯು.ಟಿ. ಖಾದರ್, ವಿಟಿಯು ಕುಲಪತಿ ಡಾ.ಎಸ್. ವಿದ್ಯಾಶಂಕರ್, ಮಂಗಳೂರು ವಿಶ್ವವಿದ್ಯಾಲಯ ವಿಶ್ರಾಂತ ಕುಲಪತಿ ಪ್ರೊ.ಪಿ.ಎಸ್. ಯಡಪಡಿತ್ತಾಯ, ಕೆಪಿಟಿ ಮಂಗಳೂರು ಪ್ರಾಂಶುಪಾಲ ಪ್ರೊ. ಹರೀಶ್ ಶೆಟ್ಟಿ, ಮೈಸೂರಿನ ಮುಕ್ತ ವಿವಿ ನಿವೃತ್ತ ಡೀನ್ ಪ್ರೊ. ಜಗದೀಶ ಅತಿಥಿಯಾಗಿ ಭಾಗವಹಿಸುವರು ಎಂದು ಸಂಸ್ಥೆಯ ಎಂಡಿ ಮನೋಜ್ ಪಿ.ವಿ. ಬುಧವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. 2007ರಲ್ಲಿ ಸ್ಥಾಪನೆಯಾದ ಎಂಐಎಫ್‌ಎಸ್‌ಇ ಸಂಸ್ಥೆ ರಾಜ್ಯದಲ್ಲಿ ಫೈರ್ ಆ್ಯಂಡ್ ಸೇಫ್ಟಿ ಕೋರ್ಸ್ ಪರಿಚಯಿಸಿತ್ತು. ಇದೀಗ ಸಂಸ್ಥೆ ವಿಟಿಯು ಸಂಯೋಜನೆಗೆ ಒಳಪಟ್ಟಿದೆ. ಅಡ್ಯಾರ್‌ನಲ್ಲಿ ಅತ್ಯಾಧುನಿಕ ಸೌಲಭ್ಯ ಹೊಂದಿರುವ ಹೊಸ ಕ್ಯಾಂಪಸ್ ಪ್ರಾರಂಭಿಸಿದೆ. ಎಸ್‌ಎಸ್‌ಡಿಸಿ -ಸ್ಕಿಲ್ ಇಂಡಿಯಾ ಸಂಯೋಜನೆಯನ್ನೂ ಹೊಂದಿದೆ. 2026ರ ಬ್ಯಾಚ್‌ಗೆ ಫೈರ್ ಆ್ಯಂಡ್ ಸೇಫ್ಟಿ ಇಂಜಿನಿಯರಿಂಗ್, ಲಾಜಿಸ್ಟಿಕ್ಸ್ ಆ್ಯಂಡ್ ಸಪ್ಲೈ ಚೈನ್ ಮ್ಯಾನೇಜ್‌ಮೆಂಟ್, ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕೋರ್ಸ್‌ಗಳಿಗೆ ಪ್ರವೇಶ ನೀಡಲಾಗುತ್ತಿದೆ ಎಂದರು. ಸಂಸ್ಥೆ ಅಧ್ಯಕ್ಷ ವಿನೋದ್ ಕೆ. ಜಾನ್, ಪ್ರಾಂಶುಪಾಲ ಯಶವಂತ್ ಜಿ. ಶೆಟ್ಟಿ, ಬ್ಯುಸಿನೆಸ್ ಡೆವಲಪ್‌ಮೆಂಟ್ ಆಫೀಸರ್ ಪೃಥ್ವಿ ಚರಣ್ ಉಪಸ್ಥಿತರಿದ್ದರು.

### ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿದ ಕಾರು

**ಮಡಿಕೇರಿ:** ನಿಯಂತ್ರಣ ತಪ್ಪಿದ ಕಾರೊಂದು ಹೆದ್ದಾರಿ ಬದಿಯ ಆಳವಾದ ಕಂದಕಕ್ಕೆ ಉರುಳಿ ಬಿದ್ದ ಘಟನೆ ಮಡಿಕೇರಿ-ಸಂಪಾಜೆ ನಡುವಿನ ನೀರುಕೊಲ್ಲಿ ಎಂಬಲ್ಲಿ ನಡೆದಿದ್ದು, ಸ್ಥಳೀಯರ ಸಕಾಲದ ಸ್ಪಂದನದಿಂದಾಗಿ ಕುಂದಾಪುರ ಮೂಲದ ಚಾಲಕ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಕುಂದಾಪುರ ಮೂಲದ ಸಿರಾಜ್ ಎಂಬವರು ತಮ್ಮ ಕಾರಿನಲ್ಲಿ ಕುಂದಾಪುರದಿಂದ ಮಡಿಕೇರಿಗೆ ಬರುತ್ತಿದ್ದರು. ರಾಷ್ಟ್ರೀಯ ಹೆದ್ದಾರಿ 275 ರ ಮಡಿಕೇರಿ ಮತ್ತು ಸಂಪಾಜೆ ನಡುವಿನ ನೀರುಕೊಲ್ಲಿ ಎಂಬ ಪ್ರದೇಶ ತಲುಪಿದಾಗ, ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ತಡೆಗೋಡೆಯನ್ನು ದಾಟಿ ನೇರವಾಗಿ ಕಂದಕಕ್ಕೆ ಉರುಳಿದೆ.

**ಸ್ಥಳೀಯರಿಂದ ಕಾರ್ಯಾಚರಣೆ**

ಅಪಘಾತ ಸಂಭವಿಸಿದ ತಕ್ಷಣವೇ ಸ್ಥಳಕ್ಕೆ ಧಾವಿಸಿದ ಸ್ಥಳೀಯ ನಿವಾಸಿಗಳು ಮತ್ತು ಇತರ ವಾಹನ ಸವಾರರು, ಪ್ರಾಣದ ಹಂಗು ತೊರೆದು ಕಂದಕಕ್ಕೆ ಇಳಿದು ಚಾಲಕ ಸಿರಾಜ್ ಅವರನ್ನು ರಕ್ಷಿಸಿದ್ದಾರೆ. ಕಾರಿನೊಳಗೆ ಸಿಲುಕಿಕೊಂಡಿದ್ದ ಸಿರಾಜ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ತಕ್ಷಣವೇ ಅವರನ್ನು ಮಡಿಕೇರಿಯ ಜಿಲ್ಲಾಸ್ಪತ್ರೆಗೆ ದಾಖಲಿಸಿದ್ದಾರೆ. ಸಕಾಲದಲ್ಲಿ ಸ್ಥಳೀಯರು ಸ್ಪಂದಿಸಿದ ಕಾರಣ ದೊಡ್ಡ ಅನಾಹುತವೊಂದು ತಪ್ಪಿದೆ. ವಿಷಯ ತಿಳಿಯುತ್ತಿದ್ದಂತೆಯೇ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದ್ದಾರೆ. ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕೊಡಗಿನ ಘಟ್ಟ ಪ್ರದೇಶಗಳಲ್ಲಿ ಸಂಚರಿಸುವ ಚಾಲಕರು ರಸ್ತೆಯ ತಿರುವುಗಳ ಬಗ್ಗೆ ಎಚ್ಚರದಿಂದ ಇರಬೇಕು ಮತ್ತು ವೇಗದ ಮಿತಿಯನ್ನು ಕಾಯ್ದುಕೊಳ್ಳಬೇಕು ಎಂದು ಸಂಚಾರಿ ಪೊಲೀಸರು ಮನವಿ ಮಾಡಿದ್ದಾರೆ.

### ಏ. 5: ವೈದ್ಯಕೀಯ, ನೇತ್ರ ತಪಾಸಣೆ, ದಂತ ಚಿಕಿತ್ಸಾ ಶಿಬಿರ

**ಮಂಗಳೂರು:** ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಮಾಡೂರು ಶಾಖೆಯ 14 ವಾರ್ಷಿಕೋತ್ಸವದ ಪ್ರಯುಕ್ತ ಮಾಡೂರು ಶ್ರೀ ಶಿರಡಿ ಸಾಯಿ ಬಾಬಾ ಮಂದಿರ, ಮಡ್ಯಾರ್ ಶ್ರೀ ಶಾಸ್ತಾರ ಬಳಗ, ಶ್ರೀ ಶಾಸ್ತಾರ ಮಹಿಳಾ ಮಂಡಳಿ ಮತ್ತು ಭಜಕ ವೃಂದ ಹಾಗೂ ಎನ್.ಜಿ ವಲ್ಡ್ ಚಾರಿಟೇಬಲ್ ಟ್ರಸ್ಟ್ ಜಂಟಿ ಸಹಯೋಗದೊಂದಿಗೆ ಉಚಿತ ವೈದ್ಯಕೀಯ, ನೇತ್ರ ತಪಾಸಣೆ ಮತ್ತು ದಂತ ಚಿಕಿತ್ಸಾ ಶಿಬಿರವನ್ನು ಏ. 5ರಂದು ಪೂರ್ವಾಹ್ನ 9.30 ರಿಂದ ಅಪರಾಹ್ನ 12.30ರ ವರೆಗೆ ಮಾಡೂರು ಶಾಖೆಯ ಆವರಣದಲ್ಲಿ ಆಯೋಜಿಸಲಾಗಿದೆ ಎಂದು ಆತ್ಮಶಕ್ತಿ ವಿವಿಧೋದ್ದೇಶ ಸಹಕಾರಿ ಸಂಘದ ಅಧ್ಯಕ್ಷ ಸಹಕಾರ ರತ್ನ ಚಿತ್ತರಂಜನ್ ಬೋಳಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಇಂದು ಯಕ್ಷಗಾನ

**ಶ್ರೀ ಕಟೀಲು ಯಕ್ಷಗಾನ ಮೇಳ**

1. ಅಜಯ್ ಶೆಟ್ಟಿ, ಸುಶ್ಮಿತಾ ಶೆಟ್ಟಿ, 'ರುದ್ರಾಂಶ ಕನ್‌ಸ್ಟ್ರಕ್ಷನ್', ಕೋಟೆ ಬಾಗಿಲು, ಮಾರ್ಪಾಡಿ, ಮೂಡುಬಿದ್ರಿ.
2. ದಿ| ವಿಶ್ವನಾಥ ಶೆಟ್ರ ಸ್ಮರಣಾರ್ಥ ಪತ್ನಿ ಮತ್ತು ಮಕ್ಕಳು, 'ಶ್ರೀ ರಕ್ಷಿತಾ', ಕನಕೂರು ವಯಾ ಕೋಣಾಜೆ.
3. ವಿಜಯ ಪುರುಷೋತ್ತಮ, ಮೊಗರು ಮಜಲು ಮನೆ, ಅಜಿಲಮೊಗರು, ಮಣಿನಾಲ್ಕೂರು, ಬಂಟ್ವಾಳ (ತಾ).
4. ದಾಸಪ್ಪ ಗೌಡ ಕೆ., 'ನಾಗಶ್ರೀ', ಕೋಡಿಯಡ್ಕ ಮನೆ, ಉರುವಾಲು, ಇಳಂತಿಲ, ಬೆಳ್ತಂಗಡಿ (ತಾ).
5. ಶ್ರೀ ದುರ್ಗಾಪರಮೇಶ್ವರೀ ಬಯಲಾಟ ಸೇವಾ ಸಮಿತಿ, ಸವಣಾಲು, ಶ್ರೀ ದುರ್ಗಾ ಕಾಳಿಕಾಂಬ ದೇವಸ್ಥಾನ, ಕಾಳಿಬೆಟ್ಟು, ಬೆಳ್ತಂಗಡಿ (ತಾ).
6. ಭಾರತಿ, ಸೂರಜ್, 'ಸ್ವಾಮಿ ಕೃಪಾ', ಚಪ್ಪನ್ನಗುರಿ, ಬೆಳುವಾಯಿ, ಮೂಡುಬಿದ್ರಿ.
7. ಪದ್ಮನಾಭ, 'ಚೌಡೇಶ್ವರಿ', ಕೊಂಡೆಮೂಲ, ಕಟೀಲು- ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

**ಶ್ರೀ ಧರ್ಮಸ್ಥಳ ಮೇಳ**
ಕುಂಬಾಶಿಯಲ್ಲಿ
ದೇವರಾಯ ಮಂಜುನಾಥ ಶೇರಿಗಾರ್
ಶ್ರೀ ಚಂಡಿಕಾ ದುರ್ಗಾಪರಮೇಶ್ವರೀ ದೇವಸ್ಥಾನ

**ಶ್ರೀ ಸಾಲಿಗ್ರಾಮ ಮೇಳ**
ಕುಂಬಾಶಿ ಕೃಷ್ಣಪ್ರಸಾದ್ ಅಡ್ಯಂತಾಯ ಮನೆಯ ವಠಾರ ಬಯಲಾಟ
**ಭೀಷ್ಮ ವಿಜಯ-ಶ್ರೀನಿವಾಸ ಕಲ್ಯಾಣ**

**ಶ್ರೀ ಪೆರ್ಡೂರು ಮೇಳ**
ಕುಮುಟಾದಲ್ಲಿ- **ಚದುರಂಗ**

**ಶ್ರೀ ಹನುಮಗಿರಿ ಮೇಳ**
ನೀಲಾವರ ಕೋಡಿಯಲ್ಲಿ

**ಶ್ರೀ ಪಾವಂಜೆ ಮೇಳ**
ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಪದ್ಯಾಣ
ಓಂ ನಮಃ ಶಿವಾಯ




ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟಿದ ಹಬ್ಬದ ಅಂಗವಾಗಿ ವಾತ್ಸಲ್ಯ ಮನೆಯಲ್ಲಿ ವಾಸಿಸುತ್ತಿರುವ ಕೋಟ ವಲಯದ ಮಧುವನ ವಿಭಾಗದಲ್ಲಿರುವ ಲಕ್ಷ್ಮಿ ಅವರಿಗೆ ಹಣ್ಣು ಹಂಪಲು ನೀಡಲಾಯಿತು. ಕೋಟ ವಲಯದ ಮೇಲ್ವಿಚಾರಕ ನಾಗೇಶ ಹಾಗೂ ಸೇವಾ ಪ್ರತಿನಿಧಿ ವಿದ್ಯಾಲಥ ಜನಜಾಗೃತಿ ವೇದಿಕೆಯ ಸದಸ್ಯರಾದ ಪ್ರಕಾಶ್ ಆಚಾರ್ಯ ಹಾಗೂ ಲಕ್ಷ್ಮಿ ದೇವಾಡಿಗ ಉಪಸ್ಥಿತರಿದ್ದರು.

## ಏ. 5ರಂದು ಬೆಳಾಲುವಿನಲ್ಲಿ ವೀರ ಯೋಧ ಎ. ಸಿ. ಪಿ. ನಾಯಕ ಸುಬೇದಾರ್ ಮೋಹನ ಗೌಡರಿಗೆ ಅಭಿನಂದನೆ

**ಬೆಳ್ತಂಗಡಿ :** ಭಾರತ ದೇಶದ ರಕ್ಷಣಾ ವಿಭಾಗದ ಭೂ ಸೇನೆಯಲ್ಲಿ 24 ವರ್ಷ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿ ಹುಟ್ಟೂರಿಗೆ ಆಗಮಿಸುವ ಬೆಳಾಲು ಗ್ರಾಮದ ಕಾಡಂಡ ನಿವಾಸಿ ವೀರ ಯೋಧ ಎ. ಸಿ. ಪಿ. ನಾಯಕ ಸುಬೇದಾರ್ ಮೋಹನ ಗೌಡ ಅವರಿಗೆ ಬೆಳಾಲು ಗ್ರಾಮದ ವಿವಿಧ ಸಂಘ ಸಂಸ್ಥೆಗಳ, ಊರವರ ಸಹಕಾರದಲ್ಲಿ ಅಭಿನಂದನಾ ಸಮಿತಿ ವತಿಯಿಂದ ಏ.5 ರಂದು ಬೆಳಿಗ್ಗೆ 10.30ಕ್ಕೆ ಹುಟ್ಟೂರ ಅಭಿನಂದನಾ ಸಮಾರಂಭ ಬೆಳಾಲು ಶ್ರೀ ಧ. ಮ. ಪ್ರೌಢ ಶಾಲೆಯಲ್ಲಿ ನಡೆಯಲಿದೆ.



ಬೆಳಿಗ್ಗೆ 9.30ಕ್ಕೆ ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ವಠಾರದಿಂದ ಸ್ವಾಗತ ಮೆರವಣಿಗೆ ಮೂಲಕ ಬರಮಾಡಿ ಕೊಳ್ಳಲಾಗುವುದು.

ಮೆರವಣಿಗೆಯ ಉದ್ಘಾಟನೆಯನ್ನು ಉಜಿರೆ ಶ್ರೀ ಜನಾರ್ದನ ದೇವಸ್ಥಾನದ ಆನುವಂಶಿಕ ಆಡಳಿತ ಮೋಕ್ತೆಸರ ಶರತ್‌ಕೃಷ್ಣ ಪಡುವೆಟ್ನಾಯ ನೆರವೇರಿಸಲಿದ್ದಾರೆ. ನಂತರ ಬೆಳಾಲಿನಲ್ಲಿ ನಡೆಯುವ ಅಭಿನಂದನಾ ಕಾರ್ಯಕ್ರಮದ ದೀಪ ಪ್ರಜ್ವಲನೆಯನ್ನು ಅರಿಕೋಡಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರದ ಧರ್ಮದರ್ಶಿ ಹರೀಶ್ ಆರಿಕೋಡಿ ಮಾಡುವರು. ಅಧ್ಯಕ್ಷತೆಯನ್ನು ಅಭಿನಂದನಾ ಸಮಿತಿಯ ಅಧ್ಯಕ್ಷ ಎಚ್. ಪದ್ಮ ಗೌಡ ವಹಿಸಲಿದ್ದಾರೆ. ಶಾಸಕ ಹರೀಶ್ ಪೂಂಜ, ವಿಧಾನ ಪರಿಷತ್ ಸದಸ್ಯ ಕೆ. ಪ್ರತಾಪಸಿಂಹ ನಾಯಕ್, ಜಿಲ್ಲಾ ಮೆಸ್ಕಾಂ ಅಧ್ಯಕ್ಷ ಕೆ. ಹರೀಶ್ ಕುಮಾರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಅಖಿಲ ಕರ್ನಾಟಕ ಮಾಜಿ ಸೈನಿಕ ಸಂಘ ಬೆಳ್ತಂಗಡಿ ತಾಲೂಕು ಘಟಕದ ಅಧ್ಯಕ್ಷ ಎನ್. ಪಿ. ತಂಗಚ್ಚನ್, ಬೆಳ್ತಂಗಡಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಮಹಮ್ಮದ್ ರಫಿ ಗೌರವ ಉಪಸ್ಥಿತಲಿರುವರು ಎಂದು ಅಭಿನಂದನಾ ಸಮಿತಿ ಅಧ್ಯಕ್ಷ ಹೆಚ್. ಪದ್ಮ ಗೌಡ ತಿಳಿಸಿದ್ದಾರೆ.

> ಹುಟ್ಟೂರ ಅಭಿನಂದನಾ ಸಮಾರಂಭ ಬೆಳಾಲು ಶ್ರೀ ಧ. ಮ. ಪ್ರೌಢ ಶಾಲೆಯಲ್ಲಿ

ಮಡಿಕೇರಿಯಲ್ಲಿ 'ಸುರಕ್ಷಿತ ಉತ್ಪನ್ನಗಳು ಆತ್ಮವಿಶ್ವಾಸದ ಗ್ರಾಹಕರು' ಕುರಿತು ಸಭೆ

# ಖರೀದಿ ಮೊದಲು ಗುಣಮಟ್ಟ ಪರಿಶೀಲಿಸಿರಿ

**ಮಡಿಕೇರಿ:** ಗುಣಮಟ್ಟದ ಉತ್ಪನ್ನ ಹಾಗೂ ಸೇವೆ ಪ್ರತಿ ಗ್ರಾಹಕರ ಮೂಲಭೂತ ಹಕ್ಕು.. ಗ್ರಾಹಕನೇ ರಾಜ, ಆದರೆ ಹಕ್ಕುಗಳ ಬಗ್ಗೆ ತಿಳುವಳಿಕೆ ಇದ್ದಾಗ ಮಾತ್ರ... ಖರೀದಿಸುವ ಮೊದಲು ಯೋಚಿಸಿ, ಗುಣಮಟ್ಟವನ್ನು ಪರೀಕ್ಷಿಸಿ... ಗ್ರಾಹಕರ ಹಕ್ಕುಗಳ ಅರಿವೇ ಮೋಸದಿಂದ ರಕ್ಷಣೆ... ಈ ಸಂದೇಶಗಳು ಬುಧವಾರ ನಡೆದ ವಿಶ್ವ ಗ್ರಾಹಕರ ದಿನಾಚರಣೆ ಸಂದರ್ಭದಲ್ಲಿ ಕೇಳಿ ಬಂದವು.

ಜಿಲ್ಲಾಡಳಿತ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ, ಜಿಲ್ಲಾ ಗ್ರಾಹಕರ ಆಯೋಗ ಹಾಗೂ ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ, ಕುಶಾಲನಗರ ಇವರ ಸಂಯುಕ್ತಾಶ್ರಯದಲ್ಲಿ 'ಸುರಕ್ಷಿತ ಉತ್ಪನ್ನಗಳು ಆತ್ಮವಿಶ್ವಾಸದ ಗ್ರಾಹಕರು' ಎಂಬ ವಿಷಯದಡಿ ನಗರದ ಜೂನಿಯರ್ ಕಾಲೇಜು ಆವರಣದಲ್ಲಿರುವ ಸರ್ಕಾರಿ ಪದವಿ ಕಾಲೇಜಿನಲ್ಲಿ ವಿಶ್ವ ಗ್ರಾಹಕರ ದಿನವನ್ನು ಆಚರಿಸಲಾಯಿತು.

ಹಿರಿಯ ವಕೀಲ ಎಂ.ಎ.ನಿರಂಜನ ಅವರು ಮಾತನಾಡಿ, ಗ್ರಾಹಕರ ಹಕ್ಕುಗಳು ಮತ್ತು ಕರ್ತವ್ಯಗಳ ಬಗ್ಗೆ ತಿಳಿದುಕೊಳ್ಳುವುದರ ಜೊತೆಗೆ ಪ್ರಜ್ಞಾವಂತರಾಗಬೇಕು. ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿಯ ವಸ್ತು ಕೊಳ್ಳುವವರು ಗ್ರಾಹಕರಾಗಿದ್ದು, ಯಾವುದೇ ರೀತಿಯ ಸೇವೆಯನ್ನು ಪಡೆಯುವವರು ವಿವಿಧ ಸಂದರ್ಭದಲ್ಲಿ ಗ್ರಾಹಕರಾಗಿರುತ್ತಾರೆ. ಆದ್ದರಿಂದ ಯಾವುದೇ ಪದಾರ್ಥಗಳನ್ನು ಕೊಳ್ಳುವ ಸಂದರ್ಭದಲ್ಲಿ ಗುಣಮಟ್ಟ ಮತ್ತು ವಸ್ತುವಿನ ಅವಧಿಯನ್ನು ಗಮನಿಸಬೇಕು ಎಂದು ತಿಳಿಸಿದರು.



ಗ್ರಾಹಕರು ಮೋಸ ಅಥವಾ ವಂಚನೆಗೆ ಒಳಗಾಗ ಬಾರದು. ಕಪ್ಪಗಿರುವವರು ಬೆಳ್ಳಗಾಗುವುದು, ದಪ್ಪ ಇರುವವರು ಸಣ್ಣಗಾಗುವಂತಹ ಜಾಹೀರಾತುಗಳಿಗೆ ಮರುಳಾಗಬಾರದು ಎಂದು ಎಚ್ಚರಿಸಿದರು.

ಗ್ರಾಹಕರ ಹಕ್ಕುಗಳ ಬಗ್ಗೆ ಚ್ಯುತಿ ಬಂದಾಗ ಗ್ರಾಹಕರ ಆಯೋಗಕ್ಕೆ ಮನವಿ ಮಾಡುವಂತಾಗಬೇಕು. ಹಾಗೆಯೇ ತಮ್ಮ ಕರ್ತವ್ಯಗಳನ್ನು ಸಹ ಮರೆಯಬಾರದು ಎಂದು ಎಂ.ಎ.ನಿರಂಜನ್ ಅವರು ಕಿವಿಮಾತು ಹೇಳಿದರು.

ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಸದಸ್ಯೆ ಗೌರಮ್ಮಣ್ಣಿ ಅವರು ಮಾತನಾಡಿ, ಗ್ರಾಹಕರು ತಮ್ಮ ಹಕ್ಕುಗಳ ಬಗ್ಗೆ ತಿಳಿದುಕೊಳ್ಳಬೇಕು. ಜೊತೆಗೆ ಕರ್ತವ್ಯವನ್ನು ಪಾಲಿಸಬೇಕು. ಗ್ರಾಹಕರು ಯಾವುದೇ ಒಂದು ವಸ್ತುವನ್ನು ಆಯ್ಕೆ ಮಾಡುವ ಅಧಿಕಾರ ಹೊಂದಿದ್ದಾರೆ. ಆ ಸಂದರ್ಭದಲ್ಲಿ ಸುರಕ್ಷತೆಯಿಂದ ಪದಾರ್ಥಗಳನ್ನು ಕೊಳ್ಳುವಂತಾಗಬೇಕು. ಗ್ರಾಹಕ ಎಂದರೆ ಅನಪೇಕ್ಷಿತ ವ್ಯಕ್ತಿಯಲ್ಲ, ಸಮಾಜದಲ್ಲಿನ ಗೌರವಾನ್ವಿತ ವ್ಯಕ್ತಿ ಎಂಬುದನ್ನು ಮರೆಯಬಾರದು ಎಂದು ಅವರು ಹೇಳಿದರು.

ಪದಾರ್ಥಗಳನ್ನು ಕೊಳ್ಳುವಾಗ ತೂಕ ಮತ್ತು ಗುಣಮಟ್ಟ ಖಾತರಿಪಡಿಸಿಕೊಳ್ಳಬೇಕು. ಯಾವುದೇ ಒಂದು ವಸ್ತು ಕೊಳ್ಳುವಾಗ ರಶೀದಿ ಕಡ್ಡಾಯವಾಗಿ ಪಡೆಯಬೇಕು ಎಂದು ಸಲಹೆ ಮಾಡಿದರು.

> ಸಮಾಜದಲ್ಲಿನ ಪ್ರತಿಯೊಬ್ಬರೂ ಒಂದಲ್ಲ ಒಂದು ರೀತಿ ಗ್ರಾಹಕರಾಗಿದ್ದು, ಗ್ರಾಹಕರ ಸುರಕ್ಷತೆ, ಮಾಹಿತಿ ಮತ್ತು ನ್ಯಾಯಸಮ್ಮತ ಸೇವೆ ದೊರಕುವುದು ಅತ್ಯಂತ ಅವಶ್ಯಕವಾಗಿದೆ. ಪ್ರತಿಯೊಬ್ಬರೂ ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತರಾಗಬೇಕು ಮತ್ತು ಪ್ರಾಮಾಣಿಕ ವ್ಯವಸ್ಥೆ ನಿರ್ಮಿಸಲು ಕೈ ಜೋಡಿಸುವಂತಾಗಬೇಕು
>
> ■ ನಿತಿನ್ ಚಕ್ಕಿ, ಉಪ ವಿಭಾಗಾಧಿಕಾರಿ

ಕುಶಾಲನಗರದ ಜಿಲ್ಲಾ ಗ್ರಾಹಕ ಮಾಹಿತಿ ಕೇಂದ್ರದ ಅಧ್ಯಕ್ಷ ಎ.ಎ.ಚಂಗಪ್ಪ ಅವರು ಮಾತನಾಡಿ, ಗ್ರಾಹಕರ ಮಾಹಿತಿ ಕೇಂದ್ರದಿಂದ ಜಿಲ್ಲೆಯ 52 ಪ್ರೌಢ ಶಾಲೆಗಳಲ್ಲಿ ಗ್ರಾಹಕರ ಕ್ಲಬ್‌ಗಳನ್ನು ರಚಿಸಿ, ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ ಎಂದರು.

ಇಂದಿನ ವೇಗದ ಬದುಕಿನಲ್ಲಿ ಡಿಜಿಟಲ್ ಮಾರುಕಟ್ಟೆಗಳು ಸಹ ಪ್ರಬಲವಾಗಿದ್ದು, ಗ್ರಾಹಕರು ಈ ಬಗ್ಗೆ ಸಹ ಎಚ್ಚರವಹಿಸಬೇಕು ಎಂದು ಸಲಹೆ ಮಾಡಿದರು.

ಸುರಕ್ಷತೆ, ಮಾಹಿತಿ, ನಿವೇದನೆ, ಪರಿಹಾರ, ಗ್ರಾಹಕ ಶಿಕ್ಷಣ, ಅಗತ್ಯ ವಸ್ತುಗಳು, ಆರೋಗ್ಯ ಪೂರ್ಣ ಪರಿಸರ ಮತ್ತಿತರ ಹಕ್ಕುಗಳ ಬಗ್ಗೆ ಗ್ರಾಹಕರಲ್ಲಿ ಜಾಗೃತಿ ಇರಬೇಕು ಎಂದರು.

ಆಹಾರ ಇಲಾಖೆ ಉಪ ನಿರ್ದೇಶಕ ಎಂ.ಭೀಮರಾಯ ಅವರು ಮಾತನಾಡಿ, ಗ್ರಾಹಕರ ಸಮಗ್ರ ಹಿತರಕ್ಷಣೆಯೇ ಅತೀ ಮುಖ್ಯವಾಗಿದ್ದು, ಗ್ರಾಹಕರು ವಂಚನೆಗೆ ಒಳಗಾಗುವುದನ್ನು ತಡೆಯಲು ಗ್ರಾಹಕರ ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಗ್ರಾಹಕರು ಆರ್ಥಿಕ ವ್ಯವಸ್ಥೆಯ ಬೆನ್ನೆಲುಬಾಗಿದ್ದು, ಗ್ರಾಹಕರ ಹಿತ ಕಾಯುವುದು ಆದ್ಯ ಕರ್ತವ್ಯವಾಗಿದೆ. ಗ್ರಾಹಕರು ಸಂತೃಪ್ತಿ ಹೊಂದಿದಾಗ ಮಾತ್ರ ವಸ್ತುವಿನ ಅಥವಾ ಸೇವೆಯು ಸಾರ್ಥಕತೆ ಪಡೆಯುತ್ತದೆ ಎಂದು ವಿವರಿಸಿದರು.

ಕಾನೂನು ಮಾಪನ ಶಾಸ್ತ್ರ ಇಲಾಖೆಯಿಂದ ವಸ್ತು ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮಕ್ಕೂ ಮೊದಲು ಗ್ರಾಹಕರ ದಿನಾಚರಣೆ ಪ್ರಯುಕ್ತ ಗಣ್ಯರು ಗಿಡ ನೆಡಲಾಯಿತು.

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ವೆಂಕಟೇಶ್ ಪ್ರಸನ್ನ, ಆಹಾರ ಇಲಾಖೆ ಸಹಾಯಕ ನಿರ್ದೇಶಕಿ ರಮಾ, ಪ್ರಾಧ್ಯಾಪಕ ನವೀನ್ ಕುಮಾರ್, ಆಹಾರ ನಿರೀಕ್ಷಕರಾದ ವೀಣಾ, ಯಶಸ್ವಿನಿ, ನಿಶಾ, ಸ್ವಾತಿ, ಸೀನಾಕುಮಾರಿ, ಕಿರಣ್, ನಾಗೇಂದ್ರ, ಪ್ರಮೋದ್ ಕುಮಾರ್, ಗಿರೀಶ್, ಕುಸುಮಾ ಇತರರು ಇದ್ದರು.

## ಅಯೋಧ್ಯೆಯಿಂದ ಹೊರಟ ಪವಿತ್ರ ಜ್ಯೋತಿ ಅಂಜನಾದ್ರಿ ಬೆಟ್ಟದ ಜ್ಯೋತಿಯೊಂದಿಗೆ ದ.ಕ.ಗೆ

ಪುತ್ತೂರು: ಹನುಮಗಿರಿ ಶ್ರೀ ಕೋದಂಡರಾಮ-ಶ್ರೀ ಪಂಚಮುಖಿ ಆಂಜನೇಯ ದೇವಸ್ಥಾನದ ಬ್ರಹ್ಮಕಲಶೋತ್ಸವಕ್ಕೆ ಪೂರ್ವಭಾವಿಯಾಗಿ ಅಯೋಧ್ಯೆಯ ಶ್ರೀರಾಮ ಜನ್ಮಸ್ಥಾನ ಮಂದಿರದಿಂದ ಹೊರಟ ಪವಿತ್ರ ಜ್ಯೋತಿಯು ಮಂಗಳವಾರ ಶ್ರೀ ಆಂಜನೇಯ ಜನ್ಮಸ್ಥಳವಾದ ಅಂಜನಾದ್ರಿ ಬೆಟ್ಟದ ಜ್ಯೋತಿಯೊಂದಿಗೆ ಸೇರಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯತ್ತ ಹೊರಟಿದೆ.

ಶ್ರೀರಾಮ ನವಮಿಯ ದಿನವಾದ ಮಾ.27ರಂದು ಅಯೋಧ್ಯೆ ಮಂದಿರದ ಗರ್ಭಗುಡಿಯಿಂದ ಸ್ವೀಕರಿಸಿದ ಶ್ರೀರಾಮ ಜ್ಯೋತಿಯು ಗಂಗಾಜಲ ಮತ್ತು ಅಯೋಧ್ಯೆಯ ಪವಿತ್ರ ಮೃತ್ತಿಕೆಯೊಂದಿಗೆ ಕರ್ನಾಟಕ ರಾಜ್ಯದ ಕೊಪ್ಪಳ ಜಿಲ್ಲೆಯ ಅಂಜನಾದ್ರಿ ಬೆಟ್ಟಕ್ಕೆ ಹೊರಟಿತ್ತು.

ಮಂಗಳವಾರ ಬೆಳಗ್ಗೆ ಅಂಜನಾದ್ರಿ ಬೆಟ್ಟದಲ್ಲಿರುವ ಶ್ರೀ ಆಂಜನೇಯ ಜನ್ಮಸ್ಥಳ ಮಂದಿರದಿಂದ ಜ್ಯೋತಿ ಸ್ವೀಕರಿಸಲಾಯಿತು. ನೇತೃತ್ವ ವಹಿಸಿದ್ದ ಹಿಂದೂ ಸಂಘಟನೆಯ ಮುಖಂಡ ಮುರಳಿಕೃಷ್ಣ ಹಸಂತಡ್ಕ ಮಾಹಿತಿ ನೀಡಿ, ಬೆಳಗ್ಗೆ 8 ಗಂಟೆಗೆ ನಾವು ಅಯೋಧ್ಯೆಯ ಜ್ಯೋತಿಯನ್ನು ಅಂಜನಾದ್ರಿ ಬೆಟ್ಟಕ್ಕೆ ಕೊಂಡೊಯ್ದೆವು. ಅಲ್ಲಿ ಆಂಜನೇಯ ದೇವರ ಜ್ಯೋತಿ ಪಡೆದುಕೊಂಡೆವು. ಬೆಟ್ಟದ ತಪ್ಪಲಿನಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಧ್ಯ ಕ್ಷೇತ್ರೀಯ ಕಾರ್ಯವಾಹ ತಿಪ್ಪೇಸ್ವಾಮಿ ಅವರು ತೆಂಗಿನಕಾಯಿ ಒಡೆದು ಜ್ಯೋತಿ ಯಾತ್ರೆಗೆ ಚಾಲನೆ ನೀಡಿದರು ಎಂದು ಹೇಳಿದರು.




ಸಂಘದ ಪ್ರಮುಖರಾದ ಅಯ್ಯನ ಗೌಡ, ಚಂದ್ರಶೇಖರ, ಕೃಷ್ಣಮೂರ್ತಿ, ಶಾಸಕ ಜನಾರ್ದನ ರೆಡ್ಡಿ ಮತ್ತು ನೂರಾರು ಸ್ಥಳೀಯ ಪ್ರಮುಖರು ಉಪಸ್ಥಿತರಿದ್ದು ಶುಭ ಹಾರೈಸಿದರು. ಪುತ್ತೂರಿನಿಂದ ವಿಶೇಷ ಬಸ್ಸಿನಲ್ಲಿ ತೆರಳಿದ್ದ 11 ಶ್ರೀರಾಮ ಭಕ್ತರು ದೇವರ ಜ್ಯೋತಿ ಮತ್ತು ಪಂಪಾ ಸರೋವರದ ನೀರು ಹಾಗೂ ಋಷ್ಯಮುಖ ಪರ್ವತದ ಮೃತ್ತಿಕೆ ಸ್ವೀಕರಿಸಿಕೊಂಡು ಊರಿನತ್ತ ಮರಳುತ್ತಿದ್ದೇವೆ. ಏ.1ರಂದು ಕಾರ್ಕಳದಲ್ಲಿ ಭವ್ಯ ಸ್ವಾಗತ ನೀಡಲಾಗುತ್ತದೆ. ಅಲ್ಲಿ ಅವಳಿ ಜ್ಯೋತಿಗಳನ್ನು ಅಲಂಕೃತ ರಥಕ್ಕೆ ಸ್ಥಳಾಂತರ ಮಾಡಲಾಗುತ್ತದೆ ಎಂದು ಅವರು ತಿಳಿಸಿದರು.

ಏ.2ರಿಂದ ಶ್ರೀರಾಮ- ಆಂಜನೇಯ ಜ್ಯೋತಿ ರಥವು ಪುತ್ತೂರು, ಕಡಬ, ಸುಳ್ಯ ತಾಲೂಕು ಮತ್ತು ಕಾಸರಗೋಡು ಜಿಲ್ಲೆಯ ಭಾಗಶಃ ಪ್ರದೇಶ ಸೇರಿ 60 ಗ್ರಾಮಗಳ ಪರ್ಯಟನ ನಡೆಸಲಿದೆ. ಈ ಸಂದರ್ಭ ಆಯಾ ಗ್ರಾಮಗಳ ಮಂದಿರ, ದೇವಸ್ಥಾನಗಳಲ್ಲಿ ರಥವನ್ನು ಸ್ವಾಗತಿಸಿ ಗೌರವಾರ್ಪಣೆ ಮಾಡಲಾಗುತ್ತದೆ. ಏ.8ರಂದು ಹನುಮಗಿರಿಗೆ ರಥ ತಲುಪಲಿದೆ. ಏ.9ರಿಂದ ಕ್ಷೇತ್ರದಲ್ಲಿ ಬ್ರಹ್ಮಕಲಶೋತ್ಸವ ನಡೆಯಲಿದೆ.

## ಕಲಿಯುಗದಲ್ಲಿ ನಾಮ ಜಪ, ಭಜನೆ ಸಂಕೀರ್ತನೆಯೇ ಶ್ರೇಷ್ಠ : ರಾಘವೇಂದ್ರ

**ಮೂಡುಬಿದಿರೆ:** ಸತ್ಯಯುಗದಲ್ಲಿ ನೂರಾರು ಸಾವಿರಾರು ವರ್ಷಗಳ ಕಾಲ ಧ್ಯಾನ ತಪಸ್ಸು ಮಾಡಿ ದೇವರನ್ನು ಒಲೈಸಿಕೊಳ್ಳುತ್ತಿದ್ದರು. ಅಂತಹ ಮಹಾತ್ಮರು ಇಚ್ಛಾ ಮರಣ ಹೊಂದುತ್ತಿದ್ದರು. ನಂತರದ ತ್ರೇತಾಯುಗದಲ್ಲಿ ಯಜ್ಞ -ಯಾಗಾದಿಗಳನ್ನು ಮಾಡಿ ದೇವರ ಕೃಪೆಗೆ ಪಾತ್ರರಾಗುತ್ತಿದ್ದರು. ನಂತರ ದ್ವಾಪರಯುಗದಲ್ಲಿಯೂ ಕೂಡ ದೇವರ ಸಾಕ್ಷಾತ್ಕಾರಕ್ಕೆ ಇದೇ ಯಜ್ಞ-ಯಾಗಾದಿಗಳು ಮುಂದುವರಿದವು. ಆದರೆ ಈಗ ಕಲಿಯುಗದಲ್ಲಿ ಮಾತ್ರ ಧ್ಯಾನ, ತಪಸ್ಸು, ಯಾಗ ಇತ್ಯಾದಿಗಳನ್ನು ಮಾಡಲು ಶಕ್ತಿ, ತಾಳ್ಮೆ, ವ್ಯವಧಾನದ ಕೊರತೆ ಇದ್ದು ಇಲ್ಲಿ ನಾಮ ಜಪ, ಸಂಕೀರ್ತನೆ, ಭಜನೆಯೇ ಶ್ರೇಷ್ಠವಾಗಿದೆ ಎಂದು ಇಲ್ಲಿನ ಜ್ಯೋತಿಷ್ಯ, ವಾಸ್ತು, ಸಂಖ್ಯಾಶಾಸ್ತ್ರ ಸಲಹೆಗಾರರಾದ ರಾಘವೇಂದ್ರ ಭಂಡಾರ್ಕರ್ ಹೇಳಿದರು.

ಅಲಂಗಾರು ಶ್ರೀ ಸತ್ಯನಾರಾಯಣ ಕಟ್ಟೆಯಲ್ಲಿ ನೆರವೇರಿದ 51 ನೇ ವರ್ಷದ ಸಾರ್ವಜನಿಕ ಶ್ರೀ ಸತ್ಯ ನಾರಾಯಣ ಪೂಜೆಯ ಸಂದರ್ಭದ ಅವರು ಧಾರ್ಮಿಕ ಭಾಷಣ ನೀಡಿದರು.



ಅಧ್ಯಕ್ಷತೆ ವಹಿಸಿದ್ದ ಉದ್ಯಮಿ ಮುಲ್ಕಾಡು ಗಣೇಶ್ ಪೈ, ಸಾರ್ವಜನಿಕ ಶ್ರೀ ಸತ್ಯನಾರಾಯಣ ಪೂಜೆಯು 51ನೇ ವರ್ಷದವರೆಗೆ ಯಶಸ್ವಿಯಾಗಿ ಮುನ್ನಡೆಯುತ್ತಿರುವ ಹಿನ್ನಲೆಯನ್ನು ವಿವರಿಸಿದರು.

> ತ್ರೇತಾಯುಗದಲ್ಲಿ ಯಜ್ಞ -ಯಾಗಾದಿಗಳನ್ನು ಮಾಡಿ ದೇವರ ಕೃಪೆಗೆ ಪಾತ್ರರಾಗುತ್ತಿದ್ದರು.
>
> ಕಲಿಯುಗದಲ್ಲಿ ದೇವರ ನಾಮ ಜಪ, ನಾಮ ಸಂಕೀರ್ತನೆಯೇ ಶ್ರೇಷ್ಠವಾಗಿದೆ

ಅಲಂಗಾರು ಬಡಗು ಶ್ರೀ ಮಹಾಗಣಪತಿ ಮಹಾಲಿಂಗೇಶ್ವರ ದೇವಸ್ಥಾನದ ಪ್ರಧಾನ ಅರ್ಚಕರಾದ ಸುಬ್ರಹ್ಮಣ್ಯ ಭಟ್ ಆಶೀರ್ವಚನ ನೀಡಿದರು. ಮುಖ್ಯ ಅತಿಥಿಗಳಾಗಿ ಮೂಡುಬಿದಿರೆ ಶ್ರೀ ವೆಂಕಟರಮಣ ಮತ್ತು ಹನುಮಂತ ದೇವಸ್ಥಾನದ ಮೊಕ್ತೇಸರ ಎಂ. ದಯಾನಂದ ಪೈ, ಶ್ರೀ ಕಾಳಿಕಾಂಬಾ ದೇವಸ್ಥಾನದ ಪುರೋಹಿತ ಪುರಂದರ ಆಚಾರ್, ನಿಶ್ಮಿತಾ ಬಸ್ ಮಾಲೀಕ ನಾರಾಯಣ ಪಿ.ಎಂ, ದ.ಕ ಜಿಲ್ಲಾ ಮೀನುಗಾರಿಕಾ ನಿಗಮದ ಕಾರ್ಯಾಧ್ಯಕ್ಷ ಮುರಳೀಧರ ಪಿ. ಕೋಟ್ಯಾನ್, ನಿವೃತ್ತ ಬ್ಯಾಂಕ್ ಮ್ಯಾನೇಜರ್ ಕೆ. ರತ್ನಾಕರ ಜೈನ್, ಉದ್ಯಮಿ ನಾರಾಯಣ ಶೆಟ್ಟಿ ಸಂದರ್ಭೋಚಿತವಾಗಿ ಮಾತನಾಡಿದರು. ಪ್ರವೀಣ್ ಭಂಡಾರಿ ಸ್ವಾಗತಿಸಿದರು, ಪ್ರಶಾಂತ್ ಭಂಡಾರಿ ಕಾರ್ಯಕ್ರಮ ನಿರ್ವಹಿಸಿದರು. ಶರತ್ ಶೆಟ್ಟಿಗಾರ್ ವಂದಿಸಿದರು.

ನಂತರ ಕಾರ್ಕಳ ಡೆನ್ನಾನ ಕಲಾವಿದರಿಂದ ತುಳು ನಾಟಕ ಪ್ರದರ್ಶಿಸಲಾಯಿತು.

ವಿವಿಧ ರೋಗಗಳಿಂದಾಗಿ ಬೆಳೆ ನಾಶ; ಹೈರಾಣಾದ ಕೃಷಿಕರು | ಕುಕ್ಕೆಯಲ್ಲಿ ಮಲೆನಾಡು ಜನ ಹಿತ ರಕ್ಷಣಾ ವೇದಿಕೆಯಿಂದ ನಡೆದ ರೈತರ ಸಭೆ

# ಬೆಳೆ ವಿಮೆ ಶೀಘ್ರ ಪಾವತಿಯಾಗದಿದ್ದರೆ ರೈತರಿಂದ ಉಗ್ರ ಪ್ರತಿಭಟನೆ: ಕಿಶೋರ್ ಶಿರಾಡಿ

**ಸುಬ್ರಹ್ಮಣ್ಯ:** ರೈತರಿಗೆ ಬೆಳೆ ವಿಮೆ ದೊರಕದೆ ರೈತರು ಸಂಕಷ್ಟಕ್ಕೆ ಈಡಾಗಿದ್ದಾರೆ. ರೈತರು ಕಟ್ಟಿದ ವಿಮಾ ತೆರಿಗೆಯನ್ನು ರೈತರಿಗೆ ನೀಡಬೇಕು. ಮುಂದಿನ 15 ದಿನದೊಳಗೆ ಬೆಳೆ ವಿಮೆ ರೈತರಿಗೆ ಪಾವತಿಯಾಗದಿದ್ದರೆ ರೈತರೆಲ್ಲರೂ ಸೇರಿ ಉಗ್ರ ಹೋರಾಟ ನಡೆಸುತ್ತೇವೆ ಎಂದು ಮಲೆನಾಡು ಜನ ಹಿತ ರಕ್ಷಣಾ ವೇದಿಕೆ ಸಂಚಾಲಕ ಕಿಶೋರ್ ಶಿರಾಡಿ ಹೇಳಿದರು.

ಸುಬ್ರಹ್ಮಣ್ಯದಲ್ಲಿ ಬುಧವಾರ ಮಲೆನಾಡು ಜನಹಿತ ರಕ್ಷಣಾ ವೇದಿಕೆ ವತಿಯಿಂದ ನಡೆದ ರೈತರ ಸಭೆ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ಪ್ರಕೃತಿ ವಿಕೋಪದಿಂದ ತೊಂದರೆಯಾದಾಗ ಸಾಲ ಮಾಡಿ ನಷ್ಟ ನೀಗಿಸುವ ಕಾರ್ಯವನ್ನು ರೈತರು ಮಾಡಿದ್ದಾರೆ. ಕೊಳೆರೋಗ, ಹಳದಿ ರೋಗಗಳಿಂದ ಕೃಷಿ ನಾಶವಾಗಿ ರೈತರು ಹೈರಾಣಾಗಿದ್ದಾರೆ. ಇದರಿಂದ ಕಾಲಕಾಲಕ್ಕೆ ಕಟ್ಟಬೇಕಾದ ಸಾಲ ಕಟ್ಟಲು ಆಗುತ್ತಿಲ್ಲ. ರೈತರ ಸಂಕಷ್ಟಕ್ಕೆ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಸ್ಪಂದಿಸುವ ಮಾನವೀಯತೆಯನ್ನು ಅಧಿಕಾರಿಗಳು ಹೊಂದದಿರುವುದು ದುಃಖಕರ ಎಂದು ಕಿಶೋರ್ ಹೇಳಿದರು.




ಬೆಳೆ ವಿಮೆಯಲ್ಲಿ ರೈತರಿಗೆ ವಂಚನೆ ಮಾಡಲಾಗಿದೆ. ಅದು ಸಮರ್ಪಕವಾಗಿ ರೈತರ ಕೈಗೆ ತಲುಪುತ್ತಿಲ್ಲ. ಮಳೆಯಿಂದಾಗಿ ರೈತರಿಗೆ ತೊಂದರೆ ಆಗಿದ್ದರೂ ಯಾವುದೇ ರೀತಿಯ ಪ್ರಕೃತಿ ವಿಕೋಪ ಆಗಿಲ್ಲ ಎಂದು ನಾವು ವರದಿ ಕೇಳಿದಾಗ ಅಧಿಕಾರಿಗಳು ತಿಳಿಸಿರುವುದು ಶೋಚನೀಯ.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತೋಟಗಾರಿಕಾ ಇಲಾಖೆ, ಕಂದಾಯ ಇಲಾಖೆ ಮತ್ತು ಕೃಷಿ ಇಲಾಖೆ, ಡಿಸಿಸಿ ಬ್ಯಾಂಕ್ ಅಧಿಕಾರಿಗಳೊಂದಿಗೆ ಸಭೆ ಮಾಡಿ ಪ್ರಕೃತಿ ವಿಕೋಪದ ಬಗ್ಗೆ ಮಾಹಿತಿ ಪಡೆಯುತ್ತಾರೆ. ಪ್ರಕೃತಿ ವಿಕೋಪ ನಿರ್ವಹಣಾ ತಂಡದಿಂದ ವರದಿ ಪಡೆಯುತ್ತಾರೆ. ಈ ತಂಡ ಜಿಲ್ಲಾಧಿಕಾರಿಗಳಿಗೆ ಸಮರ್ಪಕವಾಗಿ ವರದಿ ನೀಡಿರದೆ ಈ ಸಮಸ್ಯೆ ಉಂಟಾಗಿದೆ ಎಂದರು.

> ಪ್ರಕೃತಿ ವಿಕೋಪದಿಂದ ತೊಂದರೆಯಾದಾಗ ಸಾಲ ಮಾಡಿ ನಷ್ಟ ನೀಗಿಸುವ ಕಾರ್ಯವನ್ನು ರೈತರು ಮಾಡಿದ್ದಾರೆ.
>
> ಕೊಳೆರೋಗ, ಹಳದಿ ರೋಗಗಳಿಂದ ಕೃಷಿ ನಾಶವಾಗಿ ರೈತರು ಹೈರಾಣಾಗಿದ್ದಾರೆ.

ಈ ನಿಟ್ಟಿನಲ್ಲಿ ಉನ್ನತ ಮಟ್ಟದ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸಬೇಕು. ಗ್ರಾಮೀಣ ಭಾಗದ ಅಧಿಕಾರಿಗಳಾದ ಪಿಡಿಒ ಇತ್ಯಾದಿಗಳು ತಮ್ಮ ಭಾಗದ ಪ್ರಕೃತಿ ವಿಕೋಪದ ಬಗ್ಗೆ ಸೂಕ್ತ ಮಾಹಿತಿಯನ್ನು ಉನ್ನತ ಅಧಿಕಾರಿಗಳಿಗೆ ನೀಡಬೇಕು. ಆದರೆ, ವರದಿ ನೀಡದೆ ಇರುವುದರಿಂದ ರೈತರಿಗೆ ಬೆಳೆ ವಿಮೆ ಬಂದಿಲ್ಲ. ಜಿಲ್ಲಾಡಳಿತ ರೈತರ ಬಗ್ಗೆ ನಿರ್ಲಕ್ಷ್ಯ ತೋರಿಸಬಾರದು. ರೈತರಿಗೆ ಸಹಾಯಹಸ್ತ ಚಾಚಬೇಕು. ಬೆವರು ಸುರಿಸಿ ಕೃಷಿ ಮಾಡಿ ಸ್ವಾವಲಂಬಿ ಬದುಕನ್ನು ಕಟ್ಟಿಕೊಂಡು ಬಂದ ರೈತನಿಗೆ ಅದರಲ್ಲೂ ವಿದ್ಯಾವಂತ ರೈತರಿಗೆ ಬೆಲೆಯೇ ಇಲ್ಲದಂತಾಗಿದೆ ಎಂದು ಅವರು ತಿಳಿಸಿದರು.

ಬೆಳೆ ವಿಮೆ ವರದಿಯನ್ನು ಸರಕಾರಕ್ಕೆ ನೀಡಿಲ್ಲ. ಇದರಿಂದ ಸರಕಾರದಿಂದ ವಿಮೆ ಮೊತ್ತ ಬಂದಿಲ್ಲ. ಹೀಗಾಗಿ ರೈತರಿಗೆ ಸಮಸ್ಯೆಯಾಗಿದೆ. ಕಳೆದ ವರ್ಷ ವಿಪರೀತ ಮಳೆಯಾಗಿದ್ದರೂ ಪ್ರಕೃತಿ ವಿಕೋಪವೇ ಆಗಿಲ್ಲ ಎಂಬ ವರದಿ ನೀಡಿರುವುದು ತಪ್ಪು. ಆದುದರಿಂದ ಜನಪ್ರತಿನಿಧಿಗಳು ತಕ್ಷಣ ಈ ಬಗ್ಗೆ ಕಾರ್ಯಪ್ರವೃತ್ತರಾಗಿ ರೈತರಿಗೆ ಬೆಳೆ ವಿಮೆ ದೊರಕಿಸಿ ಕೊಡಬೇಕು. ಶೀಘ್ರ ವಿಮೆ ಬಾರದೆ ಇದ್ದಲ್ಲಿ ರೈತರೆಲ್ಲರೂ ಸೇರಿ ವೇದಿಕೆ ವತಿಯಿಂದ ಉಗ್ರ ಹೋರಾಟ ಮಾಡುತ್ತೇನೆ ಎಂದು ಕಿಶೋರ್ ಶಿರಾಡಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಮಲೆನಾಡು ಜನಹಿತ ರಕ್ಷಣಾ ವೇದಿಕೆಯ ಪ್ರಮುಖರಾದ ಜಯಪ್ರಕಾಶ್ ಕೂಜುಗೋಡು, ರಮಾನಂದ ಎಣ್ಣೆಮಜಲು, ಅಶೋಕ್ ಕುಮಾರ್ ಮೂಲೆಮಜಲು, ಮಿಲನ್ ಮಾದಪ್ಪ ಮತ್ತಿತರರು ಉಪಸ್ಥಿತರಿದ್ದರು.

## CHANGE OF NAME

I, Abraham, S/o. Late Sri P.A. Jose, Devarakolli, Madikeri Taluk, Kodagu District, Karnataka State, India, do hereby solomnly affirm that in my Son's nameis mentioned as **PRINCE ABRAHAM** instead of **PRINCE ABRAHAM P**. I Swear that both **PRINCE ABRAHAM** alias **PRINCE ABRAHAM P**. pertain my Son's Names only. Henceforth I state that for all purposes my Son name as **PRINCE ABRAHAM P**. vide affidavit dated 2nd April 2026 sworn and signed before the Notary K.S. Chandrashekar Madikeri Taluk, Kodagu.

---

ಮಾನ್ಯ ಪ್ರಧಾನ ಸಿವಿಲ್ ನ್ಯಾಯಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಳ್ತಂಗಡಿ.

**ಮೂಲದಾವೆ ನಂ. 119/2016**

ಇವರೊಳಗೆ,

**ರಮೇಶ್ ಭಟ್ ಮತ್ತು ಇತರರು** ...ವಾದಿ

-ಮತ್ತು-

**ಶ್ರೀ ಕಿನ್ನಿ ಗೌಡ ಮತ್ತು ಇತರರು** ...ಎದುರುದಾರರು

**ಸಾರ್ವಜನಿಕ ಪ್ರಕಟಣೆ**

D1(g) ಯಶೋಧ, ಸುಮಾರು 49 ವರ್ಷ ಪ್ರಾಯ ಬಿನ್ ದಿ.ಕಿನ್ನಿ ಗೌಡ, ಹೊಕ್ಕಿಲ ಮನೆ ನಡಗ್ರಾಮ, ಬೆಳ್ತಂಗಡಿ ತಾಲೂಕು, ದ.ಕ ...ಇವರಿಗೆ

ಬೆಳ್ತಂಗಡಿ ತಾಲೂಕು ದ.ಕ. **ಶ್ರೀಮತಿ ಜಯಂತಿ ಆರ್ ಭಟ್**, ಸುಮಾರು 59 ವರ್ಷ, ಕೋಂ ದಿವಂಗತ ರಮೇಶ್ ಭಟ್, ಕೊಕ್ಕಿಲ ಮನೆ, ನಡ ಗ್ರಾಮ, ಬೆಳ್ತಂಗಡಿ ತಾಲೂಕು ಇವರು, ಮಾನ್ಯ ಪ್ರದಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಲಯ, ಬೆಳ್ತಂಗಡಿ ಇವರಲ್ಲಿ ನಿಮ್ಮ ವಿರುದ್ಧ ಮೂಲದಾವೆ ಸಂಖ್ಯೆ 119/2016 ನ್ನು ಹೂಡಿದ್ದು, ಸದ್ರಿ ದಾವೆಯಲ್ಲಿ ನೀವು D1(g)ನೇ ಪ್ರತಿವಾದಿಯಾಗಿದ್ದು, ದಿನಾಂಕ 22-4-2026 ರಂದು ಪೂರ್ವಾಹ್ನ 11-00 ಗಂಟೆಗೆ ನಿಮ್ಮ ಹಾಜರಾತಿಗಾಗಿ ಮೂಂದೂಡಲ್ಪಟ್ಟಿರುತ್ತದೆ. ತಾವುಗಳು ಸದ್ರಿ ದಿನಾಂಕದಂದು ಸ್ವತಃ ಯಾ ನಿಮ್ಮ ನ್ಯಾಯವಾದಿಗಳ ಮೂಲಕ ಹಾಜರಾಗತಕ್ಕದ್ದು ತಪ್ಪಿದ್ದಲ್ಲಿ, ನಿಮ್ಮ ಅನುಪಸ್ಥಿತಿಯಲ್ಲಿ ನ್ಯಾಯಾಲಯವು ಮೇಲಿನ ದಾವೆಯಲ್ಲಿ ಸೂಕ್ತ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿರುತ್ತದೆ.

ನ್ಯಾಯಲಯದ ಆದೇಶದ ಮೇರೆಗೆ,

ಸಹಿ/- (ಶಿರಸ್ತೇದಾರರು)
ಮಾನ್ಯ ಪ್ರಧಾನ ದಿವಾನಿ ನ್ಯಾಯಾಧೀಶರ ನ್ಯಾಯಾಲಯ ಬೆಳ್ತಂಗಡಿ.

ಸಹಿ/- **ಸೇವಿಯರ್ ಪಾಲೇಲಿ**
ವಕೀಲರು, ಬೆಳ್ತಂಗಡಿ.

---

## PUBLIC NOTICE

Notice is hereby given to the general public that the immovable property more fully described in the Schedule is a Joint family property and is presently under dispute among the family members. All members of the public, including any prospective purchasers, banks, financial institutions, or any other lending agencies are hereby cautioned not to enter into any transaction of whatsoever nature, including sale, purchase, mortgage, charge, lease, or to sanction any loan or advance against the said property. Any person or institution dealing with the said property contrary to this notice shall be doing so at their own risk, costs, and consequences, and the undersigned shall not be responsible or liable for any such transactions.

**SCHEDULE DESCRIPTION OF PROPERTY**

Immovable property held on warg right situated at Bajal Village Mangaluru Taluk and comprised in:

| R.S. No. | Classification | Extent A-C | Property No. As per Khatha |
|---|---|---|---|
| 81/2A (S. No81-2AP6 As per Conversion order) | Converted | 0-07.75 (313.64 Sq. Mtrs) | 53-2-224-59 |

Along with Residential premise bearing D. No. 2-8/1 and with all mamool and easementary rights attached thereto.

*Sd/- Smt. Amitha,*
*D/o Late Bhaskar K. R/at D. No. 2-49/10 Matha, Jayanagara, Bajal, Jalligudde, Mangaluru-575007.*
*(Contact: 9448084137)*

Place: Mangaluru
Date: 01-04-2026

---

## ಪುತ್ತೂರು ಮಾರುಕಟ್ಟೆ ಧಾರಣೆ

**02-04-2026 ಅಡಿಕೆ ಧಾರಣೆ ಕೆ.ಜಿ.ಗೆ**

| | | | |
|---|---|---|---|
| ಹೊಸ ಅಡಿಕೆ | 260 - 490 | ಹಳೆ ಕರಿಗೋಟು | 235 - 265 |
| ಚೋಲ್ ಅಡಿಕೆ | 530 - 555 | ಹಸಿ ಕೊಕ್ಕೋ | 70 - 100 |
| ಡಬಲ್ ಚೋಲ್ | 530 - 555 | ಒಣ ಕೊಕ್ಕೋ | 270 - 300 |
| ಹೊಸ ಪಟೋರ | 350 - 400 | **ಕಾಳುಮೆಣಸು ಧಾರಣೆ** | |
| ಹಳೆ ಪಟೋರ | 380 - 410 | ಕಾಳುಮೆಣಸು | 450 - 665 |
| ಹೊಸ ಉಳ್ಳಿ | 120 - 290 | **ರಬ್ಬರ್ ಧಾರಣೆ : ಗ್ರೇಡ್** | |
| ಹಳೆ ಉಳ್ಳಿ | 105 - 290 | ಆರ್‌ಎಸ್‌ಎಸ್ 1 | 223.00 |
| ಹೊಸ ಕೋಕಾ | 325 - 345 | ಆರ್‌ಎಸ್‌ಎಸ್ 2 | 196.00 |
| ಹಳೆ ಕೋಕಾ | 325 - 345 | ಸ್ಕ್ರಾಪ್ 1 | 134.00 |
| ಹೊಸ ಕರಿಗೋಟು | 235 - 265 | ಸ್ಕ್ರಾಪ್ 2 | 125.00 |

---

## ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಕಾಶಿಪುರ ವೃತ್ತ, ಶಿವಮೊಗ್ಗ-577204

ಐ.ಎಫ್.ಟಿ. ಸಂ:51/2025-26 ಮೊದಲ ಕರೆ/ಎರಡನೇ ಕರೆ/ಮೂರನೆ ಕರೆ ದಿ: 31.03.2026

**ಸೆಕ್ಷನ್ 1: ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)- ಕೆಡಬ್ಲ್ಯೂ - 2/3/4**

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗ ರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆಡಬ್ಲ್ಯೂ-2/3/4 ಅನ್ವಯ ಶಿವಮೊಗ್ಗ ಉಪವಿಭಾಗದ ವ್ಯಾಪ್ತಿಯಲ್ಲಿನ 05 ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಟೆಂಡರ್‌ಗೆ ಇಡಲಾದ ಮೊತ್ತ ರೂ.40.10 ಲಕ್ಷದಿಂದ ರೂ.161.26 ಲಕ್ಷಗಳು, ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್‌ನ ವೆಬ್ ಸೈಟ್ ವಿಳಾಸ: http:/kppp.karnataka.gov.inನಲ್ಲಿ ದಿನಾಂಕ: 31.03.2026 ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: 15.04.2026 17:00 ಘಂಟೆ.ಇನ್ನುಳಿದಂತೆ ವೆಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/- ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ

ವಾ.ಸಾ.ಸಂ.ಇ/ಕೆಸ್‌ಎಂಸಿಎ/ಶಿ/26-27/05/04/09

---

## ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

**ತಿರುವನಂತಪುರಂ:** ಕೇರಳ ರಾಜ್ಯ ಲಾಟರಿಯ ಕಾರುಣ್ಯ ಪ್ಲಸ್ (ನಂ.KN-617) ಡ್ರಾ ಏಪ್ರಿಲ್ 02ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

**1st Prize Rs.1,00,00,000/- [1 Crore]**
**PF 382980 (KOTTAYAM)**

**Consolation Prize Rs.5,000/-**
PA 382980 PB 382980 PC 382980 PD 382980
PE 382980 PG 382980 PH 382980 PJ 382980
PK 382980 PL 382980 PM 382980

**2nd Prize Rs.30,00,000/- [30 Lakhs]**
**PH 112390 (GURUVAYOOR)**

**3rd Prize Rs.5,00,000/- [5 Lakhs]**
**PG 354325 (KOLLAM)**

FOR THE TICKETS ENDING WITH THE FOLLOWING NUMBERS

**4th Prize Rs.5,000/-**
0454 0483 1153 1532 3271 3581 3787 3792 4633 7393 7961 8104 8195 8235 8486 8882 9495 9524 9652

**5th Prize Rs.2,000/-**
3291 3374 5583 5839 7303 9053

**6th Prize Rs.1,000/-**
0475 0677 1289 1703 2601 3243 3283 3584 3598 3707 4513 4691 4736 6607 6837 7234 7313 8207 8352 9161 9310 9583 9812 9885 9957

**7th Prize Rs.500/-**
0042 0256 0274 0350 0360 0789 0817 1189 1265 1349 1500 1982 2030 2373 2501 2552 2803 2807 2854 3005 3461 3729 3733 3750 3796 3910 4094 4187 4228 4442 4490 4707 4713 4868 4907 5305 5463 5505 5562 5645 5738 5801 5935 6018 6049 6060 6100 6113 6317 6466 6570 7289 7386 7409 7449 7471 7515 7702 7709 7933 8006 8166 8213 8472 8721 8777 8792 8846 9094 9100 9177 9295 9328 9446 9539 9996

**8th Prize Rs.200/-**
0041 0075 0155 0207 0297 0348 0522 0607 0638 0657 0752 0810 0957 1015 1062 1106 1142 1273 1596 1607 1834 2018 2190 2299 2316 2317 2337 2896 3020 3124 3132 3512 3545 3872 3877 3898 4266 4540 4634 5111 5363 5416 5612 5640 5677 5943 5992 6097 6110 6288 6300 6314 6356 6401 6876 7059 7192 7216 7424 7655 7898 8000 8013 8079 8112 8277 8286 8409 8430 8607 8749 8797 8860 9164 9180 9266 9321 9365 9375 9386 9480 9522 9538 9584

**9th Prize Rs.100/-**
0009 0048 0085 0104 0177 0211 0287 0292 0317 0364 0439 0528 0586 0630 0712 0794 0834 1004 1181 1259 1279 1374 1402 1494 1508 1512 1582 1586 1693 1782 1812 1821 1824 1995 2040 2110 2142 2147 2250 2370 2375 2388 2444 2505 2530 2579 2581 2591 2610 2627 2707 2742 2898 2947 2955 2969 2974 2993 3057 3103 3284 3392 3555 3571 3597 3607 3610 3626 4010 4024 4193 4221 4427 4466 4598 4601 4663 4688 4778 4813 5159 5224 5387 5495 5605 5606 5608 5669 5688 5805 5807 5810 5818 5856 5881 5890 5900 6026 6159 6194 6199 6294 6409 6429 6439 6463 6500 6507 6614 6720 6764 6905 6975 7001 7003 7096 7114 7118 7150 7304 7305 7405 7455 7521 7532 7536 7595 7654 7668 7681 7732 7782 7799 7816 7821 7904 8037 8296 8388 8574 8625 8633 8798 8858 8871 9112 9130 9148 9257 9267 9350 9393 9396 9515 9548 9839

---

## ಹುಬ್ಬಳ್ಳಿ - ಧಾರವಾಡ ಮಹಾನಗರ ಪಾಲಿಕೆ

ಘನತ್ಯಾಜ್ಯ ವಸ್ತು ನಿರ್ವಹಣೆ ವಿಭಾಗ, ಹುಬ್ಬಳ್ಳಿ.

ಸಂಖ್ಯೆ : ಎಚ್.ಡಿ.ಎಂ.ಸಿ./74/05/2026-27 ದಿನಾಂಕ : 02-04-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಪಾಲಿಕೆಯು 15ನೇ ಹಣಕಾಸು ಹಾಗೂ ಸಾಮಾನ್ಯ ನಿಧಿ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳಿಗಾಗಿ ನೋಂದಾಯಿತ ಅರ್ಹ ಏಜೆನ್ಸಿಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಿದೆ.

| ಕ್ರ ಸಂ. | ಟೆಂಡರ್ ಇಂಡೆಂಟ್ ಸಂಖ್ಯೆ | ಟೆಂಡರ್‌ಗಿಟ್ಟ ಮೊತ್ತ (ರೂ. ಗಳಲ್ಲಿ) | ಇ.ಎಂ.ಡಿ. ಮೊತ್ತ (ರೂ. ಗಳಲ್ಲಿ) | ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ | ಟೆಂಡರ್ ತೆರೆಯುವ ದಿನಾಂಕ & ಸಮಯ |
|---|---|---|---|---|---|
| 01 | DMA/2026-27/IND6153 | 79,53,600.00 | 1,59,072.00 | 13-04-2026 ರ ಸಂಜೆ 4.30 ಘಂಟೆ | 15-04-2026 ರ ಬೆಳಿಗ್ಗೆ 10.30 ಘಂಟೆ |
| 02 | DMA/2025-26/IND5857 | 99,60,000.00 | 1,99,200.00 | | |
| 03 | DMA/2026-27/SE7638 | 49,84,320.00 | 99,686.00 | | |
| 04 | DMA/2026-27/SE7639 | 49,38,300.00 | 98,766.00 | | |

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಹೆಚ್ಚಿನ ಮಾಹಿತಿಯನ್ನು ದಿನಾಂಕ : 03-04-2026 ರಿಂದ **www.kppp.karnataka.gov.in** ಗೆ ಲಾಗಿನ್ ಆಗಿ ಪಡೆಯಬಹುದು, ಹೆಚ್ಚಿನ ವಿವರಗಳಿಗೆ ಕೆಳ ಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು (ಪರಿಸರ),
ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿ.

ಡಿಐಪಿಆರ್/ಧಾರವಾಡ/11/ಮಣಿಪಾಲ್/2026-27

---

## ಪಟ್ಟಣ ಪಂಚಾಯತ್ ಕಾರ್ಯಾಲಯ, ಕಿನ್ನಿಗೋಳಿ, ದಕ ಜಿಲ್ಲೆ

ಸಂ:ಮುಅ/ಕಿಪಪಂ/ತಾಂ.ವಿ/ಟೆಪ್ರ/ಸಿ.ಆರ್25/2025-26 ದಿ: 26-03-2026

**ಮುದ್ದಾಂ ಕೊಟೇಷನ್ ಪ್ರಕಟಣೆ**

ಕಿನ್ನಿಗೋಳಿ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಸಾಮಾನ್ಯ ನಿಧಿ ಅನುದಾನದಡಿಯಲ್ಲಿ 03 ವಲಯಗಳ ಮಳೆನೀರು ಚರಂಡಿಗಳ ಹೂಳೆತ್ತಲು, ರಸ್ತೆ ಬದಿಯಲ್ಲಿ ಅನಗತ್ಯವಾಗಿ ಬೆಳೆದಿರುವ ಗಿಡಗಂಟಿಗಳನ್ನು ತೆರವು ಮಾಡಲು, ಅಪಾಯಕಾರಿಯಾಗಿ ಬೆಳೆದ ಮರಗಳ ಕೊಂಬೆ ತೆರವು ಮಾಡಲು ಅರ್ಹ ಸೇವಾದಾರರಿಂದ ನಿಗದಿತ ನಮೂನೆಯಲ್ಲಿ ಮುದ್ದಾಂ ಕೊಟೇಷನ್ ಆಹ್ವಾನಿಸಲಾಗಿದೆ.

ಆಸಕ್ತರು ಹೆಚ್ಚಿನ ಮಾಹಿತಿಯನ್ನು ಪಟ್ಟಣ ಪಂಚಾಯತ್ ನಿಂದ ಕಛೇರಿ ಸಮಯದಲ್ಲಿ ಸಂಪರ್ಕಿಸಿ ಪಡೆಯಬಹುದು. ಕೊಟೇಷನ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08-04-2026** ಅಪರಾಹ್ನ **3.00** ಗಂಟೆಯವರೆಗೆ, ಕೊಟೇಷನ್ ತೆರೆಯುವ ದಿನಾಂಕ: **08-04-2026**ರ ಅಪರಾಹ್ನ **4.30** ಗಂಟೆಗೆ.

ಸಹಿ/-, ಅಧ್ಯಕ್ಷರು, ಕಿನ್ನಿಗೋಳಿ ಪಟ್ಟಣ ಪಂಚಾಯತ್
ಸಹಿ/-, ಮುಖ್ಯಾಧಿಕಾರಿ, ಕಿನ್ನಿಗೋಳಿ ಪಟ್ಟಣ ಪಂಚಾಯತ್

DIPR/DK/KSMCA/12/26-27 dt:02.04.2026

---

## ಬಜಪೆ ಪಟ್ಟಣ ಪಂಚಾಯತ್

ಅಂಚೆ: ಬಜಪೆ, ಮಂಗಳೂರು ತಾಲೂಕು, ದ.ಕ. ಜಿಲ್ಲೆ 574142
ದೂರವಾಣಿ ಸಂಖ್ಯೆ: 0824-2252418 (Email: cobajpetp@gmail.com)

ಬ.ಪ.ಪಂ/ಸಿಆರ್/ಕಂ.ನಿ/01/2026-27 ದಿನಾಂಕ: 01/04/2026

**ಸಾರ್ವಜನಿಕ ಪ್ರಕಟಣೆ**

ವಿಷಯ: ಬಜಪೆ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅನುಮತಿ ಪಡೆಯದೇ ಬ್ಯಾನರ್ ಪ್ರದರ್ಶನ ನಿರ್ಬಂಧಿಸಿರುವ ಕುರಿತು.

ಬಜಪೆ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಅನುಮತಿ ಪಡೆಯದೇ ಬ್ಯಾನರ್ ಪ್ರದರ್ಶಿಸುತ್ತಿರುವುದು ಕಂಡು ಬಂದಿದ್ದು ಅನುಮತಿ ಮುಕ್ತಾಯಗೊಂಡ ನಂತರವೂ ತೆರವುಗೊಳಿಸದೇ ಇರುವುದರಿಂದ ಪಟ್ಟಣ ಪಂಚಾಯತ್ ವತಿಯಿಂದ ತೆರವುಗೊಳಿಸಿ ಅಂತವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.

ಆದುದರಿಂದ ಈಗಾಗಲೇ ಅಳವಡಿಸಿರುವ ಬ್ಯಾನರ್‌ಗಳಿಗೆ ಸಂಬಂಧಿಸಿ ಮುಂದಿನ 10 ದಿನಗಳ ಒಳಗೆ ಅನುಮತಿ ರಹಿತ ಬ್ಯಾನರ್‌ಗಳನ್ನು ತೆರವುಗೊಳಿಸತಕ್ಕದ್ದು ಹಾಗೂ ಮುಂದಿನ ದಿನಗಳಲ್ಲಿ ಬಜಪೆ ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಬ್ಯಾನರ್ ಅಳವಡಿಸುವವರು ಕಡ್ಡಾಯವಾಗಿ ಅನುಮತಿ ಪಡೆದು ಅನುಮತಿ ನೀಡಲಾದ ಸ್ಥಳದಲ್ಲಿಯೇ ಅಳವಡಿಸುವುದು, ತಪ್ಪಿದ್ದಲ್ಲಿ ಅನುಮತಿ ರಹಿತ ಬ್ಯಾನರ್‌ಗಳನ್ನು ಪಟ್ಟಣ ಪಂಚಾಯತ್ ವತಿಯಿಂದ ತೆರವುಗೊಳಿಸಿ ಅಳವಡಿಸಿದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾವುದು.

ಸಹಿ/- ಮುಖ್ಯಾಧಿಕಾರಿ,
ಬಜಪೆ ಪಟ್ಟಣ ಪಂಚಾಯತ್

DIPR/MNG/KSMCA/17/26-27 dt: 02.04.2026

---

ಕರ್ನಾಟಕ ಸರ್ಕಾರ

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಉಪ ನಿರ್ದೇಶಕರ ಕಛೇರಿ, 1ನೇ ಮಹಡಿ 'ಬಿ ಬ್ಲಾಕ್' ರಜತಾದ್ರಿ, ಮಣಿಪಾಲ ಉಡುಪಿ ಜಿಲ್ಲೆ.
ದೂರವಾಣಿ ಸಂಖ್ಯೆ: 0820-2574978 E-Mail: ddwcdudupi@gmail.com

ಸಂ: ಉನಿಉ:ಐಸಿಡಿ:ಅಂ.ಸಿಆರ್:11:2026-27 ದಿನಾಂಕ: 31/03/2026

**ಟೆಂಡರ್ ಪ್ರಕಟಣೆ**

ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ ಜಿಲ್ಲೆ ಇಲ್ಲಿಗೆ ಅಧಿಕೃತ ಸರ್ಕಾರಿ ಕೆಲಸಕ್ಕಾಗಿ 2026-27ನೇ ಸಾಲಿಗೆ ಗುತ್ತಿಗೆ ಆಧಾರದಲ್ಲಿ (Swift Dzire/Toyota Glanza/Toyota Etios ಮಾದರಿಯ ವಾಹನ)ವನ್ನು ಒದಗಿಸಲು ಟೆಂಡರ್ ಕರೆಯಲಾಗಿದೆ. ಆಸಕ್ತ ಅರ್ಜಿದಾರರು ಉಪನಿರ್ದೇಶಕರ ಕಛೇರಿ, 204, 'ಬಿ ಬ್ಲಾಕ್', 1ನೇ ಮಹಡಿ, ರಜತಾದ್ರಿ, ಮಣಿಪಾಲ ಇಲ್ಲಿಂದ ಟೆಂಡರ್ ನಮೂನೆಗಳನ್ನು ಮತ್ತು ವಾಹನದ ಬಗೆಗಿನ ಷರತ್ತುಗಳ ಪ್ರಕಟಣೆಯನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ವಿವರ: (1) ಟೆಂಡರ್ ಪ್ರಕಟಣೆ ದಿನಾಂಕ: 31.03.2026 (2) ಭರ್ತಿ ಮಾಡಿದ ಟೆಂಡರ್ ಫಾರಂಗಳ ಸಲ್ಲಿಕೆಗೆ ಕೊನೆಯ ದಿನಾಂಕ ಮತ್ತು ಸಮಯ: 15.04.2026 ರಂದು ಅಪರಾಹ್ನ 5.30 ಗಂಟೆಗೆ (3) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ: 16.04.2026 ರಂದು ಪೂರ್ವಾಹ್ನ:10.30 ಗಂಟೆ, ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ ಜಿಲ್ಲೆ,

ಹೆಚ್ಚಿನ ಮಾಹಿತಿಗಾಗಿ ಉಪನಿರ್ದೇಶಕರ ಕಛೇರಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, 204, 'ಬಿ ಬ್ಲಾಕ್', 1ನೇ ಮಹಡಿ, ರಜತಾದ್ರಿ, ಮಣಿಪಾಲ ಇವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- (ಉಮೇಶ್ ಟಿ ಎಲ್)
ಉಪನಿರ್ದೇಶಕರು
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಡುಪಿ ಜಿಲ್ಲೆ

ವಾಸಾಇ/ಸನಿಉ/ಕೆಎಸ್‌ಎಂಸಿಎ/06/26-27 ದಿ: 02.04.26

---

ಕರ್ನಾಟಕ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

## ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ. ದಾವಣಗೆರೆ ಜಿಲ್ಲೆ

ದೂ. ಸಂ: 08189 228044. Email: ghchannagiri@gmail.com

ಕ್ರ.ಸಂ.ಸಾಆಚ/308/2026-27 ದಿನಾಂಕ: 02.04.2026

**ಇ-ಟೆಂಡರ್ ಪ್ರಕಟಣೆ**

2026-27ನೇ ಸಾಲಿನಲ್ಲಿ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ ದಾವಣಗೆರೆ ಜಿಲ್ಲೆ ಇಲ್ಲಿ ನಾನ್ ಕ್ಲಿನಿಕಲ್ ಮತ್ತು 'ಡಿ' ಗ್ರೂಪ್ ಸೇವೆಗಳನ್ನು ಪಡೆಯಲು ಉಲ್ಲೇಖ (3)ರಲ್ಲಿ ಜಿಲ್ಲಾಧಿಕಾರಿಗಳು, ದಾವಣಗೆರೆ, ರವರು ಅನುಮತಿ ನೀಡಿರುವಂತೆ, ಅರ್ಹ ಟೆಂಡರ್‌ದಾರರಿಂದ / ಮಾನ್ಯತೆ ಪಡೆದ ಅಧಿಕೃತ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಅಧಿನಿಯಮ 2000 ಅನ್ವಯ ದ್ವಿ-ಲಕೋಟೆ ಪದ್ಧತಿಯಲ್ಲಿ ಇ-ಟೆಂಡರ್ ಪ್ರಕಟಣೆ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ವಿಳಾಸ: http://kppp.karnataka.gov.in ರಲ್ಲಿ ಪರೀಶಿಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸುವುದು. ಇ-ಪೋರ್ಟಲ್‌ನಲ್ಲಿ ಕಾಣಿಸಿದ ನಿಬಂಧನೆಗಳು, ಟೆಂಡರ್ ಇ.ಎಂ.ಡಿ ಮೊತ್ತ ಹಾಗೂ ಇತರೆ ವಿವರಗಳನ್ನು ಗಮನಿಸಿ ಕ್ರಮ ವಹಿಸುವುದು ಟೆಂಡರ್ ವಿವರ ಈ ಕೆಳಕಂಡಂತೆ ಇರುತ್ತದೆ.

(1) ಟೆಂಡರ್ ನ್ನು ಇ-ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ 02/03/2026 ರಿಂದ 02/05/2026 ಅಪರಾಹ್ನ 4.30ರ ವರೆಗೆ (2) ದ್ವಿ-ಲಕೋಟೆಯ ಪದ್ಧತಿಯಂತೆ ಪೋರ್ಟಲ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ:02/05/2026ರ ಅಪರಾಹ್ನ 4.30ರ ವರೆಗೆ (3) ದ್ವಿ-ಲಕೋಟೆಯ ಪದ್ಧತಿಯಂತೆ ಇ-ಪೋರ್ಟಲ್ ನಲ್ಲಿ ಟೆಂಡರ್ (ತಾಂತ್ರಿಕ ದಾಖಲಾತಿ) ತೆರೆಯುವ ದಿನಾಂಕ 04/05/2026ರ ಸಂಜೆ 4.30 ಗಂಟೆಗೆ. (4) ಟೆಂಡರ್ ಅಂದಾಜು ಮೊತ್ತ ರೂ.59,00,000.00 (5) ಇಎಂಡಿ ಮೊತ್ತ ರೂ. 1,18,000.00 ಇ-ಪ್ರಕ್ಯೂರ್‌ಮೆಂಟ್ ವಿಳಾಸ:http://kppp.karnataka.gov.in ರಲ್ಲಿ ಪರಿಶೀಲಿಸಿ ಸೂಕ್ತ ದಾಖಲಾತಿಗಳೊಂದಿಗೆ ಟೆಂಡರ್ ಸಲ್ಲಿಸುವುದು.

ಸಹಿ/- ಮುಖ್ಯ ವೈದ್ಯಾಧಿಕಾರಿಗಳು
ಸಾರ್ವಜನಿಕ ಆಸ್ಪತ್ರೆ, ಚನ್ನಗಿರಿ.

ವಾಸಾಇ/ಡಿವಿಜಿ/10/ ಕೆಎಸ್‌ಎಂಸಿಎ/2026-27

---

## ಮಂಗಳೂರು ಮಹಾನಗರಪಾಲಿಕೆ

ಇಎಸ್‌ಟಿ ಟೆಂಡರ್ 71/2025-26 ದಿನಾಂಕ: 31-03-2026

**ಟೆಂಡರ್ ಪ್ರಕಟಣೆ**

ಈ ಕೆಳಗೆ ಸೂಚಿಸಿರುವ ಕಾಮಗಾರಿಗಳನ್ನು ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕರಣ ಆಕ್ಟ್ 2000ರ ನಿಯಮದಂತೆ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ನ ಕೆ.ಡಬ್ಲ್ಯೂ-1 ನಿಯಮದನ್ವಯ ಮ್ಯಾನುವಲ್ ಟೆಂಡರ್‌ನ್ನು ಸಾಮಾನ್ಯ ನಿಧಿಯಲ್ಲಿ ನಿರ್ವಹಿಸುವ ಬಗ್ಗೆ ಲೋಕೋಪಯೋಗಿ ಇಲಾಖೆಯ ನೊಂದಾಯಿತ ಗುತ್ತಿಗೆದಾರರಿಂದ ಐಟಂವಾರು ನೆಲೆಯಲ್ಲಿ ಮೊಹರಾದ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತಿಗೆದಾರರು ನೋಂದಾವಣಿ ಹೊಂದಿರುವ ಬಗ್ಗೆ ದಾಖಲೆಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

| ಕ್ರ ಸಂ. | ಕಾಮಗಾರಿಗಳ ಸ್ವರೂಪ | ಒಟ್ಟು ಕಾಮಗಾರಿಗಳು | ಟೆಂಡರ್ ಮೊತ್ತ |
|---|---|---|---|
| 1 | ಮಹಾನಗರಪಾಲಿಕಾ ವ್ಯಾಪ್ತಿಯ ವಿವಿಧ ವಿಭಾಗಗಳಲ್ಲಿ ಆಳುಗುಂಡಿ ಕೊಳವೆ ದುರಸ್ತಿ, ಬೋರ್‌ವೆಲ್ ಕೊರೆದು ಮೋಟಾರ್ ಅಳವಡಿಕೆ, ಆರ್.ಸಿ.ಸಿ. ಮೋರಿ ನಿರ್ಮಾಣ, ರಸ್ತೆ ಅಭಿವೃದ್ಧಿ, ಆಳುಗುಂಡಿ ತಗ್ಗಿಸುವುದು, ಚರಂಡಿ ನಿರ್ಮಾಣ, ಸ್ಲ್ಯಾಬ್ ಅಳವಡಿಕೆ, ತಡೆಗೋಡೆ ನಿರ್ಮಾಣ, ಪಂಪ್ ಬದಲಾವಣೆ, ಟ್ರಾನ್ಸ್‌ಫಾರ್ಮರ್ ದುರಸ್ತಿ, ಹಂಪ್ಸ್ ಅಳವಡಿಕೆ, ಡಾಂಬರೀಕರಣ, ಬಣ್ಣ ಬಳಿಯುವುದು, ಜೆಸಿಬಿ ಒದಗಿಸುವುದು, ಕಾಂಕ್ರೀಟೀಕರಣ, ಚರಂಡಿ ಅಭಿವೃದ್ಧಿ, ಕಾಂಕ್ರೀಟ್ ರಿಂಗ್ ಅಳವಡಿಕೆ - ಇತ್ಯಾದಿ ಕಾಮಗಾರಿಗಳು (ಕಾಮಗಾರಿಗಳ ಸ್ಥಳ ವಿವರ ಅಂದಾಜು ಮೊತ್ತ, ಅನುದಾನ, ಇ.ಎಂ.ಡಿ. ಫಾರಂ ಬೆಲೆ ಬಗ್ಗೆ ಮಾಹಿತಿಯನ್ನು ಕಾರ್ಯಪಾಲಕ ಅಭಿಯಂತರರ ವಿಭಾಗದಲ್ಲಿ ಪಡೆಯಬಹುದು) | 56 | ರೂ. 240.04 ಲಕ್ಷಗಳು |

(1) ಟೆಂಡರ್ ಫಾರಂಗೆ ಅರ್ಜಿ ಸಲ್ಲಿಸಲು **ಕೊನೆಯ ದಿನಾಂಕ: 15-05-2026** (2) ಭರ್ತಿ ಮಾಡಿದ ಟೆಂಡರ್ **ಫಾರಂ ಸಲ್ಲಿಸುವ ಕೊನೆಯ ದಿನಾಂಕ: 16-05-2026 ಅಪರಾಹ್ನ 4.00 ಗಂಟೆಯವರೆಗೆ.** ಸಾಧ್ಯವಾದರೆ ಅದೇ ದಿನ ತೆರೆಯಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಮಹಾನಗರಪಾಲಿಕೆ, ಮಂಗಳೂರು

DIPR/DK/KSMCA/15/26-27 dt: 02.04.2026

---

## THE CAMPCO LIMITED MANGALORE

P.B.No. 223, VARANASHI TOWERS, MISSION STREET, MANGALORE-01

**TENDER NOTIFICATION**

Sealed Tenders are invited from the Civil Contractors having experience for the works as detailed below

| Name of the Work | Amount put to tender Rs. | E.M.D. in Rs. | Cost of tender form |
|---|---|---|---|
| Removing existing galvalume sheet roof and providing Tata galvolume sheet roofing for 'G' to 'M' godown at CAMPCO Chocolate Factory Maril. Kemminje, Puttur. | 43,71,750.00 (Including GST) | 43,800.00 | Rs 5,000.00 |
| Renovation of existing Building for Namma clinic, construction of Creach, and Fabrication work for Security office at CAMPCO Chocolate Factory Puttur. | 19,82,919.00 (Including GST) | 29,800.00 | Rs. 3,000.00 |

Tender forms can be obtained from the CAMPCO Chocolate Factory on payment as mentioned above being the cost of the each set of Tender form including GST (Non refundable) during the Office hours from 03.04.2026 to 15.04.2026 up to 4.00 P.M. The last date for submission of Tender form is 16.04.2026 up to 3.15 P.M. at the office of CAMPCO Chocolate Factory Puttur. Tenders will be opened on the same day at 4.30 P.M. in the presence of bidders.

The CAMPCO reserves the right to accept or reject any tenders without assigning any reason what so ever and also to conduct negotiation.

*Sd/-*
*MANAGING DIRECTOR*

---

## ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)

ಅಧೀಕ್ಷಕ ಅಭಿಯಂತರರ ಕಛೇರಿ, ಕೃಭಾಜನಿನಿ, ಮುಳವಾಡ ಏತ ನೀರಾವರಿ ವೃತ್ತ, ಟಕ್ಕಳಕಿ

ಸಂ:ಕೃಭಾಜನಿನಿ/ಮು.ಏ.ನೀ/ವೃತ್ತ/ಯೋ.ಶಾ/2025-26/2160 ದಿನಾಂಕ:27.03.2026

**ಪತ್ರಿಕಾ ಪ್ರಕಟಣೆ**

ವಿಷಯ:-ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಳವಾಡ ಏತ ನೀರಾವರಿ ವೃತ್ತ ಟಕ್ಕಳಕಿ ಅಡಿ ಬರುವ ಕಾಲುವೆ ಜಾಲಕ್ಕೆ 2025-26 ರ ಹಿಂಗಾರು ಹಂಗಾಮಿಗಾಗಿ ಕಾಲುವೆ ಜಾಲಕ್ಕೆ ನೀರು ಹರಿಸುವ ಅವಧಿಯನ್ನು ವಿಸ್ತರಿಸುವ ಕುರಿತು.

ಉಲ್ಲೇಖ:- 1) ದಿನಾಂಕ: 14-11-2025 ರಂದು ಜರುಗಿದ ಕೃಮೇಯೋ 2025-26 ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯಗಳು.
2) ಈ ಕಚೇರಿ ಪತ್ರ ಸಂ. 2258, ದಿನಾಂಕ: 17-11-2025.
3) ಸದಸ್ಯ ಕಾರ್ಯದರ್ಶಿಗಳು, ನೀರಾವರಿ ಸಲಹಾ ಸಮಿತಿ, ಕೃಮೇ.ಯೋ ಹಾಗೂ ಮುಖ್ಯ ಇಂಜಿನಿಯರರು, ಕೃಭಾಜನಿನಿ, ಕಾಲುವೆ ವಲಯ-1 ಬೀಮರಾಯನಗುಡಿ ಇವರ ಕಛೇರಿ ಪತ್ರ ಸಂಖ್ಯೆ: 2928 ದಿನಾಂಕ: 27.03.2026.

ದಿನಾಂಕ: 14-11-2024 ರಂದು ಜರುಗಿದ 2025-26ನೇ ಸಾಲಿನ ಕೃಷ್ಣಾ ಮೇಲ್ದಂಡೆ ಯೋಜನೆಯ ನೀರಾವರಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಮುಳವಾಡ ಏತ ನೀರಾವರಿ ವೃತ್ತ ಟಕ್ಕಳಕಿ ಅಡಿಯಲ್ಲಿ ಬರುವ ಹಂತ-2 ರ ಪೂರ್ವ ಮತ್ತು ಪಶ್ಚಿಮ ಕಾಲುವೆ, ಸೊನ್ನ ಏತ ನೀರಾವರಿ, ರೊಳ್ಳಿ ಮನ್ನಿಕೇರಿ ಏತ ನೀರಾವರಿ ಮತ್ತು ತೆಗ್ಗಿ ಸಿದ್ದಾಪೂರ ಏತ ನೀರಾವರಿ ಯೋಜನೆಗಳ ಕಾಲುವೆ ಜಾಲಕ್ಕೆ ಹಿಂಗಾರು ಹಂಗಾಮಿಗೆ ದಿನಾಂಕ: 02-12-2025 ರಿಂದ 03-04-2026 ರವರೆಗೆ 14 ದಿನ ಚಾಲೂ ಹಾಗೂ 10 ದಿನ ಬಂದ ಅನುಸರಿಸಿ ಒಟ್ಟು 123 ದಿನಗಳ ವರೆಗೆ ನೀರನ್ನು ನೀರಾವರಿಗೆ ಉಲ್ಲೇಖ (2) ರನ್ವಯ ನೀರು ಪೂರೈಸಲಾಗುತ್ತಿದೆ.

ಮುಂದುವರೆದು, ಉಲ್ಲೇಖ (3) ರಲ್ಲಿ ಪ್ರಸ್ತಾಪಿಸಿರುವ ಅಂಶಗಳ ಹಿನ್ನಲೆಯಲ್ಲಿ, ನೀರಿನ ಲಭ್ಯತೆಯ ಅನುಗುಣವಾಗಿ 2025-26ನೇ ಸಾಲಿನ ಹಿಂಗಾರು ಹಂಗಾಮಿಗೆ ನೀರು ಪೂರೈಸುವ ಅವಧಿಯನ್ನು 04 ದಿನಗಳವರೆಗೆ ವಿಸ್ತರಿಸಿ ಈ ಕೆಳಗಿನಂತೆ ಮಾರ್ಪಡಿಸಿ ಮುಂದುವರೆಸಲಾಗಿದೆ.

| ಕ್ರ.ಸಂ | ನೀರು ಚಾಲೂ ಮಾಡುವ ದಿನಾಂಕ | ಒಟ್ಟು ದಿನಗಳು | ನೀರು ಬಂದ ಮಾಡುವ ದಿನಾಂಕ | ಒಟ್ಟು ದಿನಗಳು |
|---|---|---|---|---|
| 1 | 01.04.2026 ರಿಂದ 07.04.2026 | 07 | - | 07 |

ಯೋಜನಾ ವ್ಯಾಪ್ತಿಯ ಕಾಲುವೆಗಳಲ್ಲಿ ಬೆಳೆದು ನಿಂತಿರುವ ಲಘು ನೀರಾವರಿ ಬೆಳೆಗಳನ್ನು ಸಂರಕ್ಷಿಸಲು ಮಾತ್ರ ನೀರನ್ನು ಮೀತವಾಗಿ ಉಪಯೋಗಿಸಲು ಮನವಿ ಮಾಡಲಾಗಿದೆ. ಎಲ್ಲಾ ರೈತ ಬಾಂಧವರು ನೀರನ್ನು ಮಿತವಾಗಿ ಅವಶ್ಯವಿರುವಕಡೆಗೆ ಮಾತ್ರ ಉಪಯೋಗಿಸುವ ನಿಟ್ಟಿನಲ್ಲಿ ಸಹಕರಿಸಬೇಕಾಗಿ ವಿನಂತಿಸಲಾಗಿದೆ.

"ಜೀವ ಜಲ ಅತೀ ಅಮೂಲ್ಯ ಅದನ್ನು ಪೋಲು ಮಾಡಬೇಡಿ-ಹಿತವಾಗಿ ಮಿತವಾಗಿ ಬಳಸಿ"

ಸಹಿ/- ಅಧೀಕ್ಷಕ ಅಭಿಯಂತರರು, ಕೃಭಾಜನಿನಿ, ಮು.ಏ.ನೀ. ವೃತ್ತ, ಟಕ್ಕಳಕಿ

ವಾಸಾಸಂಇ/ವಿಜಯಪುರ/007/ಕೆಎಸ್‌ಎಂಸಿಎ/2026-27

---

ಕರ್ನಾಟಕ ಸರ್ಕಾರ

## ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ

Email: ee_pwdbellary@yahoo.com ದೂರವಾಣಿ ಸಂ: 08392 266123

ಸಂ:ಕಾನಿಇ/ಲೋಇ/ಬವಿ/ಟಿ.ಎಸ್-1/2025-26/7202 ದಿನಾಂಕ: 31-03-2026

**ಅಲ್ಪಾವಧಿ ಟೆಂಡರ್ ಪ್ರಕಟಣೆ**

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಮತ್ತು ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https://kppp.karnataka.gov.in/**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

| ಕ್ರ ಸಂ | ಕಾಮಗಾರಿಗಳ ವಿವರ | ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ |
|---|---|---|
| 1) | PWD/2025-26/BD/WORK_INDENT35282 | 5.00 |
| 2) | PWD/2025-26/OW/WORK_INDENT35283 | 5.00 |
| 3) | PWD/2025-26/OW/WORK_INDENT35284 | 5.00 |
| 4) | PWD/2025-26/OW/WORK_INDENT35285) | 3.50 |
| 5) | PWD/2025-26/BD/WORK_INDENT35286 | 3.50 |
| 6) | PWD/2025-26/BD/WORK_INDENT35324 (RESERVED FOR SC CATEGORY) | 4.00 |
| 7) | PWD/2025-26/BD/WORK_INDENT35325 (RESERVED FOR CATEGORY-II(A)) | 4.00 |
| 8) | PWD/2025-26/BD/WORK_INDENT35287 | 5.00 |
| 9) | PWD/2025-26/BD/WORK_INDENT35288 | 5.00 |
| 10) | PWD/2025-26/BD/WORK_INDENT35260 (RESERVED FOR SC CATEGORY) | 5.00 |
| 11) | PWD/2025-26/BD/WORK_INDENT35261 | 5.00 |
| 12) | PWD/2025-26/BD/WORK_INDENT35262 | 5.00 |
| 13) | PWD/2025-26/BD/WORK_INDENT35263 (RESERVED FOR CATEGORY-II(A)) | 3.00 |
| 14) | PWD/2025-26/BD/WORK_INDENT35289 | 3.00 |
| 15) | PWD/2025-26/BD/WORK_INDENT35294 (RESERVED FOR ST CATEGORY) | 5.00 |
| 16) | PWD/2025-26/BD/WORK_INDENT35290 | 5.00 |
| 17) | PWD/2025-26/OW/WORK_INDENT35291 (RESERVED FOR ST CATEGORY) | 4.00 |
| 18) | PWD/2025-26/BD/WORK_INDENT35292 (RESERVED FOR CATEGORY-I) | 3.00 |
| 19) | PWD/2025-26/BD/WORK_INDENT35293 (RESERVED FOR CATEGORY-II(A)) | 3.00 |
| 20) | PWD/2025-26/BD/WORK_INDENT35339 | 5.00 |
| 21) | PWD/2025-26/BD/WORK_INDENT35340 | 5.00 |
| 22) | PWD/2025-26/BD/WORK_INDENT35341 | 5.00 |
| 23) | PWD/2025-26/BD/WORK_INDENT35343 (RESERVED FOR SC CATEGORY) | 3.00 |
| 24) | PWD/2025-26/BD/WORK_INDENT35344 (RESERVED FOR SC CATEGORY) | 5.00 |
| 25) | PWD/2025-26/BD/WORK_INDENT35346 | 5.00 |
| 26) | PWD/2025-26/BD/WORK_INDENT35347 | 5.00 |
| 27) | PWD/2025-26/BD/WORK_INDENT35264 (RESERVED FOR ST CATEGORY) | 5.00 |
| 28) | PWD/2025-26/BD/WORK_INDENT35265 (RESERVED FOR CATEGORY-II(A)) | 5.00 |
| 29) | PWD/2025-26/BD/WORK_INDENT35266 (RESERVED FOR CATEGORY-II(A)) | 5.00 |
| 30) | PWD/2025-26/BD/WORK_INDENT35348 | 5.00 |
| 31) | PWD/2025-26/BD/WORK_INDENT35192 | 5.00 |
| 32) | PWD/2025-26/BD/WORK_INDENT34270 | 8.90 |
| 33) | PWD/2025-26/BD/WORK_INDENT34997 | 17.00 |
| 34) | PWD/2025-26/BD/WORK_INDENT35326 | 20.00 |
| 35) | PWD/2025-26/RD/WORK_INDENT34489 | 150.00 |
| 36) | PWD/2025-26/BD/WORK_INDENT34300 | 100.00 |
| 37) | PWD/2025-26/BD/WORK_INDENT35028 | 300.00 |
| 38) | PWD/2025-26/BD/WORK_INDENT35028 | 260.00 |
| 39) | PWD/2025-26/BD/WORK_INDENT35025 | 100.00 |
| 40) | PWD/2025-26/BD/WORK_INDENT35240 | 300.00 |

**ಸೂಚನೆ :** ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಹಾಗೂ ಇನ್ನಿತರೆ ಬದಲಾವಣೆಗಳಾದಲ್ಲಿ ಮತ್ತು ಮರು ಟೆಂಡರ್ ಆಹ್ವಾನಿಸಿದಲ್ಲಿ ಗುತ್ತಿಗೆದಾರರು ಕೆಪಿಪಿ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕವಾಗಿ ಜಾಹಿರಾತು ಹೊರಡಿಸಲಾಗುವುದಿಲ್ಲ.

**ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.**

ಅ)ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ:**07-04-2026 ರಂದು 12.00 ಗಂಟೆಯ ವರೆಗೆ.** ಆ)ಕೆಪಿಪಿ-ಪೋರ್ಟ್‌ಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: **10-04-2026 ರಂದು 16.00 ಗಂಟೆಯ ವರೆಗೆ** ಇ)ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ: **13-04-2026 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖೆ, ವಿಭಾಗ, ಬಳ್ಳಾರಿ

ವಾ.ಸಾ.ಸಂ.ಇ/ಬಳ್ಳಾರಿ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/11

## ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ | ಧಾರ್ಮಿಕ ಸಭೆ

# ಜಗತ್ತಿನಲ್ಲಿ ಪರಶಿವನ ಕುಟುಂಬ ವಿಶಿಷ್ಟ

**ವಿಟ್ಲ:** ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ಹಿನ್ನೆಲೆ ಗುರುವಾರ ಸುಧರ್ಮ ಸಭೆ ನಡೆಯಿತು.

ಶ್ರೀ ಭೀಮನಕಟ್ಟೆ ಮಠದ ಶ್ರೀ ರಘುವರೇಂದ್ರ ತೀರ್ಥ ಶ್ರೀಪಾದರು ಆಶೀರ್ವಚನ ನೀಡಿ ಮಾತನಾಡಿ, ದೇವರ ಪೂಜೆಯೊಂದಿಗೆ ಪರಿಸರಕ್ಕೆ ಅನ್ಯಾಯವಾಗದಂತೆ ನೋಡಿಕೊಳ್ಳುವುದೂ ನಮ್ಮ ಕರ್ತವ್ಯ ಎಂದರು.

ಜಗತ್ತಿನಲ್ಲಿ ಪರಶಿವನ ಕುಟುಂಬ ವಿಶಿಷ್ಟ, ನಮ್ಮಲ್ಲಿ ಒಗ್ಗಟ್ಟು ಇರಬೇಕು. ದೇವರು ಸರ್ವವ್ಯಾಪಿ ಎಂದಾಗ ನಾವು ದೇವಸ್ಥಾನಕ್ಕೆ ಯಾಕೆ ಬರಬೇಕು ಎಂಬ ಪ್ರಶ್ನೆ ಬರುತ್ತದೆ. ದೇವರು ಎಲ್ಲ ಕಡೆ ಇದ್ದಾನೆ, ನೆಟ್‌ವರ್ಕ್ ಎಲ್ಲಿ ಸಿಕ್ಕದೆ ಎಂದು ಹುಡುಕುತ್ತಾ ಹೋದಂತೆ ದೇವಸ್ಥಾನಕ್ಕೆ ಹೋಗಬೇಕು ಎಂದರು.

ಪವಿತ್ರವಾದ ದೇವರ ಸನ್ನಿಧಾನದಲ್ಲಿ ಲೌಕಿಕ ವಿಚಾರಗಳನ್ನೆಲ್ಲ ಮತನಾಡುತ್ತಾ ಕುಳಿತುಕೊಳ್ಳುವುದು ಸರಿಯಲ್ಲ ಎಂದರು.

ಮಾಜಿ ಸಚಿವ ಬಿ.ರಮಾನಾಥ ರೈ ತಾನು ಶಾಸಕನಾಗಿದ್ದಾಗ ಕರೋಪಾಡಿ ಗ್ರಾಮಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿ, ಪದ್ಯಾಣ ದೇವಸ್ಥಾನದ ಬ್ರಹ್ಮಕಲಶೋತ್ಸವದಿಂದ ದೇವರ



ಶಕ್ತಿಯನ್ನು ಇಮ್ಮಡಿಗೊಳಿಸುವ ಶಕ್ತಿಯನ್ನು ದೊರಕಿಸುತ್ತದೆ ಎಂದರು. ಒಂದು ಕಾಲದಲ್ಲಿ ರಾಜಾಶ್ರಯದಲ್ಲಿದ್ದ ದೇವಸ್ಥಾನಕ್ಕೆ ಈಗ ಜನರು ಕೊಡುಗೆನೀಡುತ್ತಿದ್ದಾರೆಎಂದರು. ದೇವಸ್ಥಾನದ ಜೀರ್ಣೋದ್ಧಾರ ಜೊತೆ ಮನುಷ್ಯರ ಆತ್ಮೋನ್ನತಿಯೂ ಆಗಬೇಕು ಎಂದರು.

ಹಿರಿಯ ವೈದಿಕ ವಿದ್ವಾಂಸ ಬೋಳಂತಕೋಡಿ ರಾಮಭಟ್ ದೀಪಪ್ರಜ್ವಲನಮಾಡಿಮಾತನಾಡಿ, ನಮ್ಮೆಲ್ಲರನ್ನೂ ಕಾಪಾಡುವ ದೇವರ ಲಿಂಗಕ್ಕೆ ಶಕ್ತಿ ದೊರಕಲು ಬ್ರಹ್ಮಕಲಶ ಮಾಡಲಾಗುತ್ತದೆ. ಇದರಿಂದ ಹುಟ್ಟುವ ದೇವರ ಶಕ್ತಿ ನಮ್ಮೆಲ್ಲರನ್ನೂ ಕಾಪಾಡುತ್ತಾನೆ ಎಂದರು.

ಅಧ್ಯಕ್ಷತೆಯನ್ನು ಕುಕ್ಕೆಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಹರೀಶ್ ಇಂಜಾಡಿ ವಹಿಸಿದ್ದರು.

ಕರ್ಣಾಟಕ ಬ್ಯಾಂಕ್ ಜನರಲ್ ಮ್ಯಾನೇಜರ್ ನಾಗರಾಜ ಉಪಾಧ್ಯಾಯ, ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ಸೇರಾಜೆ ಗೋಪಾಲಕೃಷ್ಣ ಭಟ್, ಶ್ರೀ ಕ್ಷೇತ್ರ ನಂದಾವರದ ಪ್ರಧಾನ ಅರ್ಚಕ ವೇ.ಮೂ.ಮಹೇಶ ಭಟ್, ಉದ್ಯಮಿ ಅಜಯ್ ಪುರುಷೋತ್ತಮ ಶೆಟ್ಟಿ, , ನಂದಾವರ ಕ್ಷೇತ್ರ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಪ್ರಭಾಕರ ಶೆಟ್ಟಿ ಕಾಂತಾಡಿಗುತ್ತು, ಉಪಸ್ಥಿತರಿದ್ದರು.

ಹೊರೆಕಾಣಿಕೆ ಸಮಿತಿ ಸಂಚಾಲಕ ಪಟ್ಲಗುತ್ತು ವಿನೋದ್ ಶೆಟ್ಟಿ ಸ್ವಾಗತಿಸಿದರು. ಕೃಷ್ಣ ಎಂ.ಆರ್. ಕಾರ್ಯಕ್ರಮ ನಿರ್ವಹಿಸಿದರು. ಸೇರಾಜೆ ಶ್ರೀನಿವಾಸ ಭಟ್ ಮತ್ತು ಸಾಯೀಶ್ವರಿ ಶೆಟ್ಟಿ ಪಟ್ಲಗುತ್ತು ಕಾರ್ಯಕ್ರಮ ನಿರ್ವಹಿಸಿದರು.

ಬೆಳಗ್ಗಿನ ಪೂಜೆ, ಗಣಪತಿ ಹೋಮ, ಅಂಕುರ ಪೂಜೆ, ಮಧ್ಯಾಹ್ನ ಪೂಜೆ, ಸಂಹಾರತತ್ವಹೋಮ, ಸಂಹಾರ ತತ್ವಕಲಶ, ಶಯ್ಯಾ ಮಂಟಪದಲ್ಲಿ ಕುಂಭೇಶ ಕರ್ಕರಿ ಕಲಶ ಪೂಜೆ, ವಿದ್ಯೇಶ್ವರ ಕಲಶ ಪೂರಣೆ, ನಿದ್ರಾ ಕಲಶ ಪೂರಣೆ, ಅಗ್ನಿ ಜನನ, ಬಿಂಬ ಶುದ್ಧಿಕಲಶ ಪೂರಣೆ, ಶ್ರೀ ದೇವರಿಗೆ ಸಂಹಾರ ತತ್ವ ಕಲಶಾಭಿಷೇಕ, ಜೀವಕಲಶ ಪೂರಣೆ, ಜೀವೋದ್ವಾಸನ ಕ್ರಿಯೆ, ಜೀವ ಕಲಶವನ್ನು ಶಯ್ಯೆಯಲ್ಲಿಡುವ ಕಾರ್ಯಕ್ರಮ ನಡೆಯಿತು.

ಸಂಜೆ ಅಂಕುರಪೂಜೆ, ಸ್ವಸ್ತಿಪುಣ್ಯಾಹವಾಚನ, ವಾಸ್ತುಪೂಜೆ, ಬಿಂಬ ಶುದ್ಧಿಕಲಶಾಭಿಷೇಕ, ಶಿರಸ್ತತ್ವಹೋಮ, ಶಾಂತಿಹೋಮ, ಧ್ಯಾನಾಧಿವಾಸ ಕ್ರಿಯೆ, ಭದ್ರಕಮಂಡಲ ಪೂಜೆ, ಅಧಿವಾಸ ಹೋಮ, ಶಯ್ಯೆಯಲ್ಲಿ ರಾತ್ರಿಪೂಜೆ, ಅಧಿವಾಸ ಬಲಿ, ಶಕ್ತಿಪೂಜೆ, ರತ್ನನ್ಯಾಸ, ಪೀಠಾಧಿವಾಸ, ಪ್ರಾಸಾದ ಅಧಿವಾಸ ಕಾರ್ಯಕ್ರಮಗಳು ನಡೆದವು.

ಬೆಳಗ್ಗೆ ಚಿಪ್ಪಾರು ಶ್ರೀಜ್ಯೇಷ್ಠರಾಜ ಭಜನಾ ಮಂಡಳಿ, ಬಾಯಾರು ಶ್ರೀ ಸತ್ಯಸಾಯಿ ಸೇವಾ ಸಮಿತಿಯಿಂದ ಭಜನಾ ಕಾರ್ಯಕ್ರಮ. ರಜನ್ ವಗೆನಾಡು ಮತ್ತು ಬಳಗದ ಭಕ್ತಿ ಸಂಗೀತ. ಮಚ್ಚೇಂದ್ರನಾಥಕನ್ಯಾನಮತ್ತು ಸಂಗಡಿಗರಿಂದ ಸ್ಯಾಕ್ಸೋಫೋನ್ ಕಛೇರಿ ನಡೆದವು.

ಮಧ್ಯಾಹ್ನ ಕುರಿಯು ಗಣಪತಿ ಶಾಸ್ತ್ರಿಗಳ ನೇತೃತ್ವದಲ್ಲಿ ಜಿಲ್ಲೆಯ ಪ್ರಸಿದ್ಧ ಕಲಾವಿದರಿಂದ ಯಕ್ಷಗಾನ ತಾಳಮದ್ದಳೆ 'ಸಂಜಯ ರಾಯಭಾರ' ನಡೆಯಿತು.







## ವ್ಯಕ್ತಿ ಆತ್ಮಹತ್ಯೆ

ಕಾಸರಗೋಡು: ವ್ಯಕ್ತಿಯೋರ್ವರು ನೇಣು ಬಿಗಿದು ಸಾವಿಗೀಡಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಬೀರಂತಬೈಲ್ ಬೂತಗುಡಿ ನಿವಾಸಿ ದಿ.ಬಾಬು ನಾಯ್ಕರವರ ಪುತ್ರ ಬಿ.ಪ್ರಕಾಶ್ (48) ನೇಣಿಗೆ ಶರಣಾದವರು. ಅವರು ಕೂಲಿ ಕಾರ್ಮಿಕನಾಗಿದ್ದರು. ಕಾಸರಗೋಡು ಜನರಲ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಲಾಯಿತು.

## ನಿಧನ ಸುದ್ದಿ

### ಡಾ.ಎಸ್. ಎನ್. ವಾದಿರಾಜ್

**ಕೋಟ:** ಇಲ್ಲಿನ ಕೋಟದ ಪ್ರಸಿದ್ಧ ಚರ್ಮರೋಗ ತಜ್ಞ ಡಾ.ವಾದಿರಾಜ್ (85) ಅನಾರೋಗ್ಯದಿಂದ ಗುರುವಾರ ಸಂಜೆ ನಿಧನರಾದರು. ಮೃತರು ಚರ್ಮರೋಗದ ಚಿಕಿತ್ಸೆಯಲ್ಲಿ ರಾಜ್ಯ ಮತ್ತು ಅಂತಾರಾಜ್ಯ ಮಟ್ಟದಲ್ಲಿ ಪ್ರಸಿದ್ಧಿ ಹೊಂದಿದ್ದರು.



ಮೂಲತಃ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ಮಹಿಷಿ ಗ್ರಾಮದಲ್ಲಿ ಜನಿಸಿದ ಅವರು ಶಿವಮೊಗ್ಗದಲ್ಲಿ ತನ್ನ ವೈದ್ಯಕೀಯ ಸೇವೆ ಆರಂಭಿಸಿದ್ದರು. ತದನಂತರ ಗೋವಾ ಸೇರಿದಂತೆ ಬೇರೆ ಬೇರೆ ಭಾಗದಲ್ಲಿ ವೈದ್ಯಕೀಯ ಸೇವೆ ನೀಡಿದ್ದಾರೆ, 1972ರಲ್ಲಿ ಕೋಟದಲ್ಲಿ ಸುಶ್ರುತಾ ಕ್ಲಿನಿಕ್ ಪ್ರಾರಂಭಿಸಿ ಸುದೀರ್ಘ 54 ವರ್ಷಗಳ ಕ್ಲಿನಿಕ್‌ನಲ್ಲಿ ಸೇವೆ ಸಲ್ಲಿಸಿ ಇತ್ತೀಚಿಗಿನ ವರ್ಷಗಳಲ್ಲಿ ತನ್ನ ಮನೆಯಲ್ಲೇ ವೈದ್ಯಕೀಯ ಸೇವೆ ನೀಡುತ್ತಿದ್ದು ಬಡ ರೋಗಿಗಳಿಗೆ ಹಣ ಪಡೆಯದೆ ಚಿಕಿತ್ಸೆ ನೀಡುತ್ತಿದ್ದರು.ದೇಶದ ಬಿಹಾರ ಸೇರಿದಂತೆ ವಿವಿಧ ಮೂಲೆಗಳಿಂದ ಚರ್ಮ ರೋಗಕ್ಕೆ ಸಂಬಂಧಿಸಿದ ರೋಗಿಗಳಿಗೆ ಚಿಕಿತ್ಸೆ ನೀಡಿದ್ದಾರೆ. ಕೋವಿಡ್ ಸಂದರ್ಭದಲ್ಲಿ ಅಮೇರಿಕದಲ್ಲಿದ್ದು ಸಾಮಾಜಿಕ ಜಾಲತಾಣದ ಮೂಲಕ ರೋಗಿಗಳಿಗೆ ಚಿಕಿತ್ಸೆ ನೀಡಿದ್ದರು.

ಉತ್ತಮ ಬರಹಗಾರರಾಗಿ, ಮೆಡಿಕಲ್ ನಿಯತಕಾಲಿಕ ಪತ್ರಿಕೆಯಲ್ಲಿ ಲೇಖಕರಾಗಿ, ಸಾಹಿತ್ಯಿಕ ಓದುಗರಾಗಿ, ಆಧ್ಯಾತ್ಮಿಕ, ಸಾಮಾಜಿಕ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದರು. ರಾಜ್ಯದ. ವಿವಿಧ ಸಂಘಸಂಸ್ಥೆಗಳು ಇವರ ವೈದ್ಯಕೀಯ ಕ್ಷೇತ್ರದ ಸಾಧನೆಯನ್ನು ಗುರುತಿಸಿ ಗೌರವಿಸಿವೆ. ರೋಟರಿ ಕ್ಲಬ್ ಕೋಟ ಸಾಲಿಗ್ರಾಮ, ಸೇವಾಸಂಗಮ ಶಿಶುಮಂದಿರದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ.

### ಅಮೆಕ್ಕಳ ಪದ್ಮನಾಭ ಪೈ

**ಪೆರ್ಲ:** ಇಲ್ಲಿಗೆ ಸಮೀಪದ ಅಮೆಕ್ಕಳ ನಿವಾಸಿ ಪತ್ತು ಪೈ ಎಂದೇ ಗುರುತಿಸಲ್ಪಟ್ಟಿದ್ದ ಬಳ್ಳಂಬೆಟ್ಟು ಪದ್ಮನಾಭ ಪೈ (79) ಬುಧವಾರ ಪೆರ್ಲದ ಸ್ವಗೃಹದಲ್ಲಿ ನಿಧನರಾದರು.



ಕಳೆದ ಕೆಲವು ಸಮಯಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಪಶುರೋಗ ತಜ್ಞರಾಗಿದ್ದ ಇವರು, ಜಾನುವಾರುಗಳ ನಾನಾ ಕಾಯಿಲೆಗಳಿಗೆ ಔಷಧ ನೀಡುತ್ತಿದ್ದರು. ಪೆರ್ಲ ಸನಿಹದ ಇಡಿಯಡ್ಕ ಶ್ರೀ ದುರ್ಗಾಪರಮೇಶ್ವರೀ (ಉಳ್ಳಾಲ್ತೀ) ವಿಷ್ಣುಮೂರ್ತಿ ದೇವಸ್ಥಾನ ಆಡಳಿತ ಸಮಿತಿ ಸದಸ್ಯರಾಗಿದ್ದರು.

ಅವರು ಪತ್ನಿ ವಿನಯಾ ಪೈ, ಮಕ್ಕಳಾದ ಶ್ರೀಲತಾ, ಅಮಿತಾ, ಶ್ರೀನಿವಾಸ ಪೈ (ಇಂಜಿನಿಯರ್) ಗಿರೀಶ್ ಪೈ (ವ್ಯಾಪಾರಿ ಪೆರ್ಲ), ಅಳಿಯಂದಿರಾದ ನಾಗೇಂದ್ರನಾಥ್ ಬಂಟ್ವಾಳ, ಮುರಳಿಧರ ಕಾಮತ್ ಕಾಸರಗೋಡು, ಸೊಸೆಯಂದಿರಾದ ಸ್ನೇಹಾ, ವಿಭಾ, ಮೊಮ್ಮಕ್ಕಳು, ಬಂಧುಬಳಗವನ್ನು ಅಗಲಿದ್ದಾರೆ.

### ಅನಿಲ್ ದೇವಾಡಿಗ

**ಬಂಟ್ವಾಳ:** ಪಾಣೆಮಂಗಳೂರು ಸಮೀಪದ ಉಪ್ ಉಗುಡ್ಡೆ ನಿವಾಸಿ ಅನಿಲ್ ದೇವಾಡಿಗ ( 53) ಅವರು ಹೃದಯಾಘಾತಕ್ಕೊಳಗಾಗಿ ಪುತ್ತೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ನಿಧನರಾಗಿದ್ದಾರೆ. ಮೃತರು ತಾಯಿ, ಪತ್ನಿ ಸಹಿತ ಬಂಧು ಬಳಗವನ್ನು ಅಗಲಿದ್ದಾರೆ.



ನಾಟಕ ಕಲಾವಿದರಾಗಿದ್ದ ಅವರು ಹಲವಾರು ಯುವಕ ಸಂಘಗಳ ನಾಟಕ ತಂಡದಲ್ಲಿ ಅಭಿನಯಿಸಿದ್ದರು. ಪಾಣೆಮಂಗಳೂರು ರೈ.ಸೇ. ಸಂಘದಲ್ಲಿ ಪಿಗ್ಮಿಸಂಗ್ರಹಕರಾಗಿದ್ದರು. ಪ್ರಸ್ತುತ ಮೊಗರ್ನಾಡು ಶಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

### ಎ. ಸದಾಶಿವ ಉಡುಪ

**ಮಂಗಳೂರು:** ನಗರದ ಹೊಟೇಲ್ ಉದ್ಯಮಿ ಎ. ಸದಾಶಿವ ಉಡುಪ ಅವರು ಮಾ. 31ರಂದು ನಿಧನರಾದರು. ಅವರಿಗೆ 93 ವರ್ಷವಾಗಿತ್ತು. ಮೃತರು ಶಿವಳ್ಳಿ ಸಂಘದ ಸ್ಥಾಪಕರಲ್ಲೊಬ್ಬರಾಗಿದ್ದು, ಉದ್ಯಮದ ಜೊತೆ ಸಂಘ-ಸಂಸ್ಥೆಗಳ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೃತರು ಮೂವರು ಪುತ್ರರು, ಇಬ್ಬರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು ಹಾಗೂ ಮೊಮ್ಮಕ್ಕಳನ್ನು ಅಗಲಿದ್ದಾರೆ.



## ಮಡಿಕೇರಿ ಪೊಲೀಸ್ ಕವಾಯತು ಮೈದಾನದಲ್ಲಿ ಪೊಲೀಸ್ ಧ್ವಜ ದಿನಾಚರಣೆ

# ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಣೆ

**ಮಡಿಕೇರಿ:** ಕೊಡಗು ಜಿಲ್ಲಾ ಪೊಲೀಸ್ ಘಟಕ ವತಿಯಿಂದ ಪೊಲೀಸ್ ಧ್ವಜ ದಿನಾಚರಣೆ ಹಾಗೂ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಟ್ರೋಫಿ ವಿತರಣಾ ಕಾರ್ಯಕ್ರಮ ನಗರದ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ನಡೆಯಿತು.



ಪೊಲೀಸ್ ಧ್ವಜ ದಿನಾಚರಣೆ ಪ್ರಯುಕ್ತ ವಿಶೇಷ ಅತಿಥಿಯಾಗಿ ಪಾಲ್ಗೊಂಡಿದ್ದ ನಿವೃತ್ತ ಪೊಲೀಸ್ ಉಪ ನಿರೀಕ್ಷಕಿ ಕೆ.ಬಿ.ಅಚ್ಚಮ್ಮ ಅವರು ಗೌರವ ವಂದನೆ ಸ್ವೀಕರಿಸಿ ಮಾತನಾಡಿ, ಕೊಡಗು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಹಲವು ಬಾರಿ ಪೆರೇಡ್‌ನಲ್ಲಿ ಪಾಲ್ಗೊಂಡಿದ್ದು ಸ್ಮರಣೀಯವಾಗಿದೆ. ನಿವೃತ್ತ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗಳನ್ನು ಪೊಲೀಸ್ ಧ್ವಜ ದಿನಾಚರಣೆಗೆ ಆಹ್ವಾನಿಸಿ ಗೌರವಿಸುತ್ತಿರುವುದು ಶ್ಲಾಘನೀಯವಾಗಿದೆ. ಇದೊಂದು 'ಸ್ಮರಣೀಯ ಘಳಿಗೆ' ಎಂದು ಅಭಿಪ್ರಾಯ ಪಟ್ಟರು.

ಏರ್ ಮಾರ್ಷಲ್ (ನಿವೃತ್ತ) ಕೆ.ಸಿ.ಕಾರ್ಯಪ್ಪ ಅವರು ಮಾತನಾಡಿ, ಪೊಲೀಸರು ಸಮಾಜದಲ್ಲಿ ಸಮಗ್ರತೆ, ಸಾಮರಸ್ಯ, ಭ್ರಾತೃತ್ವದಿಂದ ಕಠಿಣ ಪರಿಸ್ಥಿತಿಯಲ್ಲೂ ಕರ್ತವ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ನೆಮ್ಮದಿ ಬದುಕಿಗೆ ಪೊಲೀಸರ ಕರ್ತವ್ಯ ಪ್ರಜ್ಞೆ ಅಪಾರವಾಗಿದೆ ಎಂದು ಗುಣಗಾನ ಮಾಡಿದರು.

**ಜನರ ಸಹಕಾರ ಅಗತ್ಯ**

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಎನ್.ಬಿಂದುಮಣಿ ಅವರು ಮಾತನಾಡಿ, ಸಮಾಜದಲ್ಲಿ ಶಾಂತಿ, ಸುವ್ಯವಸ್ಥೆ ಕಾಪಾಡಲು ಪೊಲೀಸ್ ಇಲಾಖೆ ಜೊತೆ ಸಾರ್ವಜನಿಕರ ಬೆಂಬಲ ಮತ್ತು ಸಹಕಾರ ಅತ್ಯಗತ್ಯ ಎಂದು ಹೇಳಿದರು.

ಸಭಾ ಕಾರ್ಯಕ್ರಮಕ್ಕೂ ಮೊದಲು ಮುಖ್ಯ ಅತಿಥಿಗಳಿಗೆ ಗೌರವ ವಂದನೆಯನ್ನು ಜಿಲ್ಲಾ ಪೊಲೀಸ್ ಮೀಸಲು ಪಡೆಯ ಪೊಲೀಸ್ ನಿರೀಕ್ಷಕ (ಆರ್‌ಪಿಐ ಡಿಆರ್) ಗಣೇಶ್ ಅವರು ನಿರ್ವಹಿಸಿದರು.

ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದ ನಿವೃತ್ತ ಪಿಎಸ್ಐ ಅಚ್ಚಮ್ಮ ಅವರು ಪಥಸಂಚಲನ ತಂಡಗಳ ಪರಿವೀಕ್ಷಣೆ ಮಾಡಿದರು. ಬಳಿಕ ಎಂಟು ಪೊಲೀಸ್ ತಂಡಗಳಿಂದ ಪಥಸಂಚಲನ ನಡೆಯಿತು. ಪೊಲೀಸ್ ವಾದ್ಯಗೋಷ್ಠಿ ತಂಡದವರು ರಾಷ್ಟ್ರಗೀತೆ ನುಡಿಸಿದರು. ಬಳಿಕ ಪೊಲೀಸ್ ಧ್ವಜ ವಿತರಿಸಲಾಯಿತು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ, ಡಿವೈಎಸ್‌ಪಿಗಳಾದ ಪಿ.ಎ.ಸೂರಜ್ (ಮಡಿಕೇರಿ), ಮಹೇಶ್ ಕುಮಾರ್ (ವೀರಾಜಪೇಟೆ), ಚಂದ್ರಶೇಖರ (ಸೋಮವಾರಪೇಟೆ), ಸೈಬರ್ ಅಪರಾಧ ವಿಭಾಗದ ಡಿವೈಎಸ್‌ಪಿ ಲಕ್ಷ್ಮಿಕಾಂತ ತಳವಾರ, ಹಿರಿಯ ಪೊಲೀಸ್ ಅಧಿಕಾರಿ ಐ.ಪಿ.ಮೇದಪ್ಪ, ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ನಿವೃತ್ತ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಇದ್ದರು.

### ಟ್ರೋಫಿ ವಿತರಣೆ

**ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅವರ ಕಚೇರಿಯ ಕಂಪ್ಯೂಟರ್ ವಿಭಾಗದಲ್ಲಿ ಹೆಡ್‌ಕಾನ್ಸ್ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎನ್.ಎಸ್.ತಿಮ್ಮಯ್ಯ ಅವರಿಗೆ ಏರ್ ಮಾರ್ಷಲ್ (ನಿವೃತ್ತ) ಕೆ.ಸಿ.ಕಾರ್ಯಪ್ಪ ಅವರು ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಟ್ರೋಫಿಯನ್ನು ವಿತರಿಸಿದರು. ಪೊಲೀಸ್ ಇಲಾಖೆಯ ಜಿಲ್ಲಾ ಸಶಸ್ತ್ರ ಪೊಲೀಸ್ ಪಡೆ ವಿಭಾಗದಲ್ಲಿ ಎಎಚ್‌ಸಿ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಎಚ್.ಎಸ್.ಸುಧೀರ್ ಅವರಿಗೆ ಪೊಲೀಸ್ ವಿಶೇಷ ಘಟಕಗಳ ವಿಭಾಗದಲ್ಲಿ ಉತ್ತಮ ಸೇವೆ ಸಲ್ಲಿಸಿರುವುದಕ್ಕೆ ಪೊಲೀಸ್ ಟ್ರೋಫಿಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ನೀಡಿದರು.**

# ಏ.2ರಿಂದ 5ರವರೆಗೆ ಸೀತಾರಾಮಚಂದ್ರ ಕಲ್ಯಾಣೋತ್ಸವ

ಕುಂದಾಪುರ : ಗುಜ್ಜಾಡಿ ಗ್ರಾಮದ ನಾಯಕವಾಡಿಯ ಬಿಲ್ಲವರ ಸಮಾಜ ಸೇವಾ ಸಂಘ ಶ್ರೀರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣಗುರು ಮಂದಿರ ಇದರ 50ರ ಸಂಭ್ರಮಾಚರಣೆ 'ಸುವರ್ಣ ಸಂಭ್ರಮಹಾಗೂಸೀತಾರಾಮಚಂದ್ರ ಕಲ್ಯಾಣೋತ್ಸವ ಏ.2ರಿಂದ 5ರವರೆಗೆ ನಡೆಯಲಿದೆ ಎಂದು ಶ್ರೀರಾಮ ಭಗವಾನ್-ಬ್ರಹ್ಮಶ್ರೀ ನಾರಾಯಣಗುರು ಮಂದಿರದ ಅಧ್ಯಕ್ಷ ನಾರಾಯಣ ಟಿ. ಪೂಜಾರಿ ಹೇಳಿದರು.

ಕುಂದಾಪುರ ಪ್ರೆಸ್‌ಕ್ಲಬ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.2ರಂದು ಹಸಿರು ಹೊರೆ ಕಾಣಿಕೆ ಮೆರವಣಿಗೆ, 3ರಂದು ಸಂಜೆ 4 ಗಂಟೆಯಿಂದ ಜಿಲ್ಲಾ ಮಟ್ಟದ ಕುಣಿತ ಭಜನಾ ಸ್ಪರ್ಧೆ, 7 ಗಂಟೆಗೆ ಧಾರ್ಮಿಕಸಭಾಕಾರ್ಯಕ್ರಮನಡೆಯಲಿದೆ. 4ರಂದು ಸಂಜೆಸಾಂಸ್ಕೃತಿಕಕಾರ್ಯಕ್ರಮ, 7 ಗಂಟೆಗೆಧಾರ್ಮಿಕ ಸಭಾ ಕಾರ್ಯಕ್ರಮ ನಡೆಯಲಿದೆ. 5ರಂದು ಕನ್ಯಾಡಿ ಶ್ರೀರಾಮಕ್ಷೇತ್ರ ಮಹಾಸಂಸ್ಥಾನದ ಜಗದ್ಗುರು ಪೀಠದ ಪೀಠಾಧೀಶ ಶ್ರೀ ಬ್ರಹ್ಮಾನಂದ ಸರಸ್ವತಿ ಸ್ವಾಮೀಜಿ, ಉಪಸ್ಥಿತಿಯಲ್ಲಿ ಸಂಜೆ 7.15ಕ್ಕೆ ಪುರೋಹಿತರಾದ ಲಕ್ಷ್ಮೀಪತಿ ಗೋಪಾಲಾಚಾರ್ಯ ಪೌರೋಹಿತ್ಯದಲ್ಲಿ ಸೀತಾ ರಾಮಚಂದ್ರ ಕಲ್ಯಾಣೋತ್ಸವ ನಡೆಯಲಿದೆ. ಮಧ್ಯಾಹ್ನ 2.30ರಿಂದ ಮರವಂತೆ ಶ್ರೀ ವರಾಹ ಮಹಾರಾಜ ಸ್ವಾಮಿ ದೇವಸ್ಥಾನದಿಂದ ಶ್ರೀರಾಮ ದೇವರ ವಿಗ್ರಹದ ಪುರಮೆರವಣಿಗೆ ಹಾಗೂ ಗಂಗೊಳ್ಳಿ ಬಿಲ್ಲವರ ಸಮಾಜ ಸೇವಾ ಸಂಘದ ಕಚೇರಿಯಿಂದ ಶ್ರೀ ಸೀತಾ ದೇವಿ ವಿಗ್ರಹದ ಪುರಮೆರವಣಿಯು ನಾಯಕವಾಡಿ ಶ್ರೀರಾಮ ಭಗವಾನ್ ಬ್ರಹ್ಮಶ್ರೀ ನಾರಾಯಣ ಗುರು ಮಂದಿರದ ತನಕ ನಡೆಯಲಿದೆ. ರಾತ್ರಿ 8 ಗಂಟೆಯಿಂದ ಸುಮಾರು ಸಾರ್ವಜನಿಕ ಮಹಾ ಅನ್ನಸಂತರ್ಪಣೆ ನಡೆಯಲಿದೆ ಎಂದರು.

ಗುಜ್ಜಾಡಿ ಗ್ರಾಪಂ ಮಾಜಿ ಅಧ್ಯಕ್ಷ ತಮ್ಮಯ್ಯ ದೇವಾಡಿಗ, ಪ್ರಮುಖರಾದ ಪ್ರಕಾಶ ಪೂಜಾರಿ, ರಾಜು ಪೂಜಾರಿ, ಶೇಖರ ಪೂಜಾರಿ, ಪ್ರದೀಪ ಪೂಜಾರಿ, ಸುರೇಶ ಪೂಜಾರಿ, ಭಾಸ್ಕರ ಶೆಟ್ಟಿ ಮೊದಲಾದವರು ಇದ್ದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಪರವಾಗಿ ಮಂಜೇಶ್ವರ ಮಂಡಲ ವ್ಯಾಪ್ತಿಯಲ್ಲಿ ಮಂಗಳೂರು ದಕ್ಷಿಣ ಶಾಸಕ ಡಿ.ವೇದವ್ಯಾಸ ಕಾಮತ್ ಮತಯಾಚಿಸಿದರು.



ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಚುನಾವಣಾ ಪ್ರಚಾರಾರ್ಥ ಮಂಗಲ್ಪಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೇಕೂರು ಸಹಿತ ವಿವಿಧೆಡೆ ಗಳಲ್ಲಿ ಕಾರ್ಯಕರ್ತರು ಎರಡನೇ ಹಂತದ ಮನೆ ಮನೆ ಸಂಪರ್ಕ ಅಭಿಯಾನ ನಡೆಸಿ ಮತಯಾಚಿಸಿದರು.



ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರ ಚುನಾವಣಾ ಪ್ರಚಾರದ ಅಂಗವಾಗಿ ಕಾರಡ್ಕ ಗ್ರಾ. ಪಂ.ನ ಕುಂಟಾರಿನಲ್ಲಿ ಗುರುವಾರ ಜರಗಿದ ಸಾರ್ವಜನಿಕ ಸಭೆಯನ್ನು ಕಾಸರಗೋಡು ಶಾಸಕ ಎನ್.ಎ.ನೆಲ್ಲಿಕುನ್ನು ಉದ್ಘಾಟಿಸಿದರು.

## ಕಿರುಸುದ್ದಿ

### ಇಂದು ಪಿ.ಟಿ.ಉಷಾ ಮಂಜೇಶ್ವರಕ್ಕೆ



**ಮಂಜೇಶ್ವರ:** ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಅವರ ಚುನಾವಣಾ ಪ್ರಚಾರದ ಅಂಗವಾಗಿ ರಾಜ್ಯಸಭಾ ಸದಸ್ಯೆ, ಪ್ರಸಿದ್ಧ ಕ್ರೀಡಾ ಪಟು ಪಿ.ಟಿ.ಉಷಾ ಅವರು ಏ.3ರಂದು ಅಪರಾಹ್ನ 3 ಗಂಟೆಗೆ ಹೊಸಂಗಡಿ ಪ್ರೇರಣಾ ಕಾರ್ಯಾಲಯಕ್ಕೆ ಭೇಟಿ ನೀಡಲಿದ್ದಾರೆ. ಈ ಸಂದರ್ಭದಲ್ಲಿ ಅವರು ಕ್ರೀಡಾ ಭಾರತಿ ಕಾಸರಗೋಡು ನೇತೃತ್ವದಲ್ಲಿ ನಡೆಯಲಿರುವ ಯುವ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುವರು.

### ಏ. 4ರಂದು ಮಾಹಿತಿ ಕಾರ್ಯಾಗಾರ

**ಮಂಗಳೂರು:** ಬ್ರಾಹ್ಮಣ ಅಭಿವೃದ್ಧಿ ನಿಗಮ ಬೆಂಗಳೂರು ಇವರು ಕೂಟ ಮಹಾಜಗತ್ತು ಮಂಗಳೂರು ಸಹಯೋಗದಲ್ಲಿ ಕರ್ನಾಟಕ ರಾಜ್ಯ ಸರಕಾರದ ಮತ್ತು ಬ್ರಾಹ್ಮಣ ಅಭಿವೃದ್ಧಿ ಮಂಡಳಿ ವತಿಯಿಂದ ಬ್ರಾಹ್ಮಣ ಜನತೆಗಾಗಿ, ಸಮುದಾಯಕ್ಕೆ ಪ್ರಸ್ತುತ ಚಾಲ್ತಿಯಲ್ಲಿರುವ ಸೌಲಭ್ಯಗಳ ಮಾಹಿತಿ ಕಾರ್ಯಾಗಾರವನ್ನು ಏ. 4ರಂದು ಅಪರಾಹ್ನ 4 ಗಂಟೆಗೆ ಕರಂಗಲ್ಪಾಡಿಯ ಸುಬ್ರಹ್ಮಣ್ಯ ಸಭಾಭವನದಲ್ಲಿ ಹಮ್ಮಿಕೊಳ್ಳಲಾಗಿದೆ. ಬ್ರಾಹ್ಮಣ ಅಭಿವೃದ್ಧಿ ನಿಗಮದ ನಿರ್ದೇಶಕ ಪಿ. ಎಂ. ಮಾಲತೇಶ್ ಮಾಹಿತಿ ನೀಡಲಿದ್ದಾರೆ. ಕರ್ನಾಟಕ ಸರಕಾರದ ಹಿಂದುಳಿದ ಆಯೋಗದ ನಿಕಟಪೂರ್ವ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ಕೂಟ ಮಹಾಜಗತ್ತುವಿನ ಕೇಂದ್ರಾಧ್ಯಕ್ಷ ಸತೀಶ್ ಹಂದೆ, ಸಾಲಿಗ್ರಾಮ ಶ್ರೀ ಗುರು ನರಸಿಂಹ ದೇವಸ್ಥಾನದ ಅಧ್ಯಕ್ಷ ಪ್ರಕಾಶ್ ಕಾರಂತ್ ನರಿಕೊಂಬು, ಸುಬ್ರಹ್ಮಣ್ಯ ಸಭಾದ ಉದಯಕುಮಾರ್ ಮೊದಲಾದವರು ಭಾಗವಹಿ ಸಲಿರುವರು. ಅರ್ಚಕರು ಸಹಾಯಕರು, ಅಡಿಗೆ ಮಾಡುವ ವರು, ಬಡಿಸುವವರು, ಜ್ಯೋತಿಷ್ಯ ಹೇಳುವವರು ಇನ್ನೂ ಅನೇಕ ರೀತಿಯ ಅಸಂಘಟಿತ ವಲಯ ಬ್ರಾಹ್ಮಣರು ಪಾಲ್ಗೊಳ್ಳಬಹುದು ಎಂದು ಕೂಟ ಮಹಾಜಗತ್ತು ಮಂಗಳೂರು ಅಂಗಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಕುಂದಾಪುರ: ಗುಡುಗು ಸಿಡಿಲು ಸಹಿತ ಮಳೆ

**ಕುಂದಾಪುರ:** ಕುಂದಾಪುರ ತಾಲೂಕಿನಾದ್ಯಂತ ಗುರುವಾರ ಸಂಜೆ ಗುಡುಗು ಸಿಡಿಲು ಸಹಿತ ಧಾರಾಕಾರ ಮಳೆಯಾಗಿದೆ. ಸಂಜೆ ಸುಮಾರು 6 ಗಂಟೆಗೆ ಪ್ರಾರಂಭವಾದ ಗುಡುಗು ಸಹಿತ ಮಳೆ ಸುಮಾರು ಒಂದು ಗಂಟೆಗೂ ಮಿಕ್ಕಿ ಧಾರಾಕಾರ ಸುರಿದಿದೆ. ಕುಂದಾಪುರ ತಾಲೂಕಿನ ಎಲ್ಲೆಡೆ ಧಾರಾಕಾರ ಮಳೆಯಾಗಿದ್ದು, ಎಲ್ಲೆಡೆ ನೀರು ನಿಂತುಕೊಂಡಿದೆ. ಸೆಕೆಯಿಂದ ಬಳಲುತ್ತಿದ್ದ ಜನರಿಗೆ ಮಳೆ ತಂಪೆರೆದಿದ್ದು, ಉಷ್ಣಾಂಶದಲ್ಲಿ ಬಹಳ ಇಳಿಕೆಯಾಗಿದೆ.

### ಬಸ್ ಡಿಕ್ಕಿ: ಮಹಿಳೆ ಗಂಭೀರ

**ವಿಟ್ಲ:** ವಿಟ್ಲ ಹಳೆ ಬಸ್ ನಿಲ್ದಾಣದಲ್ಲಿ ತಂಗಲು ಹಿಂದಕ್ಕೆ ಬರುತ್ತಿದ್ದ ಬಸ್ಸೊಂದು ಮಹಿಳೆಯೊಬ್ಬರಿಗೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದಾರೆ. ವಿಟ್ಲ-ಮುಡಿಪು-ಸ್ಟೇಟ್‌ಬ್ಯಾಂಕ್ ಸಂಚರಿಸುವ ಖಾಸಗಿ ಬಸ್ ವಿಟ್ಲ ಹಳೆ ಬಸ್ ನಿಲ್ದಾಣದಲ್ಲಿ ಹಿಂದಕ್ಕೆ ಬರುತ್ತಿತ್ತು. ಇನ್ನೊಂದು ಬಸ್ಸಿಂದ ಇಳಿದು ಹೋಗುತ್ತಿದ್ದ ಮಹಿಳೆ ಬಸ್ಸಿನ ಅಡಿಗೆ ಬೀಳುತ್ತಿರುವುದನ್ನು ನೋಡಿದ ಸ್ಥಳೀಯರು ಮತ್ತು ಆಟೋ ಚಾಲಕರು ಬಸ್ಸು ನಿಲ್ಲಿಸುವಂತೆ ತಡೆಯಲು ಪ್ರಯತ್ನಿಸಿದ್ದಾರೆ. ಎಚ್ಚೆತ್ತ ಚಾಲಕ ಬಸ್ಸನ್ನು ನಿಲ್ಲಿಸಿದ್ದರಿಂದ ಮಹಿಳೆಯ ಪ್ರಾಣ ಉಳಿದಿದೆ. ಗಂಭೀರವಾಗಿ ಗಾಯಗೊಂಡ ಮಹಿಳೆಯನ್ನು ಕೇಪು ಗ್ರಾಮದ ಕುದ್ದುಪದವು ಚೆಲ್ಲಡ್ಕ ನಿವಾಸಿ ಈಶ್ವರ ನಾಯ್ಕ ಎಂಬವರ ಪತ್ನಿ ಸುಶೀಲ (50) ಎಂದು ಗುರುತಿಸಲಾಗಿದೆ.

### ಯುವಕ ಆತ್ಮಹತ್ಯೆ

**ವಿಟ್ಲ:** ವಿಟ್ಲ ಕಸಬಾ ಗ್ರಾಮದ ನೆಕ್ಕರೆಕಾಡು ಎಂಬಲ್ಲಿನ ಯುವಕ ಗುಡ್ಡದಲ್ಲಿ ಮರಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನೆಕ್ಕರೆಕಾಡು ರಮೇಶ್ ನಾಯ್ಕ(38) ಅವರು ಸಾವನ್ನಪ್ಪಿದವರು. ವಿಟ್ಲ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಏ.11-14: ಕುಚ್ಚಿಕಾಡ್ ಬೋಳೂರ ಪನ್ನೆಯಲ್ಲಿ ವಾರ್ಷಿಕ ನೇಮೋತ್ಸವ

**ಮಂಗಳೂರು:** ಶ್ರೀ ಕೋಟೆದ ಬಬ್ಬುಸ್ವಾಮಿ ದೈವಸ್ಥಾನ ಕುಚ್ಚಿಕಾಡ್, ಬೋಳೂರ ಪನ್ನೆ ಇಲ್ಲಿನ ವಾರ್ಷಿಕ ನೇಮೋತ್ಸವ ಏ.11ರಿಂದ ಏ.14ರವರೆಗೆ ಧಾರ್ಮಿಕ ವಿಧಿವಿಧಾನಗಳೊಂದಿಗೆ ಜರಗಲಿದೆ. ಏ.11ರಂದು ಬೆಳಗ್ಗೆ 7 ಗಂಟೆಗೆ ಶುದ್ಧಹೋಮ, 9ಕ್ಕೆ ಶ್ರೀ ಬಬ್ಬುಸ್ವಾಮಿ ದೈವದ ದರ್ಶನ, ನಂತರ ಭಂಡಾರ ಏರುವುದು, ರಾತ್ರಿ 7ಕ್ಕೆ ಜಾಗದ ಗುಳಿಗ ದೈವದ ನೇಮೋತ್ಸವ. ರಾತ್ರಿ 10ಕ್ಕೆ ಶ್ರೀ ಬಬ್ಬುಸ್ವಾಮಿ ಮತ್ತು ತನ್ನಿಮಾನಿಗ ದೈವದ ನೇಮೋತ್ಸವ ಜರಗಲಿದೆ. ಏ.12ರಂದು ರಾತ್ರಿ 7ಕ್ಕೆ ಪಂಜುರ್ಲಿ ಗುಳಿಗ ನೇಮೋತ್ಸವ, ರಾತ್ರಿ 10ಕ್ಕೆ ರಾಹು-ಗುಳಿಗ ದೈವದ ನೇಮೋತ್ಸವ, ರಾತ್ರಿ 12ಕ್ಕೆ ಸುಬ್ಬಿಯಮ್ಮ ಸುಬ್ಬಿಗುಳಿಗ ಹಾಗೂ ಪರಿವಾರ ದೈವಗಳ ನೇಮೋತ್ಸವ. ಏ.13ರಂದು ಸಂಜೆ 4ಕ್ಕೆ ಧರ್ಮದೈವದ ನೇಮೋತ್ಸವ, ಸಂಜೆ 6ಕ್ಕೆ ಸಂಕೋಳಿಗೆ ಗುಳಿಗ ದೈವದ ನೇಮೋತ್ಸವ, ರಾತ್ರಿ 10ಕ್ಕೆ ಜುಮಾದಿ ಬಂಟ ಹಾಗೂ ಪರಿವಾರ ದೈವಗಳ ನೇಮೋತ್ಸವ ಜರಗಲಿದೆ. ಏ.14ರಂದು ಬೆಳಗ್ಗೆ 8ಗಂಟೆಗೆ ಭಂಡಾರ ಇಳಿಯುವುದು ಮತ್ತು ಪ್ರಸಾದ ವಿತರಣೆ ಬಳಿಕ ನೇಮೋತ್ಸವ ಸಂಪನ್ನಗೊಳ್ಳಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕ್ಷೇತ್ರದ ಪ್ರಕಟಣೆ ತಿಳಿಸಿದೆ.

ಕಾಸರಗೋಡು, ಮಂಜೇಶ್ವರ ಎನ್‌ಡಿಎ ಅಭ್ಯರ್ಥಿಗಳ ಪರ ಕರಾವಳಿ ಶಾಸಕರ ಬಿರುಸಿನ ಪ್ರಚಾರ

## ಇಲ್ಲಿ ಅಭಿವೃದ್ಧಿ ಯೋಜನೆ ಜಾರಿಗೊಳಿಸಲು ಎನ್‌ಡಿಎಯಿಂದ ಮಾತ್ರ ಸಾಧ್ಯ: ಪೂಂಜ

**ಕಾಸರಗೋಡು:** ಈ ಬಾರಿಯ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟವು ನಿರ್ಣಾಯಕ ಶಕ್ತಿಯಾಗಿ ಹೊರಹೊಮ್ಮಲಿದೆ. ಈ ಮೂಲಕ ಎನ್‌ಡಿಎಯನ್ನು ಹೊರತುಪಡಿಸಿ ರಾಜ್ಯದಲ್ಲಿ ಯಾವುದೇ ಒಕ್ಕೂಟಕ್ಕೂ ಆಡಳಿತ ನಡೆಸಲು ಸಾಧ್ಯವಿಲ್ಲ ಎಂದು ಬೆಳ್ತಂಗಡಿ ವಿಧಾನಸಭಾ ಕ್ಷೇತ್ರದ ಶಾಸಕ ಹರೀಶ್ ಪೂಂಜ ಅಭಿಪ್ರಾಯಪಟ್ಟಿದ್ದಾರೆ.

ಬಿಜೆಪಿ ಕಾಸರಗೋಡು ಜಿಲ್ಲಾ ಕಾರ್ಯಾಲಯದಲ್ಲಿ ಗುರುವಾರ ಜರಗಿದ ಕಾಸರಗೋಡು ಮಂಡಲ ಎನ್‌ಡಿಎ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾವು ಕೇರಳದಲ್ಲಿ ಅಭಿವೃದ್ಧಿ ಮಂತ್ರವನ್ನು ಜಪಿಸಬೇಕು. ರಾಜ್ಯದಲ್ಲಿ ಕಳೆದ ಹಲವಾರು ವರ್ಷಗಳಿಂದ ಎಲ್‌ಡಿಎಫ್ ಮತ್ತು ಯುಡಿಎಫ್ ಅಧಿಕಾರ ನಡೆಸಿದ್ದರೂ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಶೂನ್ಯವಾಗಿದೆ. ಕೇರಳ ರಾಜ್ಯದ ನೂತನ ರಾಷ್ಟ್ರೀಯ ಹೆದ್ದಾರಿಯು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರಕಾರದ ಮಹತ್ವದ ಯೋಜನೆಯಾಗಿದೆ ಎಂದು ಅವರು ಹೇಳಿದರು.


ಕಾಸರಗೋಡಿನಿಂದ ಕಳೆದ ಮೂರು ಅವಧಿಗೆ ಚುನಾಯಿತರಾದ ಶಾಸಕ ಎನ್.ಎ.ನೆಲ್ಲಿಕುನ್ನು ಅವರು ಈ ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ವಿಫಲರಾಗಿದ್ದಾರೆ. ಕಾಸರಗೋಡು ಜಿಲ್ಲೆಯಲ್ಲಿ ಅಭಿವೃದ್ಧಿ ಯೋಜನೆಗಳನ್ನು ಜಾರಿಗೊಳಿಸಲು ಎನ್‌ಡಿಎಯಿಂದ ಮಾತ್ರ ಸಾಧ್ಯವಿದೆ. ಮಂಜೇಶ್ವರ ಮತ್ತು ಕಾಸರಗೋಡು ಮಂಡಲಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗ ವಿಭಾಗದವರಿಗೆ ವ್ಯಾಪಕ ಅನ್ಯಾಯವಾಗುತ್ತಿದೆ. ಇದನ್ನು ಬಗೆಹರಿಸಲು ಬಿಜೆಪಿಯಿಂದ ಮಾತ್ರ ಸಾಧ್ಯ ಎಂಬುದು ಜನಜನಿತ ವಿಚಾರ. ಶಾಸಕರು ಜನಸೇವಕರಾಗಬೇಕೇ ಹೊರತು ಜನಸಾಮಾನ್ಯರು ಶಾಸಕರ ಬಳಿ ಬರುವಂತಾಗಬಾರದು ಎಂದು ಹರೀಶ್ ಪೂಂಜ ತಿಳಿಸಿದರು.

ಸಮಾರಂಭದಲ್ಲಿ ಬಿಜೆಪಿ ಕೇರಳ ರಾಜ್ಯ ಸಮಿತಿ ಸದಸ್ಯ ರವೀಶ ತಂತ್ರಿ ಕುಂಟಾರು ಅಧ್ಯಕ್ಷತೆ ವಹಿಸಿದ್ದರು. ಕಾಸರಗೋಡು ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಜಿಲ್ಲಾಧ್ಯಕ್ಷೆ ಎಂ.ಎಲ್.ಅಶ್ವಿನಿ, ರಾಜ್ಯ ಕೌನ್ಸಿಲ್ ಸದಸ್ಯರಾದ ಶಿವಕೃಷ್ಣ ಭಟ್, ಹರೀಶ್ ನಾರಂಪಾಡಿ, ವಕೀಲ ಬಿ.ರವೀಂದ್ರನ್, ಎನ್. ಸತೀಶ್, ಜಿಲ್ಲಾ ಸೆಲ್ ಕೋ ಓರ್ಡಿನೇಟರ್ ಸುಕುಮಾರ ಕುದ್ರೆಪ್ಪಾಡಿ, ಅಭಿಭಾಷಕ ಪರಿಷತ್‌ನ ಪ್ರಮುಖರಾದ ವಕೀಲ ಎ.ಸಿ.ಅಶೋಕ್ ಕುಮಾರ್, ಬಿಡಿಜೆಎಸ್ ಜಿಲ್ಲಾಧ್ಯಕ್ಷ ಗಣೇಶ್ ಪಾರೆಕಟ್ಟೆ, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪಿ.ರಮೇಶ್, ವಿವಿಧ ಪಕ್ಷಗಳ ಮುಖಂಡರಾದ ಎ.ಅರವಿಂದಾಕ್ಷನ್, ಜಯರಾಜನ್, ಪ್ರಸಾದ್ ನಾಯ್ಕ್, ಕೃಷ್ಣಕುಮಾರ್, ಎಂ.ಕೆ.ರಾಮಚಂದ್ರ ಆಚಾರಿ, ಬಿಎಂಎಸ್ ಜಿಲ್ಲಾಧ್ಯಕ್ಷ ಉಪೇಂದ್ರ ಕೋಟೆಕಣಿ ಮುಂತಾದವರು ಮಾತನಾಡಿದರು.




### ವಿಕಸಿತ ಕಾಸರಗೋಡು: ಪ್ರಣಾಳಿಕೆ ಬಿಡುಗಡೆ

**ಕಾರ್ಯಕ್ರಮದವಲ್ಲಿ ವಿಕಸಿತ ಕಾಸರಗೋಡು ವಿಷನ್ - 2031 ಎಂಬ ಕಾಸರಗೋಡು ವಿಧಾನಸಭಾ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಗುರಿಯೊಂದಿಗೆ ರೂಪಿಸಲಾದ ಎನ್‌ಡಿಎ ಚುನಾವಣಾ ಪ್ರಣಾಳಿಕೆಯನ್ನು ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಬಿಡುಗಡೆಗೊಳಿಸಿದರು. ಕಾಸರಗೋಡು ಕೇರಳದ ಹೈಟೆಕ್ ಪ್ರವೇಶ ದ್ವಾರ ಮತ್ತು ಮಾದರಿ ಸ್ಮಾರ್ಟ್ ಜಿಲ್ಲೆ ಎಂಬುದು ಚುನಾವಣಾ ಪ್ರಣಾಳಿಕೆಯ ಪ್ರಮುಖ ಅಂಶವಾಗಿದೆ.**




## ಮಂಜೇಶ್ವರದಲ್ಲಿ ಬಿಜೆಪಿ ಪರ ಚುನಾವಣಾ ಅಖಾಡಕ್ಕಿಳಿದ ಶಾಸಕ ವೇದವ್ಯಾಸ ಕಾಮತ್

**ಮಂಗಳೂರು:** ಕೇರಳ ವಿಧಾನಸಭಾ ಚುನಾವಣೆಯ ಅಂಗವಾಗಿ ಗಡಿಭಾಗದ ಪ್ರತಿಷ್ಠಿತ ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ ಕೆ. ಸುರೇಂದ್ರನ್ ರವರ ಗೆಲುವಿಗಾಗಿ ಮಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕರಾದ ವೇದ ವ್ಯಾಸ ಕಾಮತ್ ಅವರು ಮನೆ ಮನೆಗೆ ತೆರಳಿ ಮತಯಾಚನೆ ನಡೆಸಿದರು.

ಮಂಜೇಶ್ವರದ ಪ್ರಸಿದ್ಧ ಪುಣ್ಯಕ್ಷೇತ್ರವಾದ ಶ್ರೀ ಮದನಂತೇಶ್ವರ ದೇವಸ್ಥಾನ ಹಾಗೂ ಕೀರ್ತೇಶ್ವರ ಪರಿಸರ, ಕುಂಬ್ಳೆ ಪಂಚಾಯತ್ ವ್ಯಾಪ್ತಿಯ ಕುಂಟಗೇರಡ್ಕದ ಪರಿಶಿಷ್ಟ ಪಂಗಡ ಕಾಲೋನಿ, ಗುಡ್ಡೆಕೇರಿ, ಬಡಾಜೆ ಪ್ರದೇಶಗಳು ಸೇರಿದಂತೆ ಹಲವು ಮನೆಗಳಿಗೆ ಕಾರ್ಯಕರ್ತರೊಂದಿಗೆ ಭೇಟಿ ನೀಡಿದರು. ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಜನಪರ ಯೋಜನೆಗಳು, ಸಾಧನೆಗಳನ್ನು ತಿಳಿಸಿ ಅಭಿವೃದ್ಧಿಯ ದೃಷ್ಟಿಯಿಂದ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಮಂಜೇಶ್ವರದಲ್ಲಿ ಈ ಬಾರಿ ತಾವರೆ ಅರಳುವುದು ಶತಸಿದ್ಧವಾಗಿದ್ದು ಪೂರಕ ವಾತಾವರಣ ನಿರ್ಮಾಣವಾಗಿದೆ ಎಂದರು.

ಪ್ರಮುಖರಾದ ರಮೇಶ್ ಹೆಗ್ಡೆ, ಪ್ರಶಾಂತ್ ಪೈ, ಪೂಜಾ ಪೈ, ವರುಣ್ ಅಂಬಟ್, ಯಾದವ ಬಡಾಜೆ, ಆದರ್ಶ್, ಹರೀಶ್ಚಂದ್ರ ಮಂಜೇಶ್ವರ, ಸೇರಿದಂತೆ ಕ್ಷೇತ್ರದ ನೂರಾರು ಸಂಖ್ಯೆಯ ಕಾರ್ಯಕರ್ತರು ಉಪಸ್ಥಿತರಿದ್ದರು.



### ಎನ್‌ಡಿಎ ಅಭ್ಯರ್ಥಿ ಕೆ.ಸುರೇಂದ್ರನ್ ಪ್ರಚಾರ ಪರ್ಯಟನೆ

ಮಂಜೇಶ್ವರ: ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿ, ಬಿಜೆಪಿ ಕೇರಳ ರಾಜ್ಯ ಘಟಕದ ಮಾಜಿ ಅಧ್ಯಕ್ಷ ಕೆ.ಸುರೇಂದ್ರನ್ ಅವರು ವಿಧಾನಸಭಾ ಚುನಾವಣಾ ಪ್ರಚಾರದ ನಿಮಿತ್ತ ವರ್ಕಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪರ್ಯಟನೆ ನಡೆಸಿದರು. ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಿಗೆ ಭೇಟಿ ನೀಡಿ ದೈವ ದೇವರ ದರ್ಶನ ಪಡೆದರು. ಬಳಿಕ ಕುಂಬಳೆ ಬಳಿಯ ಸೀತಾಂಗೋಳಿ ಪೆರ್ಣೆ ಮುಚ್ಚಿಲೋಟ್ ಶ್ರೀ ಭಗವತೀ ಕ್ಷೇತ್ರದಲ್ಲಿ ಜರಗಿದ ಸಾಮೂಹಿಕ ವಿವಾಹ ಸಮಾರಂಭದಲ್ಲಿ ಪಾಲ್ಗೊಂಡಿದ್ದರು. ಮೀಂಜ ಗ್ರಾಮ ಪಂಚಾಯತ್ ವ್ಯಾಪ್ತಿಯ ಹಲವೆಡೆಗಳಲ್ಲಿ ಮತಯಾಚಿಸಿದರು. ಗಾಂಧಿ ನಗರದಿಂದ ಪರ್ಯಾಟನೆ ಆರಂಭಿಸಿ ಮಜೀರ್‌ಪಳ್ಳ, ಕೋಳ್ಯೂರು ಕ್ಷೇತ್ರ ಸಹಿತ ವಿವಿಧೆಡೆಗಳಲ್ಲಿ ಹಮ್ಮಿಕೊಳ್ಳಲಾದ ಕುಟುಂಬ ಸಂಗಮದಲ್ಲಿ ಭಾಗವಹಿಸಿ ಕೂಟತ್ತಜೆಯಲ್ಲಿ ಜರಗಿದ ದೈವಕೋಲದಲ್ಲಿ ಭಾಗಿಯಾಗಿ ಶ್ರೀ ದೈವದ ಅನುಗ್ರಹ ಪಡೆದರು.





ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರ ಪ್ರಚಾರದ ಭಾಗವಾಗಿ ಮುಳ್ಳೇರಿಯದಲ್ಲಿ ನಡೆದ ಚುನಾವಣಾ ಕಾರ್ನರ್ ಸಭೆಯನ್ನು ಮುಸ್ಲಿಂಲೀಗ್ ಕೇರಳ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ಎಂ.ಎ.ಸಲಾಂ ಉದ್ಘಾಟಿಸಿ ಮಾತನಾಡಿದರು.

### ಹಸಿರು ಕಾನೂನು ಅಭಿಯಾನ: ವಿವಿಧ ಕೇಂದ್ರಗಳಲ್ಲಿ ಮ್ಯಾಜಿಕ್ ಪ್ರದರ್ಶನ

**ಕಾಸರಗೋಡು:** ವಿಧಾನಸಭಾ ಚುನಾವಣೆಯ ಅಂಗವಾಗಿ ಹಸಿರು ನೀತಿ ಸಂಹಿತೆಯನ್ನು ಉತ್ತೇಜಿಸಲು ಏ.6ರಂದು ಕಾಸರಗೋಡು ಜಿಲ್ಲಾ ಶುಚಿತ್ವ ಮಿಷನ್ ನೇತೃತ್ವದಲ್ಲಿ ಕಾಸರಗೋಡು ಜಿಲ್ಲೆಯ ವಿವಿಧ ಕೇಂದ್ರಗಳಲ್ಲಿ ಮ್ಯಾಜಿಕ್ ಪ್ರದರ್ಶನವನ್ನು ಆಯೋಜಿಸಲಾಗಿದೆ. ಕಾಸರಗೋಡು ನಗರಸಭಾ ಬಸ್ ನಿಲ್ದಾಣದಲ್ಲಿ ಬೆಳಗ್ಗೆ 10 ಗಂಟೆಗೆ ಮ್ಯಾಜಿಕ್ ಪ್ರದರ್ಶನ ಆರಂಭವಾಗಲಿದ್ದು, ಮಧ್ಯಾಹ್ನ 12 ರಿಂದ 1 ಗಂಟೆಯ ವರೆಗೆ ಕಾಞಂಗಾಡು ಅಲಾಮಿಪಳ್ಳಿ ಬಸ್ ನಿಲ್ದಾಣದಲ್ಲಿ, ಮಧ್ಯಾಹ್ನ 3.30 ರಿಂದ 4.30ರ ವರೆಗೆ ನೀಲೇಶ್ವರ ಬಸ್ ನಿಲ್ದಾಣದಲ್ಲಿ ಮತ್ತು ಸಂಜೆ 5.30 ರಿಂದ 6.30ರ ವರೆಗೆ ಚೆರುವತ್ತೂರು ಬಸ್ ನಿಲ್ದಾಣದಲ್ಲಿ ಮ್ಯಾಜಿಕ್ ಪ್ರದರ್ಶನ ನಡೆಯಲಿದೆ.

ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಟೀಕೆ

## ಮುಸ್ಲಿಂಲೀಗ್‌ನದ್ದು ನಕಲಿ ಭರವಸೆ

**ಮಂಜೇಶ್ವರ:** ಖಾಸಗಿ ಬಾಡಿಗೆ ಕಟ್ಟಡದ ಮೂರನೇ ಅಂತಸ್ತಿನಲ್ಲಿರುವ ಮಂಜೇಶ್ವರ ತಾಲೂಕುಕಚೇರಿಗೆಸ್ವಂತಕಟ್ಟಡಮಾಡಲಾಗದ ಮಂಜೇಶ್ವರ ಶಾಸಕ ಎ.ಕೆ.ಎಂ.ಅಶ್ರಫ್ ಅವರ ಚುನಾವಣಾ ಭರವಸೆಗಳು ಹಾಸ್ಯಾಸ್ಪದ ಮತ್ತು ಸಂಪೂರ್ಣವಾಗಿ ನಕಲಿಯಾಗಿವೆ ಎಂದು ಬಿಜೆಪಿ ಮಂಜೇಶ್ವರ ಮಂಡಲಾಧ್ಯಕ್ಷ ಆದರ್ಶ್ ಬಿ.ಎಂ. ಕಟುವಾಗಿ ಟೀಕಿಸಿದ್ದಾರೆ.

ಮಂಜೇಶ್ವರದಲ್ಲಿ ಈ ಬಾರಿ ಗೆದ್ದರೆ ಮಹಿಳೆಯರಿಗೆ ಬಸ್ ಉಚಿತ ಎಂಬ ಶಾಸಕರ ಘೋಷಣೆ ವಂಚನೆಯ ಪರಮಾವಧಿಯಾಗಿದೆ. ಯಾಕೆಂದರೆ ಮಂಜೇಶ್ವರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕೇರಳ ಕೆಎಸ್‌ಆರ್‌ಟಿಸಿ ಬಸ್ ಎಲ್ಲಿಯೂ ಲೋಕಲ್ ಸರ್ವಿಸ್ ನಡೆಸುವುದಿಲ್ಲ. ಇದನ್ನು ಗಮನಿಸಿದರೆ ಶಾಸಕರ ಭರವಸೆ ಪೊಳ್ಳು ಎಂಬುದು ಸಾಬೀತಾಗುತ್ತದೆ ಎಂದರು.

ಕಾಸರಗೋಡು - ಮಂಗಳೂರು ಅಂತಾ ರಾಜ್ಯ ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಉಚಿತ ಪಾಸ್ ವ್ಯವಸ್ಥೆ ಒದಗಿಸಲು ಮಂಜೇಶ್ವರ ಶಾಸಕರಿಗೆ ಸಾಧ್ಯವಾಗಿಲ್ಲ. ಹಾಗಾದರೆ ಮಂಜೇಶ್ವರ ಮಂಡಲದಲ್ಲಿ ಉಚಿತ ಬಸ್ ಎಂಬ ಮಂಜೇಶ್ವರ ಶಾಸಕರ ಪ್ರಣಾಳಿಕೆಯಲ್ಲಿನ ಘೋಷಣೆ ಜನರನ್ನು ಮೋಸ ಮಾಡುವ ಸಂಚಿನ ಭಾಗವಾಗಿದೆ ಎಂದರು.



ಬಿಜೆಪಿ ಈ ಬಾರಿ ಪ್ರಚಂಡ ಬಹುಮತದಿಂದ ಗೆಲ್ಲಲಿದೆ. ಆಯುಷ್ಮಾನ್ ಯೋಜನೆಯ ಜಾರಿಗೆ ಪಕ್ಷವು ಮೊದಲ ಆದ್ಯತೆ ನೀಡಲಿದೆ. ಕೇಂದ್ರ ಸರಕಾರದ ಅಭಿವೃದ್ಧಿ ಯೋಜನೆಗಳ ಸಮಗ್ರ ಜಾರಿಗೆ ಬಿಜೆಪಿ ಅಭ್ಯರ್ಥಿ ಕೆ.ಸುರೇಂದ್ರನ್ ಅವರನ್ನು ಗೆಲ್ಲಿಸುವಂತೆ ಆದರ್ಶ್ ಬಿ.ಎಂ. ಮನವಿ ಮಾಡಿದರು.

ಮಂಜೇಶ್ವರ ಮಂಡಲ ವ್ಯಾಪ್ತಿಯಲ್ಲಿ ಜರಗಿದ ಎನ್‌ಡಿಎ ವಾಹನ ಪ್ರಚಾರ ಜಾಥಾ ಉದ್ಘಾಟಿಸಿ ಅವರು ಮಾತನಾಡಿದರು. ಮುಖಂಡರಾದ ಎಂ.ಹರಿಶ್ಚಂದ್ರ ಮಂಜೇಶ್ವರ, ಯಾದವ ಬಡಾಜೆ, ನಿಶಾ ಭಟ್, ಗುರುಕಿರಣ್, ನಂದ ಹೆಗ್ಡೆ ಹಾಗೂ ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಿಪಿಎಂ ಮಂಜೇಶ್ವರ ಮಂಡಲ ಪ್ರಧಾನ ಕಾರ್ಯಕರ್ತರ ಸಭೆ

## 2ನೇ ಹಂತದ ಪರ್ಯಟನೆ ಆರಂಭ



**ಉಪ್ಪಳ:** ಮಂಜೇಶ್ವರ ವಿಧಾನಸಭಾ ಕ್ಷೇತ್ರದ ಎಲ್‌ಡಿಎಫ್ ಅಭ್ಯರ್ಥಿ ಕೆ.ಆರ್.ಜಯಾನಂದ ಅವರ ಗೆಲುವಿಗಾಗಿ ಸಿಪಿಎಂ ಮಂಡಲ ಸಮಿತಿಯ ಪ್ರಧಾನ ಕಾರ್ಯಕರ್ತರ ಸಭೆಯು ಆರಿಕ್ಕಾಡಿ ಕೆಪಿಎಸ್ ರೆಸಾರ್ಟ್‌ನಲ್ಲಿ ನಡೆಯಿತು.

ಸಿಪಿಎಂ ರಾಜ್ಯ ಕಾರ್ಯಕಾರಿಣಿ ಸಮಿತಿ ಸದಸ್ಯ ಎಂ.ವಿ.ಜಯರಾಜನ್ ಸಭೆಯನ್ನು ಉದ್ಘಾಟಿಸಿ ಮಾರ್ಗದರ್ಶನ ನೀಡಿದರು. ಪ್ರಮುಖರಾದ ರಘುದೇವ ಮಾಸ್ತರ್, ಸುಬೈರ್ ಕುಂಬಳೆ, ಕೆ.ಪಿ.ಸತೀಶ್ಚಂದ್ರನ್, ಪಿ.ಬೇಬಿ ಬಾಲಕೃಷ್ಣನ್, ಶಾಲು ಮ್ಯಾಥ್ಯೂ ಮೊದಲಾದವರು ಭಾಗವಹಿಸಿ ಮಾತನಾಡಿದರು.

ಅಭ್ಯರ್ಥಿಯ ಎರಡನೇ ಹಂತದ ಮಂಡಲ ಪರ್ಯಟನೆಯನ್ನು ಪೆರ್ಲ ವಾಣಿನಗರದಿಂದ ಆರಂಭಿಸಿ ಪೆರ್ಮುದೆಯಲ್ಲಿ ಸಮಾಪ್ತಿಗೊಳಿಸಲಾಯಿತು. ಅಲ್ಲದೆ ಕಡಂಬಾರಿನಿಂದ ಆರಂಭಗೊಂಡ ಪರ್ಯಟನೆಯು ಪೊಯ್ಯೆಯಲ್ಲಿ ಮುಕ್ತಾಯವಾಯಿತು.



ಶ್ರೀ ಕ್ಷೇತ್ರ ಕಟೀಲಿನ ಶ್ರೀ ದುರ್ಗಾಪರಮೇಶ್ವರೀ ದೇವರ ಪರಿವಾರ ದೇವತೆಯಾದ ಶ್ರೀ ರಕ್ತೇಶ್ವರೀ ಗುಡಿಯನ್ನು ಬರೋಡ ಶಶಿಧರ ಶೆಟ್ಟಿಯವರು ಸುಮಾರು 90 ಲಕ್ಷ ರೂ. ವೆಚ್ಚದಲ್ಲಿ ನವೀಕರಿಸಿ ಸೇವಾ ರೂಪದಲ್ಲಿ ನೀಡಿದ್ದು, ಗುರುವಾರ ಇಲ್ಲಿ ಶ್ರೀ ದೇವರ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕ ವೈಭವದಿಂದ ನಡೆಯಿತು. ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸಹಿತ ಗಣ್ಯರ ಉಪಸ್ಥಿತಿಯಲ್ಲಿ ಸಭಾ ಕಾರ್ಯಕ್ರಮ ನಡೆಯಿತು.

ಬಿಜಿಎಸ್ ಸಂಭ್ರಮ ಬೇಸಿಗೆ ಶಿಬಿರಕ್ಕೆ ಚಾಲನೆ । ಡಾ. ಧರ್ಮಪಾಲನಾಥ ಶ್ರೀ ಅಭಿಮತ

## ಜ್ಞಾನ ವೃದ್ಧಿಗೆ ಬೇಸಿಗೆ ಶಿಬಿರ ಪೂರಕ

**ಮಂಗಳೂರು:** ಸತ್ಯದ ನಡೆ ನುಡಿಯನ್ನೇ ಮಕ್ಕಳು ಜೀವನದಲ್ಲಿ ರೂಢಿಸಿಕೊಳ್ಳಬೇಕು. ತಂದೆ-ತಾಯಿ-ಗುರುವಿಗೆ ಗೌರವ ನೀಡುವ ಮನೋಭಾವ ಯುವಪೀಳಿಗೆಗಳ ಅರಿವಿಗೆ ದಕ್ಕಬೇಕು. ಲೋಕದಲ್ಲಿ ನಡೆಯುವ ಘಟನೆಗಳನ್ನು ವಿದ್ಯಾರ್ಥಿಗಳು ಅರ್ಥ ಮಾಡಿಕೊಂಡು ಜ್ಞಾನವನ್ನು ಬೆಳೆಸಿಕೊಳ್ಳಬೇಕಾದರೆ ಬೇಸಿಗೆ ಶಿಬಿರಗಳು ಅಡಿಪಾಯವಾಗುತ್ತದೆಯೆಂದು, ಬಿಜಿಎಸ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಪೂಜ್ಯ ಡಾ. ಶ್ರೀ ಧರ್ಮಪಾಲನಾಥ ಸ್ವಾಮೀಜಿಯವರು ಹೇಳಿದರು.

ಬಿಜಿಎಸ್ ಸಂಭ್ರಮ-2026 ಉದ್ಘಾಟಿಸಿ ಮಾತನಾಡಿದ ಸ್ವಾಮೀಜಿ, ಮಕ್ಕಳು ತಿಳುವಳಿಕೆಯನ್ನು ಪುಸ್ತಕದ ಮೂಲಕ ಕಲಿಯುವುದು ಶಿಕ್ಷಣ ವ್ಯವಸ್ಥೆಯ ಭಾಗವಾದರೆ ಇದರ ಹೊರತಾಗಿ ಬೇಸಿಗೆ ಶಿಬಿರಗಳಲ್ಲಿ ನಲಿದು, ಕುಣಿದು, ತಿಳಿದು ಲೋಕವನ್ನು ಅರ್ಥ ಮಾಡಿಕೊಳ್ಳುವುದು ಇನ್ನೊಂದು ಬಗೆಯಾಗಿದೆ. ಪ್ರತಿಯೊಬ್ಬ ಮಗುವೂ ಕೆಲವು ಘಟನೆಗಳನ್ನು ನೋಡಿ ಕಲಿಯಬೇಕು. ಈ ಕಲಿಕೆಗಳು ಅದರ ಮಾನಸಿಕ ವ್ಯವಸ್ಥೆಯ ವಿಕಾಸಕ್ಕೆ ದಾರಿಯಾಗುತ್ತದೆಯೆಂದು ನುಡಿದರು.




ಮುಖ್ಯ ಅತಿಥಿ ಮಂಗಳೂರು ಸ್ಮಾರ್ಟ್ ಸಿಟಿ ಸಹಾಯಕ ಅಭಿಯಂತರ ಹರೀಶ್‌ಕುಮಾರ್ ಮಾತನಾಡಿ, ನಾವು ಯಾವುದೇ ಕೆಲಸಗಳನ್ನು ಮಾಡಿದರೂ ತೋರಿಕೆಗಾಗಿ ಮಾಡಬಾರದು, ಬದಲಿಗೆ ಆತ್ಮತೃಪ್ತಿಗಾಗಿ ಮಾಡಬೇಕು. ಮಕ್ಕಳು ಸತ್ಯ ಮಾತನಾಡುವುದನ್ನು ಅಭ್ಯಾಸ ಮಾಡಿಕೊಂಡು ಲೋಕದಲ್ಲಿ ಬೆಳೆಯಬೇಕು ಎಂದರು.

ಬಿಜಿಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸುಬ್ರಹ್ಮಣ್ಯ ಸಿ, ಬಿಜಿಎಸ್ ಎಜ್ಯುಕೇಶನ್ ಸೆಂಟರ್‌ನ ಪ್ರಾಂಶುಪಾಲೆ ರೇಷ್ಮಾ ಸಿ. ನಾಯರ್, ಬಿಜಿಎಸ್ ಪ್ರೌಢಶಾಲೆಯ ಮುಖ್ಯೋಪಾಧ್ಯಾಯಿನಿ ಪ್ರಿಯಾಬಂಗೇರ ಉಪಸ್ಥಿತರಿದ್ದರು.

ನಿವೇದಿತಾ ಎಸ್. ಸ್ವಾಗತಿಸಿ, ವಿದ್ಯಾ ಕೆ. ನಿರೂಪಿಸಿದರು. ಕುಶಲ ವಂದಿಸಿದರು.

# ಬುಡಕಟ್ಟು ಕ್ರೀಡಾ ಪ್ರತಿಭೆ: ನಮ್ಮ ರಾಷ್ಟ್ರೀಯ ಹೆಮ್ಮೆ

▸ ದ್ರೌಪದಿ ಮುರ್ಮು, ರಾಷ್ಟ್ರಪತಿ



ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಅರಣ್ಯ ಪ್ರದೇಶಗಳಲ್ಲಿ ಮಕ್ಕಳು ಹೆಚ್ಚಿನ ಸಮಯವನ್ನು ಪ್ರಕೃತಿಯ ಮಡಿಲಿನಲ್ಲಿ ಕಳೆಯುತ್ತಾರೆ ಎಂಬುದು ಗಮನಿಸಿದ್ದೇನೆ. ಆಟವಾಡಲು ಅವರು ಸರಳ ಮಾರ್ಗಗಳನ್ನು ಕಂಡುಕೊಳ್ಳುತ್ತಾರೆ. ನೆಲದ ಮೇಲೆ ಗೆರೆಗಳನ್ನು ಎಳೆದು, ಆಕಾರಗಳನ್ನು ರಚಿಸಿ ಆಟದ ಅಖಾಡಗಳನ್ನು ತಯಾರಿಸುತ್ತಾರೆ. ಒಣಗಿದ ಹಣ್ಣಿನ ಬೀಜಗಳನ್ನು ಪಗಡೆ ಮತ್ತು ಚಿಕ್ಕ ತುಂಡುಗಳಾಗಿ ಬಳಸುತ್ತಾರೆ. ಒಣ ಎಲೆಗಳು, ಮರದ ಬೇರುಗಳು ಮತ್ತು ಹಳೆಯ ಬಟ್ಟೆಯ ತುಂಡುಗಳಿಂದ ಚೆಂಡುಗಳನ್ನು ತಯಾರಿಸುತ್ತಾರೆ. ಬಿದಿರನ್ನು ಬಳಸಿ ಅವರು ಹಾಕಿ ಮತ್ತು ಫುಟ್ಬಾಲ್ ಗೋಲ್‌ಪೋಸ್ಟ್‌ಗಳನ್ನು ನಿರ್ಮಿಸುತ್ತಾರೆ. ಹೀಗೆ ವಿವಿಧ ನೈಸರ್ಗಿಕ ವಸ್ತುಗಳನ್ನು ಬಳಸಿ ತಮ್ಮದೇ ಕ್ರೀಡಾ ಜಗತ್ತನ್ನು ಸೃಷ್ಟಿಸಿಕೊಳ್ಳುತ್ತಾರೆ. ಅನೇಕ ಮಕ್ಕಳು ಚಪ್ಪಲಿ ಅಥವಾ ಜೆರ್ಸಿ ಇಲ್ಲದೆಯೇ ಉತ್ಸಾಹದಿಂದ ಆಟವಾಡುತ್ತಾರೆ. ಕೆರೆ ಮತ್ತು ಸರೋವರಗಳಲ್ಲಿ ಈಜಾಡುತ್ತಾರೆ.

ಈಗ ಲಭ್ಯವಿರುವ ತರಬೇತಿ ಮತ್ತು ಸಂಪನ್ಮೂಲಗಳ ಸಹಾಯದಿಂದ ಈಜುವ ತನ್ನ ಸಹಜ ಪ್ರತಿಭೆಯನ್ನು ಗೌರವಿಸುತ್ತಾ, ಲಭ್ಯವಿರುವ ತರಬೇತಿ ಮತ್ತು ಸಂಪನ್ಮೂಲಗಳ ಸಹಾಯದಿಂದ ಮತ್ತಷ್ಟು ಅಭಿವೃದ್ಧಿಗೊಳಿಸಿಕೊಂಡ ಒಡಿಶಾದ ಜಾಜ್ಪುರ ಜಿಲ್ಲೆಯ ನಿವಾಸಿಯಾದ 15 ವರ್ಷದ ಬಾಲಕಿ ಅಂಜಲಿ ಮುಂಡಾ, ಉದ್ಘಾಟನಾ ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ 2026'ರ ಮೊದಲ ದಿನವೇ ಮೂರು ಚಿನ್ನದ ಪದಕಗಳನ್ನು ಗೆದ್ದು ಇಡೀ ದೇಶದ ಯುವಜನತೆಗೆ ಸ್ಫೂರ್ತಿ ನೀಡಿದ್ದಾಳೆ.

ಬುಡಕಟ್ಟು ಜನರಿಗೆ ಬಿಲ್ಲು-ಬಾಣದ ಕ್ರೀಡೆಯ ಮೇಲೆ ಸಹಜ ಒಲವಿದೆ. 1855ರಲ್ಲಿ ಸಂತಾಲ್ ಸಮುದಾಯ, ಶೋಷಣೆಯ ವಿರುದ್ಧ ತೀವ್ರ ಹೋರಾಟ ನಡೆಸಿತ್ತು, ಇದನ್ನು ಸಂತಾಲ್ ಹೂಲ್' ಎಂದು ಅಮರಗೊಳಿಸಲಾಗಿದೆ. ಆಧುನಿಕ ಶಸ್ತ್ರಾಸ್ತ್ರ ಹೊಂದಿದ್ದ ಬ್ರಿಟಿಷ್ ಪಡೆಗಳು ಆ ದಂಗೆಯನ್ನು ಅಡಗಿಸಿದರೂ, ತಮ್ಮ ವಿವರಣೆಗಳಲ್ಲಿ ಸಂತಾಲ್ ವೀರರ ಯುದ್ಧ ಕೌಶಲ್ಯ, ವಿಶೇಷವಾಗಿ ಬಿಲ್ಲು-ಬಾಣ ವಿದ್ಯೆಯ ಬಗ್ಗೆ ಬ್ರಿಟಿಷರು ವಿಶೇಷ ಉಲ್ಲೇಖ ಮಾಡಿದ್ದಾರೆ. ಜಾರ್ಖಂಡ್‌ನ ಊರಿ-ಮಾರಿ ಗ್ರಾಮದಲ್ಲಿ ಇರುವ ಸಂತಾಲ್ ಹೂಲ್‌ನ ವೀರ ನಾಯಕರಾದ ಹಾಗೂ ಅಮರ ಸಹೋದರರು ಸಿಧೋ-ಕಾನ್ಹು ಮತ್ತು ಚಾಂದ್-ಭೈರವ್ ಹಾಗೂ ವೀರ ಸಹೋದರಿಯರಾದ ಫೂಲೋ-ಝಾನೋ ಅವರ ಪ್ರತಿಮೆಗಳನ್ನು ರಾಜ್ಯಪಾಲರಾಗಿದ್ದ, ನನ್ನ ಅಧಿಕಾರಾವಧಿಯಲ್ಲಿ ಅನಾವರಣಗೊಳಿಸುವ ಸೌಭಾಗ್ಯ ನನಗೆ ದೊರೆತಿತ್ತು. ಭಾರತದ ಪ್ರತಿಯೊಂದು ಮಗುವಿಗೂ ಶ್ರೇಷ್ಠ ಬಿಲ್ಲುಗಾರ ಎಂದು ಆರಾಧಿಸಲ್ಪಡುವ ಏಕಲವ್ಯನ ಮಹಾನತೆಯ ಬಗ್ಗೆ ಗೊತ್ತಿದೆ. ಏಕಲವ್ಯ ಪ್ರತಿಯೊಬ್ಬ ಭಾರತೀಯನಿಗೆ, ವಿಶೇಷವಾಗಿ ಬುಡಕಟ್ಟು ಸಮುದಾಯಗಳಿಗೆ ಸ್ಫೂರ್ತಿಯ ಸಂಕೇತವಾಗಿದ್ದಾರೆ.

ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಸ್ಥಾಪಿಸಲಾದ 'Sports Excellence Centers' ಮಕ್ಕಳಿಗೆ ಆಧುನಿಕ ಕ್ರೀಡಾ ಸೌಲಭ್ಯ ಮತ್ತು ವಿಧಾನಗಳನ್ನು ಒದಗಿಸುತ್ತಿವೆ. ಅದೇ ರೀತಿ, ಶಾಲಾ ವ್ಯವಸ್ಥೆಯ ಜೊತೆ ಬೇರೆಡೆ ಇರುವ ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ ತರಬೇತಿ ನೀಡುವ ಯೋಜನೆಗಳನ್ನು ಸಹ ಜಾರಿಗೆ ತರಲಾಗುತ್ತಿದೆ. ನನ್ನ ವೈಯಕ್ತಿಕ ಪ್ರಯತ್ನಗಳ ಮೂಲಕ ನನ್ನ ಹಳ್ಳಿಯಲ್ಲಿ ಹಿಂದುಳಿದ ವರ್ಗಗಳ ಮಕ್ಕಳಿಗಾಗಿ ವಸತಿ ಶಾಲೆಯೊಂದನ್ನು ಸ್ಥಾಪಿಸಲಾಗಿದೆ. ಈ ಕಿರು ಉಪಕ್ರಮದ ಭಾಗವಾಗಿ ಶಾಲಾ ಆವರಣದಲ್ಲಿ ಬಿಲ್ಲು-ಬಾಣ ತರಬೇತಿಯ ವ್ಯವಸ್ಥೆಯನ್ನೂ ಮಾಡಲಾಗಿದೆ. ಸರ್ಕಾರದ ಉಪಕ್ರಮಗಳ ಜತೆಗೆ, ಸಣ್ಣ ವೈಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳು, ಬುಡಕಟ್ಟು ಮಕ್ಕಳಲ್ಲಿ ಅಡಗಿರುವ ಕ್ರೀಡಾ ಪ್ರತಿಭೆಯನ್ನು ಬೆಳೆಸಲು ನೆರವಾಗುತ್ತವೆ.

ನನ್ನ ಗ್ರಾಮದಲ್ಲಿನ ಇತರರಂತೆ ನನಗೂ ಈಜು ಸೇರಿದಂತೆ, ವ್ಯಾಯಾಮ ಮತ್ತು ಕ್ರೀಡೆಗಳ ಬಗ್ಗೆ ಆಸಕ್ತಿ ಇತ್ತು. ಶಾಲಾ ಕ್ರೀಡಾ ಸ್ಪರ್ಧೆಗಳಲ್ಲಿ ನಾನು ಸಾಮಾನ್ಯವಾಗಿ ಪ್ರಥಮ ಸ್ಥಾನ ಪಡೆಯುತ್ತಿದ್ದೆ. ಒಮ್ಮೆ ಒಂದು ಸ್ಪರ್ಧೆಯಲ್ಲಿ ನನ್ನ ಗೆಳತಿಗೆ ಮೊದಲ ಬಹುಮಾನ ಗೆಲ್ಲುವ ಸಂತೋಷ ದೊರೆಯಲಿ ಎಂದು ನಾನು ಉದ್ದೇಶಪೂರ್ವಕವಾಗಿ ಹಿಂದೆ ಸರಿದೆ. ಕ್ರೀಡೆಯು ತಂಡದ ಮನೋಭಾವವನ್ನು ಬೆಳೆಸುತ್ತದೆ. ಸಾಮಾಜಿಕ ಬಾಂಧವ್ಯವನ್ನು ಬಲಪಡಿಸುತ್ತದೆ. ಸಾಮಾನ್ಯವಾಗಿ ಆಟದ ಮೈದಾನದಲ್ಲಿ ತೀವ್ರ ಪ್ರತಿಸ್ಪರ್ಧೆ ತೋರಿಸುವ ಆಟಗಾರರು ಮೈದಾನದ ಹೊರಗೆ ಉತ್ತಮ ಸ್ನೇಹಿತರಾಗಿರುತ್ತಾರೆ ಎಂಬುದನ್ನು ಗಮನಿಸಬಹುದು.

ನನ್ನ ಅಣ್ಣ ಉತ್ತಮ ಫುಟ್ಬಾಲ್ ಆಟಗಾರನಾಗಿದ್ದ, ಆದರೆ ತೀವ್ರ ಗಾಯದಿಂದಾಗಿ ಕ್ರೀಡೆಯನ್ನು ಮುಂದುವರಿಸಲು ಸಾಧ್ಯವಾಗಲಿಲ್ಲ, ನನ್ನ ಕುಟುಂಬದ ಇತರ ಹಲವು ಸದಸ್ಯರು ವಿವಿಧ ಕ್ರೀಡೆಗಳಲ್ಲಿ ಶ್ರೇಷ್ಠತೆ ಮೆರೆದಿದ್ದಾರೆ. ಬುಡಕಟ್ಟು ಕುಟುಂಬಗಳಲ್ಲಿ ಕ್ರೀಡೆಯ ಒಂದು ಸಜೀವ ಸಂಪ್ರದಾಯ ಇದೆ. ಅವರಲ್ಲಿ ಅಪಾರ ಪ್ರತಿಭೆ, ಶಕ್ತಿ, ಆಸಕ್ತಿ ಮತ್ತು ಶ್ರೇಷ್ಠತೆ ಸಾಧಿಸುವ ಛಲವಿದೆ. ಇಂಥ ಪ್ರತಿಭೆಯನ್ನು ಸೌಲಭ್ಯ ಮತ್ತು ತರಬೇತಿಯ ಮೂಲಕ ಪೋಷಿಸಿದರೆ, ಕ್ರೀಡೆಯು ಅವರಿಗೆ ಕೇವಲ ಮನರಂಜನೆ ಮತ್ತು ಸಾಮಾಜಿಕ ಸಂಪರ್ಕದ ಮಾಧ್ಯಮವಾಗಿ ಉಳಿಯದೆ, ಜೀವನದಲ್ಲಿ ಮುನ್ನಡೆಯಲು, ಆರ್ಥಿಕ ಸ್ವಾವಲಂಬನೆ ಸಾಧಿಸಿ ಸಾಮಾಜಿಕ ಗೌರವ ಗಳಿಸಲು ದಾರಿಯಾಗುತ್ತದೆ. 2018ರಿಂದ ರಾಜ್ಯ ಸರ್ಕಾರಗಳು ಮತ್ತು ಕೆಲ ಕ್ರೀಡಾ ಸಂಘಟನೆಗಳ ಸಹಯೋಗದಲ್ಲಿ ಕೇಂದ್ರ ಸರ್ಕಾರ ಪ್ರಾರಂಭಿಸಿದ ಖೇಲೋ ಇಂಡಿಯಾ' ಅಭಿಯಾನ ಸಕಾರಾತ್ಮಕ ಬದಲಾವಣೆಗಳನ್ನು ತಂದಿದೆ.

**ಸೌಲಭ್ಯ ಹೆಚ್ಚಳ:** ಕೆಲ ವರ್ಷಗಳ ಹಿಂದಿನವರೆಗೂ ನಮ್ಮ ದೇಶದಲ್ಲಿ ಉತ್ತಮ ಕ್ರೀಡಾ ಸೌಲಭ್ಯಗಳು ಕೇವಲ ದೊಡ್ಡ ನಗರಗಳಲ್ಲಿ ಮಾತ್ರ ಲಭ್ಯವಿದ್ದವು, ಆದರೆ ಗ್ರಾಮೀಣ ಮತ್ತು ಅರಣ್ಯ ಪ್ರದೇಶಗಳು ಪ್ರತಿಭಾವಂತ ಆಟಗಾರರಿಂದ ತುಂಬಿವೆ. ಬುಡಕಟ್ಟು ಪ್ರದೇಶಗಳಲ್ಲಿ ಕ್ರೀಡಾ ಅಕಾಡೆಮಿಗಳು ಮತ್ತು ತರಬೇತಿ ಕೇಂದ್ರಗಳು ಇರಲಿಲ್ಲ, ಈಗ ಏಕಲವ್ಯ ಮಾದರಿ ವಸತಿ ಶಾಲೆಗಳಲ್ಲಿ ಮಕ್ಕಳ ಕ್ರೀಡೆಗೆ ವಿಶೇಷ ಗಮನ ನೀಡುವುದರಿಂದ ಹಿಡಿದು ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್‌ನಂತಹ ಉಪಕ್ರಮಗಳವರೆಗೆ, ಬುಡಕಟ್ಟು ಕ್ರೀಡಾಪಟುಗಳಿಗೆ ತರಬೇತಿ ನೀಡಲು ಮತ್ತು ಅವರ ಕೌಶಲ್ಯಗಳಿಗೆ ಪ್ರೋತ್ಸಾಹ ನೀಡಲು ಹಲವಾರು ಚಟುವಟಿಕೆಗಳು ನಡೆಯುತ್ತಿವೆ.

ನನ್ನ ವಿದ್ಯಾರ್ಥಿ ದಿನಗಳಲ್ಲಿ ಐದು ಅಥವಾ ಆರು ಹಳ್ಳಿಗಳ ಜನರು ಒಟ್ಟಾಗಿ ಕ್ರೀಡಾ ಸ್ಪರ್ಧೆಗಳನ್ನು ಆಯೋಜಿಸುತ್ತಿದ್ದ ವಿಷಯ ನನಗೆ ಈಗಲೂ ನೆನಪಿದೆ. ಕೆಲ ಧಾರ್ಮಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳು ಕೂಡ ಬುಡಕಟ್ಟು ಪ್ರದೇಶಗಳಲ್ಲಿ ಕ್ರೀಡೆಯನ್ನು ಉತ್ತೇಜಿಸಿವೆ. ಆದರೆ ಇಂತಹ ಗ್ರಾಮೀಣ ಸ್ಪರ್ಧೆಗಳಲ್ಲಿ ಭಾಗವಹಿಸುವ ಉತ್ತಮ ಆಟಗಾರರು ಸಹ, ಗ್ರಾಮೀಣ ಮಟ್ಟಕ್ಕಿಂತ ಮೇಲೇರಲು ಸಾಧ್ಯವಾಗುತ್ತಿರಲಿಲ್ಲ. ಈ ಪರಿಸ್ಥಿತಿಯನ್ನು ಬದಲಾಯಿಸಲು ಕಳೆದ ಕೆಲ ವರ್ಷಗಳಲ್ಲಿ ಅನೇಕ ಶ್ಲಾಘನೀಯ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳಿಗೆ ಮತ್ತಷ್ಟು ಚಾಲನೆ ನೀಡಲು ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ ಅನ್ನು ಆಯೋಜಿಸಲಾಯಿತು. ಈ ಕಾರ್ಯಕ್ರಮದ ಆಯೋಜನೆಯ ಪ್ರಕ್ರಿಯೆಯಲ್ಲಿ ತಳಮಟ್ಟದ ಬುಡಕಟ್ಟು ಆಟಗಾರರನ್ನು ಗುರುತಿಸಿ ಅವರಿಗೆ ಕ್ರೀಡಾ ಸೌಲಭ್ಯ ಮತ್ತು ತರಬೇತಿ ನೀಡಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಆಟಗಾರರು ಈ ರಾಷ್ಟ್ರೀಯ ಬುಡಕಟ್ಟು ಕ್ರೀಡಾ ಕೂಟದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದಾರೆ.

ಆಟಗಾರರ ಸಹಜ ಪ್ರತಿಭೆಯ ಆಧಾರದ ಮೇಲೆ ಭಾರತ 1928ರಲ್ಲಿ ಹಾಕಿಯಲ್ಲಿ ಮೊದಲ ಒಲಿಂಪಿಕ್ ಚಿನ್ನದ ಪದಕ ಸಾಧಿಸಿತು. ಆ ವಿಜಯದಲ್ಲಿ ಬುಡಕಟ್ಟು ಸಮುದಾಯದ ಆಟಗಾರರ ಪ್ರಮುಖ ಕೊಡುಗೆ ಇತ್ತು. ಅಂದಿನಿಂದ ಇಂದಿನವರೆಗೆ ದಿಲೀಪ್ ಟಿರ್ಕಿ, ಸುಬೋಧ್ ಲಕ್ರಾ ಮತ್ತು ಸಲೀಮ ತೇತೆಯಂತಹ ಹಾಕಿ ತಾರೆಗಳು ಭಾರತದ ಪುರುಷ ಮತ್ತು ಮಹಿಳಾ ತಂಡಗಳಲ್ಲಿ ಈಗಲೂ ಕೊಡುಗೆ ನೀಡುತ್ತಿದ್ದಾರೆ.

ಭಾರತ ಸರ್ಕಾರದ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಕಾರ್ಯಕ್ರಮ ಖೇಲೋ ಇಂಡಿಯಾ ಅಡಿಯಲ್ಲಿ ಸ್ಥಳೀಯ ಮಟ್ಟದಿಂದ ರಾಷ್ಟ್ರೀಯ ಮಟ್ಟದವರೆಗೆ ಎಲ್ಲ ಭೌಗೋಳಿಕ ಪ್ರದೇಶಗಳು, ಸಾಮಾಜಿಕ ವರ್ಗಗಳು ಮತ್ತು ಸಂಸ್ಥೆಗಳಿಗೆ ಸೂಕ್ತ ಕ್ರೀಡಾ ಪರಿಸರ ವ್ಯವಸ್ಥೆ ಒದಗಿಸಲು ಸಮಗ್ರ ಪ್ರಯತ್ನಗಳು ನಡೆಯುತ್ತಿವೆ. ಈ ಕಾರ್ಯಕ್ರಮದಡಿ ಕ್ರೀಡೆಯಲ್ಲಿ ಬಾಲಕಿಯರ ಭಾಗವಹಿಸುವಿಕೆಉತ್ತೇಜಿಸಲುಜಾರಿಗೊಳಿಸಲಾಗುತ್ತಿರುವಅಸ್ಮಿತಾ ಯೋಜನೆ ನಮ್ಮ ಬುಡಕಟ್ಟು ಹೆಣ್ಣು ಮಕ್ಕಳ ಸಾಮರ್ಥ್ಯವನ್ನೂ ವಿಕಸಿತಗೊಳಿಸುತ್ತಿದೆ. ಖೇಲೋ ಇಂಡಿಯಾ ಟ್ರೈಬಲ್ ಗೇಮ್ಸ್ ನಿರ್ಮಿಸಿದ ಉತ್ಸಾಹ, ವೇಗವನ್ನು ನಿರಂತರ ಬಲಪಡಿಸುತ್ತ, ಕ್ರೀಡಾಪಟುಗಳನ್ನು ತಡೆಯಿಲ್ಲದೆ ಪ್ರೋತ್ಸಾಹಿಸಿದರೆ, ಭಾರತವನ್ನು ಜಾಗತಿಕ ಕ್ರೀಡಾ ಮಹಾಶಕ್ತಿಯನ್ನಾಗಿ ನಿರ್ಮಿಸಲು ಸಾಧ್ಯವಾಗುವ ಆಟಗಾರರ ತಂಡ ಸೃಷ್ಟಿಯಾಗಲಿದೆ.

ಕಳೆದ ಕೆಲ ತಿಂಗಳುಗಳಲ್ಲಿ ನಡೆದ ಬಸ್ತರ್ ಮತ್ತು ಸರ್ಗುಜಾ ಒಲಿಂಪಿಕ್ಸ್‌ನಲ್ಲಿ ಏಳು ಲಕ್ಷಕ್ಕೂ ಹೆಚ್ಚು ಆಟಗಾರರು ಭಾಗವಹಿಸಿದ್ದಾರೆ. ಅವರಲ್ಲಿ ನಕ್ಸಲ್ ಹಾದಿ ತ್ಯಜಿಸಿ ಕ್ರೀಡೆಯ ಸಕಾರಾತ್ಮಕ ದಾರಿ ಆರಿಸಿಕೊಂಡವರೂ ಇದ್ದಾರೆ. ಕ್ರೀಡೆಯ ಮೂಲಕ ಯುವಜನರ ಶಕ್ತಿ ಸಕಾರಾತ್ಮಕ ಅಭಿವ್ಯಕ್ತಿ ಪಡೆಯುತ್ತದೆ. ಯುವಜನರಲ್ಲಿ ಕ್ರೀಡಾ ಪ್ರತಿಭೆಯನ್ನು ಗುರುತಿಸಿ ಅಭಿವೃದ್ಧಿಪಡಿಸುವ ಸರ್ಕಾರದ ಪ್ರಯತ್ನಗಳು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಸ್ಪರ್ಧೆಗಳಲ್ಲಿ ಉತ್ತಮ ಫಲ ನೀಡಲು ಪ್ರಾರಂಭಿಸಿವೆ.

ಬುಡಕಟ್ಟು ಸಮುದಾಯಗಳು ಸೇರಿದಂತೆ ನಮ್ಮ ಯುವಜನರ ಕ್ರೀಡಾ ಪ್ರತಿಭೆ ನಮ್ಮ ರಾಷ್ಟ್ರಕ್ಕೆ ಅಮೂಲ್ಯ ಸಾಮಾಜಿಕ ಬಂಡವಾಳವಾಗಿದೆ. ಈ ಅಮೂಲ್ಯ ಸಂಪನ್ಮೂಲವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ನಮ್ಮ ದೇಶ ಕ್ರೀಡಾ ಕ್ಷೇತ್ರದಲ್ಲಿ ಅನೇಕ ಗೌರವಾನ್ವಿತ ಶ್ರೇಷ್ಠತೆಯ ಮಾನದಂಡಗಳನ್ನು ಸ್ಥಾಪಿಸಲಿದೆ ಎಂಬ ವಿಶ್ವಾಸ ನನಗಿದೆ. ಈ ನಂಬಿಕೆಯೊಂದಿಗೆ ನನ್ನ ಸಂದೇಶ: ಖೇಲೋ ಇಂಡಿಯಾ! ಖೂಬ್ ಖೇಲೋ ಇಂಡಿಯಾ!

## ಐಪಿಎಲ್ ಹವಾ 19

## ಕಿರುಸುದ್ದಿ




### ಐಪಿಎಲ್‌ಗಾಗಿ ಲಂಕಾ ಕ್ರಿಕೆಟ್ ಸಂಸ್ಥೆ ವಿರುದ್ಧ ತುಷಾರಾ ಕೇಸ್





• **ಕೊಲಂಬೋ:** ಇಂಡಿಯನ್ ಪ್ರೀಮಿಯರ್ ಲೀಗ್ ಆಡಲು ನಿರಾಕ್ಷೇಪಣಾ ಪತ್ರ ನೀಡದಿರುವ ನಿಟ್ಟಿನಲ್ಲಿ ಆರ್‌ಸಿಬಿ ತಂಡದ ಆಟಗಾರ ನುವಾನ್ ತುಷಾರಾ ಅವರು ಸ್ವಂತ ದೇಶದ ಸಂಸ್ಥೆ ಶ್ರೀಲಂಕಾ ಕ್ರಿಕೆಟ್ ಮಂಡಳಿ ವಿರುದ್ಧವೇ ನ್ಯಾಯಾಲಯ ಮೆಟ್ಟಿಲೇರಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿ ಶುರುವಾಗಿದೆ. ಶ್ರೀಲಂಕಾ ಕ್ರಿಕೆಟ್ ಸಂಸ್ಥೆಯ ಹಲವು ಆಟಗಾರರು ಈ ಬಾರಿ ಭಾಗವಹಿಸಿಲ್ಲ. ಪಂದ್ಯಾವಳಿಗೂ ಮುನ್ನ ಆಟಗಾರರ ಫಿಟ್ನೆಸ್ ಪರೀಕ್ಷೆ ಕೈಗೊಳ್ಳಲಾಗುವುದು ಎಂದು ಹೇಳಿದ್ದ ಶ್ರೀಲಂಕಾ ಕೆಲವು ಆಟಗಾರರಿಗೆ ನಿರಾಕ್ಷೇಪಣಾ ಪತ್ರ ನೀಡಿಲ್ಲ. ಹೀಗಾಗಿ ಬೆಂಗಳೂರು ತಂಡದ ಆಟಗಾರ ನುವಾನ್ ತುಷಾರಾ ಅವರು ಭಾರೀ ನಷ್ಟ ಎದುರಿಸಿದ್ದಾರೆ. ಹರಾಜಿನಲ್ಲಿ ಅವರನ್ನು 20203ರಲ್ಲಿ ಆರ್‌ಸಿಬಿ ತಂಡ 1.2 ಕೋಟಿ ರೂ.ಗೆ ಖರೀಸಿತ್ತು. ಎಸ್‌ಎಲ್‌ಸಿ ಅಧ್ಯಕ್ಷ ಶಮ್ಮಿ ಸಿಲ್ವಾ, ಕಾರ್ಯದರ್ಶಿ ದಿಸ್ಸಾನಾಯಕೆ ಅವರನ್ನು ಸೇರಿಸಿ ವಿವಿಧ ಅಧಿಕಾರಿಗಳ ವಿರುದ್ಧ ಕೋರ್ಟಿಗೆ ಹೋಗಿದ್ದಾರೆ. ಕಳೆದ ಎರಡು ವರ್ಷ ನನಗೆ ನಿರಾಕ್ಷೇಪಣ ಪತ್ರ ಸಿಕ್ಕಿತ್ತು. ಆದರೆ ಈ ಬಾರಿ ಸಂಸ್ಥೆ ನೀಡುತ್ತಿಲ್ಲ ಎಂದು ಕೊಲಂಬೋ ಜಿಲ್ಲಾ ನ್ಯಾಯಾಲಯದಲ್ಲಿ ಕೇಸು ದಾಖಲಿಸಿದ್ದಾರೆ. ವಾಸ್ತವವಾಗಿ ಶ್ರೀಲಂಕಾದ ವಾರ್ಷಿಕ ಗುತ್ತಿಗೆ ಮಾ.31ರಂದು ಮುಕ್ತಾಯಗೊಂಡಿದೆ. ತುಷಾರಾ ಈ ಅಂತಾರಾಷ್ಟ್ರೀಯ ಕ್ರಿಕೆಟ್‌ನಿಂದ ದೂರ ಉಳಿಯಲಿದ್ದು, ಹೊಸ ಒಪ್ಪಂದದಲ್ಲಿ ಸೇರಿಕೊಳ್ಳದಿರಲು ನಿರ್ಧರಿಸಿದ್ದಾರೆ. ಆದಾಗ್ಯೂ ನಿರಾಕ್ಷೇಪಣಾ ಪತ್ರ ನೀಡದಿರುವುದು ಕೇಸಿನ ಮೂಲವಾಗಿದೆ. ಏಪ್ರಿಲ್ 9ಕ್ಕೆ ವಿಚಾರಣೆ ನಡೆಯಲಿದೆ.

**ನಿರಾಕ್ಷೇಪಣಾ ಪತ್ರ ವಜಾ ಪ್ರಶ್ನಿಸಿ ನ್ಯಾಯಾಲಯ ಮೆಟ್ಟಿಲೇರಿದ ಆರ್‌ಸಿಬಿ ಪ್ಲೇಯರ್**

### ಹೆಡ್, ಅಭಿ ಅಬ್ಬರ । ಹೈದರಾಬಾದ್ 226/8

## ಕೋಲ್ಕತ್ತಾಗೆ ಕಠಿಣ ಸವಾಲು





• **ಕೋಲ್ಕತ್ತಾ:** ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮ ಅವರು ತಮ್ಮ ಅಸಲು ಆಟ ಆಡಿದ ನಂತರ ಕ್ಲಾಸೆನ್ ಹಾಗೂ ನಿತಿಶ್ ಉತ್ತಮ ಬ್ಯಾಟಿಂಗ್ ಮಾಡಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 6ನೇ ಪಂದ್ಯದಲ್ಲಿ ಹೈದರಾಬಾದ್ ಕೆಕೆಆರ್‌ಗೆ ದೊಡ್ಡ ಗುರಿ ನೀಡಿತು.

ಮೊದಲ ಪಂದ್ಯದಲ್ಲಿ ಸೋತಿದ್ದ ಕೋಲ್ಕತ್ತಾ ಹಾಗೂ ಹೈದರಾಬಾದ್ ಈಡನ್ ಗಾರ್ಡನ್ಸ್‌ನಲ್ಲಿ ಮುಖಾಮುಖಿಯಾಗಿದ್ದವು. ಅಲ್ಲಿನ ಪಂದ್ಯದಲ್ಲಿ ಟಾಸ್ ಸೋಲಿನೊಂದಿಗೆ ಮೊದಲು ಬ್ಯಾಟಿಂಗ್‌ಗಿಳಿದ ಹೈದರಾಬಾದ್ ಅಬ್ಬರದ ಆರಂಭ ಪಡೆಯಿತು. ಮಧ್ಯಮ ಕ್ರಮಾಂಕದಲ್ಲಿ ಕ್ಲಾಸೆನ್ ಮತ್ತು ರೆಡ್ಡಿ ಉತ್ತಮ ಜೊತೆಯಾಟದೊಂದಿಗೆ ಸ್ಕೋರ್ ಹಿಗ್ಗಿಸಿದರು. ಪರಿಣಾಮ ಹೈದರಾಬಾದ್, 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 226 ರನ್ ಗಳಿಸಿದೆ.

**ಸ್ಫೋಟಕ ಆರಂಭ:** ಟಾಸ್ ಸೋಲಿನೊಂದಿಗೆ ಬ್ಯಾಟಿಂಗ್‌ಗಿಳಿದ ಹೈದರಾಬಾದ್ ಬಹು ದಿನಗಳ ನಂತರ ನಿರೀಕ್ಷಿತ ಆರಂಭ ಪಡೆಯಿತು. ಲಯಕ್ಕಾಗಿ ಪರದಾಡುತ್ತಿದ್ದ ಟ್ರಾವಿಸ್ ಹೆಡ್ ಹಾಗೂ ಅಭಿಷೇಕ್ ಶರ್ಮ ಕೆಕೆಆರ್ ಪಡೆಯನ್ನು ದಂಡಿಸಿ ಲಯಕ್ಕೆ ಮರಳಿದರು. ಆರಂಭಿಕ ಓವರ್‌ಗಳಲ್ಲಿ ಹೆಡ್ ಸ್ಫೋಟಕ ಬ್ಯಾಟಿಂಗ್ ಗಿಳಿದರು. ಯಾವುದೇ ಮುಲಾಜಿಲ್ಲದೆ, ವೈಭವ್ ಆರೋರಾ ಅವರನ್ನು ಮನ ಬಂದಂತೆ ದಂಡಿಸಿದರು. ಅತ್ತ ಅಭಿಷೇಕ್ ಶರ್ಮ ಮೊದಲಿನ ಬಾಲ್‌ಗಳಿಗೆ ಗೌರವ ನೀಡುತ್ತಾ ಬಾನೆತ್ತರದ ಸಿಕ್ಸರ್ ಬಾರಿಸತೊಡಗಿದರು. ಇಬ್ಬರ ಬ್ಯಾಟಿಂಗ್‌ಗೆ ಕೆಕೆಆರ್ ನಲುಗಿತು. ವೈಭವ್ ಬೌಲಿಂಗ್ ವೇಳೆ ಹೆಡ್ 25 ರನ್ ಚಚ್ಚಿದರು. ಸ್ಪಿನ್ನರ್‌ಗಳ ವಿಶ್ವಾಸ ಅಭಿಷೇಕ್ ಮುರಿದು ಹಾಕಿದರು. ಪವರ್‌ಪ್ಲೇ ಮುಕ್ತಾಯಗೊಂಡಿತು, ಹೈದರಾಬಾದ್ 84 ರನ್ ಗಳಿಸಿತು. ಪವರ್‌ಪ್ಲೇನಲ್ಲಿ ಕೊನೆ ಕೊನೆಯಲ್ಲಿ ಬೌಂಡರಿ ಬಾರಿಸುವ ಪ್ರಯತ್ನದಲ್ಲಿ ಟ್ರಾವಿಸ್ ಹೆಡ್(46) ಕ್ಯಾಚ್ ಆದರು. ಇಶಾನ್ ಕಿಶನ್ ಕೂಡ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಹ್ಯಾಟ್ರಿಕ್ ಬೌಂಡರಿ ಬಾರಿಸಿದ ಅವರು ಬಿರುಸಿನ ಆಟವಾಡುವ ಸಂದೇಶ ತಲುಪಿಸಿದಂತೆ ಕ್ಯಾಚ್ ಆದರು. ಅಭಿಷೇಕ್ (48) ಕೂಡ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದ ಬ್ಯಾಟಿಗರಿಗೆ ಹೆಚ್ಚಿನ ಜವಾಬ್ದಾರಿ ಇರಲೇ ಇಲ್ಲ, ಇರುವ ಸ್ಕೋರ್ ಅನ್ನು ಹಿಗ್ಗಿಸಿದರೆ ಸಾಕಿತ್ತು. ಆ ಜವಾಬ್ದಾರಿಯನ್ನು ನಿತಿಶ್ ಕುಮಾರ್ ರೆಡ್ಡಿ ಮತ್ತು ಹೆನ್ರಿಚ್ ಕ್ಲಾಸೆನ್ ತೆಗೆದುಕೊಂಡರು. ಮಧ್ಯಮ ಓವರ್‌ಗಳಲ್ಲಿ ಸ್ಫೋಟಕ, ಸಂಯೋಜಿತ ಮತ್ತು ಸಮತೋಲಿತ ಬ್ಯಾಟಿಂಗ್ ಮಾಡಿದ ಈ ಜೋಡಿ 82 ರನ್‌ಗಳ ದೊಡ್ಡ ಜೊತೆಯಾಟ ನಿರ್ಮಿಸಿತು. ಈಗ ಕೇವಲ ಉತ್ತಮ ಫಿನಿಶ್ ನೀಡುವ ಅವಶ್ಯವಾಗಿತ್ತು. 19ನೇ ಓವರ್‌ನಲ್ಲಿ 39 ರನ್‌ಗೆ ವಿಕೆಟ್ ಒಪ್ಪಿಸಿದರು. ಕೊನೆಯ ಓವರ್‌ನಲ್ಲಿ ಕ್ಲಾಸೆನ್ 52 ರನ್‌ಗೆ ವಿಕೆಟ್ ಒಪ್ಪಿಸಿದರು. ಹರ್ಷ 2 ಬೌಂಡರಿಗಳನ್ನು ಬಾರಿಸಿದರು. ಸ್ಕೋರ್ 226ಕ್ಕೆ ನಿಂತಿತು.

### ವಿವಾದಾತ್ಮಕ ಕ್ಯಾಚ್‌ಗೆ ಅಭಿಷೇಕ್ ಔಟ್

48 ರನ್ ಗಳಿಸಿದ್ದ ಅಭಿಷೇಕ್ ಶರ್ಮ 9ನೇ ಓವರ್‌ನಲ್ಲಿ ವಿವಾದಾತ್ಮಕ ಕ್ಯಾಚ್‌ಗೆ ಔಟಾದರು. ಸಿಕ್ಸರ್ ಬಾರಿಸಲು ಯತ್ನಿಸಿದಾಗ ಫ್ಲಾಟ್ ಬಾಲ್ ನೇರವಾಗಿ ವರುಣ್ ಚಕ್ರವರ್ತಿ ಕೈಗೆ ಸಿಲುಕಿತು. ಅನುಮಾನಾಸ್ಪದವಾಗಿದ್ದ ಈ ಕ್ಯಾಚ್ ವಿವಿಧ ಕ್ಯಾಮೆರಾದಲ್ಲಿ ಬೇರೆ ರೀತಿ ಕಾಣಿಸಿಕೊಂಡಿತು. ಒಂದರಲ್ಲಿ ನೆಲಕ್ಕೆ ಪುಟಿದಂತೆ ಕಾಣಿಸಿಕೊಂಡಿತ್ತು. ಮತ್ತೊಂದು ಕ್ಯಾಮೆರಾ ಕ್ಲೀಯರ್ ಕ್ಯಾಚ್ ಆದ ರೀತಿ ತೋರಿಸುತ್ತಿತ್ತು. ಸ್ವಲ್ಪ ಸಮಯದ ನಂತರ ನಿರ್ಧಾರ ಕೈಗೊಂಡು ಔಟ್ ಎಂದು ವಿವಾದಾತ್ಮಕ ನಿರ್ಣಯ ತೆಗೆದುಕೊಳ್ಳಲಾಯಿತು.

## ಚೆನ್ನೈ-ಪಂಜಾಬ್ ಕಿಂಗ್ಸ್ ಫೈಟ್ ಇಂದು

• **ಚೆನ್ನೈ:** ಮೊದಲ ಪಂದ್ಯದಲ್ಲಿ ಹೀನಾಯ ಸೋಲು ಅನುಭವಿಸಿರುವ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಗೆಲುವಿನೊಂದಿಗೆ ಶುರು ಮಾಡಿರುವ ಪಂಜಾಬ್ ಕಿಂಗ್ಸ್ ತಂಡಗಳು ಶುಕ್ರವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ 7ನೇ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಚೆನ್ನೈ ಸೂಪರ್ ಕಿಂಗ್ಸ್ ತಂಡವು ತನ್ನ ಮೊದಲನೇ ತವರು ಪಂದ್ಯ ಆಡಲಿದೆ. ಸೋಲಿನ ಕಹಿ ಜತೆಗೆ ಗೆಲುವಿನ ಹಂಬಲದೊಂದಿಗೆ ಪಂದ್ಯಕ್ಕೆ ಸಿದ್ಧವಾಗುತ್ತಿದೆ. ಇತ್ತ ಪಂಜಾಬ್ ಕಿಂಗ್ಸ್ ಮೊದಲನೇ ಪಂದ್ಯದಲ್ಲಿ ಭರ್ಜರಿ ಗೆಲುವು ಸಾಧಿಸಿತ್ತು. ಗೆಲುವಿನ ಭರವಸೆಯೊಂದಿಗೆ ಕಣಕ್ಕಿಳಿಯುತ್ತಿದೆ. ಚೆಪಾಕ್ ಕ್ರೀಡಾಂಗಣದಲ್ಲಿ ಸೇರುವ ಸಾವಿರಾರು ಅಭಿಮಾನಿಗಳಿಗೆ ಧೋನಿ ಇಲ್ಲದ ನಿರಾಸೆ ಇರಲಿದೆ.

**ಚೆನ್ನೈಗೆಪುಟಿದೇಳುವತವಕ:** ಕಳೆದ ಆವೃತ್ತಿಯಲ್ಲಿ ಭಾರೀ ಸೋಲುಗಳನ್ನು ಎದುರಿಸಿ ಕೊನೆಯ ಸ್ಥಾನ ಪಡೆದಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಈ ಬಾರಿಯ ಪಂದ್ಯಾವಳಿಯನ್ನು ಸೋಲಿನಿಂದ ಶುರುಮಾಡಿದೆ. ಮುಖ್ಯವಾಗಿ ಬ್ಯಾಟಿಂಗ್ ವಿಭಾಗ ಮತ್ತೊಮ್ಮೆ ಕುಸಿತ ಕಾಣುತ್ತಿದೆ. ಈ ಹಿಂದಿನ ಆವೃತ್ತಿಯಂತೆ ಬ್ಯಾಟರ್‌ಗಳು ಕಳೆದ ಪಂದ್ಯದಲ್ಲಿ ಕೈಕೊಟ್ಟರು. ಆದಾಗ್ಯೂ, ಹೊಸ ತಂಡದೊಂದಿಗೆ ಆಡುತ್ತಿರುವ ಚೆನ್ನೈಗೆ ಭರವಸೆ ಕೂಡ ಇದೆ. ಸಂಜು ಸ್ಯಾಮ್ಸನ್, ರುತುರಾಜ್ ಗಾಯಕ್ವಾಡ್, ಶಿವಂ ದುಬೆ, ಡೆವಾಲ್ಡ್ ಬ್ರೇವಿಸ್ ಅಂಥ ಆಟಗಾರರು ಇದ್ದಾರೆ. ಯುವಕರ ಪಡೆಯೂ ಇದೆ. ಆಲ್‌ರೌಂಡರ್‌ಗಳೂ ತಂಡದಲ್ಲಿದ್ದಾರೆ. ಆದರೆ ಬೌಲಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ.

**ಪಿಚ್:** ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಈ ಹಿಂದೆ ನಡೆದಿರುವ ಪಂದ್ಯಗಳಲ್ಲಿ ಮಿಶ್ರ ಫಲ ಸಿಕ್ಕಿದೆ. ಬ್ಯಾಟರ್‌ಗಳಿಗೆ ಉತ್ತಮ ಅವಕಾಶವಿದ್ದರೂ ದೊಡ್ಡ ಸ್ಕೋರ್ ಕಲೆಹಾಕಲಾಗಲ್ಲ, ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟವೂ ಇರಲಿದೆ.



### ಆತ್ಮವಿಶ್ವಾಸದಲ್ಲಿ ಪಂಜಾಬ್

ಮೊದಲ ಪಂದ್ಯದ ಗೆಲುವಿನ ವಿಶ್ವಾಸದಲ್ಲಿ ಪಂಜಾಬ್ ಕಿಂಗ್ಸ್ ಕಾಣಿಸಿಕೊಂಡಿದೆ. ಬಲಿಷ್ಠ ಬೌಲಿಂಗ್ ಪಡೆಯೊಂದಿಗೆ ಬ್ಯಾಟಿಂಗ್‌ನಲ್ಲೂ ಅದ್ಭುತ ಆಟಗಾರರನ್ನು ಪಂಜಾಬ್ ಹೊಂದಿದೆ. ಕಳೆದ ಪಂದ್ಯದಲ್ಲಿ ಕುಸಿತ ಅನುಭವಿಸಿದ್ದರೂ ಕೂಪರ್ ಕೊನೊಲಿ ಉತ್ತಮ ಬ್ಯಾಟಿಂಗ್‌ನೊಂದಿಗೆ ಪಂದ್ಯ ಗೆಲ್ಲಿಸಿದ್ದಾರೆ. ಪ್ರಭಸಿಮ್ರನ್ ಸಿಂಗ್, ಶ್ರೇಯಸ್ ಅಯ್ಯರ್ ಲಯದಲ್ಲಿದ್ದಾರೆ. ಆದಾಗ್ಯೂ ಪ್ರಿಯಾಂಶ್ ಆರ್ಯ, ವಧೇರಾ ಅಂಥವರು ಲಯಕ್ಕೆ ಬರಬೇಕಿದೆ. ಬೌಲಿಂಗ್‌ನಲ್ಲಿ ವಿವಿಧ ಆಟಗಾರರು ಭರವಸೆ ಹೆಚ್ಚಿಸಿದ್ದಾರೆ.

### ಪಂದ್ಯದ ವಿವರ:

ಯಾವಾಗ?: ಶುಕ್ರವಾರ, ಎಲ್ಲಿ: ಚೆಪಾಕ್, ಚೆನ್ನೈ, ಸಮಯ: ಸಂಜೆ 7:30, ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

### ಅಭ್ಯಾಸಕ್ಕೆ ಧೋನಿ

ಗಾಯಗೊಂಡು ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಗುಳಿದಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಪ್ರಮುಖ ಆಟಗಾರ ಮಹೇಂದ್ರ ಸಿಂಗ್ ಧೋನಿ ಅಭ್ಯಾಸಕ್ಕಿಳಿದಿದ್ದಾರೆ. ಪಂದ್ಯಾವಳಿಯಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡ ಬೇಕಾದ ಆರಂಭ ಪಡೆದಿಲ್ಲ. ರಾಜಸ್ಥಾನ ವಿರುದ್ಧದ ಪಂದ್ಯದಲ್ಲಿ ಸೋಲನುಭವಿಸಿರುವ ತಂಡ ಎರಡನೇ ಪಂದ್ಯಕ್ಕೆ ಸಿದ್ಧತೆಗಳನ್ನು ಶುರುಮಾಡಿಕೊಂಡಿದೆ. ಈ ನಡುವೆ ಮೊದಲನೇ ಪಂದ್ಯದಿಂದ ಮಹೇಂದ್ರ ಸಿಂಗ್ ಧೋನಿ ಹೊರಬಿದ್ದಿದ್ದರು. ಗಾಯದ ಸಮಸ್ಯೆ ಎದುರಿಸುತ್ತಿದ್ದ ಅವರು, ಎರಡು ವಾರದ ಮಟ್ಟಿಗೆ ಅಲಭ್ಯರಾಗಿದ್ದಾರೆ ಎಂದು ಹೇಳಲಾಗಿತ್ತು. ನಂತರ ಅರ್ಧ ಐಪಿಎಲ್‌ನಿಂದಲೇ ಹೊರಬಿದ್ದಿದ್ದಾರೆ ಎಂಬ ಸುದ್ದಿಗಳೂ ಹರಡಿದ್ದವು. ಹೀಗಿರುವಾಗ ಧೋನಿ ಬಗ್ಗೆ ಮಹತ್ವದ ಮಾಹಿತಿ ಹೊರಬಂದಿದೆ. ಕಾಲ್ಫ್ ಸ್ಟ್ರೈನ್ ಗಾಯದಿಂದ ಬಳಲುತ್ತಿರುವ ಧೋನಿ ನೆಟ್ಸ್‌ನಲ್ಲಿ ಅಭ್ಯಾಸ ಆರಂಭಿಸಿದ್ದಾರೆ. ಬುಧವಾರದಂದು ಅವರು ಮೈದಾನಕ್ಕೆ ಮರಳಿದ್ದರು. ನೆಟ್ಸ್‌ನಲ್ಲಿ ನಿಯಂತ್ರ ಕಂಡಿದ್ದು, ಅಭಿಮಾನಿಗಳಲ್ಲಿ ಮಂದಹಾಸ ಮೂಡಿದೆ. ಪಂಜಾಬ್ ವಿರುದ್ಧದ ಪಂದ್ಯಕ್ಕೆ ಅಲಭ್ಯರಿರುತ್ತಾರೆ ಎಂದು ಹೇಳಲಾಗುತ್ತಿದೆ. ಈ ಮೊದಲು ಚೆನ್ನೈ ಸೂಪರ್ ಕಿಂಗ್ಸ್ ಎರಡು ವಾರದ ಮಟ್ಟಿಗೆ ಧೋನಿ ಅಲಭ್ಯರೆಂಬ ಮಾಹಿತಿ ಇತ್ತು ಆದರೆ ಅದಕ್ಕೂ ಮೊದಲೇ ತಂಡಕ್ಕೆ ಸೇರಿಕೊಳ್ಳಲಿದ್ದು, ಫಿಟ್ನೆಸ್ ಪರೀಕ್ಷೆ ಕೊಡಲಿದ್ದಾರೆ ಎಂದು ಹೇಳಲಾಗುತ್ತಿದೆ.

## ಬೆಂಗಳೂರು ಎಫ್‌ಸಿಗೆ ಸಾವಿಯೊ ಮೆಡೈರಾ

• **ಬೆಂಗಳೂರು:** ಬೆಂಗಳೂರು ಎಫ್‌ಸಿ ತಂಡವು ಸಾವಿಯೊ ಮೆಡೈರಾ ಅವರನ್ನು ಕ್ಲಬ್‌ನ ಯುವ ಅಭಿವೃದ್ಧಿ ವಿಭಾಗದ ಮುಖ್ಯಸ್ಥರನ್ನಾಗಿ ನೇಮಕ ಮಾಡಿರುವುದಾಗಿ ಘೋಷಿಸಿದೆ.

ಬ್ಲೂಸ್ ತಂಡವು ತಳಮಟ್ಟದಿಂದ ಪ್ರಥಮ ತಂಡದವರೆಗೆ ಆಟಗಾರರ ಬೆಳವಣಿಗೆಯ ಹಾದಿಯನ್ನು ಬಲಪಡಿಸುತ್ತಿದ್ದು, ಈ ನಿಟ್ಟಿನಲ್ಲಿ ಮೆಡೈರಾ ಅವರು ಕ್ಲಬ್‌ನ ಯುವ ಅಭಿವೃದ್ಧಿ ಕಾರ್ಯಕ್ರಮದ ಜವಾಬ್ದಾರಿಯನ್ನು ವಹಿಸಿಕೊಳ್ಳಲಿದ್ದಾರೆ. ಮೆಡೈರಾ ಅವರು ಭಾರತೀಯ ಮತ್ತು ಅಂತಾರಾಷ್ಟ್ರೀಯ ಫುಟ್‌ಬಾಲ್‌ನಲ್ಲಿ ತರಬೇತಿ, ತಾಂತ್ರಿಕ ಅಭಿವೃದ್ಧಿ ಮತ್ತು ತರಬೇತುದಾರರ ಶಿಕ್ಷಣದಲ್ಲಿ ಎರಡು ದಶಕಗಳಿಗೂ ಹೆಚ್ಚು ಅನುಭವ ಹೊಂದಿದ್ದಾರೆ.




ಈ ಹಿಂದೆ ಅಖಿಲ ಭಾರತ ಫುಟ್‌ಬಾಲ್ ಫೆಡರೇಶನ್ ಅಡಿಯಲ್ಲಿ ಭಾರತೀಯ ಹಿರಿಯ ಪುರುಷರ ರಾಷ್ಟ್ರೀಯ ತಂಡದೊಂದಿಗೆ ಮುಖ್ಯ ತರಬೇತುದಾರ ಮತ್ತು ಸಹಾಯಕ ತರಬೇತುದಾರ ಸೇರಿದಂತೆ ಹಲವಾರು ಪಾತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ, 2011ರ ಸ್ಯಾಫ್ ಚಾಂಪಿಯನ್‌ಶಿಪ್, ನೆಹರು ಕಪ್ ಮತ್ತು ಎಎಫ್‌ಸಿ ಚಾಲೆಂಜ್ ಕಪ್ ಗೆದ್ದ ತಂಡದ ಭಾಗವಾಗಿದ್ದರು. ಕ್ಲಬ್ ಮಟ್ಟದಲ್ಲಿ, ಮೆಡೈರಾ ಅವರು ಸಾಲ್ಗಾಂವ್ಕರ್ ಸ್ಪೋರ್ಟ್ಸ್ ಕ್ಲಬ್‌ನೊಂದಿಗೆ ಯಶಸ್ವಿ ಅವಧಿಯನ್ನು ಕಳೆದಿದ್ದಾರೆ. ಅವರ ನೇತೃತ್ವದಲ್ಲಿ ತಂಡವು ಅನೇಕ ಬಾರಿ ಗೋವಾ ಪ್ರೊಫೆಷನಲ್ ಲೀಗ್ ಪ್ರಶಸ್ತಿಗಳನ್ನು (2002-2005) ಮುಡಿಗೇರಿಸಿಕೊಂಡಿದೆ ಮತ್ತು ನ್ಯಾಷನಲ್ ಲೀಗ್‌ನಲ್ಲಿ ರನ್ನರ್-ಅಪ್ ಸ್ಥಾನ ಪಡೆದಿದೆ. ಜೊತೆಗೆ ಅವರು 2003ರ ಡುರಾಂಡ್ ಕಪ್‌ನಲ್ಲಿ ಅತ್ಯುತ್ತಮ ತರಬೇತುದಾರ ಪ್ರಶಸ್ತಿಯನ್ನೂ ಪಡೆದಿದ್ದಾರೆ.

## ಆಟಗಾರರನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ

• **ಬೆಂಗಳೂರು:** ಒಬ್ಬ ತರಬೇತುದಾರನಾಗಿ ಪ್ರತಿಯೊಬ್ಬ ಆಟಗಾರರ ಅಗತ್ಯವನ್ನು ಅರ್ಥಮಾಡಿಕೊಳ್ಳುವುದು ಮುಖ್ಯ ಎಂದು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟಿಂಗ್ ಕೋಚ್ ದಿನೇಶ್ ಕಾರ್ತಿಕ್ ತಿಳಿಸಿದ್ದಾರೆ.

ಟಿ20 ಕ್ರಿಕೆಟ್‌ನ ಅತ್ಯುತ್ತಮ ಫಿನಿಷರ್‌ಗಳಲ್ಲಿ ಒಬ್ಬರಾಗಿದ್ದ ದಿನೇಶ್ ಕಾರ್ತಿಕ್, ಇದೀಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿ ಕೋಚ್ ಆಗಿ ಹೊಸ ಪಾತ್ರದಲ್ಲಿ ಗಮನ ಸೆಳೆಯುತ್ತಿದ್ದಾರೆ. ಅವರ ಮಾರ್ಗದರ್ಶನದಲ್ಲಿ ತಂಡವು ಚಾಂಪಿಯನ್ ಪಟ್ಟ ಉಳಿಸಿಕೊಳ್ಳಲು ದಾಪುಗಾಲು ಹಾಕಿದ್ದು, ಭರ್ಜರಿ ಆರಂಭ ಪಡೆದಿದೆ. ತಮ್ಮ ಕೋಚಿಂಗ್ ತತ್ವವನ್ನು ವಿವರಿಸಿದ ಕಾರ್ತಿಕ್, ಫಿಲ್ ಸಾಲ್ಟ್ ಹೊಸ ಚೆಂಡಿನ ಸ್ವಿಂಗ್ ಎದುರಿಸುತ್ತಾರೆ, ಆದರೆ ರೊಮಾರಿಯೊ ಶೆಫರ್ಡ್ ಅಂತಹ ಪರಿಸ್ಥಿತಿಯನ್ನು ಎದುರಿಸುವುದಿಲ್ಲ, ಹೀಗಾಗಿ, ಆಟಗಾರರಿಗೆ ಸಂದರ್ಭವನ್ನು ಅರ್ಥಮಾಡಿಕೊಟ್ಟು, ಸರಿಯಾದ ತಯಾರಿ ಮಾಡಿಸುವುದು ಮುಖ್ಯ. ಕೋಚಿಂಗ್ ಎಂದರೆ ಕೌಶಲ್ಯ ಮಾತ್ರವಲ್ಲ, ವ್ಯಕ್ತಿಯನ್ನು ಅರ್ಥಮಾಡಿಕೊಳ್ಳುವುದೂ ಮುಖ್ಯ ಎಂದು ಹೇಳಿದರು.



**ವೀಕ್ಷಕ ವಿವರಣೆಯಿಂದಲೂ ಸಹಾಯ: ಡಿಕೆ :** ವೀಕ್ಷಕ ವಿವರಕನಾಗಿ ಕೆಲಸ ಮಾಡಿರುವ ಅನುಭವವು ಕೂಡ ಕೋಚಿಂಗ್‌ಗೆ ನೆರವಾಗಿದೆ ಎಂದು ಕಾರ್ತಿಕ್ ಅಭಿಪ್ರಾಯಪಟ್ಟರು. ತಿಳಿಸಿದ್ದಾರೆ. ಪ್ರಸಾರಕ್ಷೇತ್ರದಲ್ಲಿ ಕೆಲಸ ಮಾಡುವುದರಿಂದ ವಿವಿಧ ತಂಡಗಳು, ಆಟಗಾರರ ಆಟವನ್ನು ವಿಶ್ಲೇಷಿಸುವ ಅವಕಾಶ ಸಿಗುತ್ತದೆ. ಇದು ಕೋಚಿಂಗ್‌ನಲ್ಲಿ ಸ್ಪಷ್ಟವಾಗಿ ಹಾಗೂ ಸಂಕ್ಷಿಪ್ತವಾಗಿ ಮಾತಾಡಲು ಸಹಾಯ ಮಾಡುತ್ತದೆ ಎಂದರು. ಟಿಮ್ ಡೇವಿಡ್‌ಗೆ ನಾವು ವಿಶೇಷ ಪಂದ್ಯ ಪರಿಸ್ಥಿತಿಗಳನ್ನು ಸೃಷ್ಟಿಸಿ ಅಭ್ಯಾಸ ಮಾಡಿಸುತ್ತಿದ್ದೇವೆ. ಅವರ ಶಕ್ತಿಗಳನ್ನು ಗಮನಿಸಿ, ಅವರಿಗೆ ಸೂಕ್ತವಾದ ಶಾಟ್‌ಗಳನ್ನು ನಿರಂತರವಾಗಿ ಆಡಲು ಸಹಾಯ ಮಾಡುತ್ತಿದ್ದೇವೆ, ಎಂದು ಕಾರ್ತಿಕ್ ಹೇಳಿದರು.

### ಡಿಕೆ ಮಾಸ್ಟರ್ ಮೈಂಡ್

ಇನ್ನೊಂದೆಡೆ, ಫಿಲ್ ಸಾಲ್ಟ್ ಕಾರ್ತಿಕ್ ಬಗ್ಗೆ ಮಾತನಾಡಿ, ಡಿಕೆ ಮಾಸ್ಟರ್ ಮೈಂಡ್. ಅವರು ಹಾಗೂ ಕೋಚಿಂಗ್ ತಂಡದವರು ಸಂಗ್ರಹಿಸುವ ಮಾಹಿತಿಯನ್ನು ಸರಳವಾಗಿ ಆಟಗಾರರಿಗೆ ಅರ್ಥವಾಗುವಂತೆ ನೀಡುತ್ತಾರೆ. ಇತ್ತೀಚೆಗೆ ಆಟ ಆಡಿದ ಅನುಭವದಿಂದ ಅವರು ನೀಡುವ ಮಾರ್ಗದರ್ಶನ ತುಂಬಾ ಉಪಯುಕ್ತ, ಎಂದು ಹೇಳಿದರು.

» ತರಬೇತಿ ಕಾರ್ಯ ವೈಖರಿಗಳ ಬಗ್ಗೆ ದಿನೇಶ್ ಕಾರ್ತಿಕ್ ಅಭಿಮತ

» ಎಲ್ಲಾ ಪರಿಸ್ಥಿತಿಗಳನ್ನು ಅರ್ಥ ಮಾಡಿಕೊಳ್ಳುವುದೇ ಸವಾಲು

## ಪದಬಂಧ 5942

» ರಾಜಾ ಸಂಗಮೇಶ ಹಿರೇಮಠ

| | | | | | | | | |
|---|---|---|---|---|---|---|---|---|
| 1 | ■ | ■ | 2 | | 3 | ■ | ■ | 4 |
| 5 | | | | ■ | 6 | | | |
| | ■ | ■ | | ■ | | ■ | ■ | |
| ■ | 7 | | | ■ | 8 | | 9 | ■ |
| ■ | | ■ | ■ | ■ | ■ | ■ | | ■ |
| 10 | | | 11 | ■ | 12 | | | 13 |
| | ■ | ■ | 14 | | | ■ | ■ | |
| | ■ | ■ | | ■ | | ■ | ■ | |
| 15 | | | | ■ | 16 | | | |

ಎಡದಿಂದ ಬಲಕ್ಕೆ
2.ವ್ಯಕ್ತಿ-ಪ್ರಾಣಿ-ವಸ್ತುಗಳ ಒಕ್ಕೂಟ (3)
5.ಅಜ್ಞಾನದಿಂದ ಕೂಡಿದ ಚರ್ಚೆ (4)
6.ಹಗಲಲ್ಲಿ ರತ್ನದಂತೆ ಪ್ರಕಾಶಿಸುವವನು (4)
7.ಸಲದ ನಡುವೆ ಬಿಗಿಯಿಲ್ಲದಿರುವಿಕೆಯಿದೆ (3)
8.ಯವನಿಕೆಯಿಲ್ಲಿ ತಿರುಗಿದೆ (3)
10.ಪಯ ಒಳಗೊಂಡ ಕಾಯಿಸಬೇಕಾದುದು (4)
12.ಹೆಸರಿನಿಂದ ಗೊತ್ತು ಮಾಡುವುದು (4)
14.ವಿನಾಯಕನಿಲ್ಲಿ ತಿರುಗಿ ಕುಳಿತಿದ್ದಾನೆ (3)
15.ಕೋಟೆಯ ಸೇನಾಧಿಪತಿಯೀತ (4)
16.ಪರಸ್ಪರ ಸಹಾಯವಿದು(4)

ಮೇಲಿನಿಂದ ಕೆಳಕ್ಕೆ
1.ಮನಕ್ಕುಂಟಾಗುವ ಅತೀವ ಸಂತೋಷ (3)
2.ಸಲದ ನಡುವೆ ಕೊಳೆಯಿಲ್ಲದ್ದಿದೆ (4)
3.ಪತಿಯ ಬಗ್ಗೆ ನಿಷ್ಠೆ-ಭಕ್ತಿ ಇರುವವಳು (4)
4.ಕಣ್ಣಿಗೆ ತೋರು-ದೃಷ್ಟಿಗೆ ಬೀಳುವಂತೆ ಮಾಡು (3)
7.ದೂರವಲ್ಲದ ಹತ್ತಿರ (3)
9.ಸಂಭ್ರಮಾಚರಣೆಯಲ್ಲಿ ಬಳಸುವ ಸ್ಫೋಟಕವಸ್ತು (3)
10.ಅಂಗೈಯಿಂದ ಕೆನ್ನೆಗೆ ಬಿದ್ದ ಏಟು (4)
11.ಶರ ಒಳಗೊಂಡ ಕೀರ್ತಿ ತರುವಂಥಾದ್ದು (4)
12.ಸರ್ಪಲೋಕ-ಪಾತಾಳವಿದು (4)
13.ಟಗರನ್ನು ವಾಹನವಾಗುಳ್ಳವನು (4)

### 5943 ಉತ್ತರ

ಎಡದಿಂದ ಬಲಕ್ಕೆ:
3.ಪುಂಡರೀಕಾಕ್ಷ
5.ಕನ್ನಡನುಡಿ 6.ನಾಟಿ
7.ಗೌಡ 9.ಮಧುಕರ
11.ಯವನಿಕೆ 15.ಕಿರ್ದಿ
16.ದಾನ 17.ಯಮನಂದನ
19.ಅಸುರಮನ

ಮೇಲಿನಿಂದ ಕೆಳಕ್ಕೆ :
1.ಮಕರಾಕರ 2.ಕುಂಡ
3.ಪುಂಡಿನಾರು
4.ಕಾರ್ಯಗೌರವ 8.ಬಂಧು
10.ಕಪರ್ದಿಕಾಸು 12.ನಿತ್ಯ
13.ಯಮುನಾನದಿ
14.ತ್ರಿನಯನ 18.ನಂಬು

## ಕಿರುಸುದ್ದಿ

### ರೂ.500 ತಲುಪಿದ ಹೊಸ ಅಡಿಕೆ ಧಾರಣೆ

**ಪುತ್ತೂರು:** ಮಂಗಳೂರು ಚಾಲಿ ಅಡಿಕೆ ಮಾರುಕಟ್ಟೆಯಲ್ಲಿ ಹೊಸ ಅಡಿಕೆಗೆ ರೂ.500ಕ್ಕೆ ಖರೀದಿಯಾಗಿದೆ. ಫಸಲು ನಷ್ಟದಿಂದ ಸಂಕಷ್ಟಕ್ಕೆ ಈಡಾಗಿರುವ ಅಡಿಕೆ ಬೆಳೆಗಾರರಿಗೆ ಅಡಿಕೆ ಬೆಲೆ ಸ್ಥಿರತೆಯನ್ನು ಕಾಪಾಡಿಕೊಂಡಿರುವುದು ಮತ್ತು ಬೆಲೆ ಏರಿಕೆಯೊಂದಿಗೆ ಈ ವಾರದಲ್ಲಿ ರೂ.500 ದಾಟುವ ಸಾಧ್ಯತೆ ಕುರಿತು ಹೊಸ ದಿಗಂತ ಪತ್ರಿಕೆಯಲ್ಲಿ ಮಾ.30ರಂದು ವರದಿ ಪ್ರಕಟಿಸಲಾಗಿತ್ತು.



ಕೆಲವು ದಿನಗಳ ಹಿಂದೆ ಒಂದಷ್ಟು ಇಳಿಕೆ ಕಂಡಿದ್ದ ದರ ಮತ್ತೆ ಏರಿಕೆಯತ್ತ ಮುಖ ಮಾಡಿತ್ತು. ಹಾಲಿ ಪ್ರತಿಷ್ಠಿತ ಸಹಕಾರ ಸಂಸ್ಥೆ ಕ್ಯಾಂಪ್ಕೋದಲ್ಲಿ ಹೊಸ ಅಡಿಕೆ ಕೆ.ಜಿ.ಗೆ ರೂ.460–490 ಹಾಗೂ ಚೋಲ್ ಅಡಿಕೆ ರೂ.530–555ಕ್ಕೆ ತಲುಪಿದೆ. ಹೊರ ಮಾರುಕಟ್ಟೆಯಲ್ಲಿ ಹೊಸ ಅಡಿಕೆ ರೂ.500 ಹಾಗೂ ಹಳೆ ಅಡಿಕೆ ರೂ.560 ಮೀರಿ ಖರೀದಿಯಾಗಿದೆ. ರೋಗಗಳು ಹಾಗೂ ಇತರ ಕಾರಣಗಳಿಗಾಗಿ ಫಸಲು ನಷ್ಟ ಉಂಟಾಗಿರುವುದರಿಂದ ಮಾರುಕಟ್ಟೆಯಲ್ಲಿ ಅಡಿಕೆಗೆ ಬೇಡಿಕೆ ಇದೆ. ಮುಂದಿನ ದಿನಗಳಲ್ಲಿ ಅಡಿಕೆಗೆ ಇನ್ನಷ್ಟು ಬೆಲೆ ಏರುವ ಸಾಧ್ಯತೆ ಇದೆ ಎನ್ನುತ್ತಾರೆ ಮಾರುಕಟ್ಟೆ ತಜ್ಞರು.

### ಹೊಟೇಲ್‌ಗೆ ಹೋಗಿ ಬರುವಷ್ಟರಲ್ಲಿ ಬೈಕ್ ನಾಪತ್ತೆ

**ಕುಂಬಳೆ:** ಹೊಟೇಲ್‌ನಲ್ಲಿ ಆಹಾರ ಸೇವಿಸಿ ಮರಳಿದಾಗ ಹೊರಗೆ ನಿಲ್ಲಿಸಲಾಗಿದ್ದ ಬೈಕ್ ನಾಪತ್ತೆಯಾದ ಬಗ್ಗೆ ದೂರಲಾಗಿದೆ. ಈ ಬಗ್ಗೆ ಲಭಿಸಿದ ದೂರಿನಂತೆ ಕೇಸು ದಾಖಲಿಸಿಕೊಂಡ ಪೊಲೀಸರು ನಡೆಸಿದ ತನಿಖೆಯಲ್ಲಿ ಬೈಕ್ ಕಳವಿಗೀಡಾಗಿರುವುದಾಗಿ ತಿಳಿದುಬಂದಿದೆ. ಬೈಕ್ ಕಳವುಗೈದ ವ್ಯಕ್ತಿ ಯಾರೆಂದು ತಿಳಿದುಬಂದಿದ್ದು, ಇದೀಗ ಆತನನ್ನು ಪತ್ತೆಹಚ್ಚಲು ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ. ಕುಂಬಳೆ ಕಂಚಿಕಟ್ಟೆ ನಿವಾಸಿ ಅಜಿತ್‌ಕುಮಾರ್ ಎಂಬವರ ಪಲ್ಸರ್ ಬೈಕ್ ಕಳವಿಗೀಡಾಗಿದೆ. ಶನಿವಾರ ಮಧ್ಯಾಹ್ನ 1.30ರ ವೇಳೆ ಅಜಿತ್‌ಕುಮಾರ್ ಕುಂಬಳೆ ಪೇಟೆಯ ಬಸ್ ನಿಲ್ದಾಣದ ಹಿಂಭಾಗದಲ್ಲಿರುವ ಹೊಟೇಲೊಂದರ ಬಳಿ ಬೈಕ್ ನಿಲ್ಲಿಸಿ ಆಹಾರ ಸೇವಿಸಲು ತೆರಳಿದ್ದರು. ಆಹಾರ ಸೇವಿಸಿ 1.45ಕ್ಕೆ ಬಂದು ನೋಡಿದಾಗ ಬೈಕ್ ನಾಪತ್ತೆಯಾಗಿತ್ತೆನ್ನಲಾಗಿದೆ. ಈ ಬಗ್ಗೆ ಅಜಿತ್‌ಕುಮಾರ್ ನೀಡಿದ ದೂರಿನಂತೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಕುಂಬಳೆ ರೈಲ್ವೇ ನಿಲ್ದಾಣ ಬಳಿಯ ಕುಟುಂಬ ಕ್ಷೇತ್ರವೊಂದರ ಸಿಸಿಟಿವಿ ಕ್ಯಾಮರಾ ಪರಿಶೀಲಿಸಿದಾಗ ಬೈಕ್‌ನ್ನು ಓರ್ವ ಚಲಾಯಿಸುತ್ತಿರುವುದು ಕಂಡುಬಂದಿದೆ. ಆ ವ್ಯಕ್ತಿಯ ಕುರಿತು ಮಾಹಿತಿ ಲಭಿಸಿದ್ದು, ಆತನ ಪತ್ತೆಯಾಗಿ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ.

### ಬಾಲಕನಿಗೆ ಸ್ಕೂಟರ್ ಚಲಾಯಿಸಲು ನೀಡಿದ ತಂದೆ ವಿರುದ್ಧ ಕೇಸು

**ಕುಂಬಳೆ:** ಪ್ರಾಯ ಪೂರ್ತಿಯಾಗದ ಪುತ್ರನಿಗೆ ಸ್ಕೂಟರ್ ಚಲಾಯಿಸಲು ನೀಡಿದ ತಂದೆಯ ವಿರುದ್ಧ ಕುಂಬಳೆ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ಇಚ್ಲಂಗೋಡು ನಿವಾಸಿ ಮುಹಮ್ಮದ್ ಬಶೀರ್ (56) ಎಂಬಾತನ ವಿರುದ್ಧ ಕೇಸು ದಾಖಲಿಸಿ ಸ್ಕೂಟರ್‌ನ್ನು ವಶಕ್ಕೆ ಪಡೆಯಲಾಗಿದೆ.

### ದೋಣಿ ಅವಘಡ: ಮತ್ತೊಬ್ಬ ಯುವಕನ ಶವ ಪತ್ತೆ

**ಮಂಗಳೂರು:** ದೋಣಿ ಮಗುಚಿ ನೀರುಪಾಲಾಗಿದ್ದ ಯುವಕನ ಮೃತದೇಹ ಗುರುವಾರ ಮುಂಜಾನೆ ಪತ್ತೆಯಾಗಿದೆ. ಯುವಕ ರಾಯಲ್ (27) ಎಂಬಾತ ಬುಧವಾರ ಮರಕಡ ಸಮೀಪ ಫಲ್ಗುಣಿ ನದಿಯಲ್ಲಿ ಸಂಭವಿಸಿದ ದೋಣಿ ಅವಘಡದಲ್ಲಿ ಕಣ್ಮರೆಯಾಗಿದ್ದರು. ಘಟನೆ ನಡೆದ 24 ಗಂಟೆಯ ಬಳಿ ದೋಣಿ ಮುಳುಗಿದ ಸ್ಥಳದಲ್ಲೇ ಶವ ತೇಲುತ್ತಿರುವುದನ್ನು ಗಮನಿಸಿದ ಸ್ಥಳೀಯರು ಅದನ್ನು ಮೇಲಕ್ಕೆತ್ತಿದ್ದಾರೆ. ವೆನ್ಲಾಕ್ ಆಸ್ಪತ್ರೆಯಲ್ಲಿ ಮೃತದೇಹದ ಪೋಸ್ಟ್ ಮಾರ್ಟಂ ನಡೆಸಿ ಕುಟುಂಬಸ್ಥರಿಗೆ ಹಸ್ತಾಂತರಿಸಲಾಗಿದೆ. ಸ್ಥಳೀಯ ನಿವಾಸಿಗಳಾದ ಗಣೇಶ (28) ಮತ್ತು ರಾಯಲ್ (27) ನಿತೇಶ್ (29) ಅವರು ಮಂಗಳವಾರ ತಡರಾತ್ರಿ ಮೀನು ಹಿಡಿಯಲೆಂದು ದೋಣಿಯಲ್ಲಿ ಹೋಗುತ್ತಿದ್ದಾಗ ದೋಣಿ ಮಗುಚಿ ಬಿದ್ದಿತ್ತು. ಈ ಪೈಕಿ ನಿತೇಶ್ ಈಜಿ ದಡ ಸೇರಿದ್ದರೆ, ಗಣೇಶ ಮತ್ತು ರಾಯಲ್ ನೀರು ಪಾಲಾಗಿದ್ದರು. ಗಣೇಶ್ ಮೃತದೇಹ ಬುಧವಾರ ಬೆಳಗ್ಗೆಯೇ ಪತ್ತೆಯಾಗಿತ್ತು. ರಾಯಲ್ ಕಣ್ಮರೆಯಾಗಿದ್ದರು.

### ಬೈಕ್‌ಗೆ ಲಾರಿ ಡಿಕ್ಕಿ: ಸವಾರ ಗಂಭೀರ


**ಕೊಣಾಜೆ:** ಕೊಣಾಜೆ ಠಾಣಾ ವ್ಯಾಪ್ತಿಯ ಕಂಬಳಪದವು ಬಳಿ ಬೈಕೊಂದಕ್ಕೆ ಲಾರಿಯೊಂದು ಡಿಕ್ಕಿ ಹೊಡೆದು ಸವಾರ ನಡುಪದವಿನ ಸುಶಾಂತ್ (23)ಗಂಭೀರ ಗಾಯಗೊಂಡಿರುವ ಘಟನೆ ಗುರುವಾರ ಸಂಜೆ ನಡೆದಿದೆ.

---

ಕರಾವಳಿಯಾದ್ಯಂತ ಬಹುತೇಕ ಗ್ಯಾಸ್ ಫಿಲ್ಲಿಂಗ್ ಸ್ಟೇಷನ್ ಬಂದ್ | ಆಟೋ ಎಲ್‌ಪಿಜಿಗೆ ಎಲ್ಲೆಡೆ ಪರದಾಟ

# ಯುದ್ಧದ ಏಟಿಗೆ ಗಗನಕ್ಕೆ ಜಿಗಿದ ರೇಟು!

**ಮಂಗಳೂರು/ಉಡುಪಿ:** ಮಧ್ಯಪ್ರಾಚ್ಯ ಯುದ್ಧದ ಬಿಸಿ ಎಲ್ಲೆಡೆ ತಟ್ಟಿದೆ. ಇದೀಗ ಕರಾವಳಿಯಾದ್ಯಂತ ಆಟೊ ಎಲ್‌ಪಿಜಿ ಕೊರತೆ ಎದುರಾಗಿದ್ದು, ಇರುವ ಎಲ್‌ಪಿಜಿ ದರದಲ್ಲಿ ಕೂಡ ಭಾರೀ ಏರಿಕೆಯಾಗಿದೆ. ಇದರಿಂದಾಗಿ ಇದನ್ನೇ ನಂಬಿದ್ದ ಆಟೋ ಚಾಲಕರು ಕಂಗಾಲಾಗಿದ್ದಾರೆ.






**92.10ರೂ.ಗೆ ಏರಿಕೆ**

ಆಟೊಗಳಿಗೆ ಬಳಸುವ ಎಲ್‌ಪಿಜಿ ದರ ವಾರದ ಹಿಂದೆ 70–80 ರೂಪಾಯಿಯಷ್ಟಿತ್ತು. ಆದರೆ ಈಗ ಏಕಾಏಕಿ ಏರಿಕೆಯಾಗಿದ್ದು ಮಂಗಳೂರಿನ ಬಹುತೇಕ ಫಿಲ್ಲಿಂಗ್ ಸ್ಟೇಶನಗಳಲ್ಲಿ 92.10 ರೂ.ಗೆ ಏರಿಕೆ ಮಾಡಲಾಗಿದೆ.

ಯುದ್ಧ ಆರಂಭವಾಗುವ ಮೊದಲು ಆಟೊ ಎಲ್‌ಪಿಜಿ ದರ ಲೀ.ಗೆ 62 ರೂ.ಇತ್ತು. ಯುದ್ಧ ಆರಂಭವಾದ ಬಳಿಕ 80 ರೂ.ಗೆ ಏರಿಕೆಯಾಗಿತ್ತು. ಈಗ ದಿಢೀರನೆ 92.10 ರೂ. ಏರಿಸಿರುವುದರಿಂದ ಆತಂಕ ಸೃಷ್ಟಿಯಾಗಿದೆ ಎನ್ನುತ್ತಾರೆ ಆಟೋರಿಕ್ಷಾ ಚಾಲಕರು.

**ಹಲವು ಸ್ಟೇಷನ್ ಬಂದ್**

ಮಂಗಳೂರು ನಗರದ ಬಹುತೇಕ ಗ್ಯಾಸ್ ಫಿಲ್ಲಿಂಗ್ ಸ್ಟೇಷನ್‌ಗಳು ಬಂದ್ ಆಗಿವೆ. ಗ್ಯಾಸ್ ತುಂಬಿಸಲು ತೆರಳುವ ಆಟೋ ಚಾಲಕರಿಗೆ 'ಗ್ಯಾಸ್ ಇಲ್ಲ, ಖಾಲಿಯಾಗಿದೆ' ಎಂಬ ಬೋರ್ಡ್‌ಗಳು ಎದುರಾಗುತ್ತಿರುವುದರಿಂದ ಚಾಲಕರು ಸಪ್ಪೆ ಮೋರೆ ಹಾಕಿ ಹಿಂತಿರುಗುವಂತಾಗಿದೆ.

**ಬೇಕಾಬಿಟ್ಟಿ ಏರಿಕೆ**

ಮನಸೋ ಇಚ್ಛೆ ದರ ಏರಿಸುತ್ತಿರುವ ಬಗ್ಗೆ ಆಟೋ ಚಾಲಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಇತ್ತೀಚೆಗೆ ಆಟೊ ಎಲ್‌ಪಿಜಿ ದರ 80 ರೂ. ಇದ್ದಾಗ ನಗರದ ಬಲ್ಮಠ ಸಮೀಪದ ಬಂಕ್‌ನಲ್ಲಿ 95 ರೂ. ವಸೂಲಿ ಮಾಡುತ್ತಿದ್ದರು. ಈ ಕುರಿತು ಚಾಲಕರ ದೂರಿನ ಮೇರೆಗೆ ಅಧಿಕಾರಿಗಳು ಕ್ರಮ ಕೈಗೊಂಡ ಬಳಿಕ 80 ರೂ.ಗಳಿಗೆ ದರ ಇಳಿಸಿದ್ದರು. ಇದೀಗ ಮತ್ತೆ ಏಕಾಏಕಿ ಏರಿಕೆಯಾಗಿರುವುದು ಆತಂಕಕ್ಕೆ ಕಾರಣವಾಗಿದೆ.




**ತ್ವರಿತ ಕ್ರಮಕ್ಕೆ ಆಗ್ರಹ**

ತಾಂತ್ರಿಕ ಕಾರಣ ಅಥವಾ ಪೂರೈಕೆಯಲ್ಲಿನ ವ್ಯತ್ಯಯ ಏನೇ ಇರಲಿ, ತಕ್ಷಣವೇ ಎಲ್‌ಪಿಜಿ ದಾಸ್ತಾನು ಸರಿಪಡಿಸದಿದ್ದರೆ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುವ ಸಾಧ್ಯತೆಯಿದೆ. ಜಿಲ್ಲಾಡಳಿತ ಮಧ್ಯಪ್ರವೇಶಿಸಿ ಪರ್ಯಾಯ ವ್ಯವಸ್ಥೆ ಮಾಡಬೇಕು ಎಂಬುದು ಆಟೋ ಚಾಲಕರು ಹಾಗೂ ಸಾರ್ವಜನಿಕರ ಒಕ್ಕೊರಲ ಒತ್ತಾಯವಾಗಿದೆ.

**ಉಡುಪಿಯಲ್ಲೂ ಇದೇ ಸಮಸ್ಯೆ**

ಉಡುಪಿ ಜಿಲ್ಲೆಯ ಇಂಧನ ಕೇಂದ್ರಗಳಲ್ಲಿ ಎಲ್‌ಪಿಜಿ ಅನಿಲದ ತೀವ್ರ ಅಭಾವ ಸೃಷ್ಟಿಯಾಗಿದ್ದು, ಸಾರ್ವಜನಿಕ ಸಾರಿಗೆಯ ಬೆನ್ನೆಲುಬಾದ ಆಟೋ ರಿಕ್ಷಾಗಳ ಸಂಚಾರ ಬಹುತೇಕ ಸ್ಥಗಿತಗೊಂಡಿದೆ. ಗ್ಯಾಸ್ ಸ್ಟೇಷನ್‌ಗಳ ಮುಂದೆ 'ನೋ ಸ್ಟಾಕ್' ಬೋರ್ಡ್‌ಗಳು ಪ್ರತ್ಯಕ್ಷವಾಗಿವೆ.

ಬೆಳಿಗ್ಗೆಯಿಂದಲೇ ನಗರದ ಗ್ಯಾಸ್ ಸ್ಟೇಷನ್‌ಗಳ ಮುಂದೆ ಆಟೋಗಳು ಸಾಲುಗಟ್ಟಿ ನಿಂತಿದ್ದ ದೃಶ್ಯ ಕಂಡುಬಂದಿತು. ಆದರೆ, ಸ್ಟೇಷನ್ ಸಿಬ್ಬಂದಿಗಳು 'ಗ್ಯಾಸ್ ಖಾಲಿಯಾಗಿದೆ, ಸಹಕರಿಸಿ' ಎಂಬ ಬ್ಯಾನರ್ ಹಾಕುವ ಮೂಲಕ ಚಾಲಕರ ನಿರೀಕ್ಷೆಗೆ ತಣ್ಣೀರೆರಚಿದ್ದಾರೆ.

ಹಲವು ಚಾಲಕರು ಅನಿವಾರ್ಯವಾಗಿ ತಮ್ಮ ವಾಹನಗಳನ್ನು ನಿಲ್ದಾಣಗಳಲ್ಲೇ ನಿಲ್ಲಿಸಿ ಮನೆಗೆ ಮರಳುತ್ತಿದ್ದಾರೆ.

**ಪ್ರವಾಸಿಗರ ಪಾಲಿಗೆ ಬಿಸಿತುಪ್ಪವಾದ ಎಲ್‌ಪಿಜಿ ಸಮಸ್ಯೆ**

ಧಾರ್ಮಿಕ ಕ್ಷೇತ್ರ ಮತ್ತು ಪ್ರವಾಸಿ ತಾಣವಾಗಿರುವ ಉಡುಪಿಗೆ ದೇಶ-ವಿದೇಶಗಳಿಂದ ನಿರಂತರವಾಗಿ ಪ್ರವಾಸಿಗರು ಆಗಮಿಸುತ್ತಾರೆ. ಆದರೆ, ಆಟೋಗಳ ಲಭ್ಯತೆ ಇಲ್ಲದೆ ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಪ್ರವಾಸಿಗರು ಲಗೇಜ್‌ಗಳೊಂದಿಗೆ ಪರದಾಡುವಂತಾಗಿದೆ. ಆಟೋ ಚಾಲಕರು ಗ್ಯಾಸ್ ಕೊರತೆಯಿಂದಾಗಿ ದೂರದ ಊರುಗಳಿಗೆ ಬಾಡಿಗೆ ಬರಲು ನಿರಾಕರಿಸುತ್ತಿರುವುದು ಪ್ರವಾಸಿಗರ ಅಸಮಾಧಾನಕ್ಕೆ ಕಾರಣವಾಗಿದೆ.

---

ಮತದಾನ ಜಾಗೃತಿಗೆ ಸಪ್ಲೈಕೋದಿಂದ ಭರ್ಜರಿ ಕೊಡುಗೆ

## ಮತ ಚಲಾಯಿಸಿದವರಿಗೆ ಸಿಗಲಿದೆ ಒಂದು ರೂಪಾಯಿಗೆ ಪುಟ್ಟು ಪುಡಿ!

**ತಿರುವನಂತಪುರಂ:** ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಮತದಾರರು ಭಾಗವಹಿಸುವಂತೆ ಪ್ರೋತ್ಸಾಹಿಸಲು ಸಪ್ಲೈಕೋ ವಿಶೇಷ ಕೊಡುಗೆಯನ್ನು ತಂದಿದೆ. ಏ.9ರಂದು ನಡೆಯಲಿರುವ ಚುನಾವಣೆಯಲ್ಲಿ ಮತಗಳನ್ನು ನೋಂದಾಯಿಸುವವರಿಗೆ ಒಂದು ರೂಪಾಯಿಗೆ ಒಂದು ಕಿಲೋ ಶಬರಿ ಪುಟ್ಟು ಪುಡಿ ನೀಡಲಾಗುವುದು ಎಂದು ಅಧಿಕೃತರು ಘೋಷಿಸಿದ್ದಾರೆ.

ಮತದಾನದ ಪುರಾವೆಯಾಗಿ ಬೆರಳಿನ ಮೇಲಿನ ಶಾಯಿ ಗುರುತನ್ನು



ಪರಿಶೀಲಿಸಿದ ನಂತರ ಪುಟ್ಟು ಪುಡಿ ನೀಡಲಾಗುತ್ತದೆ. ಸಪ್ಲೈಕೋದಿಂದ 1,000 ರೂ.ಗಿಂತ ಹೆಚ್ಚಿನ ಸಬ್ಸಿಡಿ ರಹಿತ ವಸ್ತುಗಳನ್ನು ಖರೀದಿಸುವ ಗ್ರಾಹಕರಿಗೆ ಒಂದು ರೂಪಾಯಿಗೆ ಒಂದು ಕೆಜಿ ಪುಟ್ಟು ಪುಡಿ ಲಭಿಸಲಿದೆ.

ಚುನಾವಣಾ ಜಾಗೃತಿಯ ಭಾಗವಾಗಿ ಜಿಲ್ಲಾಡಳಿತ, ಸ್ವೀಪ್ (ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣಾ ಭಾಗವಹಿಸುವಿಕೆ) ಮತ್ತು ಸಪ್ಲೈಕೋ ಜಂಟಿಯಾಗಿ ಮತದಾನ ಪುಟ್ ಎಂಬ ಟ್ಯಾಗ್‌ಲೈನ್‌ನೊಂದಿಗೆ ಈ ಅಭಿಯಾನವನ್ನು ಪ್ರಾರಂಭಿಸುತ್ತಿವೆ. ಮತ ಚಲಾಯಿಸಿದ ನಂತರ ಏ.10 ಮತ್ತು 11ರಂದು ಸಪ್ಲೈಕೋ ಮಳಿಗೆಗಳಿಗೆ ಭೇಟಿ ನೀಡುವವರಿಗೆ ಈ ಪ್ರಯೋಜನ ಲಭ್ಯವಿರುತ್ತದೆ.

## ಚುನಾವಣೆ: ಕಾಸರಗೋಡು ಕಸಬಾ ಕಡಪ್ಪುರದಲ್ಲಿ ಬೀಚ್ ಫುಟ್‌ಬಾಲ್

**ಕಾಸರಗೋಡು:** ವಿಧಾನಸಭಾ ಚುನಾವಣೆಯ ಅಂಗವಾಗಿ ಕುಟುಂಬಶ್ರೀ ಕಾಸರಗೋಡು ಜಿಲ್ಲಾ ಮಿಷನ್‌ನ ನೇತೃತ್ವದಲ್ಲಿ ವೋಟಿಯನಂ–2026 ಎಂಬ ಕಾರ್ಯಕ್ರಮದ ಪ್ರಯುಕ್ತ ಬೀಚ್ ಫುಟ್‌ಬಾಲ್ ಪಂದ್ಯಾವಳಿಯು ಕಾಸರಗೋಡು ಕಸಬಾ ಕಡಪ್ಪುರದಲ್ಲಿ ಗುರುವಾರ ಜರಗಿತು.

ಈ ಪಂದ್ಯಾಟವು ಕರಾವಳಿ ಪ್ರದೇಶದ ನಿವಾಸಿಗಳನ್ನು ರೋಮಾಂಚನಗೊಳಿಸುವಲ್ಲಿ ಯಶಸ್ವಿಯಾಯಿತು. ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಗೋಲು (ಚೆಂಡು) ಒದೆಯುವ ಮೂಲಕ ಪಂದ್ಯಾವಳಿಯನ್ನು ಉದ್ಘಾಟಿಸಿ, ಜಿಲ್ಲೆಯಲ್ಲಿ ಮತದಾನದ ಹಕ್ಕನ್ನು ಸಂಪೂರ್ಣವಾಗಿ ಎಲ್ಲರೂ ಚಲಾಯಿಸಲು ಮತ್ತು ಪ್ರತಿಯೊಬ್ಬರನ್ನು ಪ್ರಜಾಪ್ರಭುತ್ವದ ಭಾಗವಾಗಿಸಲು ಸ್ವೀಪ್ ಯೋಜನೆಯಡಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ ಎಂದು ತಿಳಿಸಿದರು.

ಪಂದ್ಯಾವಳಿಯಲ್ಲಿ ಒಟ್ಟು ಆರು ತಂಡಗಳು ಭಾಗವಹಿಸಿವೆ. ಪೊಲೀಸ್ ತಂಡ ಕಾಸರಗೋಡು, ಕುಟುಂಬಶ್ರೀ ಕಾಸರಗೋಡು, ರೀಮರ್ ಉದುಮ



ವೆಸ್ಟ್, ರೋವರ್ಸ್ ಕಡಪ್ಪುರಂ, ಬ್ಲೇಜ್ ತಳಂಗರೆ ಮತ್ತು ಕಾಸರಗೋಡು ಫುಟ್ಬಾಲ್ ಅಕಾಡೆಮಿ ತಂಡಗಳು ಸ್ಪರ್ಧಿಸಿವೆ. ಮೊದಲ ಪಂದ್ಯಾಟವು ಪೊಲೀಸ್ ತಂಡ ಕಾಸರಗೋಡು ಮತ್ತು ರೀಮರ್ ಉದುಮ ವೆಸ್ಟ್ ನಡುವೆ ನಡೆಯಿತು. ಕಾಸರಗೋಡಿನ ಕಸಬಾ ಕಡಪ್ಪುರದ ಮರಳಿನ ಬೀಚ್‌ನಲ್ಲಿ ಗುರುವಾರ ಸಂಜೆ ಪಂದ್ಯಗಳು ಪ್ರಾರಂಭವಾದವು.

ಕಾರ್ಯಕ್ರಮದಲ್ಲಿ ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್ ಅಧ್ಯಕ್ಷತೆ ವಹಿಸಿದ್ದರು. ಶುಚಿತ್ವಾ ಮಿಷನ್ ಸಂಯೋಜಕ ಪಿ.ಜಯನ್, ಕುಟುಂಬಶ್ರೀ ಬ್ಲಾಕ್ ಸಂಯೋಜಕಿ ಪಿ.ಪಿ.ಅನುಶ್ರೀ ಮತ್ತು ಇತರರು ಸಮಾರಂಭದಲ್ಲಿ ಉಪಸ್ಥಿತರಿದ್ದರು. ಕುಟುಂಬಶ್ರೀ ಎಡಿಎಂಸಿ ಡಿ.ಹರಿದಾಸ್ ಸ್ವಾಗತಿಸಿ, ಕುಟುಂಬಶ್ರೀ ಡಿಪಿಎಂ ಎಸ್.ಮನು ವಂದಿಸಿದರು. ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಮತದಾರರ ಭಾಗವಹಿಸುವಿಕೆಯನ್ನು ಖಚಿತಪಡಿಸಿಕೊಳ್ಳಲು ಸ್ವೀಪ್ ಅಭಿಯಾನದ ಭಾಗವಾಗಿ ಬೀಚ್ ಫುಟ್‌ಬಾಲ್ ಪಂದ್ಯಾಟವನ್ನು ಆಯೋಜಿಸಲಾಯಿತು.

---

ಸಾಸ್ತಾನ, ಹೆಜಮಾಡಿ ಟೋಲ್ ದರ ಏರಿಕೆ, ಸಾರ್ವಜನಿಕರ ಆಕ್ರೋಶ

## ವಾಹನ ಸವಾರರಿಗೆ 'ಟೋಲ್' ಶಾಕ್

**ಉಡುಪಿ:** ರಾಷ್ಟ್ರೀಯ ಹೆದ್ದಾರಿ 66ರಲ್ಲಿ ಸಂಚರಿಸುವ ವಾಹನ ಸವಾರರ ಜೇಬಿಗೆ ಕತ್ತರಿ ಬೀಳಲಿದೆ. ಏಪ್ರಿಲ್ 1ರಿಂದ ಅನ್ವಯವಾಗುವಂತೆ ಸಾಸ್ತಾನ ಮತ್ತು ಹೆಜಮಾಡಿ ಟೋಲ್ ಗೇಟ್‌ಗಳಲ್ಲಿ ಶುಲ್ಕವನ್ನು ಹೆಚ್ಚಳ ಮಾಡಲಾಗಿದ್ದು, ಇದು ಸಾರ್ವಜನಿಕರ ಮತ್ತು ವಾಹನ ಚಾಲಕರ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ದರ ಪರಿಷ್ಕರಣೆ ಮಾಡಿದ್ದು, ಸ್ಥಳೀಯ ವಾಹನ ಸವಾರರಿಗೆ ದೊಡ್ಡ ಹೊರೆಯಾಗಿ ಪರಿಣಮಿಸಿದೆ.



ಹೆಜಮಾಡಿ ಟೋಲ್ ಪ್ಲಾಜಾದಲ್ಲಿ ಕಾರು, ಜೀಪು ಮತ್ತು ವ್ಯಾನ್ ಅಂತಹ ಲಘು ವಾಹನಗಳ ಏಕಮುಖ ಸಂಚಾರಕ್ಕೆ ಈ ಹಿಂದೆ ಇದ್ದ ದರವನ್ನು ಈಗ ಪರಿಷ್ಕರಿಸಲಾಗಿದೆ. ಅದೇ ರೀತಿ ಸಾಸ್ತಾನ ಟೋಲ್‌ನಲ್ಲಿಯೂ ದರ ಏರಿಕೆಯಾಗಿದ್ದು, ಲಘು ವಾಣಿಜ್ಯ ವಾಹನಗಳು, ಬಸ್ ಮತ್ತು ಟ್ರಕ್‌ಗಳ ದರದಲ್ಲೂ ಗಣನೀಯ ಏರಿಕೆ ಕಂಡುಬಂದಿದೆ. ವಿಶೇಷವಾಗಿ ಸ್ಥಳೀಯವಾಗಿ ಸಂಚರಿಸುವ ವಾಣಿಜ್ಯೇತರ ವಾಹನಗಳಿಗೆ ನೀಡಲಾಗುವ ಮಾಸಿಕ ಪಾಸ್ ದರದಲ್ಲೂ ಏರಿಕೆಯಾಗಿರುವುದು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ. ರಸ್ತೆಗಳ ಅವ್ಯವಸ್ಥೆ, ಸರ್ವಿಸ್ ರಸ್ತೆಗಳ ಕೊರತೆ ಮತ್ತು ಮಳೆಗಾಲದಲ್ಲಿ ಎದುರಾಗುವ ಹೊಂಡ-ಗುಂಡಿಗಳ ಸಮಸ್ಯೆಗಳ ನಡುವೆಯೂ ಈ ರೀತಿ ದರ ಏರಿಕೆ ಮಾಡುವುದು ನ್ಯಾಯವಲ್ಲ ಎಂಬುದು ಸಾರ್ವಜನಿಕರ ವಾದ. ರಸ್ತೆ ಸರಿಯಿಲ್ಲದಿದ್ದರೂ ಟೋಲ್ ದರ ಮಾತ್ರ ಪ್ರತಿ ವರ್ಷ ಹೆಚ್ಚಾಗುತ್ತದೆ. ಇದು ಸಾಮಾನ್ಯ ಜನರ ಬದುಕಿನ ಮೇಲೆ ಹೊರೆಯಾಗುತ್ತಿದೆ ಎಂದು ವಾಹನ ಚಾಲಕರು ಅಳಲು ತೋಡಿಕೊಂಡಿದ್ದಾರೆ.

ಜಿಲ್ಲಾಡಳಿತ ಮತ್ತು ಸಂಬಂಧಪಟ್ಟ ಜನಪ್ರತಿನಿಧಿಗಳು ಈ ಬಗ್ಗೆ ಮಧ್ಯಪ್ರವೇಶಿಸಿ, ಸ್ಥಳೀಯ ವಾಹನಗಳಿಗೆ ರಿಯಾಯಿತಿ ನೀಡಬೇಕು ಅಥವಾ ದರ ಏರಿಕೆಯನ್ನು ಹಿಂಪಡೆಯಬೇಕು ಎಂಬ ಒತ್ತಾಯ ಕೇಳಿಬರುತ್ತಿದೆ.

- **ಹೆಜಮಾಡಿ ಟೋಲ್ ಪ್ಲಾಜಾದಲ್ಲಿ ಕಾರು, ಜೀಪು ಮತ್ತು ವ್ಯಾನ್ ಅಂತಹ ಲಘು ವಾಹನಗಳ ಏಕಮುಖ ಸಂಚಾರಕ್ಕೆ ಈ ಹಿಂದೆ ಇದ್ದ ದರವನ್ನು ಈಗ ಪರಿಷ್ಕರಿಸಲಾಗಿದೆ.**
- **ವಿಶೇಷವಾಗಿ ಸ್ಥಳೀಯವಾಗಿ ಸಂಚರಿಸುವ ವಾಣಿಜ್ಯೇತರ ವಾಹನಗಳಿಗೆ ನೀಡಲಾಗುವ ಮಾಸಿಕ ಪಾಸ್ ದರದಲ್ಲೂ ಏರಿಕೆಯಾಗಿರುವುದು ಸ್ಥಳೀಯರ ಅಸಮಾಧಾನಕ್ಕೆ ಕಾರಣವಾಗಿದೆ.**

## ಚಾಲಕನ ನಿಯಂತ್ರಣ ಕಳೆದುಕೊಂಡ ಕಾರು ಡಿವೈಡರ್‌ಗೆ ಡಿಕ್ಕಿ : ವಿದ್ಯಾರ್ಥಿಗಳಿಗೆ ಗಾಯ

**ಬಂಟ್ವಾಳ:** ಚಾಲಕನ ನಿಯಂತ್ರಣ ಕಳೆದುಕೊಂಡ ಕಾರೊಂದು ಡಿವೈಡರ್‌ಗೆ ಡಿಕ್ಕಿ ಹೊಡೆದು ಪಲ್ಟಿಯಾಗಿ ಕಾಲೇಜೊಂದರ ಆರು ಮಂದಿ ವಿದ್ಯಾರ್ಥಿಗಳು ಗಾಯಗೊಂಡ ಘಟನೆ ತುಂಬೆ ಸಮೀಪದ ರಾಮಲ್ ಕಟ್ಟೆ ಎಂಬಲ್ಲಿ ಬುಧವಾರ ಮಧ್ಯರಾತ್ರಿ ಸಂಭವಿಸಿದೆ. ವಿದ್ಯಾರ್ಥಿಗಳಾದ ವಿನಯ್, ಹೇಮಂತ್, ಸುಜನ್, ದೀಕ್ಷಾರಾಜ್, ಜೈಸನ್, ರಕ್ಷಾ ಸಾಮ್ರಟ್ ಗಾಯಗೊಂಡವರಾಗಿದ್ದಾರೆ.

ಸಣ್ಣ ಪುಟ್ಟ ಗಾಯಗಳೊಂದಿಗೆ ಎಲ್ಲಾ ವಿದ್ಯಾರ್ಥಿಗಳು ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದು ಬಂದಿದೆ.



ಮಂಗಳೂರು ಹೊರವಲಯದ ಕಾಲೇಜಿನ ವಿದ್ಯಾರ್ಥಿಗಳು ಜತೆಯಾಗಿ ಕಾರಲ್ಲಿ ಬಿ.ಸಿ.ರೋಡ್ ಕಡೆಗೆ ಚಹಾ ಕುಡಿಯುವಹಿನ್ನೆಲೆಯಲ್ಲಿ ಆಗಮಿಸುತ್ತಿದ್ದ ವೇಳೆ ಈ ಘಟನೆ ನಡೆದಿದೆ.

ಚಾಲಕನ ನಿಯಂತ್ರಣ ತಪ್ಪಿ ಕಾರು ರಾಮಲ್ ಕಟ್ಟೆ ಎಂಬಲ್ಲಿ ಡಿವೈಡರ್‌ಗೆ ಡಿಕ್ಕಿ ಹೊಡೆದಿದ್ದು, ಚಾಲಕ ಸಹಿತ 6 ವಿದ್ಯಾರ್ಥಿಗಳಿಗೆ ಇದರಿಂದ ಗಾಯಗಳಾಗಿತ್ತು.

ಗಾಯಗೊಂಡ ವಿದ್ಯಾರ್ಥಿಗಳಿಗೆ ತುಂಬೆ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಬಳಿಕ ಮಂಗಳೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೆಚ್ಚಿನ ಚಿಕಿತ್ಸೆ ನೀಡಲಾಗಿತ್ತು. ಬಂಟ್ವಾಳ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

---

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಯಲ್ಲಿ ಪೊಲೀಸ್ ಧ್ವಜ ದಿನಾಚರಣೆ | ಮನಸೆಳೆದ ಆಕರ್ಷಕ ಪಥಸಂಚಲನ | ನಿವೃತ್ತ 49 ಮಂದಿ ಪೊಲೀಸರಿಗೆ ಸನ್ಮಾನ

## ಶೇ.75 ಸಿಬ್ಬಂದಿಗೆ ವಸತಿ ಯೋಜನೆ

**ಮಂಗಳೂರು:** ಮುಂದಿನ ಮೂರು ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಶೇ.75 ಸಿಬ್ಬಂದಿಗೆ ವಸತಿ ವ್ಯವಸ್ಥೆ ಕಲ್ಪಿಸುವ ಯೋಜನೆ ಇದೆ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಸುಧೀರ್ ಕುಮಾರ್ ರೆಡ್ಡಿ ಹೇಳಿದ್ದಾರೆ.

ಮಂಗಳೂರು ನಗರ ಪೊಲೀಸ್, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಮತ್ತು ಕೆಎಸ್‌ಆರ್‌ಪಿ 7ನೇ ಪಡೆಯ ವತಿಯಿಂದ ಜಿಲ್ಲಾ ಡಿಎಆರ್ ಪೊಲೀಸ್ ಕವಾಯತು ಮೈದಾನದಲ್ಲಿ ಗುರುವಾರ ನಡೆದ ಪೊಲೀಸ್ ಧ್ವಜ ಹಾಗೂ ಕಲ್ಯಾಣ ದಿನಾಚರಣೆಯಲ್ಲಿ ಅವರು ಮಾತನಾಡಿದರು. ಯಾವುದೇ ಪ್ರಕರಣದಲ್ಲಿ ನಿಜವಾದ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸುವುದೇ ನಮ್ಮ ಧ್ಯೇಯವಾಗಿದೆ. ಈ ಹಿಂದೆ ಪ್ರಕರಣಗಳಲ್ಲಿ ಭಾಗಿಯಾಗಿ ಪರಾರಿಯಾಗಿದ್ದ ಆರೋಪಿಗಳ ಬಂಧನ ಹಾಗೂ ನ್ಯಾಯಾಲಯಕ್ಕೆ ಹಾಜರಾಗದವರ



ವಿರುದ್ಧ ಜಾಮೀನು ರಹಿತ ವಾರಂಟ್ ಜಾರಿ ಮಾಡುವಲ್ಲಿ ಪೊಲೀಸರು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ತೊಕ್ಕೊಟ್ಟು ಫ್ಲೈಓವರ್‌ನಲ್ಲಿ ಇತ್ತೀಚೆಗೆ ನಡೆದ ಆರಿಫ್ ಹುಸೈನ್ ಹತ್ಯೆ ಪ್ರಕರಣದ ನೈಜ ಆರೋಪಿಗಳನ್ನು ಪತ್ತೆಹಚ್ಚಿ ಬಂಧಿಸುವುದು ನಮ್ಮ ಗುರಿಯಾಗಿದೆ. ಒಬ್ಬ ರೌಡಿ ಶೀಟರ್ ಇನ್ನೊಬ್ಬ ರೌಡಿ ಶೀಟರ್‌ನನ್ನು ಕೊಂದರೆ ನಮ್ಮ ಕಾರ್ಯ ವಿಧಾನ ಬದಲಾಗುವುದಿಲ್ಲ ಎಂದೂ ಸುಧೀರ್ ಕುಮಾರ್ ರೆಡ್ಡಿ ಹೇಳಿದರು.

ನಿವೃತ್ತ ಪೊಲೀಸ್ ಇನ್‌ಸ್ಪೆಕ್ಟರ್ ಮೋಹನ್ ಕೊಟ್ಟಾರಿ ಗೌರವ ಅತಿಥಿಯಾಗಿದ್ದರು. ಮೂರು ಘಟಕಗಳ 49 ನಿವೃತ್ತ ಪೊಲೀಸರನ್ನು ಸನ್ಮಾನಿಸಲಾಯಿತು. ಉಪ ಪೊಲೀಸ್ ಆಯುಕ್ತ ಎಚ್.ಎನ್. ಮಿಥುನ್, ಬಂಟ್ವಾಳ ಡಿವೈಎಸ್ಪಿ ಕುಮಾರ್ ಶರ್ಮ ಹಾಗೂ ಕೆಎಸ್‌ಆರ್‌ಪಿ 7ನೇ ಪಡೆ ಕಮಾಂಡೆಂಟ್ ಹೇಮಂತ್ ಕುಮಾರ್ ಯು.ಎನ್. ಉಪಸ್ಥಿತರಿದ್ದರು.

## ನಿವೃತ್ತರಿಗೆ ಆರೋಗ್ಯ ರಕ್ಷಣೆ ಯೋಜನೆ ಆರಂಭ

**ಉಡುಪಿ:** ಉಡುಪಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಕರ್ನಾಟಕ ರಾಜ್ಯ ಪೊಲೀಸ್ ಧ್ವಜ ದಿನಾಚರಣೆಯು ಗುರುವಾರ ನಗರದ ಮಿಷನ್ ಕಂಪೌಂಡ್ ಬಳಿಯ ಪೊಲೀಸ್ ಕವಾಯತು ಮೈದಾನದಲ್ಲಿ ನಡೆಯಿತು.

ನಿವೃತ್ತ ಮಹಿಳಾ ಪೊಲೀಸ್ ನಿರೀಕ್ಷಕಿ ಸುಜಾತ ವಿ. ಸಾಲಿಯಾನ್ ಗೌರವ ವಂದನೆ ಸ್ವೀಕರಿಸಿ ಮಾತನಾಡಿ, ಧ್ವಜ ದಿನಾಚರಣೆಯು ಪೊಲೀಸ್ ಇಲಾಖೆಯ ಮಹತ್ವದ ದಿನವಾಗಿದೆ. ಪ್ರತೀ ವರ್ಷ ಪೊಲೀಸ್ ಧ್ವಜ ಮಾರಾಟ ಮಾಡಿ ಅದರಿಂದ ಬರುವ ಹಣವನ್ನು ಪೊಲೀಸ್ ಕಲ್ಯಾಣ ನಿಧಿಗೆ ಜಮಾ ಮಾಡುವುದರೊಂದಿಗೆ ಸಿಬ್ಬಂದಿಗಳ ಕಲ್ಯಾಣಕ್ಕಾಗಿ ಬಳಸಲಾಗುತ್ತಿದೆ ಎಂದರು.

ಜಿಲ್ಲಾ ಪೊಲೀಸ್ ಅಧೀಕ್ಷಕ ಹರಿರಾಮ್ ಶಂಕರ್, ರಾಷ್ಟ್ರಮಟ್ಟದಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿರುವ ಹೆಸರು ಕರ್ನಾಟಕ ಪೊಲೀಸರಿಗೆ ಇದೆ.




**13 ಲಕ್ಷ ವೈದ್ಯಕೀಯ ಧನಸಹಾಯ ಹಂಚಿಕೆ**

ಪ್ರಸಕ್ತ ಸಾಲಿನಲ್ಲಿ ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ನಿವೃತ್ತ ಕಲ್ಯಾಣ ಖಾತೆಯಿಂದ ಸುಮಾರು 13,08,050 ರೂ. ವೈದ್ಯಕೀಯ ಧನ ಸಹಾಯ ನೀಡಲಾಗಿದೆ. ಯಾವುದೇ ನಿವೃತ್ತ ಅಧಿಕಾರಿ ಹಾಗೂ ಸಿಬ್ಬಂದಿಗಳು ಅಹವಾಲುಗಳಿದ್ದಲ್ಲಿ ಜಿಲ್ಲಾ ಪೊಲೀಸ್ ಇಲಾಖೆ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ ಎಂದರು.

ಕರ್ನಾಟಕ ಪೊಲೀಸ್ ಇಲಾಖೆಯಲ್ಲಿಯೂ ಉಡುಪಿ ಜಿಲ್ಲೆಯ ಪೊಲೀಸರು ಮೊದಲನೇ ಸ್ಥಾನದಲ್ಲಿ ಇದ್ದಾರೆ. ಇದನ್ನು ಮುಂದುವರೆಸಿಕೊಂಡು ಹೋಗಬೇಕು ಎಂದರು. ತುರ್ತು ಸಂದರ್ಭದಲ್ಲಿ 3 ಲಕ್ಷ ರೂ. ನಿವೃತ್ತ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಆರೋಗ್ಯ ರಕ್ಷಣೆ ಯೋಜನೆ ಪ್ರಾರಂಭಿಸಿದ್ದು, ಯೋಜನೆಯಡಿ ನಿವೃತ್ತ ಪೊಲೀಸ್ ಅಧಿಕಾರಿ / ಸಿಬ್ಬಂದಿ ಮತ್ತು ಅವರ ಕುಟುಂಬದವರಿಗೆ ಸಾಮಾನ್ಯ ವೈದ್ಯಕೀಯ ಚಿಕಿತ್ಸೆಯ ಸಂದರ್ಭದಲ್ಲಿ 1.5 ಲಕ್ಷ ರೂ., ತುರ್ತು ಸಂದರ್ಭ 3 ಲಕ್ಷ ರೂ. ಮಂಜೂರು ಮಾಡಲಾಗುವುದು. ಜಿಲ್ಲೆಯಲ್ಲಿ ಒಟ್ಟು 3 ಜನ ನಿವೃತ್ತ ಪೊಲೀಸ್ ಸಿಬ್ಬಂದಿಗಳು ಈ ಯೋಜನೆಯ ಪ್ರಯೋಜನ ಪಡೆದಿರುವುದಾಗಿ ತಿಳಿಸಿದರು. ಪ್ರತೀ ವರ್ಷ ಸುಮಾರು ರೂ. 13 ಲಕ್ಷಕ್ಕೂ ಅಧಿಕ ಮೊತ್ತ ಮಂಜೂರು ಆಗುತ್ತಿದ್ದು, ಇನ್ನೂ ಹೆಚ್ಚಿನ ಮೊತ್ತ ಮಂಜೂರಾತಿಗಾಗಿ ಅನುದಾನದ ಕೊರತೆ ಇದ್ದು, ಪ್ರಧಾನ ಕಚೇರಿಗೆ ರೂ. 15 ಲಕ್ಷಗಳ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.

ಆಕರ್ಷಕ ಪಥ ಸಂಚಲನ ನಡೆಯಿತು. ಎಎಸ್‌ಪಿ ಸುಧಾಕರ್ ನಾಯಕ್ ವಂದಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78,
Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಇಂದಿನ ಹವಾಮಾನ
ದಕ್ಷಿಣ ಕನ್ನಡ 34° 25°
ಉಡುಪಿ 32° 26°

# ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
# ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು

ಶುಕ್ರವಾರ 03, ಏಪ್ರಿಲ್ 2026 e-mail diganthamlr@gmail.com | Website www.hosadigantha.com



ಪುಟ 4
## ಸಾಂಕ್ರಾಮಿಕ ರೋಗಗಳಿಗೆ ಆಹ್ವಾನ ನೀಡಿದೆ ತ್ಯಾಜ್ಯ ರಾಶಿ!


ಪುಟ 5
## ಕರಾವಳಿಗೆ ಅನುದಾನ ವಿಚಾರದಲ್ಲಿ ಸರ್ಕಾರದಿಂದ ಮಲತಾಯಿ ಧೋರಣೆ



## ಕಟೀಲು ಕ್ಷೇತ್ರದಲ್ಲಿ ಸುವಾಸಿನಿ ಆರಾಧನೆ... ಭಕ್ತರಿಗೆ ಸೀರೆ ವಿತರಣೆ


ಶ್ರೀ ಕ್ಷೇತ್ರ ಕಟೀಲಿನ ಶ್ರೀ ದುರ್ಗಾಪರಮೇಶ್ವರೀ ದೇವರ ಪರಿವಾರ ದೇವತೆ ಶ್ರೀ ರಕ್ತೇಶ್ವರೀ ಗುಡಿಯನ್ನು ನವೀಕರಿಸಲಾಗಿದ್ದು ಶ್ರೀ ದೇವರ ಪುನರ್ ಪ್ರತಿಷ್ಠೆ, ಬ್ರಹ್ಮಕಲಶೋತ್ಸವ ಪ್ರಯುಕ್ತ ನಡೆದ ಸುವಾಸಿನಿ ಆರಾಧನೆಯ ಸಂದರ್ಭ ಸಹಸ್ರಾರು ಮಹಿಳೆಯರಿಗೆ ಸೀರೆ ವಿತರಿಸಲಾಯಿತು.

ಸುತ್ತಮುತ್ತ

## ದಿನಪೂರ್ತಿ ಮೋಡಕ್ಕೆ ಸೀಮಿತ: ಇಳೆಗೆ ಬೀಳದೆ ಮರೆಯಾದ ಬೇಸಗೆ ಮಳೆ

**ಮಂಗಳೂರು:** ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗುರುವಾರ ದಿನಪೂರ್ತಿ ಮೋಡ ಕವಿದ ವಾತಾವರಣ ಕಾಣಿಸಿಕೊಂಡಿದ್ದು, ಮಳೆಯ ನಿರೀಕ್ಷೆ ಹುಸಿಯಾಗಿದೆ. ಈ ನಡುವೆ ತಾಪಮಾನದಲ್ಲಿ ಕೂಡಾ ಮತ್ತಷ್ಟು ಏರಿಕೆಯಾಗಿದ್ದು, ಮಂಗಳೂರು ನಗರದಲ್ಲಿ ಗರಿಷ್ಠ ತಾಪಮಾನ 38 ಡಿಗ್ರಿ ಸೆಲ್ಸಿಯೆಸ್ ಇತ್ತು. ಆದರೆ ಸೆಖೆಯ ಅನುಭವ ಮಾತ್ರ 40 ಡಿಗ್ರಿಯಷ್ಟಿತ್ತು. ಉಡುಪಿ ಜಿಲ್ಲೆಯ ಸಿದ್ದಾಪುರ, ಅಜೆಕಾರು ಭಾಗದಲ್ಲಿ ಬುಧವಾರ ಒಂದಿಷ್ಟು ಮಳೆಯಾಗಿದೆ. ಮುಂದಿನ ಮೂರು ದಿನಗಳಲ್ಲಿ ಕರಾವಳಿಯಲ್ಲಿ ಮಳೆಯಾಗಲಿದೆ ಎಂದು ಈಗಾಗಲೇ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದು, ಭರ್ಜರಿ ಬೇಸಗೆ ಮಳೆಯೊಂದರ ನಿರೀಕ್ಷೆಯಲ್ಲಿ ಜನರಿದ್ದಾರೆ.

## ಹೊಟೇಲ್ ಗ್ರಾಹಕ, ಮಾಲೀಕ ಕಂಗಾಲು
# ಪೆಟ್ಟು ಈಗ ದುಪ್ಪಟ್ಟು!
## ರೂ.4500 ಮುಟ್ಟಿದ ಸಿಲಿಂಡರ್ ಬೆಲೆ

**ಮಂಗಳೂರು:** ಮಧ್ಯಪ್ರಾಚ್ಯ ಯುದ್ಧದ ವಾಣಿಜ್ಯ ಬಳಕೆಯ ಎಲ್‌ಪಿಜಿ ಪೂರೈಕೆಯಲ್ಲಿ ಆಗಿರುವ ವ್ಯತ್ಯಯ ಅಲ್ಪ ಮಟ್ಟಿಗೆ ಸುಧಾರಣೆ ಕಂಡಿದೆಯಾದರೂ, ಕೊರತೆ ಮಾತ್ರ ಇನ್ನೂ ಹೊಟೇಲ್ ಉದ್ಯಮವನ್ನು ಕಾಡುತ್ತಿದೆ.

**ಬಂದ್ ಆಗಿ ತಿಂಗಳು ಹತ್ತಿರವಾಯಿತು**

ಸಿಲಿಂಡರ್ ಕೊರತೆಗೆ ಜಿಲ್ಲೆಯಲ್ಲಿ ಬಹುತೇಕ ಹೋಟೆಲ್, ಮೊಬೈಲ್ ಕ್ಯಾಂಟಿನ್ ಬಂದ್ ಆಗಿ ತಿಂಗಳು ಹತ್ತಿರವಾಗುತ್ತಿದೆ. »ಪುಟ 5


ಜನತೆಗೆ ಕಾಡುತ್ತಿದೆ ಇದು 'ಕೃತಕ ಕೊರತೆ'ಯ ಶಂಕೆ

### ಇಬ್ಬರೂ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಿದ್ದೇವೆ

ಊಟ, ತಿಂಡಿಗಳ ಬೆಲೆ ಏರಿಕೆ ಅನಿವಾರ್ಯ. ಇದು ಗ್ರಾಹಕರಿಗೂ ಹೊರೆ. ಏನೂ ಮಾಡಲಾಗದ ಇಕ್ಕಟ್ಟಿನಲ್ಲಿ ಸಿಲುಕಿದ್ದೇವೆ ಎನ್ನುತ್ತಾರೆ ಮಂಗಳೂರಿನ ಹೋಟೆಲ್ ಮಾಲೀಕರೊಬ್ಬರು.

## ಸುತ್ತ ಮುತ್ತ

### ಮುಲ್ಕಿ ವೆಂಕಟರಮಣ ದೇವಸ್ಥಾನದಲ್ಲಿ ಶತಕಲಶ



**ಮುಲ್ಕಿ:** ಮುಲ್ಕಿ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ಚೈತ್ರ ಶುದ್ಧ ಹುಣ್ಣಿಮೆ ಗುರುವಾರ ಶತಕಲಶ ಸಂಪೂರ್ಣವಾಗಿ ನಡೆಯಿತು. ಮುಂಜಾನೆ ಮಹಾ ಪ್ರಾರ್ಥನೆ ಬಳಿಕ ದೇವರಿಗೆ ಪಂಚಾಮೃತ, ಸೀಯಾಳ ಅಭಿಷೇಕ, ಬಳಿಕ ಶತ ಕಲಶಾಭಿಷೇಕ, ಕನಕಾಭಿಷೇಕ, ಗಂಗಾ ಭಾಗೀರಥಿ ಅಭಿಷೇಕ ನಡೆದವು. ಶ್ರೀದೇವರಿಗೆ ಸಿಂಹಾಸನದಲ್ಲಿ ಅಷ್ಟಮಂಗಲ ನಿರೀಕ್ಷಣೆ, ಪಟ್ಟ ಕಾಣಿಕೆ, ಮಹಾ ನೈವೇದ್ಯ, ಮಹಾಮಂಗಳಾರತಿ, ದರ್ಶನ ಸೇವೆ, ಪ್ರಸಾದ ಬಳಿಕ ಭೂರಿ ಸಮಾರಾಧನೆ ನಡೆಯಿತು. ರಾತ್ರಿ ಪೂಜೆ, ದೀಪಾರಾಧನೆ, ರಥೋತ್ಸವ, ದೇವರದರ್ಶನ ಸಹಿತ ನಿತ್ಯೋತ್ಸವ, ಚಂದ್ರಮಂಡಲ ಉತ್ಸವ, ವಸಂತ ಪೂಜೆ ನಡೆಯಿತು. ಈ ಸಂದರ್ಭ ಶ್ರೀಕ್ಷೇತ್ರದ ಅರ್ಚಕ ವೃಂದ, ಆಡಳಿತ ಮಂಡಳಿ, ಭಜಕ ವೃಂದ ಹಾಜರಿದ್ದರು.

### ನಾಳೆ ವಿದ್ಯುತ್ ವ್ಯತ್ಯಯ

**ಮಂಗಳೂರು:** ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಕಾಮಗಾರಿ ಹಮ್ಮಿಕೊಂಡಿರುವುದರಿಂದ ಕುಲಶೇಖರ ಉಪಕೇಂದ್ರದಿಂದ ಹೊರಡುವ ಕುಡುಪು, ರಥಬೀದಿ, ಮುಂಡ್ರೆಲ್ಯ, ಪಿಲಿಕುಮೇರು, ಕುಡುಪು ನಡುಮನೆ, ಕುಡುಪು ದೇವಸ್ಥಾನ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.4ರಂದು ಬೆಳಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

### ಮಣ್ಣಗುಡ್ಡ: ಏ.7ರಂದು ಜನಸಂಪರ್ಕ ಸಭೆ

**ಮಂಗಳೂರು:** ಮೆಸ್ಕಾಂ ಮಣ್ಣಗುಡ್ಡ ಉಪವಿಭಾಗ ಕಚೇರಿಯಲ್ಲಿ ಏ. 7ರಂದು ಬೆಳಗ್ಗೆ 11ರಿಂದ 12ರವರೆಗೆ ಜನ ಸಂಪರ್ಕ ಸಭೆ ನಡೆಯಲಿದ್ದು, ಮೆಸ್ಕಾಂ ಅಧಿಕಾರಿಗಳು ಭಾಗವಹಿಸಲಿದ್ದಾರೆ. ಈ ಸಭೆಯಲ್ಲಿ ಸಂಬಂಧಪಟ್ಟ ಪ್ರದೇಶದ ಗ್ರಾಹಕರ ಅಹವಾಲುಗಳನ್ನು ಸ್ವೀಕರಿಸುವುದರಿಂದ, ಈ ಅವಕಾಶವನ್ನು ಗ್ರಾಹಕರು ಸದುಪಯೋಗಿಸಿಕೊಳ್ಳಲು ಕೋರಲಾಗಿದೆ. ದೂರವಾಣಿ ಕರೆಯ ಮೂಲಕವೂ ಸಂಪರ್ಕಿಸಿ, ಅಹವಾಲುಗಳನ್ನು ಸಲ್ಲಿಸಬಹುದಾಗಿದ್ದು, ದೂ.ಸಂ. 0824-2451189 ಅನ್ನು ಸಂಪರ್ಕಿಸುವಂತೆ ಕೋರಲಾಗಿದೆ.

### ನಾಳೆ ವಿದ್ಯುತ್ ವ್ಯತ್ಯಯ

**ಪುತ್ತೂರು:** ತುರ್ತು ನಿರ್ವಹಣಾ ಕಾಮಗಾರಿ ನಿಮಿತ್ತ ಪುತ್ತೂರು ವಿದ್ಯುತ್ ಉಪಕೇಂದ್ರದಿಂದ ಹೊರಡುವ ಪುತ್ತೂರು ಟೌನ್ ಓಲ್ಡ್ ಫೀಡರ್‌ನಲ್ಲಿ ಏ.4ರಂದು ಪೂರ್ವಾಹ್ನ ಗಂಟೆ 10 ರಿಂದ ಅಪರಾಹ್ನ 5.30 ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುವುದು. ಫೀಡರ್‌ನಿಂದ ವಿದ್ಯುತ್ ಸರಬರಾಜಾಗುವ ಕೋರ್ಟ್ ರೋಡ್, ಮಿನಿ ವಿಧಾನಸೌಧ, ಚೇತನಾ ಹಾಸ್ಪಿಟಲ್, ಪರ್ಲಡ್ಕ ಬೈಪಾಸ್, ಗೋಳಿಕಟ್ಟೆ ಕುಂಜೂರು ದೇವಸ್ಥಾನ, ತೆಂಕಿಲ, ಬಪ್ಪಳಿಗೆ, ಬಾಲವನ, ಉರ್ಲಾಂಡಿ, ಸರಕಾರಿ ಆಸ್ಪತ್ರೆ, ಕರ್ಮಲ ಮತ್ತು ಬೊಳುವಾರು ಪರಿಸರದ ವಿದ್ಯುತ್ ಬಳಕೆದಾರರು ಗಮನಿಸಿ ಸಹಕರಿಸುವಂತೆ ಮೆಸ್ಕಾಂ ಪ್ರಕಟನೆ ಮೂಲಕ ವಿನಂತಿಸಿದೆ.

### ದಡ್ಡಲಕಾಡು ಶ್ರೀಕ್ಷೇತ್ರ: ಇಂದು ಚಂಡಿಕಾ ಹವನ

**ಬಂಟ್ವಾಳ:** ತಾಲೂಕಿನ ಮೂಡನಡುಗೋಡು ಗ್ರಾಮದ ದಡ್ಡಲಕಾಡು-ದೇವಿನಗರ ಶ್ರೀ ಜಗದಂಬಿಕಾ ಶ್ರೀ ಮಹಮ್ಮಾಯಿ ಗುಳಿಗ ಅಣ್ಣಪ್ಪ ಕ್ಷೇತ್ರದಲ್ಲಿ ಇಜ್ಜ ಶಿವಕ್ಷೇತ್ರದ ಶ್ರೀ ಸತ್ಯನಾರಾಯಣ ಭಟ್ ನೇತೃತ್ವದಲ್ಲಿ ತಂತ್ರಿಗಳಾದ ವೇದಮೂರ್ತಿ ಶ್ರೀ ವಿದ್ಯಾಶಂಕರ ಭಟ್ ಅವರ ಮಾರ್ಗದರ್ಶನದಲ್ಲಿ ಶ್ರೀದೇವರ ಬಿಂಬ ಪುನರ್ ಪ್ರತಿಷ್ಠೆ, ಬ್ರಹ್ಮಕಲಶಾಭಿಷೇಕ, ಪರಿವಾರ ದೇವತಾಕಲಶಾಭಿಷೇಕ ನೆರವೇರಿತು.

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಸಂಜೆಯ ಹೊತ್ತಿಗೆ ಕ್ಷೇತ್ರಕ್ಕಾಗಮಿಸಿ ದೇವರ ಪ್ರಸಾದ ಸ್ವೀಕರಿಸಿ ಶುಭಹಾರೈಸಿದರು.

ಇಂದು (ಏ.3) ಚಂಡಿಕಾ ಹವನ, ಪರಿವಾರ ದೈವಗಳಿಗೆ ಪರ್ವಾರಾಧನೆ, ಶ್ರೀ ಜಗದಂಬಿಕಾ ಸಾನಿಧ್ಯದಲ್ಲಿ ಸೀಯಾಳಾಭಿಷೇಕ , ರಾತ್ರಿ ಯಕ್ಷಗಾನ ಬಯಲಾಟ, ಏ.4ರಂದು ಮಾರಿ ಪೂಜಾ ಉತ್ಸವ ನಡೆಯಲಿದೆ.

---

### ಧಾರ್ಮಿಕ ವಿಧಿವಿಧಾನ ಕಣ್ತುಂಬಿಕೊಂಡ ಸಾವಿರಾರು ಭಕ್ತರು | ಇಂದಿನಿಂದ ವಾರ್ಷಿಕ ಜಾತ್ರೆಗೆ ಚಾಲನೆ

# ಶರವೂರು ಶ್ರೀದೇವರ ಅದ್ದೂರಿ ಬ್ರಹ್ಮಕಲಶೋತ್ಸವ ಸಂಪನ್ನ

**ಆಲಂಕಾರು:** ಸುಮಾರು 10 ಕೋ.ರೂ. ವೆಚ್ಚದಲ್ಲಿ ಸಂಪೂರ್ಣ ಶಿಲಾಮಯವಾಗಿ ಪುನರ್ ನಿರ್ಮಾಣ ಗೊಂಡ ಶರವೂರು ಶ್ರೀ ದುರ್ಗಾ ಪರಮೇಶ್ವರೀ ದೇವಿಯ ಬ್ರಹ್ಮಕಲಶೋತ್ಸವವು ವೇ.ಮೂ. ಬ್ರಹ್ಮಶ್ರೀ ಕುಡುಪು ನರಸಿಂಹ ತಂತ್ರಿಗಳ ನೇತೃತ್ವದಲ್ಲಿ ಏ.2ರಂದು ಬೆಳಗ್ಗೆ ವಿಜೃಂಭಣೆಯಿಂದ ನಡೆಯಿತು.

ಮಾ.25ಕ್ಕೆ ಬೆಳಿಗ್ಗೆ ಸಾಮೂಹಿಕ ಪ್ರಾರ್ಥನೆ, ಗಣಹೋಮ, ಭದ್ರಕಾಳಿ ಅಮ್ಮನವರ ಪೂಜೆ ಯೊಂದಿಗೆ ತೋರಣ, ಉಗ್ರಾಣ ಮುಹೂರ್ತ ನಡೆದ ಬಳಿಕ ಭಗವದ್ ಭಕ್ತರ ಹಸಿರುವಾಣಿ ಸಮರ್ಪಣೆ ಯೊಂದಿಗೆ ಆರಂಭವಾದ ಬ್ರಹ್ಮಕಲಶದ ಧಾರ್ಮಿಕ ವಿಧಿ ವಿಧಾನಗಳು ಏ.2ರಂದು ಸಮಾಪ್ತಿಯಾಯಿತು. ಏ.3ರಿಂದ ವಾರ್ಷಿಕ ಜಾತ್ರಾ ಮಹೋತ್ಸವಕ್ಕೆ ಏಕಶಿಲಾ ಧ್ವಜಸ್ತಂಭದಲ್ಲಿ ಧ್ವಜಾರೋಹಣದೊಂದಿಗೆ ಚಾಲನೆ ಸಿಗಲಿದೆ. ಏ.2ರಂದು ಗುರುವಾರ ಬೆಳಗ್ಗೆ ಶ್ರೀ ದೇವರ ಗರ್ಭಗೃಹ ಕವಾಟ ಉದ್ಘಾಟನೆ ನಿರ್ಮಾಲ್ಯ ದರ್ಶನ ತೈಲಾಭಿಷೇಕ, ಪ್ರಾಯಶ್ಚಿತ್ತ ಶಾಂತಿ ಹೋಮಗಳು ನಡೆದು ಕಲಶಾಭಿಷೇಕ, ತತ್ವಕಲಶಾಭಿಶೇಕ ನಡೆದು ಬೆಳಗ್ಗೆ 6ರಿಂದ ಪರಿಕಲಶಾಭಿಷೇಕ ಪ್ರಾರಂಭವಾಯಿತು. ಬಳಿಕ 9ರಿಂದ ಶ್ರೀ ದೇವರಿಗೆ ಬ್ರಹ್ಮಕಲಶಾಭಿಷೇಕ ನಡೆದು ಪ್ರಸನ್ನ ಪೂಜೆ ಅವಸ್ರುತೋಕ್ಷಾ ಬಲಿ ಪ್ರಸಾದ ವಿತರಣೆ ನಡೆಯಿತು. ಮಧ್ಯಾಹ್ನ ದೇವರಿಗೆ ಮಹಾಪೂಜೆ ಪಲ್ಲಪೂಜೆ ನಡೆದು ಮಹಾ ಅನ್ನ ಸಂತರ್ಪಣೆ, ವೈದಿಕ ಮಂತ್ರಾಕ್ಷತೆ ನಡೆಯಿತು. ಸಂಜೆ 7ರಿಂದ ಮಹಾಪೂಜೆ, ಭೂತ ಬಲಿ, ಪುಷ್ಪರಥೋತ್ಸವ ವಸಂತಕಟ್ಟೆ ಪೂಜೆ ನಡದು ನೂತನ ಬ್ರಹ್ಮರಥಕ್ಕೆ ಶುದ್ಧಿ ಪ್ರಕ್ರಿಯೆ ರಥಾವಾಸ ನಡೆಯಿತು.



> **ಸುಸೂತ್ರವಾಗಿ ನಡೆದ ಎಲ್ಲಾ ಕಾರ್ಯಕ್ರಮಗಳು**
>
> ದೇವಾಲಯದಲ್ಲಿ ಬ್ರಹ್ಮಕಲಶೋತ್ಸವವು ಪ್ರಕ್ರಿಯೆಯು ಆರಂಭವಾದ ದಿನದಿಂದ ಪ್ರತಿ ದಿನ ಬೆಳಗ್ಗೆಯಿಂದ ರಾತ್ರಿಯವರೆಗೆ 60ಕ್ಕೂ ಅಧಿಕ ವಿವಿಧ ಭಜನಾ ತಂಡಗಳ ಭಜನೆ, ವಿವಿಧ ಸಾಂಸ್ಕೃತಿಕ ತಂಡಗಳ ವಿನೋದಾವಳಿಗಳು ಸೇರಿದಂತೆ ಧಾರ್ಮಿಕ ಪೂಜಾ ವಿಧಿ ವಿಧಾನಗಳು ಸುಸೂತ್ರವಾಗಿ ನಡೆದು ಬಂದವು. ಈ ವೇಳೆ ಮಧ್ಯಾಹ್ನ ಮತ್ತು ರಾತ್ರಿ ಮಹಾ ಅನ್ನ ಸಂತರ್ಪಣೆಯಲ್ಲಿ ಸುಮಾರು 1.50 ಲಕ್ಷ ಜನರಿಗೆ ಅನ್ನದಾನ ಸೇವೆ ನಡೆದಿದೆ ಎಂದು ದೇವಳದ ಮೂಲಗಳು ತಿಳಿಸಿವೆ.

ಬ್ರಹ್ಮಕಲಶೋತ್ಸವದ ಸಂದರ್ಭ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್ ನಗ್ರಿ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆ ಗುತ್ತು, ಪವಿತ್ರಪಾಣಿ ಹರೀಶ್ ಆಚಾರ್ಯ ನಗ್ರಿಗುತ್ತು, ಸ್ವಾಗತ ಸಮಿತಿಯ ಸಂಚಾಲಕ ರಾಧಾಕೃಷ್ಣ ರೈ ಪರಾರಿಗುತ್ತು, ಆರ್ಥಿಕ ಸಮಿತಿಯ ಸಂಚಾಲಕ ವಿಠಲ್ ರೈ ಕೊಣಾಲುಗುತ್ತು, ಪ್ರಧಾನ ಅರ್ಚಕ ಹರಿಪ್ರಸಾದ್ ಉಪಾಧ್ಯಾಯ ಮತ್ತಿತರರು ಉಪಸ್ಥಿತರಿದ್ದರು. ಏ.3ರಿಂದ ಏ.13ರ ವರೆಗೆ ವಾರ್ಷಿಕ ಜಾತ್ರಾ ಮಹೋತ್ಸವ ನಡೆಯ ಲಿದೆ. ಏ.8ರಂದು ಶ್ರೀದೇವಿಯ ಆಲಂಕಾರು ಪೇಟೆ ಸವಾರಿಯೊಂದಿಗೆ ಸಾರ್ವಜನಿಕ ಕಟ್ಟೆ ಪೂಜೆ ನಡೆಯಲಿದೆ. ಏ.10ರಂದು ದರ್ಶನ ಬಲಿ ಬಟ್ಟಲು ಕಾಣಿಕೆ ನಡೆದು ಏ.11ರಂದು ಶ್ರೀದೇವಿಯ ಮಹಾರಥೋತ್ಸವ ಜರಗಲಿದೆ. ಏ.13ರಂದು ಭದ್ರಕಾಳಿ ಅಮ್ಮನವರ ವಿಶೇಷ ಪೂಜೆಯೊಂದಿಗೆ ವಾರ್ಷಿಕ ಜಾತ್ರಾಮಹೋತ್ಸವವು ಮುಕ್ತಾಯವಾಗುವುದು.

ಬಳಿಕ ಬ್ರಹ್ಮಕಲಶೋತ್ಸವದ ಗೌರವಾಧ್ಯಕ್ಷ ಡಾ. ಕೂಳೂರು ಕನ್ಯಾನ ಸದಾಶಿವ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಸಭೆ ನಡೆಯಲಿದೆ. ಈ ಸಂಧರ್ಭ ಡಾ.ಕೆ. ಪ್ರಕಾಶ್ ಶೆಟ್ಟಿ ಶಶಿಧರ ಶೆಟ್ಟಿ ಬರೋಡ, ಕೆ.ಕೆ. ಶೆಟ್ಟಿ ಮಹಾಬಲೇಶ್ವರ ಭಟ್, ಕುಸುಮೋಧರ ಡಿ. ಶೆಟ್ಟಿ ಕೇಶವ ಪ್ರಸಾದ್ ಮುಳಿಯ, ಉಜ್ವಲ್ ಪ್ರಭು, ಸುಮಂತ್ ಕುಮಾರ್ ಬಿ. ಜೈನ್, ಎಚ್. ಪದ್ಮಕುಮಾರ್, ಸಂತೋಷ್ ಶೆಟ್ಟಿ ಸತೀಶ್ ಶೆಟ್ಟಿ ಪಟ್ಲ ಮತ್ತಿತರ ಗಣ್ಯರ ಉಪಸ್ಥಿತಿಯೊಂದಿಗೆ ಸಭೆ ನಡೆಯಲಿದೆ ಎಂದು ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ರಾವ್, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಗೋಪಾಲಕೃಷ್ಣ ಪಡ್ಡಿಲ್ಲಾಯ, ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಡಾ. ಹೇಮಂತ್ ರೈ ಮನವಳಿಕೆ ಅವರು ತಿಳಿಸಿದ್ದಾರೆ.

---

### ಎರಡನೇ ದಿನವೂ ಮುಂದುವರಿದ ಕೆಎಫ್‌ಡಿಸಿ ಕಾರ್ಮಿಕರ ಪ್ರತಿಭಟನೆ

# ಬೇಡಿಕೆ ಈಡೇರಿಸುವಂತೆ ನಿಗಮಕ್ಕೆ ಒತ್ತಾಯ

**ಸುಳ್ಯ:** ಕಾರ್ಮಿಕ ಸಂಘಟನೆಗಳ ಒಕ್ಕೂಟ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ನಿಯಮಿತ ಸುಳ್ಯ, ಐವರ್ನಾಡು ಹಾಗೂ ಸುಬ್ರಹ್ಮಣ್ಯ ವ್ಯಾಪ್ತಿಯ ರಬ್ಬರ್ ವಿಭಾಗದಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರ ಬೇಡಿಕೆಗಳನ್ನು ನಿರ್ಲಕ್ಷ್ಯ ವಹಿಸುತ್ತಿರುವುದನ್ನು ಖಂಡಿಸಿ ಬುಧವಾರದಿಂದ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿದ್ದು ಶನಿವಾರದ ಒಳಗೆ ಸ್ಪಂದನೆ ಇದ್ದಲ್ಲಿ ಹೋರಾಟದ ಸ್ವರೂಪ ಬದಲಿಸುವುದಾಗಿ ಸಂಘಟನೆಗಳ ಪ್ರಮುಖರು ತಿಳಿಸಿದ್ದಾರೆ.

ಬುಧವಾರ ತಮ್ಮ ದೈನಂದಿನ ರಬ್ಬರ್ ಇಲಾಖೆಯ ಕರ್ತವ್ಯ ಮುಗಿಸಿ ಬಳಿಕ ಮಧ್ಯಾಹ್ನ 20ರಿಂದ ಧರಣಿಯನ್ನು ಸುಳ್ಯ ವಿಭಾಗೀಯ ವ್ಯವಸ್ಥಾಪಕರ ಕಛೇರಿ ಮುಂಭಾಗದಲ್ಲಿ ನಡೆಸುತ್ತಿದ್ದು ಗುರುವಾರವೂ ಧರಣಿ ಮುಂದುವರಿದಿದೆ. ತಮ್ಮ ಪ್ರಮುಖ ಬೇಡಿಕೆಯಾದ ನಿರಂತರ ಕಾರ್ಮಿಕರನ್ನು ಖಾಯಂಗೊಳಿಸುವುದು, ನಿರಂತರ ಕಾರ್ಮಿಕರ ಅಲರ್ಯನ್ಸ್ ಪಾವತಿ, ಅನುಕಂಪ ಆಧಾರಿತ ಕೆಲಸ, ಮೇಸ್ತ್ರಿ ಕಾರ್ಮಿಕರ ನೇಮಕಾತಿ ಹಾಗೂ ಆರೋಗ್ಯ ಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಇಎಸ್ಐ ಎಲ್ಲಾ ಕಾರ್ಮಿಕರಿಗೆ ನೀಡಬೇಕು ಎಂದು ಆಗ್ರಹಿಸಿ 5 ಕಾರ್ಮಿಕ ಸಂಘಟನೆಗಳು ಧರಣಿಗೆ ತೀರ್ಮಾನಿಸಿ ಬಳಿಕ ಆಡಳಿತಾರೂಢ ಪಕ್ಷದ ನಾಯಕ ರಾಧಾಕೃಷ್ಣ ಬೊಳ್ಳೂರು



> **ನಿಯಮ ಪಾಲನೆ**
>
> ನಿಯಮದಂತೆ ಪಾವತಿ ಈಗಾಗಲೇ ಎರಡು ಕಾರ್ಮಿಕ ಸಂಘಟನೆಗಳು ಅನಿರ್ದಿಷ್ಟಾವಧಿ ಪ್ರತಿಭಟನೆಯಿಂದ ಹಿಂದೆ ಸರಿದಿದ್ದು ಅವರ ತೀರ್ಮಾನ ಸ್ವಾಗತಿಸುತ್ತಿದ್ದೇವೆ. ನಮ್ಮ ಜೊತೆಗೆ 8 ಕಾರ್ಮಿಕ ಸಂಘಟನೆಗಳ ಪ್ರಮುಖರು ಒಪ್ಪಂದ ಕರಾರಿನ ಮಾದರಿಯಲ್ಲಿ ಈಗಾಗಲೇ ಎಲ್ಲಾ ಕೆಲಸ ಕಾರ್ಮಿಕ ಸೌಲಭ್ಯಗಳು ನೀಡುತ್ತಿದ್ದು, ಯಾವುದೇ ಕಡತಗಳು ಉಳಿಕೆಯಾಗಿಲ್ಲ ಎಂದು ಡಿ.ಎಂ. ನಂದಗೋಪಾಲ್ 'ಹೊಸ ದಿಗಂತ'ಕ್ಕೆ ತಿಳಿಸಿದ್ದಾರೆ.

ನೀಡಿದ ಭರವಸೆಯ ಹಿನ್ನಲೆಯಲ್ಲಿ ಎರಡು ಕಾರ್ಮಿಕ ಸಂಘಟನೆಗಳು ಧರಣಿ ವಾಪಸು ಪಡೆದರೆ, ಉಳಿದ ಕಾರ್ಮಿಕ ಸಂಘಗಳು ತಮ್ಮ ಧರಣಿಯನ್ನು ಮಳೆಯನ್ನು ಲೆಕ್ಕಿಸದೇ ಮುಂದುವರಿಸಿದೆ. ಪ್ರತಿಭಟನೆಯಲ್ಲಿ ಸುಳ್ಯ, ಐವರ್ನಾಡು, ಸುಬ್ರಹ್ಮಣ್ಯ ವ್ಯಾಪ್ತಿಯ ಕಾರ್ಮಿಕರು ಇದ್ದರು.

**ಪ್ರತಿಭಟನೆಕ್ಕೆ ಬಿಟ್ಟ ಸಂಘಟನೆ**

ಇತ್ತ ಪ್ರತಿಭಟನೆ ಪೂರ್ವಭಾವಿಯಾಗಿ ಎಲ್ಲಾ ಸಿದ್ಧತೆಗಳ ಬಳಿಕ ಕರ್ನಾಟಕ ಎಂಪ್ಲಾಯಿಮೆಂಟ್ ಮತ್ತು ಇಂಡಸ್ಟ್ರಿಯಲ್ ಟ್ರೇಡ್ ಯೂನಿಯನ್ ಹಾಗೂ ತೋಟ ಕಾರ್ಮಿಕರ ಯೂನಿಯನ್ ಕಾಂಗ್ರೆಸ್ ಮುಖಂಡ ರಾಧಾಕೃಷ್ಣ ಬೊಳ್ಳೂರು ಮಧ್ಯ ಪ್ರವೇಶಿಸಿ ಮನವೊಲಿಸಿದ ಬಳಿಕ ಪ್ರತಿಭಟನೆಯಿಂದ ಹಿಂದೆ ಸರಿದರು. ಈ ಸಂದರ್ಭ ಪ್ರಮುಖರಾದ ಶಿವಕುಮಾರ್ ಕಂದಡ್ಕ ತಿಳಿಸಿದ್ದಾರೆ. ಸಂಘಟನೆ ಪ್ರಮುಖರಾದ ಚಂದ್ರನ್ ಕೂಟೇಲು, ಶರವಣನ್, ಆನಂದ ನಾಗಪಟ್ಟಣ, ಆರುಣಾಚಲಂ ಉಪಸ್ಥಿತರಿದ್ದರು.

---

### ಹರಕೆ ಈಡೇರಿದ ಭಕ್ತರಿಂದ ಕಾಣಿಕೆ ಸಮರ್ಪಣೆ | ಸಾವಿರಾರು ಭಕ್ತರು ಭಾಗಿ

# ಎಣ್ಮೂರು ಗರಡಿಯಲ್ಲಿ ಕೋಟಿ ಚೆನ್ನಯ ನೇಮ

**ಸುಬ್ರಹ್ಮಣ್ಯ:** ಐತಿಹಾಸಿಕ ತಾಣ ಎಣ್ಮೂರು ನಾಗಬ್ರಹ್ಮ ಕೋಟಿ ಚೆನ್ನಯ ಆದಿ ಬೈದೇರುಗಳ ಗರಡಿಯಲ್ಲಿ ಶ್ರೀ ಆದಿ ಬೈದೇರುಗಳ ನೇಮವು ಬುಧವಾರ ರಾತ್ರಿಯಿಂದ ಗುರುವಾರ ಬೆಳಗ್ಗಿನ ತನಕ ಭಕ್ತಿ ಸಂಭ್ರಮದಿಂದ ಜರುಗಿತು. ಸಹಸ್ರಾರು ಮಂದಿ ಭಕ್ತರು ಈ ಸಂದರ್ಭ ಬೈದೇರುಗಳ ದರುಶನ ಪಡೆದು ಪ್ರಸಾದ ಸ್ವೀಕರಿಸಿದರು.

**ಮಹಾ ಅನ್ನ ಸಂತರ್ಪಣೆ**

ಅಸಂಖ್ಯಾತ ಭಕ್ತಾದಿಗಳು ಬೈದೇರುಗಳಲ್ಲಿ ತಮ್ಮ ಅರಿಕೆಯನ್ನು ಮಾಡಿಕೊಂಡರಲ್ಲದೆ ಸಂಕಷ್ಟ ನಿವಾರಣೆಯಾದ ಭಕ್ತರು ಬೈದೇರುಗಳಿಗೆ ಕಾಣಿಕೆ ಅರ್ಪಿಸಿದರು. ಗರಡಿಯಲ್ಲಿ ನೇಮೋತ್ಸವದ ನಿಮಿತ್ತ ಮಧ್ಯಾಹ್ನದಿಂದ ಮಧ್ಯ ರಾತ್ರಿಯ ತನಕ ಮಹಾ ಅನ್ನ ಸಂತರ್ಪಣೆ ನೆರವೇರಿತು. ಸಹಸ್ರಾರು ಭಕ್ತರು ಪ್ರಸಾದ ಭೋಜನವನ್ನು ತಡರಾತ್ರಿಯವರೆಗೂ ಸ್ವೀಕರಿಸಿದರು.

ಗರಡಿ ಇಳಿದ ಬೈದೇರುಗಳು

ಬುಧವಾರ ಬೆಳಗ್ಗೆ ನಾಗ ತಂಬಿಲ ಮತ್ತು ಬಳಿಕ ಮುಹೂರ್ತ ತೋರಣ ನೆರವೇರಿತು. ಮಧ್ಯಾಹ್ನ ಕಟ್ಟಬೀಡಿನಿಂದ ಪೂರ್ವ ಸಂಪ್ರದಾಯದಂತೆ ಭಂಡಾರ ಹೊರಟು, ನೇತ್ರಾದಿ ಗರಡಿಯಲ್ಲಿ ದರ್ಶನ ನಡೆಯಿತು. ರಾತ್ರಿ ಬೈದೇರುಗಳು ಗರಡಿ ಇಳಿಯುವ ಕಾರ್ಯವು ನೆರವೇರಿತು. ಬೈದೇರುಗಳು ಗರಡಿ ಇಳಿಯುವುದು ನೇಮದ ಪ್ರಧಾನ ಅಂಗವಾಗಿದ್ದು, ಈ ದೃಶ್ಯವನ್ನು ಕಣ್ ತುಂಬಿಕೊಳ್ಳಲು ಸಹಸ್ರಾರು ಮಂದಿ ಭಕ್ತಾದಿಗಳು ಗರಡಿಯೊಳಗೆ ಸೇರಿದ್ದರು. ಆ ಬಳಿಕ ಬೈದೇರುಗಳು ಭಕ್ತಾದಿಗಳಿಗೆ ದರುಶನ ನೀಡಿದರು. ನಂತರ ಗರಡಿಯಲ್ಲಿ ನರ್ತನ ಸೇವೆ ನೆರವೇರಿತು. ತದನಂತರ ರಂಗಸ್ಥಳದಲ್ಲಿ ನರ್ತನ ಸೇವೆ ನಡೆಯಿತು.



**ಭಕ್ತರನ್ನು ಹರಸಿದ ಕಿನ್ನಿದಾರು**

ಮಧ್ಯ ರಾತ್ರಿಯ ವೇಳೆಗೆ ಕಿನ್ನಿದಾರು ಗರಡಿ ಇಳಿಯುವ ಕಾರ್ಯ ನಡೆಯಿತು. ನಂತರ ರಂಗಪ್ರವೇಶ ಮಾಡಿ ಕಿನ್ನಿದಾರುವಿನ ನರ್ತನ ಸೇವೆ ನಡೆಯಿತು. ಬಳಿಕ ಪ್ರಸಾದ ನೀಡಿದ ಕಿನ್ನಿದಾರು ಭಕ್ತರಿಗೆ ಹರಸಿ ಆಶೀರ್ವಾದ ನೀಡಿದರು.

> **ಗರಡಿ ಇಳಿಯುವ ದೃಶ್ಯ ವೀಕ್ಷಣೆ**
>
> ಬುಧವಾರ ರಾತ್ರಿ ಬೈದೇರುಗಳು ಗರಡಿ ಇಳಿಯುವ ಕಾರ್ಯವು ನೆರವೇರಿತು. ಬೈದೇರುಗಳು ಗರಡಿ ಇಳಿಯುವುದು ನೇಮದ ಪ್ರಧಾನ ಅಂಗವಾಗಿದ್ದು, ಈ ದೃಶ್ಯವನ್ನು ಕಣ್ತುಂಬಿಕೊಳ್ಳಲು ಸಹಸ್ರಾರು ಮಂದಿ ಭಕ್ತಾದಿಗಳು ಗರಡಿಯೊಳಗೆ ಸೇರಿದ್ದರು. ಆ ಬಳಿಕ ಬೈದೇರುಗಳು ಭಕ್ತಾದಿಗಳಿಗೆ ದರುಶನ ನೀಡಿದರು.

**ಕಾಣಿಕೆ ಅರ್ಪಣೆ**

ಗುರುವಾರ ಮುಂಜಾನೆ ಎಣ್ಮೂರು ಕಟ್ಟಬೀಡಿಗೆ ಬೈದೇರುಗಳು ಹಾಲು ಕುಡಿಯಲು ತೆರಳಿ ಬೀಡಿಗೆ ಕಾಣಿಕೆ ಅರ್ಪಿಸಿದರು. ನಂತರ ಗರಡಿಗೆ ಮರಳಿದ ಬೈದೇರುಗಳು ನರ್ತನ ಸೇವೆ ನೆರವೇರಿಸಿದರು. ಬಳಿಕ ರಂಗಸ್ಥಳದಲ್ಲಿ ಕೋಟಿ ಚೆನ್ನಯರ ದರ್ಶನ(ಸೇಟು) ನೆರವೇರಿತು. ಬಳಿಕ ತುಲಾಭಾರ ನೆರವೇರಿತು. ಈ ಸಂದರ್ಭ ಗರಡಿಯ ಆನುವಂಶಿಕ ಆಡಳಿತದಾರ ಕಟ್ಟಬೀಡು ರಾಮಕೃಷ್ಣ ಶೆಟ್ಟಿ, ಕಟ್ಟಬೀಡು, ಮಂಜುಳಾ ಎಂ.ಸಿ.ಆರ್. ಶೆಟ್ಟಿ ಕಟ್ಟಬೀಡು ಮತ್ತಿತರರು ಉಪಸ್ಥಿತರಿದ್ದರು.

---

## ಒಡಿಯೂರು ಶ್ರೀಸಂಸ್ಥಾನದಲ್ಲಿ ಹನುಮಜ್ಜಯಂತಿ: ಧರ್ಮಸಭೆ, ಯಜ್ಞ



ವಿಟ್ಲ: ಆಧ್ಯಾತ್ಮದ ಮೂಲಕ ಶಾಶ್ವತ ಸುಖವನ್ನು ಪಡೆಯಬಹುದು. ದೇವರ ಅನುಸಂಧಾನಕ್ಕೆ ಯಜ್ಞ ರಹದಾರಿಯಾಗಿದೆ. ಸೇವೆ ಎಂಬ ನಿಜವಾದ ಯಜ್ಞ ಸಂಪನ್ನವಾಗಿದೆ. ದೇವರ ಅವತಾರಗಳ ಹಿಂದೆ ಅಧರ್ಮದ ನಾಶ ಅಡಗಿದೆ. ಯವ್ವನ ಹಾಗೂ ಸಂಪತ್ತು ಬದುಕಿನ ಅತಿಥಿಗಳಾಗಿದ್ದಾರೆ. ಪ್ರೀತಿ ತತ್ವದಿಂದ ಅಂತರಂಗದಲ್ಲಿ ಪರಿವರ್ತನೆ ಕಾಣಲು ಸಾಧ್ಯ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಸ್ವಾಮೀಜಿ ಹೇಳಿದರು.

ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದಲ್ಲಿ ಗುರುವಾರ ಶ್ರೀ ಹನುಮಜ್ಜಯಂತಿ ಮಹೋತ್ಸವದ ಅಂಗವಾಗಿ ಲೋಕ ಕಲ್ಯಾಣಾರ್ಥವಾಗಿ ಶ್ರೀ ಮದ್ರಾಮಾಯಣ ಮಹಾಯಜ್ಞದ ಸಂದರ್ಭ ನಡೆದ ಧರ್ಮ ಸಭೆಯಲ್ಲಿ ಆಶೀರ್ವಚನ ನೀಡಿದರು.

ಸಾಧ್ವಿ ಮಾತಾನಂದಮಯೀ ದಿವ್ಯ ಸಾನಿಧ್ಯ ವಹಿಸಿದ್ದರು. ವಾಮಯ್ಯ ಬಿ. ಶೆಟ್ಟಿ ಉಷಾ ಕುಮಾರ್ ಶೆಟ್ಟಿ ಎ.

> “ ಬದುಕಿನಲ್ಲಿ ಸಂಸ್ಕಾರ ಅಗತ್ಯ. ಜೀವ ಭಾವದಲ್ಲಿ ಬೇರೆಯಾದರೂ, ದೇವ ಭಾವದಲ್ಲಿ ರಾಮಾಂಜನೇಯರು ಒಂದಾಗಿದ್ದಾರೆ. ಸಾತ್ವಿಕ ದಾನಕ್ಕೆ ಅಧಿಕ ಫಲ ಪ್ರಾಪ್ತವಾಗುತ್ತದೆ. ಕುಟುಂಬ ಪ್ರೀತಿಯನ್ನು ರಾಮಾಯಣದಲ್ಲಿ ಕಾಣಬಹುದು. ಶಬ್ದವೂ ಬೆಳಕಾಗಲು ಸಾಧ್ಯ ಎಂಬ ಅರಿವು ಇರಬೇಕು. ರಾಮನ ಸೇವೆ ಎಂದರೆ ರಾಷ್ಟ್ರದ ಸೇವೆ.
>
> ● ಗುರುದೇವಾನಂದ ಶ್ರೀ

ಸುರೇಶ್ ರೈ, ಶಂಕರ ಶೆಟ್ಟಿ ಹನುಮಂತಪ್ಪ ನೀಲಕಂಠಪ್ಪ ಡಾ. ಅದೀಪ್ ಶೆಟ್ಟಿ ಅಜಿತ್ ಕುಮಾರ್ ಪಂದಳಂ ಉಪಸ್ಥಿತರಿದ್ದರು. ರೇಣುಕಾ ಎಸ್. ರೈ ಪ್ರಾರ್ಥಿಸಿದರು. ಮಾತೇಶ್ ಭಂಡಾರಿ ಸ್ವಾಗತಿಸಿ, ಸಂತೋಷ್ ಭಂಡಾರಿ ವಂದಿಸಿದರು. ಯಶವಂತ ವಿಟ್ಲ ಕಾರ್ಯಕ್ರಮ ನಿರ್ವಹಿಸಿದರು.

---

## ದೇವಳದಿಂದ ವ್ಯಕ್ತಿ, ರಾಷ್ಟ್ರ ನಿರ್ಮಾಣ ಸಾಧ್ಯ: ಸೂರ್ಯನಾರಾಯಣ ಭಟ್

**ವಿಟ್ಲ:** ಪದ್ಯಾಣ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಪುನರ್ ಪ್ರತಿಷ್ಠೆ ಬ್ರಹ್ಮಕಲಶೋತ್ಸವ ಹಿನ್ನೆಲೆಯಲ್ಲಿ ಸುಧರ್ಮ ಸಭೆ ಬುಧವಾರ ಸಂಜೆ ಕ್ಷೇತ್ರದಲ್ಲಿ ನಡೆಯಿತು.

ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಶುಭ ಹಾರೈಸಿದರು. ವೇ.ಮೂ. ಕಶೆಕೋಡಿ ಸೂರ್ಯನಾರಾಯಣ ಭಟ್ ಧಾರ್ಮಿಕ ಉಪನ್ಯಾಸ ನೀಡಿ, ನಮ್ಮ ಊರಲ್ಲಿರುವ ದೇವಸ್ಥಾನದಲ್ಲಿ ನಡೆಯುವ ಬ್ರಹ್ಮಕಲಶೋತ್ಸವಕ್ಕೆ ಎಲ್ಲರೂ ಬರಬೇಕಾಗಿರುವುದು ಸಮಾಜದ ಜವಾಬ್ದಾರಿ. ವ್ಯಕ್ತಿ ನಿರ್ಮಾಣದ ಮೂಲಕ ರಾಷ್ಟ್ರ ನಿರ್ಮಾಣದ ಕನಸು ದೇವಸ್ಥಾನಗಳಿಂದ ಆರಂಭವಾಗುತ್ತದೆ. ನಮ್ಮಲ್ಲಿ ಒಳ್ಳೆತನವನ್ನು ಜಾಗೃತ ಮಾಡಲು ದೇವತಾರ್ಚನೆಯಿಂದ ಸಾಧ್ಯ ಎಂದರು.

ಪುತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಅಧ್ಯಕ್ಷ ಪಂಜಿಗುಡ್ಡೆ ಈಶ್ವರ ಭಟ್ ಮಾತನಾಡಿ, ಗೋಸಂಪತ್ತನ್ನು ಉಳಿಸುವ ಕೆಲಸ ಎಲ್ಲರಿಂದಲೂ ನಡೆಯಬೇಕು. ಮಹಾಲಿಂಗೇಶ್ವರನ ಸಂಪೂರ್ಣ ದಯೆ ಎಲ್ಲರಿಗೂ ಇದೆ ಎಂದರು.

ಎಂಎಲ್ಸಿ ಸದಸ್ಯ ಪ್ರತಾಪ್ ಸಿಂಹ ನಾಯಕ್ ಮಾತನಾಡಿದರು. ಹರಿಹರಪುರ ಪ್ರಬೋಧಿನಿ ಗುರುಕುಲದ ವ್ಯವಸ್ಥಾಪಕ ಉಮೇಶ್, ಕೆಎಂಎಫ್ ಮಂಗಳೂರು ನಿರ್ದೇಶಕರಾದ ನಂದರಾಮ ರೈ, ಸ್ಕ್ವಾಡ್ಸ್ ಅಧ್ಯಕ್ಷ ರವೀಂದ್ರ ಕಂಬಳಿ,



ಶ್ರೀದೇವರ ಉತ್ಸವ ಬಲಿ ನಡೆಯಿತು.

ಪಾಣೆಮಂಗಳೂರು ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷ ಜಯಶಂಕರ ಬಾಸ್ರಿತ್ತಾಯ, ಬನಾರಿ ಗೋಪಾಲಕೃಷ್ಣ ದೇವಸ್ಥಾನ ಕಾರ್ಯಾಧ್ಯಕ್ಷ ರವೀಂದ್ರನಾಥ ಪಿ.ಎಸ್, ಹಿರಿಯ ವಿದ್ವಾಂಸ ಡಾ.ಪಾದೇಕಲ್ಲು ವಿಷ್ಣು ಭಟ್, ಬ್ರಹ್ಮಕಲಶೋತ್ಸವ ಸಮಿತಿ ಸಂಚಾಲಕ ಜಿ.ಕೆ.ಭಟ್ ಸೇರಾಜೆ, ಮೊದಲಾದವರು ಭಾಗವಹಿಸಿದರು. ಆಡಳಿತ ಮೊಕ್ತೇಸರ ಸೇರಾಜೆ ಸತ್ಯನಾರಾಯಣ ಭಟ್ ಸ್ವಾಗತಿಸಿ, ಬ್ರಹ್ಮಕಲಶೋತ್ಸವ ಸಮಿತಿ ಸಂಘಟನಾ ಕಾರ್ಯದರ್ಶಿ ಶಿವಪ್ರಸಾದ ಶೆಟ್ಟಿ ಅನೆಯಾಲಗುತ್ತು ವಂದಿಸಿದರು. ಹೇಮಾ ಜಯರಾಮ ರೈ ಮತ್ತು ನವ್ಯಾ ಕೃಷ್ಣ ಮಾಣಿಪ್ಪಾಡಿ ನಿರ್ವಹಿಸಿದರು.

---

## ಎನ್ಐಟಿಕೆ ವಿದ್ಯಾರ್ಥಿಗಳಿಗಾಗಿ ವಿಶೇಷವಾದ ಅನುಭವಾತ್ಮಕ ತರಬೇತಿ




**ಮಂಗಳೂರು:** ಎನ್ಐಟಿಕೆ ಸುರತ್ಕಲ್‌ನಲ್ಲಿ ನಡಾಲ್ ರೆಸೀಲಿಂಟ್ ಲೀಡರ್‌ಶಿಪ್ ಕಾರ್ಯಕ್ರಮದಡಿ ಮೊದಲ ಟ್ರೆಕ್ ಕಾರ್ಯಕ್ರಮ ನಡೆಯಿತು.

ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಪ್ರದೇಶದಲ್ಲಿ ನಡೆದ ಈ ಟ್ರೆಕ್‌ನಲ್ಲಿ ಒಟ್ಟು 36 ವಿದ್ಯಾರ್ಥಿಗಳು ಭಾಗವಹಿಸಿದರು. ಈ ಟ್ರೆಕ್‌ನಲ್ಲಿ ದೈಹಿಕ ಸಾಮರ್ಥ್ಯ, ತಂಡ ಸಹಕಾರ ಹಾಗೂ ಪರಿಸರ ಜಾಗೃತಿಯನ್ನು ಒಳಗೊಂಡ ಅನುಭವಾತ್ಮಕ ತರಬೇತಿಯನ್ನು ವಿದ್ಯಾರ್ಥಿಗಳಿಗೆ ಒದಗಿಸಲಾಯಿತು. ಟ್ರೆಕ್‌ನಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿನಿ ಕೃತಿಕಾ ಸಿ.ಎಸ್. ತಮ್ಮ ಅನುಭವವನ್ನು ಹಂಚಿಕೊಳ್ಳುತ್ತಾ, 'ಈ ಟ್ರೆಕ್ ಸವಾಲಿನ ಜೊತೆಗೆ ಸಮೃದ್ಧ ಅನುಭವ ನೀಡಿತು.

> **ವಿದ್ಯಾರ್ಥಿಗಳಲ್ಲಿ ಮೌಲ್ಯ ವೃದ್ಧಿ**
>
> ನಡಾಲ್ ಸಂಸ್ಥೆಯ ಉದ್ದೇಶ ದೈಹಿಕವಾಗಿ ಸದೃಢ, ಮಾನಸಿಕವಾಗಿ ಸ್ಥೈರ್ಯ ಹೊಂದಿರುವ ಮತ್ತು ನೈತಿಕ ಮೌಲ್ಯಗಳನ್ನು ಪಾಲಿಸುವ ನಾಯಕತ್ವ ಗುಣಗಳನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವುದಾಗಿದೆ.

ಪ್ರಕೃತಿ ಪರಿಸರದ ಬಗ್ಗೆ ತಿಳಿಯುವ ಅವಕಾಶ ದೊರೆಯಿತು ಹಾಗೂ ಸಂಪೂರ್ಣ ಅನುಭವದ ಬಗ್ಗೆ ಚಿಂತನೆ ಮಾಡುವಂತಾಯಿತು' ಎಂದು ಹೇಳಿದರು.

---

### ದಡ್ಡಲಕಾಡು-ದೇವಿನಗರ ಶ್ರೀ ಕ್ಷೇತ್ರದ ನವೀಕರಣ, ಪುನರ್ ಪ್ರತಿಷ್ಠಾ ಬ್ರಹ್ಮಕಲಶೋತ್ಸವದ ಸಂಭ್ರಮ | ಸುಧರ್ಮ ಸಭಾ ಕಾರ್ಯಕ್ರಮ

# ದುರ್ಗಾಮಾತೆಯು ನಮ್ಮೊಳಗಿನ ದುಃಖವನ್ನು ದೂರ ಮಾಡುವ ಶಕ್ತಿ: ಆನಂದ ಗುರೂಜಿ

**ಬಂಟ್ವಾಳ:** ದುರ್ಗೆ ನಮ್ಮೊಳಗಿನ ದುಃಖವನ್ನು ದೂರ ಮಾಡುವ ಶಕ್ತಿ. ಅಂತಹ ಜಗದಾಂಬಿಕೆಯ ಭವ್ಯವಾದ ಮಂದಿರ ಇಲ್ಲಿ ರೂಪುಗೊಂಡಿದೆ ಎಂದು ಬ್ರಹ್ಮಶ್ರೀ ಆನಂದ ಸಿದ್ಧಿಪೀಠ ಮತ್ತು ಶ್ರೀ ಲಕ್ಷ್ಮೀ ಭೂವರಾಹ ಸ್ವಾಮೀ ಸಾಲಿಗ್ರಾಮ ಕ್ಷೇತ್ರದ ಸಂಸ್ಥಾಪಕ ಡಾ. ಮಹರ್ಷಿ ಆನಂದ ಗುರೂಜಿ ಹೇಳಿದರು.

ತಾಲೂಕಿನ ಮೂಡನಡುಗೋಡು ಗ್ರಾಮದ ದಡ್ಡಲಕಾಡು-ದೇವಿನಗರ ಶ್ರೀ ಜಗದಂಬಿಕಾ ಶ್ರೀ ಮಹಮ್ಮಾಯಿ ಗುಳಿಗ ಅಣ್ಣಪ್ಪ ಕ್ಷೇತ್ರದ ನವೀ ಕರಣ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಪ್ರಯುಕ್ತ ಗುರುವಾರ ನಡೆದ ಸುಧರ್ಮ ಸಭೆ ಉದ್ಘಾಟಿಸಿ, ಕರ್ನಾಟಕದ ಯಾವುದೇ ಭಾಗಕ್ಕೆ ಹೋದರೂ ಜನರ ಪ್ರೀತಿ ಸಿಗುತ್ತಿರುವುದು ನನ್ನ ಜೀವನದ ಪುಣ್ಯ. ಆ ಕಾರಣಕ್ಕಾಗಿ ಇನ್ನಷ್ಟು ಧರ್ಮ ಕಾರ್ಯಗಳನ್ನು ಮಾಡುವ ನಿಟ್ಟಿನಲ್ಲಿ



ಮುಂಚೂಣಿಯಲ್ಲಿ ನಿಂತಿರುತ್ತೇನೆ. ಪರಶುರಾಮ ಸೃಷ್ಟಿಯ ಕರಾವಳಿಯಲ್ಲಿ ನಿತ್ಯ ಧರ್ಮ ಕಾರ್ಯಗಳು ನಡೆಯುತ್ತಿರುವುದು ಅಭಿನಂದನೀಯ ಎಂದರು.

ಅತಿಥಿಯಾಗಿ ಭಾಗವಹಿಸಿದ್ದ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಪ್ರಭಾಕರ ಭಟ್ ಮಾತನಾಡಿದರು. ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಸುದರ್ಶನ್ ಮೂಡಬಿದಿರೆ ಅವರು ಮಾತನಾಡಿ, ಪ್ರಕೃತಿ ಬಿಟ್ಟರೆ ಜೀವನವಿಲ್ಲ, ಬ್ರಹ್ಮಕಲಶದ ಹೆಸರಿನಲ್ಲಿ ಪ್ರಕೃತಿಯನ್ನು ಆರಾಧಿಸುವ ಧಾರ್ಮಿಕ ಚೌಕಟ್ಟನ್ನು ಪೂರ್ವಿಕರು ನಿರ್ಮಿಸಿಕೊಟ್ಟಿದ್ದಾರೆ ಎಂದರು.

ಬಿಜೆಪಿ ನಾಯಕಿ ಸುಲೋಚನಾ ಜಿ.ಕೆ.ಭಟ್ ಅವರ ಅಧ್ಯಕ್ಷತೆ ವಹಿಸಿ ಮಾತನಾಡಿ, ದೇಶದ ಸಂಸ್ಕೃತಿ,

> “ ಹಿಂದೂ ಸಮಾಜದ ಮೇಲೆ ಆಕ್ರಮಣಗಳಾದಾಗ ಅಗೋಚರ ದೈವೀ ಶಕ್ತಿ, ಗೋಚರವಾಗಿರುವ ಸನ್ಯಾಸಿಗಳ ತಪಃಶಕ್ತಿ ನಮ್ಮನ್ನು ಕಾಪಾಡಿದೆ. ನಮ್ಮ ದೇವಸ್ಥಾನಗಳ ಮೇಲೆ ಆಕ್ರಮಣಗಳಾದಾಗಲೂ ಸಂತ, ಮಹಂತರಿಂದಾಗಿ ಜನ ಜಾಗೃತರಾಗಿದ್ದರು. ಹಿಂದೂ ಸಮಾಜ ಮಾತ್ರ ಜಗತ್ತಿನ ಶಾಂತಿ ಕಾಪಾಡಲಿದೆ.
>
> ● ಡಾ.ಪ್ರಭಾಕರ ಭಟ್

ಧಾರ್ಮಿಕತೆ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಸಾಮಾಜಿಕವಾಗಿ ತೊಡಗಿಸಿಕೊಳ್ಳುವಂತ ಮುಂದಿನ ಪೀಳಿಗೆಯ ಅಗತ್ಯವಿದೆ ಎಂದರು. ಆನಂದ ಗುರೂಜಿಯವರ ಪತ್ನಿ ಜಯಲಕ್ಷ್ಮೀ, ಕಿಯೋನಿಕ್ಸ್ ನಿಗಮದ ಮಾಜಿ ಅಧ್ಯಕ್ಷ ಹರಿಕೃಷ್ಣ ಬಂಟ್ವಾಳ, ಹಿಂದೂ ಯುವ ಸೇನೆ ಕೇಂದ್ರೀಯ ಮಂಡಳಿಯ ಗೌರವಾಧ್ಯಕ್ಷ ಭಾಸ್ಕರಚಂದ್ರ ಶೆಟ್ಟಿ, ನ್ಯಾಯವಾದಿ ಜಗದೀಶ್ ಶೇಣವ, ಜಿ.ಪ. ಸದಸ್ಯ ಕಿಶೋರ್ ಕುಮಾರ್ ಬೋಟ್ಯಾಡಿ, ಬಿಜೆಪಿ ನಾಯಕ ಸಂದೇಶ್ ಶೆಟ್ಟಿ ಅರೆಬೆಟ್ಟು, ಶ್ರೀ.ಕ್ಷೇ.ಧ.ಗ್ರಾ. ಯೋಜನೆಯ ಬಂಟ್ವಾಳ ತಾಲೂಕು ಯೋಜನಾಧಿಕಾರಿ ಜಯಾನಂದ ಪಿ.,ಉದ್ಯಮಿ ಜನಾರ್ಧನ ಅರ್ಕುಳ, ಟಿ.ಕೃಷ್ಣ ಕುಲಾಲ್ ಶೇಡಿಗುರಿ, ಸಾಮಾಜಿಕ ಕಾರ್ಯಕರ್ತೆ ಪ್ರಿಯಾ ಬ್ರಹ್ಮರಕೊಟ್ಲು, ಮಾಜಿ ಜಿ.ಪ. ಸದಸ್ಯ ಕ್ಯಾ.ಗಣೇಶ್ ಕಾರ್ಣಿಕ್, ಪಾಣೆಮಂಗಳೂರು ಸುಮಂಗಲಾ ಕ್ರೆ.ಕೋ. ಸೊಸೈಟಿ ಅಧ್ಯಕ್ಷ ನಾಗೇಶ್ ಕಲ್ಲಡ್ಕ, ಸ್ವರ್ಣೋದ್ಯಮಿ ಸುನೀಲ್ ಆಚಾರ್ಯ, ವಿ.ಹಿಂ.ಪ, ಬಜರಂಗದಳದ ಬಂಟ್ವಾಳ ಪ್ರಖಂಡದ ಮಾಜಿ ಅಧ್ಯಕ್ಷ ಪದ್ಮನಾಭ ಬಿ., ಅತಿಥಿಗಳಾಗಿ ಭಾಗವಹಿಸಿದ್ದರು. ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಧರ್ಣಪ್ಪ ಪೂಜಾರಿ ರಾಮನಗರ, ಜೀರ್ಣೋದ್ಧಾರ ಸಮಿತಿ ಗೌರವಾಧ್ಯಕ್ಷ ಸಂಜೀವ ಪೂಜಾರಿ ಪಿಲಿಂಗಾಲು, ರಾಜೇಶ್ ಎನ್. ನೆಕ್ಕರೆ, ಬ್ರಹ್ಮಕಲಶಸಮಿರಿ ಗೌರವಾಧ್ಯಕ್ಷ ಮುರಳೀಧರ ಭಟ್ ಮಣಿಹಳ್ಳ, ಮೋಹನದಾಸ ಶೆಟ್ಟಿ ನಡ್ಯೋಡಿಗುತ್ತು, ಪ್ರ.ಕಾರ್ಯದರ್ಶಿ ಉಮಾಶಂಕರ್ ಪ್ರಸಾದ್ ಹನುಮಾನ್ ನಗರ, ಕರುಣೇಂದ್ರ ಪೂಜಾರಿ ಕೊಂಬರಬೈಲು, ಧಾರ್ಮಿಕ ಸಮಿತಿ ಸಂಚಾಲಕ ದಾಮೋದರ ಜೆ.ಡಿ.ಸ್ವಾಗತ ಸಮಿತಿ ಸಹಸಂಚಾಲಕ ಜೋಕಿಂ ಮಿನೇಜಸ್ ಮತ್ತಿತರರಿದ್ದರು. ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ರಾಮದಾಸ್ ಬಂಟ್ವಾಳ ಪ್ರಸ್ತಾವನೆಗೈದರು. ಪ್ರ.ಕಾರ್ಯದರ್ಶಿ ಸಂತೋಷ್ ಪೂಜಾರಿ ಪಾವರಿಪಲ್ಲ ವಂದಿಸಿ, ದಿನೇಶ್ ಸುವರ್ಣ ರಾಯಿ ಕಾರ್ಯಕ್ರಮ ನಿರೂಪಿಸಿದರು.

## ಸುತ್ತಮುತ್ತ

### ಇಂದು ವಿವಿಧೆಡೆ ಕಲ್ಲಟ್ರ ಮಾಹಿನ್ ಹಾಜಿ ಪ್ರವಾಸ

**ಕಾಸರಗೋಡು:** ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರ ಮೂರನೇ ಹಂತದ ಚುನಾವಣಾ ಪ್ರವಾಸವು ಕಾಸರಗೋಡು ನಗರಸಭಾ ವ್ಯಾಪ್ತಿಯಲ್ಲಿ ನಡೆಯಲಿದೆ. ಏ.3ರಂದು ಬೆಳಗ್ಗೆ 9.30ಕ್ಕೆ ನೆಲ್ಕಳದಿಂದ ಆರಂಭವಾಗಲಿದೆ. 10 ಗಂಟೆಗೆ ಚಾಲಕುನ್ನು, 10.30ಕ್ಕೆ ಬೆದಿರ, 10.45ಕ್ಕೆ ಕೊಲ್ಲಂಪಾಡಿ, 11ಕ್ಕೆ ತುರ್ತಿ, 11.15 ಪಚ್ಚಕ್ಕಾಡು, 11.30ಕ್ಕೆ ಆಣಂಗೂರು, ಮಧ್ಯಾಹ್ನ 12ಗಂಟೆಗೆ ಅಡ್ಕತ್ತಬೈಲು, 2 ಗಂಟೆಗೆ ನೆಲ್ಲಿಕುನ್ನು, 2.30ಕ್ಕೆ ಫಿರ್ದೌಸ್ ನಗರ, ಅಪರಾಹ್ನ 3 ಗಂಟೆಗೆ ಚೇರಂಗೈ ಕಡಪ್ಪುರ, 3.30ಕ್ಕೆ ತಾಯಲಂಗಾಡಿ ಕ್ಲಾಕ್ ಟವರ್, ಸಂಜೆ 5ಕ್ಕೆ ತೆರುವತ್, 5.30ಕ್ಕೆ ಖಾಸಿಲೇನ್, 6ಕ್ಕೆ ಬಾಂಕೋಡ್, 6.30ಕ್ಕೆ ಕೆ.ಕೆ.ಪುರಂ, ರಾತ್ರಿ 7ಗಂಟೆಗೆ ತಳಂಗರೆ ಕಂಡತ್ತಿಲ್, 7.30ಕ್ಕೆ ತಳಂಗರೆ ಪಡಿಂಜಾರ್ ಮತ್ತು 8 ಗಂಟೆಗೆ ತಳಂಗರೆ ದಿನಾರ್‌ನಲ್ಲಿ ಸಮಾರೋಪಗೊಳ್ಳಲಿದೆ.

### ನಾಳೆ ಮುಸ್ಲಿಂಲೀಗ್ ರಾಜ್ಯಾಧ್ಯಕ್ಷ ಚೆಂಗಳಕ್ಕೆ

**ಕಾಸರಗೋಡು:** ಮುಸ್ಲಿಂಲೀಗ್ ರಾಜ್ಯಾಧ್ಯಕ್ಷ ಪಾಣಕ್ಕಾಡ್ ಸೈಯ್ಯದ್ ಸಾದಿಖಾಲಿ ಶಿಹಾಬ್ ತಂಙಳ್ ಅವರು ಏ.4 ರಂದು ಸಂಜೆ 4 ಗಂಟೆಗೆ ಚೆಂಗಳ ಎಂ.ಎಂ. ಕಾಂಪೌಂಡ್‌ನಲ್ಲಿ ಕುಟುಂಬ ಸಭೆಯನ್ನುದ್ದೇಶಿಸಿ ಮಾತನಾಡಲಿದ್ದು ಕಾಸರಗೋಡು ವಿಧಾನಸಭಾ ಕ್ಷೇತ್ರದ ಯುಡಿಎಫ್ ಅಭ್ಯರ್ಥಿ ಕಲ್ಲಟ್ರ ಮಾಹಿನ್ ಹಾಜಿ ಅವರು ಪರ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

### ಇಂದು ಬ್ರಹ್ಮಶ್ರೀ ಮುಗೇರ ಮಹಾಕಾಳಿ, ಪರಿವಾರ ದೈವಗಳ ಪುನರ್ ಪ್ರತಿಷ್ಠೆ

**ಮಂಜೇಶ್ವರ:** ಕುಂಜತ್ತೂರು ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ಹಾಗೂ ಪರಿವಾರ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶ ಮತ್ತು ನೇಮ 6ರ ವರೆಗೆ ಶ್ರೀ ಕ್ಷೇತ್ರದ ತಂತ್ರಿವರ್ಯರಾದ ವೇ. ಮೂ. ಕೆ.ಮರಿ ಭಟ್ ನೇತೃತ್ವದಲ್ಲಿ ಜರಗಲಿದೆ. ಏ.3ರಂದು ಬೆಳಗ್ಗೆ 9.20ರ ವೃಷಭ ಲಗ್ನ ಶುಭಮುಹೂರ್ತದಲ್ಲಿ ಶ್ರೀ ಮುಗೇರ ತನ್ನಿಮಾನಿಗ ಮಹಾಕಾಳಿ, ಕೊಡಮಣಿ ತ್ತಾಯ, ಪಂಜುರ್ಲಿ, ಗುಳಿಗ ಬೈರವಾದಿ ದೈವಗಳ ಪುನರ್ ಪ್ರತಿಷ್ಠೆ ಹಾಗೂ ಬ್ರಹ್ಮಕಲಶಾಭಿಷೇಕ ನಡೆಯಲಿದೆ.

### ವಾಹನ ಸಂಚಾರ ನಿಷೇಧ

**ಕಾಸರಗೋಡು:** ಕೊಟ್ಯಾಡಿಯಿಂದ ಪಂಚಿಕಲ್ಲು ವರೆಗಿನ ಚೆರ್ಕಳ – ಜಾಲ್ಸೂರು ರಾಜ್ಯ ಹೆದ್ದಾರಿಯಲ್ಲಿ ಡಾಮರೀಕರಣ ಕೆಲಸ ಆರಂಭವಾಗಿರುವುದರಿಂದ ಈ ರಸ್ತೆಯಲ್ಲಿ ವಾಹನ ಸಂಚಾರವನ್ನು ಏ.7ರ ವರೆಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ.
ಚೆರ್ಕಳದಿಂದ ಜಾಲ್ಸೂರಿಗೆ ಹೋಗುವ ವಾಹನಗಳು ಕೊಟ್ಯಾಡಿಯಿಂದ ಬಲಭಾಗಕ್ಕೆ ತಿರುಗಿ ಅಡೂರು – ಮಂಡೆಕೋಲು ಮೂಲಕ ಜಾಲ್ಸೂರು ತಲುಪಬೇಕು. ಜಾಲ್ಸೂರಿನಿಂದ ಚೆರ್ಕಳಕ್ಕೆ ಹೋಗುವ ವಾಹನಗಳು ಸುಳ್ಯ – ಮಂಡೆಕೋಲು – ಅಡೂರು – ಕೊಟ್ಯಾಡಿ ಮಾರ್ಗವಾಗಿ ಚೆರ್ಕಳ ತಲುಪಬೇಕು ಎಂದು ಕಾಸರಗೋಡು ಲೋಕೋಪಯೋಗಿ ಇಲಾಖೆಯ ರಸ್ತೆ ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮಾನ್ಯತೆ ಪಡೆಯದ ಕೋರ್ಸ್: ಮೋಸ ಹೋಗದಂತೆ ಮಾಹಿತಿ

**ಕಾಸರಗೋಡು:** ಕೇರಳ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ಅನುಮೋದನೆಯಿಲ್ಲದೆ ಹಲವಾರು ಅನಧಿಕೃತ ಸಂಸ್ಥೆಗಳು ಕೋರ್ಸ್‌ಗಳನ್ನು ನಡೆಸುತ್ತಿರುವುದು ವಿಶ್ವವಿದ್ಯಾಲಯದ ಗಮನಕ್ಕೆ ಬಂದಿರುವುದರಿಂದ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾಗಿರುವ ಅನುಮೋದಿತ ಸಂಸ್ಥೆಗಳು ಮತ್ತು ಕೋರ್ಸ್‌ಗಳ ವಿವರಗಳು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್ ನಲ್ಲಿ ಮಾತ್ರ ಲಭ್ಯವಿರುವುದಾಗಿ ಸಂಬಂಧಪಟ್ಟವರು ಮಾಹಿತಿ ನೀಡಿದ್ದಾರೆ.
ಆರೋಗ್ಯ ವಿಜ್ಞಾನ ಕೋರ್ಸ್‌ಗಳಲ್ಲಿ ಪ್ರವೇಶ ಪಡೆಯಲು ಇಚ್ಛಿಸುವವರು ವಿಶ್ವವಿದ್ಯಾಲಯದ ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಬಹುದು. ವೆಬ್‌ಸೈಟ್‌ಗೆ ಭೇಟಿ ನೀಡಿ ಅನುಮೋದಿತ ಕೋರ್ಸ್‌ಗಳು ಮತ್ತು ಸಂಸ್ಥೆಗಳನ್ನು ಮಾತ್ರ ಗಮನಿಸಬೇಕೆಂದು ತಿಳಿಸಲಾಗಿದೆ.
ಕೇರಳ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯದ ರಿಜಿಸ್ಟ್ರಾರ್ ಅವರು ಪ್ರವೇಶ ಪ್ರಕ್ರಿಯೆಗಳನ್ನು ಪರಿಶೀಲನೆಯ ನಂತರವೇ ಕೈಗೊಳ್ಳಬೇಕು ಎಂದು ಸ್ಪಷ್ಟಪಡಿಸಿದ್ದಾರೆ.

## ವಿಧಾನಸಭಾ ಚುನಾವಣೆ | ಸ್ವೀಪ್-ಜಿಲ್ಲಾ ಸ್ವಚ್ಛತಾ ಮಿಷನ್ ನೇತೃತ್ವದಲ್ಲಿ ವಿವಿಧ ಕಾರ್ಯಕ್ರಮ

# ಹಸಿರು ನೀತಿ ಸಂಹಿತೆ, ಮತದಾನ ಜಾಗೃತಿಗೆ ಸೈಕಲ್ ರ‍್ಯಾಲಿ

**ಕಾಸರಗೋಡು:** ವಿಧಾನಸಭಾ ಚುನಾವಣೆಯನ್ನು ಹಸಿರು ನೀತಿ ಸಂಹಿತೆಗೆ ಅನುಸಾರವಾಗಿ ಏರ್ಪಡಿಸಲು ಮತ್ತು ಏ.9 ರಂದು ನಡೆಯಲಿರುವ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಮತ ಚಲಾಯಿಸುವ ನಿಟ್ಟಿನಲ್ಲಿ ಜಾಗೃತಿಗಾಗಿ ಮತ್ತು ಪ್ರೋತ್ಸಾಹಿಸಲು ಸ್ವೀಪ್ ಜಾಗೃತಿ ಅಭಿಯಾನದ ಭಾಗವಾಗಿ ಜಿಲ್ಲಾ ಶುಚಿತ್ವ ಮಿಷನ್ ನೇತೃತ್ವದಲ್ಲಿ ಚೇಸ್ ದಿ ಗ್ರೀನ್ ಟ್ರ್ಯಾಕ್ ರೈಡ್ ವಿತ್ ಡಿಸ್ಟ್ರಿಕ್ಟ್ ಕಲೆಕ್ಟರ್ ಎಂಬ ಸೈಕಲ್ ರ‍್ಯಾಲಿಯನ್ನು ಗುರುವಾರ ಆಯೋಜಿಸಲಾಯಿತು.
ಸ್ವಚ್ಛತಾ ಮಿಷನ್ ನೇತೃತ್ವದಲ್ಲಿ ಸ್ವೀಪ್ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿದ್ದ ಈ ಸೈಕಲ್ ರ‍್ಯಾಲಿಯನ್ನು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಉದ್ಘಾಟಿಸಿ ರ‍್ಯಾಲಿಯುದ್ದಕ್ಕೂ ಭಾಗವಹಿಸಿದ್ದರು.
ವಿಧಾನಸಭಾ ಚುನಾವಣೆಯನ್ನು ಪರಿಸರ ಸ್ನೇಹಿ ರೀತಿಯಲ್ಲಿ ನಡೆಸುವ ಉದ್ದೇಶದಿಂದ ಈ ರ‍್ಯಾಲಿ ಆಯೋಜಿಸಲಾಯಿತು ಎಂದು ಜಿಲ್ಲಾಧಿಕಾರಿ ಹೇಳಿದರು. ದೈಹಿಕ ಸದೃಢತೆ ಉತ್ತೇಜಿಸುವುದು



ರ‍್ಯಾಲಿಯ ಉದ್ದೇಶಗಳಲ್ಲಿ ಒಂದಾಗಿದೆ ಎಂದರು.

**ಬೇಕಲ ಬೀಚ್ ಪಾರ್ಕ್‌ನಲ್ಲಿ ಸಮಾಪ್ತಿ**

ಕಾಸರಗೋಡು ಪೆಡಲರ್ಸ್ ಸೈಕ್ಲಿಂಗ್ ಕ್ಲಬ್ ಮತ್ತು ತೃಕ್ಕರೀಪ್ಪುರ ಸೈಕ್ಲಿಂಗ್ ಕ್ಲಬ್‌ನ ಸುಮಾರು 30 ಮಂದಿ ಸದಸ್ಯರು ರ‍್ಯಾಲಿಯಲ್ಲಿ ಪಾಲ್ಗೊಂಡಿದ್ದರು. ಕಾಞಂಗಾಡಿನ ಹಳೆಯ ಬಸ್ ನಿಲ್ದಾಣದಿಂದ ಪ್ರಾರಂಭವಾದ ರ‍್ಯಾಲಿ ಅಂತಾರಾಷ್ಟ್ರೀಯ ಪ್ರವಾಸೋದ್ಯಮ ತಾಣವಾದ ಬೇಕಲಕೋಟೆ ಮೂಲಕ ಸಾಗಿ ಬೇಕಲ ಬೀಚ್ ಪಾರ್ಕ್‌ನಲ್ಲಿ ಸಮಾಪ್ತಿಯಾಯಿತು.
ಬೇಕಲ ಬೀಚ್ ಪಾರ್ಕ್ ವ್ಯವಸ್ಥಾಪಕ ನಿರ್ದೇಶಕ ಅನಸ್ ಮುಸ್ತಾಫ ರ‍್ಯಾಲಿಯನ್ನು ಬರಮಾಡಿಕೊಂಡರು. ಶುಚಿತ್ವಾ ಮಿಷನ್ ಜಿಲ್ಲಾ ಸಂಯೋಜಕ ಪಿ.ಜಯನ್, ಸ್ವೀಪ್ ನೋಡಲ್ ಅಧಿಕಾರಿ ರತೀಶ್ ಪಿಲಿಕೋಡ್ ಮತ್ತು ಜಿಲ್ಲಾ ಮಾಹಿತಿ ಅಧಿಕಾರಿ ಎಂ.ಮಧುಸೂದನನ್ ಮುಂತಾದವರು ಮಾತನಾಡಿದರು. ಕಾಸರಗೋಡು ಪೆಡಲರ್ಸ್ ಸೈಕ್ಲಿಂಗ್ ಕ್ಲಬ್‌ನ ಸಂಸ್ಥಾಪಕ ಅಧ್ಯಕ್ಷ ರತೀಶ್ ಅಂಬಲತ್ತರ, ಕಾರ್ಯದರ್ಶಿ ಬಾಬು ಮಯೂರಿ, ಸದಸ್ಯರಾದ ವಿ.ಎನ್.ಶ್ರೀಕಾಂತ್, ತಾಜುದ್ದೀನ್, ವಿನೀಶ್ ಸೇರಿದಂತೆ ಅಪಾರ ಮಂದಿ ರ‍್ಯಾಲಿಯಲ್ಲಿ ಭಾಗವಹಿಸಿದ್ದರು. ಅಲ್ಲದೆ ಬೇಕಲ ಪ್ರವಾಸೋದ್ಯಮ ನಿವಾಸಿಗಳ ಸಂಘದ ಸದಸ್ಯರಾದ ಸೈಫುದ್ದೀನ್ ಕಳನಾಡ್, ಪಿ.ಕೆ.ಸಂಶುದ್ದೀನ್, ಫೆರೋಜ್ ಕಾಸ್ಮಿ ಮೊದಲಾದವರು ಪಾಲ್ಗೊಂಡಿದ್ದರು.

> **ಮತದಾನ ಪ್ರಾತ್ಯಕ್ಷಿಕೆ**
> **ಮತದಾನದಿಂದ ಹಿರಿಯ ನಾಗರಿಕರು , ದಿವ್ಯಾಂಗರು ಹಿಂದುಳಿಯದಂತೆ ಅವರ ಮನೆಗಳಿಗೆ ತೆರಳಿ ಮತಗಳನ್ನು ನೋಂದಾಯಿ ಸಲಾಗುತ್ತಿದೆ. ಈ ಮಧ್ಯೆ ಯುವ ಜನಾಂಗ ಮತದಾನಕ್ಕೆ ಹೆಚ್ಚಿನ ಆದ್ಯತೆ ನೀಡುವ ನಿಟ್ಟಿನಲ್ಲಿ ಜಾಗೃತಿ ಕಾರ್ಯಕ್ರಮ, ಅಭಿಯಾನ, ಸೈಕಲ್ ರ‍್ಯಾಲಿ, ಮತದಾನ ಪ್ರಾತ್ಯಕ್ಷಿಕೆ ಮೊದಲಾದ ಯೋಜನೆ ಅನುಷ್ಠಾನಕ್ಕೆ ತರಲಾಗಿದೆ. ಮತದಾನಕ್ಕೆ ಇನ್ನುಳಿದ ಮುಂದಿನ ಕೆಲವೇ ದಿನಗಳಲ್ಲಿ ಇನ್ನಷ್ಟು ಕಾರ್ಯಯೋಜನೆ ಜಾರಿಗೊಳಿಸಲು ನಿರ್ಧರಿಸಲಾಗಿದೆ.**
> **● ಅರ್ಜುನ್ ಪಾಂಡ್ಯನ್, ಜಿಲ್ಲಾಧಿಕಾರಿ**

**ಹಲವು ಯೋಜನೆ ಜಾರಿ**

ಕಾಸರಗೋಡು ಜಿಲ್ಲೆಯಲ್ಲಿ ಪ್ರತಿಯೋರ್ವರೂ ಮತದಾನದಲ್ಲಿ ಭಾಗವಹಿಸುವಂತಾಗಬೇಕು. ಈ ನಿಟ್ಟಿನಲ್ಲಿ ಜಿಲ್ಲಾಡಳಿತವು ಹಲವಾರು ಕಾರ್ಯಕ್ರಮ ಹಾಗೂ ಯೋಜನೆ ಜಾರಿಗೊಳಿಸುತ್ತಿದೆ. ಪ್ರಜಾಪ್ರಭುತ್ವ ದೇಶದಲ್ಲಿ ಮತದಾನಕ್ಕೆ ಮಹತ್ವದ ಸ್ಥಾನಮಾನವಿದೆ. ಈ ಹಿನ್ನೆಲೆಯಲ್ಲಿ ಮತದಾನದ ಮೂಲಕ ಸಮರ್ಥ ಅಭ್ಯರ್ಥಿಗಳನ್ನು ಆಯ್ಕೆ ಮಾಡುವುದು ಮತದಾರರ ಹಕ್ಕಾಗಿದೆ. ಈ ಹಕ್ಕು ಮತ್ತು ವ್ಯವಸ್ಥೆಯನ್ನು ಜಿಲ್ಲೆಯಲ್ಲಿ ಸಮರ್ಪಕವಾಗಿ ಕಾರ್ಯಗತಗೊಳಿಸಲು ಜಿಲ್ಲೆಯ ಎಲ್ಲಾ ಸಂಬಂಧಪಟ್ಟ ಅಧಿಕಾರಿಗಳು ಸಕಲ ಕ್ರಮ ಕೈಗೊಳ್ಳುತ್ತಿದ್ದಾರೆ. ಜಿಲ್ಲೆಯಲ್ಲಿ ಶೇ. 100 ರಷ್ಟು ಮತದಾನವಾಗಲು ಕಾರ್ಯ ಯೋಜನೆ ಸಿದ್ಧಪಡಿಸಲಾಗಿದೆ ಎಂದು ಡಿಸಿ ಹೇಳಿದರು.

## ಎಕೆಪಿಎ ವೆಸ್ಟ್ ಯೂನಿಟ್‌ನಿಂದ ಗುರುತಿನ ಕಾರ್ಡ್ ವಿತರಣೆ, ಸದಸ್ಯತನದ ಮಾಹಿತಿ



**ಕಾಸರಗೋಡು:** ಆಲ್ ಕೇರಳ ಫೋಟೋಗ್ರಾಫರ್ಸ್ ಅಸೋಸಿಯೇಷನ್ ವೆಸ್ಟ್ ಯೂನಿಟ್ ಇದರ ವತಿಯಿಂದ ಎಕೆಪಿಎ ಭವನದಲ್ಲಿ 2026–27ನೇ ವರ್ಷದ ಗುರುತಿನ ಕಾರ್ಡ್ ವಿತರಣೆ ಕಾರ್ಯಕ್ರಮ ಯೂನಿಟ್ ಅಧ್ಯಕ್ಷ ವಸಂತ ಕೆರೆಮನೆ ಅವರ ಅಧ್ಯಕ್ಷತೆಯಲ್ಲಿ ಜರಗಿತು.
ಎಕೆಪಿಎ ಕಾಸರಗೋಡು ವಲಯ ಅಧ್ಯಕ್ಷ ವಾಮನ್‌ಕುಮಾರ್, ನೂತನ ಸದಸ್ಯ ಕರಣ್ ಟಿ. ಅವರಿಗೆ ಗುರುತಿನ ಕಾರ್ಡ್ ನೀಡಿ ಉದ್ಘಾಟಿಸಿ, ಸಂಘಟನೆಯ ಸದಸ್ಯತನದ ಮಾಹಿತಿಯನ್ನು ನೀಡಿದರು. ವಲಯ ಕಾರ್ಯದರ್ಶಿ ಸರಿತಾ ಮುಳ್ಳೇರಿಯ, ಕೋಶಾಧಿಕಾರಿ ಅಜಿತ್ ಸಿಗ್ನೇಚರ್ ಉಳಿದ ನೂತನ ಸದಸ್ಯರಾದ ಮಹೇಶ್ ಪರಕ್ಕಿಲ, ಪ್ರಶಾಂತ್ ಕೆ., ಲೀಲಾಧರ ಆಚಾರ್ಯ ಕೆ. ಅವರಿಗೆ ಗುರುತಿನ ಕಾರ್ಡ್ ನೀಡಿದರು.
ಈ ಸಂದರ್ಭ ವಲಯ ಕಾರ್ಯದರ್ಶಿ ಸರಿತಾ ಮುಳ್ಳೇರಿಯ ಸದಸ್ಯರಿಗಿರುವ ಸವಲತ್ತುಗಳಾದ ಗ್ರೂಪ್ ಇನ್ಶೂರೆನ್ಸ್, ಸರಕಾರ ಕ್ಷೇಮನಿಧಿ ಮತ್ತು ಎಕೆಪಿಎ ಇದರ ಅತ್ಯಂತ ಮಹತ್ತರವಾದ ಸಾಂತ್ವನ ಪದ್ಧತಿಯ ಮಾಹಿತಿಯನ್ನು ಸದಸ್ಯರಿಗೆ ನೀಡಿದರು.
ಎಕೆಪಿಎ ಕಾಸರಗೋಡು ಜಿಲ್ಲಾ ಜೊತೆ ಕಾರ್ಯದರ್ಶಿ ಮನು ಎಲ್ಲೋರ, ಜಿಲ್ಲಾ ಸದಸ್ಯ ಮೈಂದಪ್ಪ ಕೆ.ಎಂ., ವಲಯ ಉಪಾಧ್ಯಕ್ಷ ಸುಬ್ರಹ್ಮಣ್ಯ, ವಿದ್ಯಾನಗರ ಯೂನಿಟ್ ಅಧ್ಯಕ್ಷ ಪ್ರಶೋಭ್ ಶುಭಾಶಂಸನೆಗೈದರು. ವಲಯ ಜೊತೆಕಾರ್ಯದರ್ಶಿ ಗಣೇಶ್ ರೈ, ಯೂನಿಟ್ ಉಪಾಧ್ಯಕ್ಷ ಅಭಿಷೇಕ್, ಯೂನಿಟ್ ಕೋಶಾಧಿಕಾರಿ ಅಮಿತ್, ಯೂನಿಟ್ ಜೊತೆ ಕಾರ್ಯದರ್ಶಿ ಪದ್ಮನಾಭ ನಾಯರ್ , ಸದಸ್ಯರು ಗುರುತಿನ ಕಾರ್ಡ್ ಪಡೆದುಕೊಂಡರು. ಎಕೆಪಿಎಯಲ್ಲಿ ವಿವಿಧ ಹುದ್ದೆ ಅಲಂಕರಿಸಿದ ಚಂದ್ರಶೇಖರ ಎಂ. ಪಾರ್ಥಿಸಿ, ಯೂನಿಟ್ ಕಾರ್ಯದರ್ಶಿ ಶಾಲಿನಿ ರಾಜೇಂದ್ರನ್ ಸ್ವಾಗತಿಸಿ, ವಿನೋದ್ ಕಲ್ಲಂಗೈ ವಂದಿಸಿದರು.

## ಇಂದಿನ ಯುವ ಪೀಳಿಗೆಗೆ ದೇಶದ ಕನಸಿನ ಬೀಜ ಬಿತ್ತಬೇಕು: ಸುಲೋಚನಾ ಭಟ್



**ಪೆರ್ಲ:** ಋಷಿ ಮುನಿಗಳ ಸಂಸ್ಕೃತಿ ನಮ್ಮದು. ನಮ್ಮ ದೇಶ, ನಮ್ಮ ಧರ್ಮ ಉಚ್ಛ್ರಾಯ ಸ್ಥಿತಿಯಲ್ಲಿದೆ. ನಮ್ಮಲ್ಲಿ ನಾವು ಭಾರತೀಯತೆ ಕಂಡುಕೊಳ್ಳಬೇಕು. ಮಕ್ಕಳಲ್ಲಿ ದೇಶದ ಬಗ್ಗೆ ಕನಸಿನ ಬೀಜ ಬಿತ್ತಬೇಕು. ಸಂಘಟಿತ ರಾಗಿ ಸಮಾಜ ಜೊತೆ ಬೆರೆಯಬೇಕೆಂದು ಕರ್ನಾಟಕ ಸರಕಾರ ಬಾಲಭವನ ಸೊಸೈಟಿ ಮಾಜಿ ಅಧ್ಯಕ್ಷೆ ಸುಲೋಚನಾ ಜಿ.ಕೆ.ಭಟ್ ಹೇಳಿದ್ದಾರೆ.
ಪೆರ್ಲ ಸಮೀಪದ ನೆಲ್ಲಿಕುಂಜೆ ಶ್ರೀ ವಿಷ್ಣುಮೂರ್ತಿ ದೇವಳದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶದ ಅಂಗವಾಗಿ ಬುಧವಾರ ನಡೆದ ಧಾರ್ಮಿಕ ಸಭೆಯಲ್ಲಿ ಅವರು ಧಾರ್ಮಿಕ ಭಾಷಣ ಮಾಡಿದರು.
ಶ್ರೀ ರಾಮಚಂದ್ರಾಪುರ ಮಠದ ಮಾತೃತ್ವಂ ಅಧ್ಯಕ್ಷೆ ಈಶ್ವರಿ ಬೇರ್ಕಡವು ಮಾತನಾಡಿ, ದೈವಿಕತೆ ಪ್ರಚೋದಿಸುವ ಶಕ್ತಿ ಪಂಚಭೂತಗಳಲ್ಲಿವೆ. ಮಕ್ಕಳು ಹಿರಿಯರು ಕಲಿಸಿದ ಸಂಸ್ಕಾರ ಅನುಸರಿಸಬೇಕು ಎಂದರು.
ಎಣ್ಮಕಜೆ ಗ್ರಾ.ಪಂ.ನ ಮಾಜಿ ಅಧ್ಯಕ್ಷೆ ರೂಪವಾಣಿ ಆರ್.ಭಟ್ ಮಾತನಾಡಿ, ದೈವಿಕ ಶಕ್ತಿಯ ಪ್ರೇರಣೆಯಿಂದ ಶ್ರೀ ಕ್ಷೇತ್ರದ ಅಭಿವೃದ್ಧಿ ಕಾರ್ಯಗಳು ಅಚ್ಚರಿಪಡುವ ರೀತಿಯಲ್ಲಿ ನಡೆದಿವೆ. ಸಮಾಜದಲ್ಲಿ ಬದಲಾವಣೆ ವ್ಯಕ್ತಿಯಿಂದ ಆರಂಭವಾಗುತ್ತದೆ ಮತ್ತು ಅದು ಇತರರಿಗೆ ಪ್ರೇರಣೆಯಾಗುತ್ತದೆ. ನಾವೆಲ್ಲರೂ ಬದಲಾವಣೆಗೆ ಕಾರಣರಾಗೋಣ ಎಂದರು.
ಬದಿಯಡ್ಕ ಗ್ರಾ.ಪಂ.ಉಪಾಧ್ಯಕ್ಷೆ ಅಶ್ವಿನಿ ಕೆ.ಎಂ. ಅಧ್ಯಕ್ಷತೆ ವಹಿಸಿದ್ದರು. ಪೆರ್ಲ ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷೆ ಶ್ಯಾಮಲಾ ಆರ್. ಭಟ್, ಮಂಜೇಶ್ವರ ಬ್ಲಾಕ್ ಪಂ. ಸದಸ್ಯೆ ವಿದ್ಯಾಕುಮಾರಿ, ಕುಂಬ್ಡಾಜೆ ಗ್ರಾಪಂ ಅಧ್ಯಕ್ಷೆ ಯಶೋಧಾ, ಕುಂಬ್ಡಾಜೆ ಗ್ರಾಪಂ ಸದಸ್ಯೆ ನಯನಾ, ಎಣ್ಮಕಜೆ ಗ್ರಾಪಂ ಅಧ್ಯಕ್ಷೆ ಕುಸುಮಾವತಿ, ಸದಸ್ಯೆ ವಿಜಯಾ ಕೆ.ಸಿ., ಬದಿಯಡ್ಕ ಗ್ರಾಪಂ ಸದಸ್ಯೆ ಉಷಾ ರಾಮ ಮಾತನಾಡಿದರು. ಶುಭಲತಾ ಸುರೇಶ್ ನೆಲ್ಲಿಕುಂಜೆ ಸ್ವಾಗತಿಸಿ, ಡಾ.ಗಾಯತ್ರಿ ಎಂ. ರಾವ್ ನೆಲ್ಲಿಕುಂಜೆ ವಂದಿಸಿ, ದಿವ್ಯಾ ಶಿರಂತಡ್ಕ ನಿರೂಪಿಸಿದರು.

## ಕಾಸರಗೋಡು ಜಿಲ್ಲೆಯಲ್ಲಿ 4910 ಮಂದಿಯಿಂದ ಮನೆ ಮತ ಚಲಾವಣೆ



**ಕಾಸರಗೋಡು:** ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಇದುವರೆಗೆ 85 ವರ್ಷಕ್ಕಿಂತ ಮೇಲ್ಪಟ್ಟ 2357, ದಿವ್ಯಾಂಗ ವಲಯದ 2553 ಮತದಾರರು ಮನೆಯಲ್ಲಿಯೇ ಮತ ಚಲಾಯಿಸಿದ್ದಾರೆ.
ಮನೆಯಲ್ಲಿಯೇ ಮತದಾನ ಸೇವೆಯಡಿ ಇಲ್ಲಿಯವರೆಗೆ ಒಟ್ಟು 4910 ಜನರು ಮತ ಚಲಾಯಿಸಿದ್ದಾರೆ. ಅಧಿಕಾರಿಗಳನ್ನು ಒಳಗೊಂಡ ತಂಡವು ಮನೆಯಲ್ಲಿಯೇ ಮತದಾನ ಚಟುವಟಿಕೆಗಳ ಭಾಗ ವಾಗಿ ಮನೆಗಳಿಗೆ ಭೇಟಿ ನೀಡುತ್ತಿದೆ.
ಮಂಜೇಶ್ವರದಲ್ಲಿ 85 ವರ್ಷ ಮೇಲ್ಪಟ್ಟ 261 ಜನರು ಮತ್ತು 461 ದಿವ್ಯಾಂಗರು ಮನೆಯಲ್ಲಿಯೇ ಮತ ಚಲಾಯಿಸಿದರು. ಕಾಸರಗೋಡಿನಲ್ಲಿ 85 ವರ್ಷ ಮೇಲ್ಪಟ್ಟ 276 ಜನರು ಮತ್ತು 453 ದಿವ್ಯಾಂಗರು ಮನೆಯಲ್ಲಿಯೇ ಮತ ಚಲಾಯಿಸಿದರು. ಉದುಮದಲ್ಲಿ 85 ವರ್ಷ ಮೇಲ್ಪಟ್ಟ 493 ಜನರು ಮತ್ತು 649 ದಿವ್ಯಾಂಗರು, ಕಾಞಂಗಾಡಿನಲ್ಲಿ 85 ವರ್ಷ ಮೇಲ್ಪಟ್ಟ 782 ಜನರು ಮತ್ತು 589 ದಿವ್ಯಾಂಗರು, ತೃಕ್ಕರೀಪ್ಪುರದಲ್ಲಿ 85 ವರ್ಷ ಮೇಲ್ಪಟ್ಟ 545 ಜನರು , 401 ದಿವ್ಯಾಂಗರು ಮನೆಯಲ್ಲೇ ಮತ ಚಲಾಯಿಸಿದರು. ಮುಂದಿನ ದಿನಗಳಲ್ಲೂ ಮನೆ ಮತದಾನ ಸೇವೆ ಲಭ್ಯವಿರುತ್ತದೆ.

> **ಮನೆಗಳಿಗೆ ಭೇಟಿ**
> **ಮತಗಟ್ಟೆ ಅಧಿಕಾರಿಗಳು ಮನೆಗಳಿಗೆ ಭೇಟಿ ನೀಡಿ ಮತ ನೋಂದಾಯಿಸಿದ್ದು, ಅಧಿಕಾರಿಗಳ ತಂಡ ಮನೆಯಲ್ಲೇ ಮತದಾನ ಚಟು ವಟಿಕೆಗಳ ಭಾಗ ಮನೆಗಳಿಗೆ ಭೇಟಿ ನೀಡುತ್ತಿದೆ.**

## ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಲಿಕೋತ್ಸವ, ಬೀಳ್ಕೊಡುಗೆ



**ಮಂಜೇಶ್ವರ:** ಕಲಿಕೋತ್ಸವವು ವಿದ್ಯಾರ್ಥಿಗಳ ಉತ್ಸವವಾಗಿದೆ. ಹಾಗೆಯೇ ತಾನು ಕಲಿತ ವಿದ್ಯೆಯನ್ನು ಪ್ರದರ್ಶಿಸುವ ಒಂದು ಉತ್ತಮ ವೇದಿಕೆಯಾಗಿದೆ. ಹೆತ್ತವರು , ಸಮಾಜದ ಸಮ್ಮುಖದಲ್ಲಿ ತನ್ನ ಪ್ರತಿಭೆಯನ್ನು ತೋರ್ಪಡಿಸುವ ಶಾಲೆಯ ಹಾಗೂ ವಿದ್ಯಾರ್ಥಿಗಳ ಕೈಗನ್ನಡಿ ಎಂದು ಮಂಜೇಶ್ವರ ಬಿ.ಪಿ.ಸಿ. ರಾಜಗೋಪಾಲನ್ ಹೇಳಿದ್ದಾರೆ.
ಮುಳಿಂಜ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಕಲಿಕೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

**ಬೀಳ್ಕೊಡುಗೆ ಸಮಾರಂಭ**

ಈ ಸಂದರ್ಭ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭ ನಡೆಯಿತು. ವಿದ್ಯಾರ್ಥಿಗಳಿಗೆ ಪದವಿ ನೀಡುವ ಮೂಲಕ ಪದವಿ ಪ್ರಧಾನ ಸಮಾರಂಭ ಜರಗಿತು.

**ಹಸ್ತಪ್ರತಿ ಬಿಡುಗಡೆ**

ಎಲ್ಲಾ ತರಗತಿಯ ವಿದ್ಯಾರ್ಥಿಗಳ ಸೃಜನ ಶೀಲತೆಯ ಉತ್ಪನ್ನಗಳಾದ ಕಥೆ, ಪದ್ಯ, ಸಂಭಾಷಣೆ ಒಗಟು, ಗಾದೆ ನುಡಿಮುತ್ತು ಚಿತ್ರಗಳು ರಸಪ್ರಶ್ನೆ ಮೊದಲಾದವುಗಳನ್ನೊಳಗೊಂಡ ಹಸ್ತಪತ್ರಿಕೆ ಬಿಡುಗಡೆಗೊಳಿಸಲಾಯಿತು.
ಎಸ್‌ಎಂಸಿ ಅಧ್ಯಕ್ಷ ಇಬ್ರಾಹಿಂ ಹನಿಫೀ, ಎಂಪಿಟಿಎ ಅಧ್ಯಕ್ಷ ಸುಷ್ಮಾ, ರಮೇಶ್ ಮತ್ತು ಸೈಬುನ್ನೀಸ ಉಪಸ್ಥಿತರಿದ್ದರು.

**ಬಹುಮಾನ ವಿತರಣೆ**

ಬಳಿಕ ಶಿಕ್ಷಕಿ ಜಸೀಲಾ ಅವರ ನೇತೃತ್ವದಲ್ಲಿ ಶಾಲಾ ಚಟುವಟಿಕೆಗಳಲ್ಲಿ ಗಮನಾರ್ಹ ಸಾಧನೆ ಗಳಿಸಿದವರಿಗೆ ಬಹುಮಾನ ವಿತರಿಸಲಾಯಿತು.
ಶಾಲಾ ಮುಖ್ಯ ಶಿಕ್ಷಕಿ ಚಿತ್ರಾವತಿ ಚಿಗುರುಪಾದೆ ಸ್ವಾಗತಿಸಿ, ಶಿಕ್ಷಕಿ ಧನ್ಯ ಪಿ.ವಿ. ವಂದಿಸಿದರು. ಅಬ್ದುಲ್ ಬಶೀರ್ ಕಾರ್ಯಕ್ರಮ ನಡೆಸಿಕೊಟ್ಟರು. ಬಳಿಕ ವಿದ್ಯಾರ್ಥಿಗಳ ಕಲಾ ಸಾಂಸ್ಕೃತಿಕ ಚಟುವಟಿಕೆಗಳು ನಡೆದವು.

## ಮುಜುಂಗಾವು ಶ್ರೀ ಭಾರತಿ ವಿದ್ಯಾಪೀಠದ ಶೈಕ್ಷಣಿಕ ವರ್ಷದ ಸಮಾರೋಪ ಸಮಾರಂಭ



**ಕುಂಬಳೆ:** ಮುಜುಂಗಾವು ಶ್ರೀ ಭಾರತಿ ವಿದ್ಯಾಪೀಠದಲ್ಲಿ ಈ ಶೈಕ್ಷಣಿಕ ವರ್ಷದ ಸಮಾರೋಪ ಹಾಗೂ ಪ್ರತಿಭಾ ಭಾರತಿ ಕಾರ್ಯಕ್ರಮ ಮಂಗಳವಾರ ನಡೆಯಿತು.
ಅತಿಥಿಗಳಾಗಿ ಉಪಸ್ಥಿತರಿದ್ದ ನಿವೃತ್ತ ಪರಿಶಿಷ್ಟ ಜಾತಿ ಅಭಿವೃದ್ಧಿ ಅಧಿಕಾರಿ ದಯಾನಂದ ಕೆ. ಮಾತನಾಡಿ, ವಿದ್ಯಾಪೀಠದ ವಿದ್ಯಾರ್ಥಿಗಳು ಸಂಸ್ಕಾರ ಮತ್ತು ಸಂಸ್ಕೃತಿಗಳ ಬಗ್ಗೆ ಅರಿವಿರುವವರು. ಇಪ್ಪತ್ತೈದು ವರ್ಷಗಳ ಸಾಧನೆ ಸ್ತುತ್ಯರ್ಹವಾದುದು ಎಂದರು.
ಸರ್ವೇ ಇಂಡಿಯಾ ಅಧಿಕಾರಿ ಗಣೇಶ್ ಭಟ್ ದೊಡ್ಡಮಾಣಿ ಮಾತನಾಡಿ, ಸಂಸ್ಕಾರ ಮತ್ತು ಸಂಸ್ಕೃತಿಗಳು ಭಾರತೀಯರ ಜೀವಾಳವಾಗಬೇಕು. ಇಂತಹ ಶಿಕ್ಷಣ ಭಾರತೀ ವಿದ್ಯಾಪೀಠದ ಮೂಲಕ ಸಾಕಾರ ಗೊಳ್ಳುತ್ತಿರುವುದು ಉತ್ತಮ ಬೆಳವಣಿಗೆ ಎಂದರು.
ಶಾಲಾ ಆಡಳಿತ ಸಮಿತಿಯ ಅಧ್ಯಕ್ಷ ಸುಬ್ರಹ್ಮಣ್ಯ ಭಟ್ ಬೆಜಪ್ಪೆ, ಎಡನಾಡು ಸಹಕಾರಿ ಬ್ಯಾಂಕ್‌ನ ಆಡಳಿತ ಸಮಿತಿ ಅಧ್ಯಕ್ಷ ಶ್ಯಾಮರಾಜ ದೊಡ್ಡಮಾಣಿ, ಆಡಳಿತ ಸಮಿತಿ ಕಾರ್ಯದರ್ಶಿ ಎಚ್.ಎಸ್. ಪ್ರಸಾದ್, ಶಾಲಾ ಮುಖ್ಯೋಪಾಧ್ಯಾಯ ಶ್ಯಾಮ್ ಭಟ್ ದರ್ಬೆಮಾರ್ಗ ಹಾಗೂ ಸಹ ಮುಖ್ಯಶಿಕ್ಷಕಿ ಚಿತ್ರಾಸರಸ್ವತಿ ವೇದಿಕೆಯಲ್ಲಿದ್ದರು.
ಶ್ರೀನಂದ ಬೇಕಲ್ ಸ್ವಾಗತಿಸಿ, ಯುಕ್ತಿ ವಂದಿಸಿದಳು. ವಿದ್ಯಾರ್ಥಿಗಳಾದ ಸಮರ್ಥ್ ಕೃಷ್ಣ ಶೆಟ್ಟಿ ಹಾಗೂ ಚಂದನ್ ಬಲ್ಲಾಳ್ ಕಾರ್ಯಕ್ರಮ ನಿರೂಪಿಸಿದರು.

> **ಪ್ರತಿಭಾ ಪ್ರದರ್ಶನ**
> **ಎಲ್‌ಕೆಜಿಯಿಂದ 10ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಂದ ಪ್ರತಿಭಾ ಪ್ರದರ್ಶನ ನಡೆಯಿತು. 2025-26ನೇ ನೇ ಶೈಕ್ಷಣಿಕ ವರ್ಷದಲ್ಲಿ ಪೂರ್ಣ ಹಾಜರಾತಿ ಪಡೆದ ವಿದ್ಯಾರ್ಥಿಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಯಿತು.**



**ಮಂಜೇಶ್ವರ ಸಮೀಪದ ಕುಂಜತ್ತೂರು ತೂಮಿನಾಡು ಬ್ರಹ್ಮಶ್ರೀ ಮುಗೇರ ಮಹಾಕಾಳಿ ದೈವಸ್ಥಾನದಲ್ಲಿ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಮತ್ತು ನೇಮದ ಅಂಗವಾಗಿ ಗುರುವಾರ ಹಸಿರುವಾಣಿ ಹೊರೆಕಾಣಿಕೆ ಮೆರವಣಿಗೆ ಅದ್ದೂರಿಯಾಗಿ ಜರಗಿತು.**



**ಪೆರ್ಲ ಪಡ್ರೆ ಗ್ರಾಮದ ವಾಣೀನಗರ ಕುತ್ತಾಜೆ ಶ್ರೀ ದುರ್ಗಾಪರಮೇಶ್ವರಿ ಕ್ಷೇತ್ರದಲ್ಲಿ ಏ.7ರಿಂದ 9ರ ವರೆಗೆ ನಡೆಯಲಿರುವ ಧರ್ಮದೈವ ಶ್ರೀ ರಕ್ತೇಶ್ವರಿ ದೈವದ ನೇಮ ಹಾಗೂ ಬೊಟ್ಟಿ ಆಯನ (ಒಂದು ಕುಂದು ನಲುವತ್ತು ದಯವಗಳ ನೇಮ)ಕ್ಕೆ ಮಂಗಳವಾರ ಗೊನೆ ಮುಹೂರ್ತ ನೆರವೇರಿಸಲಾಯಿತು.**

# ಏ.17- 28: ಪೆರಡಾಲ ಶ್ರೀ ಉದನೇಶ್ವರ ದೇವಳದಲ್ಲಿ ನವೀಕರಣ ಪುನರ್ ಪ್ರತಿಷ್ಠಾಷ್ಟಬಂಧ ಬ್ರಹ್ಮಕಲಶ

**ಕಾಸರಗೋಡು:** ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದಲ್ಲಿ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶ ಹಾಗೂ ವಾರ್ಷಿಕೋತ್ಸವ ಏಪ್ರಿಲ್ 17ರಿಂದ 28ರ ವರೆಗೆ ವಿವಿಧ ವೈದಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಜರಗಲಿದೆ ಎಂದು ನವೀಕರಣ ಬ್ರಹ್ಮಕಲಶೋತ್ಸವ ಸಮಿತಿ ಪದಾಧಿಕಾರಿಗಳು ಕಾಸರಗೋಡು ಪ್ರೆಸ್‌ಕ್ಲಬ್‌ನಲ್ಲಿ ಜರಗಿದ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.
ಏ.17ರಂದು ಬೆಳಗ್ಗೆ 7 ಗಂಟೆಗೆ ಗಣಪತಿ ಹೋಮ, 8.30ಕ್ಕೆ ಉಗ್ರಾಣ ಮುಹೂರ್ತ, ಮಲ್ಲ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಆಡಳಿತ ಮೊಕ್ತೇಸರ ಸತ್ಯನಾರಾಯಣ ಭಟ್ ಆನೆಮಜಲು ದೀಪಪ್ರಜ್ವಲನೆಗೊಳಿಸುವರು. ಸಂಜೆ 6 ಗಂಟೆಗೆ ವಾಸ್ತುಶಿಲ್ಪಿ ಕೃಷ್ಣಪ್ರಸಾದ್ ಮುನಿಯಂಗಳ ಉಪಸ್ಥಿತಿಯಲ್ಲಿ ಪ್ರಸಾದ ಪರಿಗ್ರಹ, ಸಂಜೆ 6ಕ್ಕೆ ನಟರಾಜ ವೇದಿಕೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏಷ್ಯಾನೆಟ್ ಚ್ಯಾನೆಲ್



ಧಾರವಾಹಿ ನಟಿ ಆದಿರಾ ಲಕ್ಷ್ಮಣ್ ಉದ್ಘಾಟಿಸುವರು. ಬ್ರಹ್ಮಕಲಶೋತ್ಸವ ಸಮಿತಿ ರಕ್ಷಾಧಿಕಾರಿ ಗೋಪಾಲಕೃಷ್ಣ ಪೈ ಬದಿಯಡ್ಕ ಅಧ್ಯಕ್ಷತೆ ವಹಿಸುವರು. ಉಳಿಯತ್ತಾಯ ನಾರಾಯಣ ಅಸ್ರ ಉಳಿಯ, ವಕೀಲ ವೆಂಕಟ್ರಮಣ ಭಟ್, ಉದ್ಯಮಿ ಅರವಿಂದ ಪೈ ಬಳ್ಳಂಬೆಟ್ಟು, ಗಾಯಕಿ ಅಪೇಕ್ಷಾ ಪೈ ಬಳ್ಳಂಬೆಟ್ಟು ಗೌರವ ಉಪಸ್ಥಿತರಿರುವರು. ಬಳಿಕ ಸಾಂಸ್ಕೃತಿಕ ಕಾರ್ಯಕ್ರಮ ಜರಗಲಿದೆ.
ಏ.18ರಂದು ನವೀಕರಿಸಿದ ರಾಜಗೋಪುರ, ರಾಜಾಂಗಣ ಮೇಲ್ಛಾವಣೆ , ನೂತನ ಭೋಜನಶಾಲೆ ಲೋಕಾರ್ಪಣೆ ನಡೆಯಲಿದೆ. ಬೆಳಗ್ಗೆ ತಂತ್ರಿವರ್ಯ ಬ್ರಹ್ಮಶ್ರೀ ರವೀಶ ತಂತ್ರಿ ಕುಂಟಾರು ಅವರಿಗೆ ಪೂರ್ಣಕುಂಭ ಸ್ವಾಗತ, ಸಂಜೆ 4ಕ್ಕೆ ಎಡನೀರು ಮಠಾಧೀಶ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಯವರಿಗೆ ಹಾಗೂ ಶ್ರೀ ಚಿತ್ರಾಪುರ ಮಠದ ಶ್ರೀ ವಿದ್ಯೇಂದ್ರತೀರ್ಥ ಶ್ರೀಪಾದಂಗಳವರಿಗೆ ಪೂರ್ಣಕುಂಭ ಸ್ವಾಗತ, ಧಾರ್ಮಿಕ ಸಭಾ ಕಾರ್ಯಕ್ರಮವನ್ನು ಹೊರನಾಡು ಶ್ರೀ ಅನ್ನಪೂರ್ಣೇಶ್ವರಿ ಕ್ಷೇತ್ರದ ಧರ್ಮಕರ್ತರಾದ ಭೀಮೇಶ್ವರ ಜೋಷಿ ಉದ್ಘಾಟಿಸುವರು. ಬ್ರಹ್ಮಕಲಶ ಸಮಿತಿ ಗೌರವಾಧ್ಯಕ್ಷ ಡಾ.ಸದಾಶಿವ ಶೆಟ್ಟಿ ಕುಳೂರು ಕನ್ಯಾನ ಅಧ್ಯಕ್ಷತೆ ವಹಿಸುವರು. ಬ್ರಹ್ಮಶ್ರೀ ರವೀಶ ತಂತ್ರಿ ದಿವ್ಯ ಉಪಸ್ಥಿತರಿರುವರು. ಎಡನೀರು ಶ್ರೀ, ಚಿತ್ರಾಪುರ ಮಠದ ಸ್ವಾಮೀಜಿ ಆಶೀರ್ವಚನ ನೀಡುವರು.
ಏ.19ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ ಗಳು, ಸಂಜೆ ಧಾರ್ಮಿಕ ಸಭೆಯಲ್ಲಿ ಕೊಂಡೆವೂರು ಶ್ರೀ ನಿತ್ಯಾನಂದ ಯೋಗಾಶ್ರಮ ಮಠದ ಶ್ರೀ ಯೋಗಾನಂದ ಸರಸ್ವತಿ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.
ಏ.20ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ಸಂಜೆ 4ರಿಂದ ನಟರಾಜ ವೇದಿಕೆಯಲ್ಲಿ ಧಾರ್ಮಿಕ ಸಭೆ, ಶ್ರೀ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.
ಏ.21ರಂದು ಸಂಜೆ 4.30ಕ್ಕೆ ಮಾತೃ ಸಮಾವೇಶದಲ್ಲಿ ಒಡಿಯೂರು ಕ್ಷೇತ್ರದ ಸಾಧ್ವಿ ಮಾತಾನಂದಮಯಿ ಆಶೀರ್ವಚನ ನೀಡಲಿದ್ದಾರೆ. ಏ.22ರಂದು ಸಂಜೆ 4ಕ್ಕೆ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.
ಏ.23ರಂದು ಪೂರ್ವಾಹ್ನ 4 ಗಂಟೆಗೆ 108 ತೆಂಗಿನ ಕಾಯಿ ಗಣಪತಿ ಹೋಮ, ಬೆಳಗ್ಗೆ 7.40ರಿಂದ 9.30ರ ಮಧ್ಯೆ ವೃಷಭ ಲಗ್ನ ಸುಮೂಹೂರ್ತದಲ್ಲಿ ಶ್ರೀ ದೇವರ ಪ್ರತಿಷ್ಠೆ ಪ್ರತಿಷ್ಠಾಬಲಿ, ಅಂಕುರಪೂಜೆ, ಸಂಜೆ 6ಕ್ಕೆ ನಿತ್ಯನೈಮಿತ್ತಿಕಾದಿಗಳ ನಿರ್ಣಯ, ಸಂಜೆ 4.30ಕ್ಕೆ ಧಾರ್ಮಿಕ ಸಭೆಯಲ್ಲಿ ಎಡನೀರು ಶ್ರೀ, ಉಡುಪಿ ಅದಮಾರು ಶ್ರೀ, ಮಾಣಿಲ ಶ್ರೀಧಾಮದ ಮೋಹನದಾಸ ಸ್ವಾಮೀಜಿ ಆಶೀರ್ವಚನ ನೀಡಲಿದ್ದಾರೆ.
ಏ.24ರಂದು ಬೆಳಗ್ಗೆ ವಿವಿಧ ವೈದಿಕ ಕಾರ್ಯಕ್ರಮ, ಸಂಜೆ 4 ಕ್ಕೆ ಧಾರ್ಮಿಕ ಸಭೆ ಕೇಮಾರು ಶ್ರೀಗಳ ಆಶೀರ್ವಚನ, ಏ.25ರಂದು ಸಂಜೆ 4ಕ್ಕೆ ಕದಳೀಪುರ ಶ್ರೀಮಠ ಬಾಳೆಕುದ್ರು ಸಾಮೀಜಿ ಆಶೀರ್ವಚನ, ಏ.26ರಂದು ಬೆಳಗ್ಗೆ 5 ರಿಂದ ಗಣಪತಿ ಹೋಮ, ಕವಾಟೋದ್ಘಾಟನೆ, ಪ್ರಾಯಶ್ಚಿತ್ತ ಮತ್ತು ತತ್ವಹೋಮಗಳ ಕಲಶಾಭಿಷೇಕ, ಎಡನೀರು ಮಠಾಧೀಶರ ಉಪಸ್ಥಿತಿಯಲ್ಲಿ ಸಹಸ್ರ ಕಲಶಾಭಿಷೇಕ – ಬ್ರಹ್ಮಕಲಶಾಭಿಷೇಕ, 11.30ಕ್ಕೆ ಶ್ರೀ ಸಂಸ್ಥಾನ ಗೋಕರ್ಣ ಶ್ರೀ ರಾಮಚಂದ್ರಾಪುರ ಮಠದ ಶ್ರೀ ರಾಘವೇಶ್ವರ ಭಾರತೀ ಶ್ರೀಗಳಿಂದ ಆಶೀರ್ವಚನ, ರಾತ್ರಿ 7 ಗಂಟೆಗೆ ಶ್ರೀ ದೇವರ ನೃತ್ಯ ಬಲಿ ಉತ್ಸವ ಜರಗಲಿದೆ. ಸಂಜೆ 4 ಗಂಟೆಗೆ ಒಡಿಯೂರು ಶ್ರೀ ಹಾಗೂ ಎಡನೀರು ಶ್ರೀ ಅವರಿಂದ ಆಶೀರ್ವಚನ ನಡೆಯಲಿದೆ. ಪ್ರತಿದಿನ ರಾತ್ರಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ.
ಗೋಷ್ಠಿಯಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಪ್ರಧಾನ ಕಾರ್ಯದರ್ಶಿ ನಿರಂಜನ ರೈ ಪೆರಡಾಲ, ಮೊಕ್ತೇಸರ ಹಾಗೂ ಬ್ರಹ್ಮಕಲಶ ಸಮಿತಿ ಕಾರ್ಯಾಧ್ಯಕ್ಷ ಜಗನ್ನಾಥ ರೈ ಪೆರಡಾಲಗುತ್ತು, ಆಡಳಿತ ಮೊಕ್ತೇಸರರು,ವಕೀಲ ವೆಂಕಟ್ರಮಣ ಭಟ್ ಚಂಬಲ್ತಿಮಾರ್, ಬ್ರಹ್ಮಕಲಶೋತ್ಸವ ಸಮಿತಿ ಕೋಶಾಧಿಕಾರಿ ಸೂರ್ಯನಾರಾಯಣ ಬಿ., ಮೊಕ್ತೇಸರರು ಸೀತಾರಾಮ ನವಕಾನ, ಬ್ರಹ್ಮಕಲಶ ಸಮಿತಿ ಜೊತೆ ಕಾರ್ಯದರ್ಶಿ , ಮೀಡಿಯಾ ಅಧ್ಯಕ್ಷ ಡಾ.ಶ್ರೀಶಕುಮಾರ್ ಪಂಜಿತ್ತಡ್ಕ ಉಪಸ್ಥಿತರಿದ್ದರು.

## ಸುತ್ತಮುತ್ತ

### ಸ್ವಯಂ ಗಣತಿಯಲ್ಲಿ ಭಾಗವಹಿಸುವಂತೆ ಸಾರ್ವಜನಿಕರಿಗೆ ಮನವಿ

**ಕಡಬ:** ಭಾರತದ ಜನಗಣತಿ ಕಾರ್ಯ ನಡೆಯುತ್ತಿದ್ದು, ಗಣತಿಯು ಡಿಜಿಟಲ್ ಆನ್‌ಲೈನ್ ಮೂಲಕವೇ ನಡೆಯುತ್ತಿರುವುದರಿಂದ ಸ್ವಯಂ ಜನಗಣತಿಯಲ್ಲಿ ಸಾರ್ವಜನಿಕರು ಭಾಗವಹಿಸುವಂತೆ ಕಡಬ ತಹಶೀಲ್ದಾರ್ ಮನವಿ ಮಾಡಿದ್ದಾರೆ. ಕಡಬ ತಾಲೂಕು ವ್ಯಾಪ್ತಿಯಲ್ಲಿ ಭಾರತದ ಮೊದಲ ಡಿಜಿಟಲ್ ಜನಗಣತಿ ಕಾರ್ಯವನ್ನು ಎರಡು ಹಂತಗಳಲ್ಲಿ ನಡೆಸಿ ಗಣತಿ ಮಾಹಿತಿ ಸಂಗ್ರಹಿಸುವ ಪ್ರಕ್ರಿಯೆ ನಡೆಯುತ್ತಿದೆ. ಈ ಪೈಕಿ ಸಾರ್ವಜನಿಕ ಸಹಭಾಗಿತ್ವದಲ್ಲಿ ಸ್ವಯಂ ಮನೆಗಣತಿ ಕಾರ್ಯ ಮಾಡಲು ಅವಕಾಶ ನೀಡಲಾಗಿದೆ. ಕಾಯ್ದೆಯ ಪ್ರಕಾರ ತಮ್ಮ ಮಾಹಿತಿ ಹೆಸರು ಮತ್ತು ಗುರುತುಗಳನ್ನು ಗೌಪ್ಯವಾಗಿ ಇರಿಸಲಾಗುತ್ತದೆ. ಯಾವುದೇ ತೆರಿಗೆ ಅಥವಾ ಪರಿಶೋಧನಾ ಉದ್ದೇಶಕ್ಕೆ ದತ್ತಾಂಶವನ್ನು ಬಳಸಿಕೊಳ್ಳುವುದಿಲ್ಲ, ಇದು ಸುರಕ್ಷಿತವಾಗಿ ಇರಿಸಲಾಗುತ್ತದೆ. ಏ.1ರಿಂದ 15ರವರೆಗೆ ನಿರ್ದೇಶನಾಲಯದಿಂದ ನೀಡಿರುವ ಸರಳವಾದ ಹಂತಗಳನ್ನು ಅನುಸರಿಸುವುದರ ಮೂಲಕ ಆನ್‌ಲೈನ್‌ನಲ್ಲಿ 15-20 ನಿಮಿಷಗಳಲ್ಲಿ ತಮ್ಮ ಮನೆಯ ಸ್ವಯಂ ಗಣತಿ ಮಾಡಿಕೊಂಡು ಏಕೀಕೃತ ಸ್ವಯಂ ಗಣತಿ ಗುರುತಿನ ಸಂಖ್ಯೆ ಪಡೆಯಬಹುದು. ಪರಿಶೀಲನೆಗೆ ಬರುವ ಗಣತಿದಾರರಿಗೆ ಸದರಿ ಐಡಿ ಒದಗಿಸಿ ಮನೆ ಗಣತಿ ಕಾರ್ಯ ಪೂರ್ಣಗೊಳಿಸಿಕೊಳ್ಳಬಹುದಾಗಿದೆ. ಕಡಬ ತಾಲೂಕಿನ ಎಲ್ಲಾ ಸಾರ್ವಜನಿಕರು https://se.census.gov.in ಮೂಲಕ ತಮ್ಮ ಮನೆಯ ಗಣತಿ ಮಾಡಿಕೊಳ್ಳಲು ಕಡಬ ತಹಶೀಲ್ದಾರ್ ಪ್ರಕಟಣೆ ತಿಳಿಸಿದೆ.

### ಏ.7: ಮಾಜಿ ಸೈನಿಕರ ಕುಂದುಕೊರತೆ ಸಭೆ

**ಮಡಿಕೇರಿ:** ಜಿಲ್ಲೆಯ ಮಾಜಿ ಸೈನಿಕರು ಹಾಗೂ ಅವರ ಅವಲಂಬಿತರ ಕುಂದುಕೊರತೆಗಳನ್ನು ಆಲಿಸಿ ಅವುಗಳಿಗೆ ಸೂಕ್ತ ಪರಿಹಾರ ನೀಡುವ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಎಸ್.ಜೆ.ಸೋಮಶೇಖರ್ ಅವರ ಅಧ್ಯಕ್ಷತೆಯಲ್ಲಿ ಏ. 7 ರಂದು ಬೆಳಿಗ್ಗೆ 10.30 ಕ್ಕೆ ನಗರದ ಜಿಲ್ಲಾಧಿಕಾರಿ ಕಾರ್ಯಾಲಯದ ಸಭಾಂಗಣದಲ್ಲಿ ಸಭೆ ನಡೆಯಲಿದೆ. ಜಿಲ್ಲೆಯ ಮಾಜಿ ಸೈನಿಕರು ಮತ್ತು ಅವರ ಅವಲಂಭಿತರು ಈ ಸಭೆಯ ಸದುಪಯೋಗ ಪಡೆದುಕೊಳ್ಳುವಂತೆ ಸೈನಿಕರ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ಜಂಟಿ ನಿರ್ದೇಶಕ ಬಿ.ಆರ್.ಶೆಟ್ಟಿ ತಿಳಿಸಿದ್ದಾರೆ.

### ಮನೆ ಕಾಮಗಾರಿ ಪೂರ್ಣಗೊಳಿಸಲು ಅಂತಿಮ ಗಡವು

**ಮಡಿಕೇರಿ:** ರಾಜೀವ್ ಗಾಂಧಿ ವಸತಿ ನಿಗಮದ ಸೂಚನೆಯಂತೆ ಪ್ರಧಾನ ಮಂತ್ರಿ ಆವಾಸ್ ನಗರ ಯೋಜನೆ 1.0 ಅಡಿ 2025 ರ ಡಿಸೆಂಬರ್ 31 ಕ್ಕೆ ಮುಕ್ತಾಯಗೊಂಡಿರುವುದರಿಂದ ಈ ಯೋಜನೆಯಡಿ ಜಿಲ್ಲೆಯ ಮಡಿಕೇರಿ ನಗರಸಭೆ, ಕುಶಾಲನಗರ ಮತ್ತು ವೀರಾಜಪೇಟೆ ಪುರಸಭೆ ಹಾಗೂ ಸೋಮವಾರಪೇಟೆ ಪ.ಪಂ.ಗಳಲ್ಲಿ ಫಲಾನುಭವಿಗಳು ಆಯೆ ಯಾಗಿ ವಿವಿಧ ಹಂತಗಳಲ್ಲಿ ಮನೆ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿರುತ್ತವೆ. ಅಂತಹ ಫಲಾನುಭವಿಗಳು ಜುಲೈ-2026ರ ಒಳಗಾಗಿ ಕಾಮಗಾರಿ ಪೂರ್ಣಗೊಳಿಸಿ ಸಹಾಯಧನ ಪಡೆಯಲು ತಿಳಿಸಿದೆ. ಇಲ್ಲವಾದಲ್ಲಿ ಸಹಾಯಧನ ಬಿಡುಗಡೆಯಾಗುವುದಿಲ್ಲ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಬಿ.ಬಸಪ್ಪ ಅವರು ತಿಳಿಸಿದ್ದಾರೆ.

### ನರಿಕೊಂಬು ಯುವಕ ಮಂಡಲದ ನೂತನ ಅಧ್ಯಕ್ಷರಾಗಿ ಕಿರಣ್ ಆಯ್ಕೆ

**ಬಂಟ್ವಾಳ :** ಬಂಟ್ವಾಳ ತಾಲೂಕು ನರಿಕೊಂಬು



ಗ್ರಾಮದ ನರಿಕೊಂಬು ಯುವಕ ಮಂಡಲ ಮೊಗರ್ನಾಡು ಇದರ 2026-2027ನೇ ನೂತನ ಅಧ್ಯಕ್ಷರಾಗಿ ಕಿರಣ್ ಎಂ. ಮದ್ದೋರ್ಳಿ ಆಯ್ಕೆಯಾಗಿದ್ದಾರೆ. ಉಳಿದಂತೆ ಪದಾಧಿಕಾರಿಗಳ ವಿವರ ಇಂತಿದೆ. ಉಪಾಧ್ಯಕ್ಷರಾಗಿ ಪ್ರವೀಣ್ ಕುಮಾರ್, ಪ್ರಧಾನ ಕಾರ್ಯದರ್ಶಿಯಾಗಿ ವಸಂತ ಅಂತರ, ಜೊತೆಕಾರ್ಯದರ್ಶಿಯಾಗಿ ಅಶ್ವಿತ್ ಮೊಗರ್ನಾಡು, ಕೋಶಾಧಿಕಾರಿಯಾಗಿ ರಂಜಿತ್ ಪಲ್ಲತ್ತಿಲ್ಲ, ಕ್ರೀಡಾ ಕಾರ್ಯದರ್ಶಿಯಾಗಿ ಸುದರ್ಶನ್ ಕುಲಾಲ್ ಆಯ್ಕೆಯಾಗಿದ್ದಾರೆ. ಗೌರವಾಧ್ಯಕ್ಷರಾದ ಪ್ರಕಾಶ್ ಕುಮಾರ್ ಹಾಗೂ ಯುವಕ ಮಂಡಲದ ಸದಸ್ಯರು ಉಪಸ್ಥಿತರಿದ್ದರು.

## ಗ್ರಾಮಾಂತರದಲ್ಲಿ ತ್ಯಾಜ್ಯ ನಿರ್ವಹಣೆಯೇ ಸವಾಲು | ರಸ್ತೆಯುದ್ದಕ್ಕೂ ಕಸದ ಸಾಲು

# ಸಾಂಕ್ರಾಮಿಕ ರೋಗಗಳಿಗೆ ಆಹ್ವಾನ ನೀಡಿದೆ ತ್ಯಾಜ್ಯ ರಾಶಿ!

**ಸುರತ್ಕಲ್:** ಮಂಗಳೂರು ಮಹಾನಗರ ಪಾಲಿಕೆ ಗಡಿ ವ್ಯಾಪ್ತಿಯ ಮಂಗಳ ಪೇಟೆಯ ಎಂಆರ್‌ಪಿ ಎಲ್ ಗೇಟ್ ಬಳಿಯಿಂದ ದೂರದ ಕಳವಾರು ಬಜಪೆ ಕ್ರಾಸ್ ವರೆಗೂ, ಇತ್ತ ಜೋಕಟ್ಟೆ ತೋಕೂರು ರಸ್ತೆಯಲ್ಲಿ ಕಸದ್ದೆ ರಾಶಿ. ಇದು ಇಂದು ನಿನ್ನೆಯ ಕಥೆಯಲ್ಲ, ದಿನೇ ದಿನೇ ರಸ್ತೆ ಬದಿ ತ್ಯಾಜ್ಯ ಎಸೆಯುವವರ ಸಂಖ್ಯೆ ಹೆಚ್ಚಾಗಿದ್ದು, ತ್ಯಾಜ್ಯವೂ ಗುಡ್ಡದಾಕಾರದಲ್ಲಿ ಬೆಳೆಯುತ್ತಿದೆ. ಇಲ್ಲಿ ಯಾರೂ ಕೇಳುವವರಿಲ್ಲದ ಸ್ಥಿತಿ ನಿರ್ಮಾಣವಾಗಿದೆ.

**ತಿಪ್ಪೆಗುಂಡಿಗಳಾದ ರಸ್ತೆಗಳು**

ಇಲ್ಲಿನ ಗ್ರಾಮಾಂತರ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆಯ ಲೋಪದಿಂದ ಬಹುತೇಕ ರಸ್ತೆ ಬದಿಗಳು ಕಸದ ರಾಶಿಯಿಂದ ತುಂಬಿ 'ತಿಪ್ಪೆ ಗುಂಡಿ'ಗಳಾಗಿ ಮಾರ್ಪಟ್ಟಿವೆ. ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆಯುವ ಅಕ್ರಮ ಚಟುವಟಿಕೆಗಳೊಂದಿಗೆ, ಪಂಚಾಯತ್‌ಗಳ ನಿರ್ಲಕ್ಷ್ಯವೂ ಈ ಸಮಸ್ಯೆಯನ್ನು ಇನ್ನಷ್ಟು ಕಗ್ಗಂಟಾಗಿಸಿದೆ.

ನಿಯಮಿತವಾಗಿ ಮನೆ ಮನೆ ಸಂಗ್ರಹಣೆ ಇದ್ದರೂ ಕಾರ್ಮಿಕ ವರ್ಗ ಸಾವಿರಾರು ಸಂಖ್ಯೆಯಲ್ಲಿ



ಇರುವುದರಿಂದ ಕಸದ ನಿರ್ವಹಣೆ ಕಷ್ಟವಾಗುತ್ತಿದೆ. ಪರಿಣಾಮ ಕಸವೆಲ್ಲ ರಸ್ತೆ ಬದಿ ಸಂಗ್ರಹಗೊಳ್ಳುತ್ತಿದೆ.

**ಸಾಂಕ್ರಾಮಿಕ ರೋಗದ ಭೀತಿ**

ಹಳ್ಳಿಗಳಲ್ಲಿ ಮನೆಮಾಲಿನ್ಯ, ಪ್ಲಾಸ್ಟಿಕ್ ತ್ಯಾಜ್ಯ, ಕೃಷಿ ನಿಯಮಿತ ಕಸ ಸಂಗ್ರಹಣೆ ವ್ಯವಸ್ಥೆಯಿಲ್ಲದಿರುವುದರಿಂದ ರಸ್ತೆಗಡಿಗಳು ಡಂಪಿಂಗ್ ಪ್ರದೇಶಗಳಾಗಿ ಪರಿಣಮಿಸಿವೆ. ಮಳೆಗಾಲದಲ್ಲಿ ಈ ಕಸದ ರಾಶಿಗಳು ನೀರಿನಲ್ಲಿ ಕರಗಿ ಹರಿದು ರಸ್ತೆ ಹಾನಿಗೆ ಕಾರಣವಾಗುತ್ತಿವೆ. ಅಲ್ಲದೇ, ಕುಡಿಯುವ ನೀರಿನ ಮೂಲಗಳಿಗೂ ಮಾಲಿನ್ಯ ತಲುಪುವ ಭೀತಿಯೂ ಹೆಚ್ಚಾಗಿದೆ. ಕಸದ ರಾಶಿಯಿಂದಾಗಿ ಸಾಂಕ್ರಾಮಿಕ ರೋಗಗಳಿಗೆ ಎಡೆಮಾಡಿಕೊಟ್ಟಂತಾಗಿದೆ. ಮಕ್ಕಳಿಂದ ಹಿಡಿದು ವೃದ್ಧರ ತನಕ ಆರೋಗ್ಯದ ಮೇಲೆ ದುಷ್ಪರಿಣಾಮ ಎದುರಿಸುವ ಸ್ಥಿತಿ ನಿರ್ಮಾಣವಾಗಿದೆ. ಸಾರ್ವಜನಿಕ ಆರೋಗ್ಯದ ದೃಷ್ಟಿಯಿಂದ ಇದು ಗಂಭೀರ ಎಚ್ಚರಿಕೆಯ ಘಂಟೆಯಾಗಿದೆ.

**ಪರಿಹಾರಕ್ಕೆ ಕ್ರಮ ಅಗತ್ಯ**

ಗ್ರಾಮ ಪಂಚಾಯಿತಿಗಳು ಮನೆಮನೆಗೆ ಕಸ ಸಂಗ್ರಹಣೆ ವ್ಯವಸ್ಥೆಯನ್ನು ಕಡ್ಡಾಯಗೊಳಿಸಬೇಕು. ಒಣ-ಒದ್ದೆ ತ್ಯಾಜ್ಯ ವಿಂಗಡಣೆಗೆ ಜಾಗೃತಿ ಮೂಡಿಸಬೇಕು. ಜೈವಿಕ ತ್ಯಾಜ್ಯ ನಿರ್ವಹಣೆಗೆ ಕಂಪೋಸ್ಟ್ ಘಟಕಗಳನ್ನು ಸ್ಥಾಪಿಸಬೇಕು. ರಸ್ತೆ ಬದಿ ಕಸ ಎಸೆಯುವವರಿಗೆ ದಂಡ ವಿಧಿಸುವ ಕಟ್ಟುನಿಟ್ಟಿನ ಕ್ರಮ ಜಾರಿಗೊಳಿಸಬೇಕು.

**ಕೃಷಿ ಭೂಮಿ ಗುಣಮಟ್ಟ ಕುಸಿಯುವ ಆತಂಕ**

ಈ ಸಮಸ್ಯೆಗೆ ಪ್ರಮುಖ ಕಾರಣಗಳೆಂದರೆ, ಗ್ರಾಮ ಪಂಚಾಯತ್‌ಗಳಲ್ಲಿ ಸಿಬ್ಬಂದಿ ಹಾಗೂ ವಾಹನಗಳ ಕೊರತೆ, ತ್ಯಾಜ್ಯ ವಿಂಗಡಣೆ ಬಗ್ಗೆ ಅರಿವು ಅಭಾವ, ಏಕಬಳಕೆ ಪ್ಲಾಸ್ಟಿಕ್ ಬಳಕೆ ಹೆಚ್ಚಳ ಹಾಗೂ ಶಾಶ್ವತ ಡಂಪಿಂಗ್ ಯಾರ್ಡ್‌ಗಳ ಕೊರತೆ. ಪರಿಸರದ ಮೇಲೂ ಇದರ ದುಷ್ಪರಿಣಾಮ ಗಂಭೀರವಾಗಿದೆ. ಮಣ್ಣುಮತ್ತುಭೂಗರ್ಭ ಜಲಮಾಲಿನ್ಯಗೊಳ್ಳುತ್ತಿದ್ದು ಪಶುಗಳು ಪ್ಲಾಸ್ಟಿಕ್ ತಿಂದು ಸಾವನ್ನಪ್ಪುವ ಘಟನೆಗಳೂ ವರದಿಯಾಗುತ್ತಿವೆ. ಕೃಷಿ ಭೂಮಿಯ ಗುಣಮಟ್ಟ ಕುಸಿಯುವ ಆತಂಕ ಎದುರಾಗಿದೆ.

**ಸಾರ್ವಜನಿಕರ ಸಹಭಾಗಿತ್ವ ಮುಖ್ಯ**

ಸ್ವಚ್ಛತೆ ಕೇವಲ ಸರ್ಕಾರದ ಜವಾಬ್ದಾರಿಯಲ್ಲ. ಸಾರ್ವಜನಿಕರೂ ಜವಾಬ್ದಾರಿ ಹೊತ್ತು, ಕಸವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುವುದು ಅನಿವಾರ್ಯವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಕಸದ ರಾಶಿ ಸಮಸ್ಯೆ ತಕ್ಷಣ ಗಮನಕ್ಕೆ ತೆಗೆದುಕೊಳ್ಳದಿದ್ದರೆ, ಅದು ಭವಿಷ್ಯದಲ್ಲಿ ಇನ್ನಷ್ಟು ದೊಡ್ಡ ಆರೋಗ್ಯ ಹಾಗೂ ಪರಿಸರ ದುರಂತಕ್ಕೆ ಕಾರಣವಾಗುವ ಸಾಧ್ಯತೆ ಇದೆ. ಅಧಿಕಾರಿಗಳು ಹಾಗೂ ಜನತೆ ಕೈಜೋಡಿಸಿದಾಗ ಮಾತ್ರ ಶಾಶ್ವತ ಪರಿಹಾರ ಸಾಧ್ಯವಾಗಲಿದೆ.

## ಕೆಎಂಸಿ ರೇಡಿಯಾಲಜಿ ವಿಭಾಗದಲ್ಲಿ ಅತ್ಯಾಧುನಿಕ ಮ್ಯಾಮೊಗ್ರಾಫಿ ಉದ್ಘಾಟನೆ



**ಮಂಗಳೂರು:** ಮಂಗಳೂರಿನ ಕೆಎಂಸಿ ಆಸ್ಪತ್ರೆ ರೇಡಿಯಾಲಜಿ ವಿಭಾಗದಲ್ಲಿ ನೂತನ ಹೈ ಸ್ಪೀಡ್ 128- ಸ್ಲೈಸ್ ಸಿಟಿ ಸ್ಕ್ಯಾನ್ ಮತ್ತು ಅತ್ಯಾಧುನಿಕ ಮ್ಯಾಮೊಗ್ರಾಫಿ ಸೇವೆ ಆರಂಭಿಸಲಾಗಿದ್ದು, ಮಣಿಪಾಲ್ ಅಕಾಡೆಮಿ ಪ್ರೊ ಚಾನ್ಸಲರ್ ಡಾ.ಎಚ್.ಎಸ್ ಬಲ್ಲಾಳ್ ಮಂಗಳವಾರ ಉದ್ಘಾಟಿಸಿದರು.

ರೇಡಿಯೋಲಜಿ ವಿಭಾಗವು ಅತ್ಯಾಧುನಿಕ ಡಯಾಗ್ನೊಸ್ಟಿಕ್ ಇಮೇಜಿಂಗ್ ಟೆಕ್ನಾಲಜಿಸ್ ಮತ್ತು ಸಂಯೋಜಿತ ಸೇವೆಗಳನ್ನು ಒಂದೇ ಸೂರಿನಡಿ ಒಗ್ಗೂಡಿಸಿದೆ. ಈ ವಿಭಾಗವು ಡಯಾಗ್ನೊಸ್ಟಿಕ್ ಸೇವೆಯ ನಿಖರತೆ, ರೋಗಿಯ ಆರೈಕೆಯನ್ನು ಸುಧಾರಿಸುವ ಮತ್ತು ತ್ವರಿತ ವೈದ್ಯಕೀಯ ನಿರ್ಣಯಗಳನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಈ ಸಂದರ್ಭ ಮಾತನಾಡಿದ ಡಾ.ಎಚ್.ಎಸ್. ಬಲ್ಲಾಳ್, ಕೆಎಂಸಿಯ ರೇಡಿಯೋಲಾಜಿ ವಿಭಾಗ ಸುದೀರ್ಘ ಇತಿಹಾಸ ಹೊಂದಿದ್ದು, ರೇಡಿಯಾಲಾಜಿಸ್ಟ್ ಆಗಿ ಸುಮಾರು 3 ದಶಕಗಳ ಹಿಂದೆ ಅದರ ಆರಂಭಿಕ ಪ್ರಯಾಣದ ಭಾಗವಾಗಲು ನನಗೆ ಅವಕಾಶ ಸಿಕ್ಕಿತ್ತು. ಪ್ರಸ್ತುತ ಈ ವಿಭಾಗದವು ರೇಡಿಯೊ ಡಯಾಗ್ನೋಸಿಸ್ ಸೌಲಭ್ಯವಾಗಿ ವಿಕಸನಗೊಂಡಿದೆ. ಈ ರೂಪಾಂತರ ನಾವೀನ್ಯತೆ, ಶೈಕ್ಷಣಿಕ ಶ್ರೇಷ್ಠತೆ ಮತ್ತು ರೋಗಿಗಳ ಆರೈಕೆಯ ಉನ್ನತ ಗುಣಮಟ್ಟ ತಲುಪಿಸುವ ನಮ್ಮ ಬದ್ಧತೆ ಪ್ರತಿಬಿಂಬಿಸುತ್ತದೆ ಎಂದರು.

ಕೆಎಂಸಿ ರೇಡಿಯಾಲಜಿ ವಿಭಾಗದ ಮುಖ್ಯಸ್ಥ ಡಾ.ಸಂತೋಷ್ ರೈ ಮಾತನಾಡಿ, ನೂತನ ವಿಭಾಗವು ಹೈ-ಎಂಡ್ ಇಮೇಜಿಂಗ್ 1.5ಟಿ ಎಮ್‌ಆರ್‌ಐ, 128 ಸ್ಲೈಸ್ ಸಿಟಿ ಸ್ಕ್ಯಾನರ್, ಅತ್ಯಾಧುನಿಕ ಮ್ಯಾಮೊಗ್ರಾಫಿ, ಡಿಜಿಟಲ್ ಎಕ್ಸ್‌ರೇ, ಅಲ್ಟ್ರಾಸೌಂಡ್, ಡಾಪ್ಲರ್, ಫೀಟಲ್ ಮೆಡಿಸಿನ್ ಮತ್ತು ಇಂಟರ್ವೆನ್ಶನಲ್ ರೇಡಿಯಾಲಾಜಿಸ್ಟ್ ನಂತಹ ಸೌಲಭ್ಯಗಳನ್ನು ಒಂದೇ ಸೂರಿನಲ್ಲಿ ಒಳಗೊಂಡಿದೆ ಎಂದರು. ಕ್ಲಸ್ಟರ್ ನಿರ್ದೇಶಕ ಪ್ರಮೋದ್ ಕುಂದರ್ ಮತ್ತಿತರರು ಉಪಸ್ಥಿತರಿದ್ದರು.

## ಕುಬೆವೂರು ಹೆದ್ದಾರಿ ಬದಿ ಅವೈಜ್ಞಾನಿಕ ಪೈಪ್‌ಲೈನ್ ಕಾಮಗಾರಿಯಿಂದ ಸಮಸ್ಯೆ



**ಮುಲ್ಕಿ:** ಕಿನ್ನಿಗೋಳಿ ಮುಲ್ಕಿ ರಾಜ್ಯ ಹೆದ್ದಾರಿ ಕುಬೆವೂರು ರೈಲ್ವೆ ಮೇಲ್ಸೇತುವೆ ಬಳಿ ಅಮೃತ್ 2.0 ಪೈಪ್‌ಲೈನ್ ಕಾಮಗಾರಿ ಅವೈಜ್ಞಾನಿಕವಾಗಿ ನಡೆಯುತ್ತಿದ್ದು, ಪರಿಸರ ಧೂಳುಮಯವಾಗಿ ರೋಗದ ಭೀತಿ ಎದುರಾಗಿದೆ.

ರಾತ್ರೋರಾತ್ರಿ ರೈಲ್ವೆ ಮೇಲ್ಸೇತುವೆ ಬಳಿ ಅರ್ಧಂಬರ್ಧ ಕಾಮಗಾರಿ ನಡೆಯುತ್ತಿದ್ದು ಪೈಪ್‌ಲೈನ್ ಹಾಕಲು ಶಿಮಂತೂರು ದೇವಸ್ಥಾನಕ್ಕೆ ಹೋಗುವ ರಸ್ತೆಯ ದ್ವಾರದ ಬಳಿ ರಸ್ತೆ ತುಂಡರಿಸಿ ಪೈಪುಗಳನ್ನು ಹಾಕಿ ಎರ್ರಾ ಬಿರ್ರಿ ಕಾಮಗಾರಿ ನಡೆಸಲಾಗಿದೆ.

ಅವೈಜ್ಞಾನಿಕಕಾಮಗಾರಿಯಿಂದಕಳೆದದಿನದ ಹಿಂದೆ ವಿದ್ಯುತ್ ಕಂಬ ಹಾನಿಯಾಗಿದ್ದು, ಭಾರೀ ಅಪಾಯ ತಪ್ಪಿ ಹೋಗಿತ್ತು. ಆದರೂ ಗುತ್ತಿಗೆದಾರರ ನಿರ್ಲಕ್ಷತನದಿಂದ ಸಾರ್ವಜನಿಕರ ಜೀವನದಲ್ಲಿ ಪೈಪ್‌ಲೈನ್ ಗುತ್ತಿಗೆದಾರರು ಚೆಲ್ಲಾಟವಾಡುತ್ತಿದ್ದಾರೆ ಎಂದು ಸ್ಥಳೀಯ ಸಾಮಾಜಿಕ ಕಾರ್ಯಕರ್ತ ನಾಗರಾಜ್ ಕಿಲ್ಪಾಡಿ ಆಕ್ರೋಶ ವ್ಯಕ್ತಪಡಿಸಿದ್ದಾರೆ

- ಅವೈಜ್ಞಾನಿಕ ಕಾಮಗಾರಿಯಿಂದ ಪರಿಸರ ಧೂಳುಮಯವಾಗಿ ರೋಗದ ಭೀತಿ ಎದುರಾಗಿದೆ
- ಸಮರ್ಪಕ ಕಾಮಗಾರಿ ನಡೆಸದಿದ್ದರೆ ಪ್ರತಿಭಟನೆ ನಡೆಸುವ ಎಚ್ಚರಿಕೆ

ಒಂದೆಡೆ ಬಿಸಿಲಿನ ಬೇಗೆಗೆ ಬಾಣಾಲೆಯಂತೆ ರಸ್ತೆ ಕಾದು ಹೋಗಿದ್ದು ಇನ್ನೊಂದಡೆ ಮುಲ್ಕಿ ಮೂಡಬಿದ್ರೆ ಹೆದ್ದಾರಿಯ ಕುಬೆವೂರು ಪೈಪ್‌ಲೈನ್ ಹಾಕಲು ಗುತ್ತಿಗೆದಾರರು ಹೆದ್ದಾರಿಯನ್ನೇ ನಾಶ ಮಾಡುತ್ತಿದ್ದಾರೆ ಎಂದು ನಾಗರಾಜ್ ಆರೋಪಿಸಿದ್ದಾರೆ

ಕೂಡಲೇ ಪೈಪ್‌ಲೈನ್ ಗುತ್ತಿಗೆದಾರರು ಸಮರ್ಪಕ ಕಾಮಗಾರಿ ನಡೆಸಬೇಕು ಇಲ್ಲದಿದ್ದರೆ ಸಂಬಂಧಪಟ್ಟ ಇಲಾಖೆ ಎದುರು ಪ್ರತಿಭಟನೆ ನಡೆಸುವುದಾಗಿ ಅವರು ಎಚ್ಚರಿಸಿದ್ದಾರೆ.

## ವಿಶ್ವ ರಂಗಭೂಮಿ ದಿನಾಚರಣೆ: ನಿವೃತ್ತ ಶಿಕ್ಷಕ ಕೃಷ್ಣಕುಮಾರ್‌ಗೆ ಕಲಾ ಗೌರವ



**ಶಿರ್ವ:** ವಿಶ್ವ ರಂಭೂಮಿ ದಿನಾಚರಣೆ ಶುಭಾವಸರದಲ್ಲಿ ರಂಗಕರ್ಮಿ ಗಣೇಶ್ ರಾವ್ ಎಲ್ಲೂರು ಇವರ ಸಾರಥ್ಯದ 'ಸ್ನೇಹಜೀವಿ' ಉಡುಪಿ ತಂಡದ ವತಿಯಿಂದ ವೃತ್ತಿ ಮತ್ತು ನಿವೃತ್ತಿಯ ನಂತರವೂ ಸದಾ ರಂಗಭೂಮಿಗೆ ನೀಡುತ್ತಿರುವ ಅನುಪಮ ಸೇವೆಯನ್ನು ಗುರುತಿಸಿ ಕಲಾವಿದ, ನಿವೃತ್ತ ಶಿಕ್ಷಕ ಕೃಷ್ಣಕುಮಾರ್ ರಾವ್ ಇವರನ್ನು ಅವರ ಸ್ವಗೃಹದಲ್ಲೇ ಫಲಪುಷ್ಪ ನೀಡಿ ಗೌರವಿಸಲಾಯಿತು. ಕೃಷ್ಣಕುಮಾರ್ ಇವರು ಕುಂಜಾರುಗಿರಿ ಗಿರಿಜಾ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 29 ವರ್ಷ ಉದ್ಯಾವರ ಹಿಂದೂ ಹಿ.ಪ್ರಾ.ಶಾಲೆಯಲ್ಲಿ 11ವರ್ಷ ಸೇರಿದಂತೆ 41ವರ್ಷಗಳ ಸೇವಾವಧಿಯಲ್ಲಿ ಅನೇಕ ವಿದ್ಯಾರ್ಥಿಗಳಿಗೆ ರಂಗ ಮಾರ್ಗದರ್ಶಕರಾಗಿ, ನಿವೃತ್ತಿಯ ನಂತರವೂ ಅನೇಕ ಸಂಘಟನೆಗಳೊಂದಿಗೆ ನಾಟಕ ತಂಡದಲ್ಲಿ ತೊಡಗಿಸಿಕೊಂಡಿದ್ದರು.

ಸನ್ಮಾನದ ಸಂದರ್ಭದಲ್ಲಿ ರಂಗ ನಿರ್ದೇಶಕ ಗಣೇಶ್ ರಾವ್ ಎಲ್ಲೂರು, ಸ್ನೇಹಜೀವಿ ತಂಡದ ಉದ್ಯಮಿ ಪ್ರಕಾಶ್ ಆಚಾರ್ಯ ಇನ್ನಂಜೆ, ಖ್ಯಾತ ವಕೀಲರಾದ ಜೀವನ್ ಪಿರೇರಾ ಶಂಕರಪುರ, ರಾಘವೇಂದ್ರ ಪ್ರಸಾದ್ ಉದ್ಯಾವರ, ಶಿಕ್ಷಕಿ ಹಾಗೂ ಲೇಖಕಿ ಸುಮಾ ಕಿರಣ್, ಪದ್ಮಿನಿ ಮಟ್ಟು ಮತ್ತು ಮನೆಯವರು ಉಪಸ್ಥಿತರಿದ್ದರು.



ಮಧೂರು ಶ್ರೀ ಮದನಂತೇಶ್ವರ ಸಿದ್ಧಿವಿನಾಯಕ ದೇವಾಲಯದ ವಾರ್ಷಿಕ ಜಾತ್ರಾ ಮಹೋತ್ಸವದ ಸಲುವಾಗಿ ಗೊನೆ ಕಡಿಯುವ ಮುಹೂರ್ತ ಬುಧವಾರ ಜರಗಿತು. ಪಿ.ಕೆ.ಧನಂಜಯ ಅವರು ವಿಶೇಷ ಪ್ರಾರ್ಥನೆ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರ್ ರಾಜೇಶ್, ಜಗದೀಶ್ ಪ್ರಸಾದ್ ಕೂಡ್ಲು, ವಕೀಲ ಅನಂತರಾಮ, ಸುಬ್ರಹ್ಮಣ್ಯ ಶರ್ಮಾ, ಬಿ.ಎನ್.ಸುಬ್ರಹ್ಮಣ್ಯ ಮತ್ತಿತರರು ಪಾಲ್ಗೊಂಡಿದ್ದರು.

## ರಾಷ್ಟ್ರೀಯ ಹೆದ್ದಾರಿ ಬದಿ ಕಸ ಎಸೆದವರಿಗೆ ಬಿತ್ತು 2,500 ರೂಪಾಯಿ ದಂಡದ ಬಿಸಿ

**ಬೆಳ್ತಂಗಡಿ:** ರಾಷ್ಟ್ರೀಯ ಹೆದ್ದಾರಿಯ ಬದಿ ಕಸ ಸುರಿದು ಹೋದ ವ್ಯಕ್ತಿಗೆ ಪಂ.ವತಿಯಿಂದ ದಂಡ ವಿಧಿಸಿ ಎಚ್ಚರಿಕೆ ನೀಡಲಾಗಿದೆ.

ಉಜಿರೆಯಲ್ಲಿ ಬಾಡಿಗೆ ಮನೆಯಲ್ಲಿ ವಾಸ್ತವ್ಯವಿದ್ದ ಕುಟುಂಬ ಮನೆ ಖಾಲಿ ಮಾಡಿ ಧಾರವಾಡಕ್ಕೆ ತೆರಳುತ್ತಿದ್ದ ವೇಳೆ ಮನೆಯಲ್ಲಿದ್ದ ಕಸವನ್ನು ಗೋಣಿ ಚೀಲಗಳಲ್ಲಿ ಕಟ್ಟಿ ಮಂಗಳೂರು ವಿಲ್ಲುಪುರಂ ರಾಷ್ಟ್ರೀಯ ಹೆದ್ದಾರಿಯ ಮುಂಡಾಜೆ ಗ್ರಾ.ಪಂ. ವ್ಯಾಪ್ತಿಯ ಸೀಟು ಅರಣ್ಯದ ರಸ್ತೆ ಬದಿ ಎಸೆದು ಹೋಗಿತ್ತು. ಈ ಗೋಣಿ ಚೀಲಗಳನ್ನು ಬಿಚ್ಚಿ ಪರಿಶೀಲಿಸಿದಾಗ ಕೆಲವೊಂದು ಕಾಗದ, ರಟ್ಟಿನ ಪೆಟ್ಟಿಗೆಗಳು ಕಂಡುಬಂದಿದ್ದು ಅದರಲ್ಲಿ ಉಜಿರೆ ಮನೆಯೊಂದರ ವಿಳಾಸ ದಾಖಲಾಗಿತ್ತು. ಈ ಮನೆ ಅವರನ್ನು ಸಂಪರ್ಕಿಸಿದಾಗ ಇದು ಬಾಡಿಗೆಗೆ ಇದ್ದ ಧಾರವಾಡ ಮೂಲದ ಕುಟುಂಬದವರಿಗೆ ಸೇರಿದ್ದು ಎಂದು ತಿಳಿದುಬಂದಿದೆ. ಬಳಿಕ ಮುಂಡಾಜೆ ಪಂಚಾಯಿತಿ ವತಿಯಿಂದ ಅವರನ್ನು ಸಂಪರ್ಕಿಸಿ 2,500ರೂ. ದಂಡ ವಿಧಿಸಿದ್ದು ಅದನ್ನು ಸಂಬಂಧಪಟ್ಟವರು ಪಾವತಿಸಿರುತ್ತಾರೆ ಎಂದು ಪಿಡಿಒ ಗಾಯತ್ರಿ ತಿಳಿಸಿದ್ದಾರೆ

ಇದೇ ಸ್ಥಳದ ಅನತಿ ದೂರದಲ್ಲಿ ಗೋಣಿಚೀಲಗಳನ್ನು ರಸ್ತೆ ಬದಿ ಎಸೆಯಲಾಗಿದ್ದು ಅವುಗಳನ್ನು ಬಿಚ್ಚಿ ನೋಡಿದಾಗ ಕಿನ್ನಿಗೋಳಿ ವಿಳಾಸ, ಮೊಬೈಲ್ ಸಂಖ್ಯೆ ಹಾಗೂ ಇನ್ನಿತರ ಮಾಹಿತಿಗಳು ಸಿಕ್ಕಿವೆ. ಆ ಮೊಬೈಲ್



**ಕಸ ಎಸೆಯುವವರ ಸ್ವರ್ಗ**

ರಾಷ್ಟ್ರೀಯ ಹೆದಾರಿಯ ನಿಡಿಗಲ್‌ನಿಂದ ಸೋಮಂತಡ್ಕದ ತನಕ 4ಕಿ.ಮೀ. ವ್ಯಾಪ್ತಿಯ ಹೆದ್ದಾರಿ ರಸ್ತೆ ಅರಣ್ಯ ಪ್ರದೇಶದಲ್ಲಿ ಬೀದಿದೀಪಗಳು, ಸಿಸಿಟಿವಿ ಇರುವುದಿಲ್ಲ, ಈ ಕಾರಣದಿಂದ ಈ ಪ್ರದೇಶದಲ್ಲಿ ವಾಹನ ಸವಾರರು ಹಾಗೂ ಕೆಲವು ಸಾರ್ವಜನಿಕರು ಪ್ಲಾಸ್ಟಿಕ್, ತ್ಯಾಜ್ಯ ಸಹಿತ ಕಸ ಎಸೆದು ಹೋಗುವುದು ಸಾಮಾನ್ಯವಾಗಿದೆ.

ಸಂಖ್ಯೆ ಸಂಪರ್ಕಿಸಲಾಗಿದ್ದು ಅವರಿಂದ ಸರಿಯಾದ ಸಮಜಾಯಿಷಿ ಸಿಕ್ಕಿಲ್ಲ ಎಂದು ಹೇಳಲಾಗಿದೆ. ಕಸ ಎಸೆದು ಹೋದವರು ಈ ಬಗ್ಗೆ ಪಂಚಾಯಿತಿಯನ್ನು ಸಂಪರ್ಕಿಸಿ ಕಸ ವಿಲೇವಾರಿ, ದಂಡ ಕಟ್ಟದಿದ್ದಲ್ಲಿ ಪೊಲೀಸ್ ಠಾಣೆಗೆ ದೂರು ನೀಡಲಾಗುವುದು ಎಂದು ಪಂಚಾಯಿತಿ ಮೂಲಗಳು ತಿಳಿಸಿವೆ.

## ಇಂದಿನಿಂದ ಕೊಡವ ಕುಟುಂಬಗಳ 24ನೇ ವರ್ಷದ 'ಮುಕ್ಕಾಟಿರ ಕಪ್ ಕ್ರಿಕೆಟ್ ನಮ್ಮೆ'

**ಮಡಿಕೇರಿ:** ಕೊಡವ ಕುಟುಂಬಗಳ ನಡುವಿನ 24ನೇ ವರ್ಷದ 'ಕ್ರಿಕೆಟ್ ನಮ್ಮೆ' ಯನ್ನು ಬೇತ್ರಿಯ ಮುಕ್ಕಾಟಿರ ಕುಟುಂಬಸ್ಥರಿಂದ ಏ.3ರಿಂದ ಮತ್ತು ಮೇ 1 ರವರೆಗೆ ಮೂರ್ನಾಡು, ಅರಮೇರಿಯಲ್ಲಿ ನಡೆಸಲಾಗುವುದೆಂದು ಬೇತ್ರಿ ಮುಕ್ಕಾಟಿರ ಕುಟುಂಬದ ವಕ್ತಾರ ರವಿ ಚಿಯಣ್ಣ, ಗೌರವ ಕಾರ್ಯದರ್ಶಿ ಭಜನ್ ಬೋಪಣ್ಣ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಪಂದ್ಯಾವಳಿ ಕುರಿತು ಮಾಹಿತಿ ನೀಡಿದ ಅವರು, ಮುಕ್ಕಾಟಿರ ಕ್ರಿಕೆಟ್ ನಮ್ಮೆಯಲ್ಲಿ ಸೆಣಸಾಡಲು ದಾಖಲೆಯ ಒಟ್ಟು 289 ಕೊಡವ ಕುಟುಂಬ ತಂಡಗಳು ಹೆಸರು ನೋಂದಾಯಿಸಿಕೊಂಡಿವೆ. ಮೂರ್ನಾಡು ವಿದ್ಯಾ ಸಂಸ್ಥೆ ಲಾಲು ಮುದ್ದಯ್ಯ ಕ್ರೀಡಾಂಗಣ, ಸರಕಾರಿ ಶಾಲಾ ಮೈದಾನ ಹಾಗೂ ಅರಮೇರಿ ಕಳಂಚೇರಿ ಶಾಲಾ ಮೈದಾನದಲ್ಲಿ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಆರು ಓವರ್‌ಗಳ ಪಂದ್ಯಾವಳಿ ಇದಾಗಿದ್ದು, ಪ್ರತಿದಿನ ಬೆಳಗ್ಗೆ 8 ರಿಂದ ಸಂಜೆ 5 ರವರೆಗೆ ನಡೆಯಲಿದೆ. ಮಹಿಳಾ ಕ್ರಿಕೆಟ್‌ಗೆ ಈಗಾಗಲೇ 44 ತಂಡಗಳು ಹೆಸರು ನೋಂದಾಯಿಸಿಕೊಂಡಿದ್ದು, ನೋಂದಣಿಗೆ ಏ.4 ರವರೆಗೆ ಅವಕಾಶವಿರುವುದರಿಂದ ಮತ್ತಷ್ಟು ಮಹಿಳಾ ತಂಡ ಬರುವ ನಿರೀಕ್ಷೆ ಇದೆ ಎಂದರು.

ಮೇ 1 ರಂದು ಅಂತಿಮ ಪಂದ್ಯ ನಡೆಯಲಿದ್ದು, ಪುರುಷರ ವಿಭಾಗದಲ್ಲಿ ವಿಜೇತರಿಗೆ 1 ಲಕ್ಷ ನಗದು ಹಾಗೂ ಟ್ರೋಫಿ, ದ್ವಿತೀಯ 75 ಸಾವಿರ ನಗದು ಮತ್ತು ಟ್ರೋಫಿ ನೀಡಲಾಗುವುದು. ಮಹಿಳಾ ವಿಭಾಗದಲ್ಲಿ ವಿಜೇತರಿಗೆ 1 ಲಕ್ಷ ನಗದು ಹಾಗೂ ಟ್ರೋಫಿ, ದ್ವಿತೀಯ 50 ಸಾವಿರ ನಗದು ಮತ್ತು ಟ್ರೋಫಿ ನೀಡಲಾಗುವುದು ಎಂದರು.

**ಉದ್ಘಾಟನೆ**

'ಮುಕ್ಕಾಟಿರ ಕ್ರಿಕೆಟ್ ನಮ್ಮೆ-2026'ನ್ನು ಏ.3 ರಂದು ಬೆಳಗ್ಗೆ 11 ಗಂಟೆಗೆ ಮೂರ್ನಾಡು ವಿದ್ಯಾ ಸಂಸ್ಥೆ ಲಾಲು ಮುದ್ದಯ್ಯ ಕ್ರೀಡಾಂಗಣದಲ್ಲಿ ಕರ್ನಾಟಕ ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಚೆಪ್ಪುಡಿರ ಅರುಣ್ ಮಾಚಯ್ಯ ಉದ್ಘಾಟಿಸಲಿದ್ದಾರೆ. ಅತಿಥಿಗಳಾಗಿ ಅರಮೇರಿ ಕಳಂಚೇರಿ ಮಠದ ಶ್ರೀ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಹಾಗೂ ಹಿರಿಯ ಹಾಕಿಪಟು ಬಾಳೆಯಡ ಕರುಣ್ ಕಾಳಪ್ಪ ಪಾಲ್ಗೊಳ್ಳಲಿದ್ದಾರೆ. ವಿಶೇಷ ಆಹ್ವಾನಿತರಾಗಿ ಆಸ್ಟ್ರೇ ಗ್ರೂಪ್‌ನ ಸಿಎಂಡಿ ಜೆನಿತ್ ಅಯ್ಯಪ್ಪ ಹಾಗೂ ಕೊಡವ ಕ್ರಿಕೆಟ್ ಅಕಾಡೆಮಿಯ ಅಧ್ಯಕ್ಷ ಕೀತಿಯಂಡ ಎನ್.ಕಾರ್ಸನ್ ಕಾರ್ಯಪ್ಪ ಉಪಸ್ಥಿತರಿರುವರು. ಪ್ರದರ್ಶನ ಪಂದ್ಯ ನಾರ್ತ್ ಕೂರ್ಗ್ , ಸೌತ್ ಕೂರ್ಗ್ ತಂಡಗಳ ನಡುವೆ ನಡೆಯಲಿದೆ ಎಂದು ರವಿ ಚಿಯಣ್ಣ, ಭಜನ್ ಬೋಪಣ್ಣ ತಿಳಿಸಿದರು. ಬೇತ್ರಿ ಮುಕ್ಕಾಟಿರ ಕುಟುಂಬದ ಅಧ್ಯಕ್ಷ ಮಧು ದೇವಯ್ಯ , ಮಾಧ್ಯಮ ವಕ್ತಾರ ಉತ್ತಮ್ ಬೋಪಣ್ಣ ಗೋಷ್ಠಿಯಲ್ಲಿದ್ದರು.



ಕಾಸರಗೋಡು ಅಡ್ಕತ್ತಬೈಲು ಹೊಸಮನೆ ಶ್ರೀ ಬ್ರಹ್ಮಬೈದರ್ಕಳ ಗರಡಿಯಲ್ಲಿ ಬುಧವಾರ ರಾತ್ರಿ ನಡೆದ ಬ್ರಹ್ಮಬೈದರ್ಕಳ ದೈವಗಳ ಬ್ರಹ್ಮಬಲಿ, ಬೈದರ್ಕಳ ರಂಗಪ್ರವೇಶ ನಡೆಯಿತು. ಸಹಸ್ರಾರು ಭಕ್ತರು ಪಾಲ್ಗೊಂಡರು.

## ಬಂಟ್ವಾಳದಲ್ಲಿ ವಿಶ್ವ ಆಟಿಸಂ ಜಾಗೃತಿ ದಿನಾಚರಣೆ, ತರಬೇತಿ ಕಾರ್ಯಾಗಾರ

**ಬಂಟ್ವಾಳ:** ವಿಕಾಸಂ ಸೇವಾ ಫೌಂಡೇಶನ್ ವತಿಯಿಂದ ಲಯನ್ಸ್ ಕ್ಲಬ್ ಬಂಟ್ವಾಳ ಮತ್ತು ರೋಟರಿ ಕ್ಲಬ್ ಬಂಟ್ವಾಳ ಟೌನ್ ಸಹಯೋಗದಲ್ಲಿ ಗುರುವಾರ ಬಂಟ್ವಾಳ ಲಯನ್ಸ್ ಸೇವಾ ಮಂದಿರದಲ್ಲಿ ವಿಶ್ವ ಆಟಿಸಂ ಜಾಗೃತಿ ದಿನಾಚಣೆ ನಡೆಯಿತು.

ಕಾರ್ಯಕ್ರಮವನ್ನು ಮಂಗಳೂರು ಸಿವಿಲ್ ಕಾಂಟ್ರಾಕ್ಟರ್ ಅಸೋಸಿಯೇಷನ್ ಅಧ್ಯಕ್ಷ ಮಹಾಬಲ ಕೊಟ್ಟಾರಿ ಉದ್ಘಾಟಿಸಿ ಮಾತನಾಡಿ, ಆಟಿಸಂ ಕುರಿತು ವಿಕಾಸಂ ಸಂಸ್ಥೆ ತೋರುತ್ತಿರುವ ಕಾಳಜಿಯನ್ನು ಶ್ಲಾಘಿಸಿದರು.

ಬಂಟ್ವಾಳ ಸಿಡಿಪಿಒ ಮಮ್ತಾಜ್ ಮಾತನಾಡಿ, ಅಂಗನವಾಡಿಗೆ ಬರುವ ಮಕ್ಕಳ ಸಂಖ್ಯೆ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಹೀಗಾಗಿ ಇಂಥ ಮಾಹಿತಿ ನೀಡುವ ಕಾರ್ಯಕ್ರಮ ಸಾಮಾಜಿಕ ಜವಾಬ್ದಾರಿ ಹೌದು. ಮಕ್ಕಳ ಗುರುತಿಸುವಿಕೆ ಅಷ್ಟೇ ಅಲ್ಲ, ಅವರ ಪೋಷಣೆ ಬಗ್ಗೆ ಹೆತ್ತವರೂ ಅರಿತುಕೊಳ್ಳಬೇಕಾದ ಅಗತ್ಯವಿದೆ. ಇದರ ಕೊಂಡಿಯಾಗಿ ಅಂಗನವಾಡಿ ಕಾರ್ಯಕರ್ತೆಯರು ಕೆಲಸ ಮಾಡುತ್ತಿದ್ದಾರೆ. ಈಗಾಗಲೇ ಹಲವು ಜಾಗೃತಿ



ಕಾರ್ಯಕ್ರಮ ಅಂಗನವಾಡಿ ಕಾರ್ಯಕರ್ತೆಯರು ಆರೋಗ್ಯ ಇಲಾಖೆ ಮಾಡುತ್ತಿದೆ ಎಂದರು.

ಯೇನಪೋಯ ಡೆಂಟಲ್ ಕಾಲೇಜಿನ ಡೀನ್ ಹಾಗೂ ಡೆಂಟಿಸ್ಟ್ರಿ ವಿಭಾಗದ ಪ್ರೊಫೆಸರ್ ಆಗಿರುವ ಡಾ. ಶ್ಯಾಮ್ ಎಸ್. ಭಟ್ ಮಾತನಾಡಿ , ದಿವ್ಯಾಂಗರಿಗೆ ವೆನ್ಲಾಕ್ ಶಿಫಾರಸು ಮೂಲಕ ಉಚಿತವಾಗಿ ಚಿಕಿತ್ಸೆ ದೊರಕುತ್ತದೆ. ಈ ಬಗ್ಗೆ ಮಾಹಿತಿ ನೀಡುವುದು ಅಗತ್ಯವಾಗಿದೆ ಎಂದರು.

ಸಕ್ಷಮ ದ.ಕ ಜಿಲ್ಲಾ ಕಾರ್ಯದರ್ಶಿ ಹರೀಶ್ ಪ್ರಭು, ಸಂಸ್ಕಾರ ಭಾರತಿ ದ.ಕ. ಜಿಲ್ಲಾ ಉಪಾಧ್ಯಕ್ಷ ಅನಿಲ್ ಪಂಡಿತ್, ರೋಟರಿ ಕ್ಲಬ್ ಬಂಟ್ವಾಳ ಟೌನ್ ಮಾಜಿ ಅಧ್ಯಕ್ಷ ನಾರಾಯಣ ಸಿ. ಪೆರ್ನೆ, ವಿಕಾಸಂ ಸೇವಾ ಫೌಂಡೇಶನ್ ಸಹಸಂಸ್ಥಾಪಕ ಧರ್ಮಪ್ರಸಾದ ರೈ ಉಪಸ್ಥಿತರಿದ್ದರು.

ಸಕ್ಷಮ ದಕ್ಷಿಣ ಕನ್ನಡದ ಭಾಸ್ಕರ ಹೊಸಮನೆ, ಲಯನ್ಸ್ ಕ್ಲಬ್‌ನ ಸುನಿಲ್ ಬಿ, ಸಿವಿಲ್ ಕಾಂಟ್ರಾಕ್ಟರ್ಸ್ ಅಸೋಸಿಯೇಶನ್ ಉಪಾಧ್ಯಕ್ಷ ಸತೀಶ್ ಜೋಗಿ, ಅಶೋಕ್ ಕುಲಾಲ್ ಮತ್ತಿತರರು ಈ ಸಂದರ್ಭ ಇದ್ದರು.

ಲಯನ್ಸ್ ಕ್ಲಬ್ ಬಂಟ್ವಾಳ ಅಧ್ಯಕ್ಷ ಎಂ.ರೋಹಿತಾಶ್ವ ಅಧ್ಯಕ್ಷತೆ ವಹಿಸಿದ್ದರು. ವಿಕಾಸಂ ಸಹಸಂಸ್ಥಾಪಕ ಗಣೇಶ್ ಭಟ್ ವಾರಣಾಸಿ ಮಾತನಾಡಿದರು.

ವಿಕಾಸಂ ಸೇವಾ ಫೌಂಡೇಶನ್ ಸಹಸಂಸ್ಥಾಪಕ ಗೋಪಾಲ್ ಗೋವಿಂದತೋಟ ಸ್ವಾಗತಿಸಿದರು. ಮತ್ತೋರ್ವ ಸಹಸಂಸ್ಥಾಪಕರಾದ ಹರೀಶ್ ಜೋಗಿ ವಂದಿಸಿದರು. ಸುರೇಖಾ ಯಳವರ ನಿರೂಪಿಸಿದರು.

'ಆಟಿಸಂ- ವರ್ತಮಾನ - ಭವಿಷ್ಯ' ಎನ್ನುವ ವಿಷಯದ ಕುರಿತು ವಿಚಾರ ಸಂಕಿರಣ ನಡೆಯಿತು. ಯೇನಪೋಯ ಡೆಂಟಲ್ ಕಾಲೇಜಿನ ಡೀನ್ ಹಾಗೂ ಡೆಂಟಿಸ್ಟ್ರಿ ವಿಭಾಗದ ಪ್ರೊ.ಡಾ ಶ್ಯಾಮ್ ಎಸ್. ಭಟ್, ವಿಕಾಸಂ ಸೇವಾ ಫೌಂಡೇಶನ್ ಸಹಸಂಸ್ಥಾಪಕ ಹಾಗೂ ಸಿ ಇ ಓ ಗಣೇಶ್ ಭಟ್ ವಾರಣಾಸಿ ಮಾತನಾಡಿದರು.

**ಅರಿವು ಅಗತ್ಯ**

ಬೆಳೆಯುವ ಹಂತದಲ್ಲೇ ಆಟಿಸಂ ಗುರುತಿಸುವಿಕೆ ಅಗತ್ಯವಾಗಿದ್ದು, ಇದು ಮುಂದಕ್ಕೂ ಸಹಾಯವಾಗುತ್ತದೆ. ಈ ನಿಟ್ಟಿನಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಇದರ ಅರಿವು ಅಗತ್ಯ.

● ಮಮ್ತಾಜ್ , ಬಂಟ್ವಾಳ ಸಿಡಿಪಿಒ

## ಗ್ಯಾಸ್ ಬೆಲೆ ಏರಿಕೆ: ಆಟೋ ಮೀಟರ್ ದರ ಏರಿಸಲು ಜಿಲ್ಲಾಧಿಕಾರಿಗೆ ಮನವಿ

**ಪುತ್ತೂರು:** ಗ್ಯಾಸ್ ಬೆಲೆಯಲ್ಲಿ ವಿಪರೀತ ಏರಿಕೆಯಾಗಿರುವುದರಿಂದ ಆಟೋ ರಿಕ್ಷಾಗಳ ಮೀಟರ್ ದರ ಏರಿಕೆ ಮಾಡುವ ಕುರಿತು ಕ್ರಮ ಕೈಗೊಳ್ಳುವಂತೆ ಬಿಎಂಎಸ್ ಆಟೋ ರಿಕ್ಷಾ ಚಾಲಕ ಮಾಲಕರ ಸಂಘದಿಂದ ದ.ಕ. ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಗಿದೆ.

ಮಧ್ಯಪ್ರಾಚ್ಯ ದೇಶಗಳಲ್ಲಿ ನಡೆಯುತ್ತಿರುವ ಯುದ್ಧದ ಪರಿಣಾಮ ಎಲ್‌ಪಿಜಿ ಗ್ಯಾಸ್ ದರ ವಿಪರೀತ ಏರಿಕೆಯಾಗಿದ್ದು, ಡಿ.1ರಂದು ಇದ್ದ ದರ ರೂ.57.23ರಿಂದ ಏ.1ರಂದು ರೂ.80.30ಕ್ಕೆ ಏರಿಕೆ ಆಗಿದೆ. ಇದರ ನಡುವೆ ಬೇರೆ ಬೇರೆ ಗ್ಯಾಸ್ ಪಂಪ್‌ಗಳಲ್ಲಿ ವಿಭಿನ್ನ ದರ ಪಡೆಯುತ್ತಿದ್ದಾರೆ. ರೂ.72, 80.30, 84.50, 99.90 ದರ ಪಡೆಯುವುದರಿಂದ ಚಾಲಕರು ಜೀವನ ನಡೆಸುವುದು ಕಷ್ಟ ಸಾಧ್ಯ. ಅಲ್ಲದೆ ಬ್ಯಾಂಕು ಸಾಲ, ವಾಹನದ ಬಿಡಿ ಭಾಗ, ಇನ್ಶೂರನ್ಸ್ ಬೆಲೆ ಏರಿಕೆಯಾಗಿದೆ. ಕೂಡಲೇ ನಿಮ್ಮ ಅಧ್ಯಕ್ಷತೆಯಲ್ಲಿ ನಡೆಯುವ ಜಿಲ್ಲಾ ಸಾರಿಗೆ ಪ್ರಾಧಿಕಾರದ ಸಭೆಯನ್ನು



ನಡೆಸಿ ನೂತನ ದರವನ್ನು ಕಿ.ಮೀ. ರೂ. 25, ಮಿನಿಮಮ್ ದರ ರೂ. 50 ದರ ನಿಗದಿಪಡಿಸುವಂತೆ ಪುತ್ತೂರು ಸಹಾಯಕ ಕಮಿಷನರ್ ಸ್ಟೆಲ್ಲಾ ವರ್ಗೀಸ್ ಮೂಲಕ ಮನವಿ ಮಾಡಲಾಗಿದೆ. ಇದೇ ಸಂದರ್ಭ ಪ್ರಾದೇಶಿಕ ಸಾರಿಗೆ ಅಧಿಕಾರಿ, ಪೊಲೀಸ್ ಇಲಾಖೆ ಅಧಿಕಾರಿಗಳಿಗೂ ಮನವಿ ಸಲ್ಲಿಸಲಾಗಿದೆ.

ಸಂಘದ ಅಧ್ಯಕ್ಷ ಹೇಮಂತ್ ಎಸ್., ಪ್ರಧಾನ ಕಾರ್ಯದರ್ಶಿ ಸಚಿನ್ ವಳತ್ತಡ್ಕ, ಕೋಶಾಧಿಕಾರಿ ಶಿವಪ್ರಸಾದ್ ಆಚಾರ್ಯ, ಪದಾಧಿಕಾರಿಗಳಿದ್ದರು.

## ಸುತ್ತಮುತ್ತ

### ಮಣೂರು ಮಹಾಲಿಂಗೇಶ್ವರ ರಥೋತ್ಸವ ಸಂಪನ್ನ

**ಕೋಟ:** ಇಲ್ಲಿನ ಮಣೂರು ಶ್ರೀ ಮಹಾಲಿಂಗೇಶ್ವರ ಪಂಚಮುಖಿ ಹೇರಂಭ ಮಹಾಗಣಪತಿ ದೇಗುಲದ ವಾರ್ಷಿಕ ರಥೋತ್ಸವ ಕಾರ್ಯಕ್ರಮ ಗುರುವಾರ ಸಂಪನ್ನಗೊಂಡಿತು.



ರಥೋತ್ಸವವು ಕೋಟ ರಾಷ್ಟ್ರೀಯ ಹೆದ್ದಾರಿಯ ಮೂಲಕ ಅಮೃತೇಶ್ವರೀ ದೇಗುಲದ ಸಮೀಪ ಆಗಮಿಸಿ ಭಕ್ತ ಸಮುದಾಯ ಮಹಾಲಿಂಗೇಶ್ವರನ ತೇರನೆಳೆದು ಸಂಭ್ರಮಿಸಿದರು. ದೇಗುಲದ ಆಡಳಿತ ಮಂಡಳಿಯ ಅಧ್ಯಕ್ಷ ಸತೀಶ್ ಎಚ್ ಕುಂದರ್ ರಥೋತ್ಸವಕ್ಕೆ ಪೂಜೆ ಸಲ್ಲಿಸಿ, ಚಾಲನೆ ನೀಡಿದರು. ಟ್ರಸ್ಟಿಗಳಾದ ರವಿ ಐತಾಳ್, ಅಶೋಕ್ ಶೆಟ್ಟಿ ದಿವ್ಯ ಪ್ರಭು, ಅಚ್ಯುತ್ ಹಂದೆ, ಸಫಲ ಶೆಟ್ಟಿ, ದಿನೇಶ್ ಆಚಾರ್, ಚಂದ್ರ ಹರ್ತಟ್ಟು, ಜೀರ್ಣೋದ್ಧಾರ ಸಮಿತಿಯ ಪ್ರಮುಖರಾದ ಅರುಣಾಚಲ ಮಯ್ಯ, ವಿಷ್ಣುಮೂರ್ತಿ ಮಯ್ಯ, ಮಹೇಶ್ ಹೊಳ್ಳ, ಗೋಪಾಲ ಪೈ, ರಾಜೇಂದ್ರ ಉರಾಳ ಇದ್ದರು.

### ಕಾರ್ಕಳ ಜ್ಞಾನಸುಧಾ: ಉಚಿತ ಶಿಕ್ಷಣಕ್ಕೆ ಅರ್ಜಿ ಆಹ್ವಾನ

**ಕಾರ್ಕಳ:** ಅಜೆಕಾರ್ ಪದ್ಮಗೋಪಾಲ್ ಎಜ್ಯುಕೇಶನ್ ಟ್ರಸ್ಟ್ ಇದರ ಆಡಳಿತಕ್ಕೆ ಒಳಪಟ್ಟ ಕಾರ್ಕಳ ಜ್ಞಾನಸುಧಾ ಶಿಕ್ಷಣ ಸಂಸ್ಥೆಗಳಲ್ಲಿ ಟ್ರಸ್ಟಿನ ಸಮಾಜಮುಖಿ ಕಾರ್ಯಕ್ರಮದ ಒಂದು ಭಾಗವಾಗಿ ಹಲವಾರು ವರ್ಷಗಳಿಂದ ಕಾರ್ಕಳ ತಾಲೂಕಿನ ಬಡ ಅರ್ಹ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಲಾಗುತ್ತಿದೆ.

**ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ**

ಈ ಬಾರಿಯೂ 2026-27ನೇ ಶೈಕ್ಷಣಿಕ ಸಾಲಿನಲ್ಲಿ ಕಾರ್ಕಳ ಜ್ಞಾನಸುಧಾ ಆಂಗ್ಲಮಾಧ್ಯಮ ಪ್ರೌಢಶಾಲೆಯಲ್ಲಿ 6ರಿಂದ 10ನೇ ತರಗತಿಯವರೆಗೆ ಪ್ರತೀ ತರಗತಿಗೆ 5 ವಿದ್ಯಾರ್ಥಿಗಳಂತೆ ಉಚಿತ ಶಿಕ್ಷಣವನ್ನು ಮತ್ತು ಕಾರ್ಕಳ ಜ್ಞಾನಸುಧಾ ಪದವಿ ಪೂರ್ವಕಾಲೇಜಿನ ವಾಣಿಜ್ಯ ವಿಭಾಗಕ್ಕೆ ದಾಖಲಾತಿ ಬಯಸುವ ಹತ್ತನೇ ತರಗತಿಯಲ್ಲಿ ಶೇ 95ಕ್ಕಿಂತ ಅಧಿಕ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಕಾಲೇಜು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಸಂಪೂರ್ಣ ಉಚಿತ ಶಿಕ್ಷಣ, ಶೇ.90ಕ್ಕಿಂತ ಅಧಿಕ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಕಾಲೇಜು ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ, ಶೇ.85ಕ್ಕಿಂತ ಅಧಿಕ ಅಂಕ ಗಳಿಸುವ ವಿದ್ಯಾರ್ಥಿಗಳಿಗೆ ಶೇ.25ರಷ್ಟು ಕಾಲೇಜು ಶುಲ್ಕದಲ್ಲಿ ವಿನಾಯಿತಿ ನೀಡಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಆಸಕ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಶಾಲಾ ಕಚೇರಿ: 8147454907 ಕಾಲೇಜು ಕಚೇರಿ: 8147454906, 7259500911 ಅನ್ನು ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

### ಗಂಗೊಳ್ಳಿ ದೇವಸ್ಥಾನದಲ್ಲಿ ಹನುಮ ಜಯಂತಿ, ವಿಶೇಷ ಪೂಜೆ

**ಕುಂದಾಪುರ:** ಗಂಗೊಳ್ಳಿಯ ಪೇಟೆ ಶ್ರೀ ವಿಠಲ ರಖುಮಾಯಿ ತಥಾ ಮುಖ್ಯಪ್ರಾಣ ದೇವಸ್ಥಾನದಲ್ಲಿ ಶ್ರೀ ಹನುಮ ಜಯಂತಿ ಕಾರ್ಯಕ್ರಮ ಗುರುವಾರ ನಡೆಯಿತು. ಶ್ರೀ ಆಂಜನೇಯ ದೇವರಿಗೆ



ಪವಮಾನ ಅಭಿಷೇಕ, ಪಂಚಾಮೃತ ಅಭಿಷೇಕ, ರಂಗಪೂಜೆ, ವಿಶೇಷ ಪೂಜೆ ಪುನಸ್ಕಾರಗಳು, ಮಧ್ಯಾಹ್ನ ಮಹಾಮಂಗಳಾರತಿ, ಪ್ರಸಾದ ವಿತರಣೆ, ಅನ್ನಸಂತರ್ಪಣೆ ನಡೆಯಿತು. ಸಂಜೆ ಪಲ್ಲಕ್ಕಿ ಉತ್ಸವ ಸೇವೆ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ದೇವಳದ ಪ್ರಧಾನ ಅರ್ಚಕ ಜಿ.ಮೋಹನದಾಸ ಭಟ್ ಮತ್ತು ಜಿ. ಪ್ರದೀಪ ಭಟ್ ನೇತೃತ್ವದಲ್ಲಿ ನಡೆಯಿತು. ಸೇವಾದಾರ ಕುಟುಂಬಸ್ಥರು, ಆಡಳಿತ ಮಂಡಳಿ ಸದಸ್ಯರು, ಪುರೋಹಿತರು, ಊರಿನ ಹತ್ತು ಸಮಸ್ತರು, ಸಮಾಜ ಬಾಂಧವರು ಉಪಸ್ಥಿತರಿದ್ದರು.

## ಮೊದಲನೇ ಪುಟದಿಂದ

### ದುಪ್ಪಟ್ಟು!

'ವಾಣಿಜ್ಯ ಸಿಲಿಂಡರ್ ಬೆಲೆ ನಾಲ್ಕೂವರೆ ಸಾವಿರದವರೆಗೆ ಏರಿಕೆಯಾಗಿದ್ದು, ಹೋಟೆಲ್ ನಡೆಸುವುದೇ ಕಷ್ಟಕರವಾಗಿ ಪರಿಣಮಿಸಿದೆ.

**ಅಡುಗೆ ಅನಿಲ ವಾಣಿಜ್ಯಕ್ಕೆ ಬಳಕೆ?**

ಒಂದೆಡೆ ಅಡುಗೆ ಅನಿಲ ಸಿಲಿಂಡರ್‌ಗಳ ಸಮಸ್ಯೆ ಇಲ್ಲ ಎಂದು ಜಿಲ್ಲಾಡಳಿತ ಹೇಳಿಕೊಳ್ಳುತ್ತಾ ಬಂದಿದ್ದರೂ ಕೂಡ ಏಜೆನ್ಸಿಗಳು ಈ ಸಿಲಿಂಡರ್‌ಗಳನ್ನು ವಾಣಿಜ್ಯ ಬಳಕೆದಾರರಿಗೆ ವಿತರಿಸುವ ಆರೋಪ ಕೇಳಿಬಂದಿದೆ. ಲಾಭಗಳಿಸುವ ಉದ್ದೇಶದಿಂದ ಕೆಲವು ಏಜೆನ್ಸಿಗಳು ಅಡುಗೆ ಅನಿಲ ಸಿಂಡರ್‌ಗಳನ್ನು ಮಾರಾಟ ಮಾಡುತ್ತಿರುವುದರಿಂದ ಜನಸಾಮಾನ್ಯರ ಮೇಲೆ ಹೊರೆತ ಬೀಳುತ್ತಿದೆ. ಒಂದು ಗ್ಯಾಸ್ ಬುಕ್ ಮಾಡಿ ಕನಿಷ್ಠ 25 ದಿನ ಕಳೆದ ಬಳಿಕ ಮತ್ತೊಂದು ಸಿಲಿಂಡರ್‌ಗೆ ಬುಕ್ಕಿಂಗ್ ಅವಕಾಶವಿದ್ದರೂ ಗ್ಯಾಸ್ ಸಿಗದ ಜನತೆ ಸಮಸ್ಯೆ ಎದುರಿಸುವಂತಾಗಿದೆ

**ದರ ಏರಿಕೆಯ ಬಿಸಿ**

ಹೊಟೇಲ್‌ಗಳಿಗೆ ಹೋದರೆ ತಿಂಡಿ ತಿನಿಸುಗಳ ದರದಲ್ಲೂ ಏರಿಕೆ. ಅಡುಗೆ ಅನಿಲ ದರದಲ್ಲೂ ಏರಿಕೆ ಇದು ಜನತೆಯನ್ನು ಕಂಗಾಲು ಮಾಡಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್‌ಪಿಜಿ ಪೂರೈಕೆಯಲ್ಲಿ ಉಂಟಾಗಿರುವ ವ್ಯತ್ಯಯವನ್ನು ಬಂಡವಾಳ ಮಾಡಿಕೊಂಡಿರುವ ಕೆಲವು ಏಜೆನ್ಸಿಗಳು ಜಿಲ್ಲೆಯಲ್ಲಿ 'ಕೃತಕ ಕೊರತೆ' ಸೃಷ್ಟಿಸಿರುವುದು ಜನತೆಯ ಆಕ್ರೋಶಕ್ಕೆ ಕಾರಣವಾಗಿದೆ.

---

#### ಕುಂದಾಪುರದಲ್ಲಿ ಉಡುಪಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಉದ್ಘಾಟಿಸಿ ಶಾಸಕ ಕೊಡ್ಗಿ ಕಿವಿಮಾತು

# ಉದ್ಯೋಗ ಮೇಳದಲ್ಲಿ ದೊರೆತ ಅವಕಾಶ ಕಡೆಗಣಿಸದಿರಿ

**ಕುಂದಾಪುರ:** ಉದ್ಯೋಗದಾತರೇ ಉದ್ಯೋಗಾಕಾಂಕ್ಷಿಗಳ ಬಳಿಗೆ ಬಂದಾಗ ಅದರ ಸಂಪೂರ್ಣ ಪ್ರಯೋಜ ಪಡೆದುಕೊಳ್ಳಬೇಕು. ಉದ್ಯೋಗ ಮೇಳಕ್ಕೆ ಬಂದಂತಹ ಕೆಲವರಿಗೆ ಕೆಲಸ ಸಿಕ್ಕಿದರೂ, ಆ ಬಳಿಕ ಕೆಲಸಕ್ಕೆ ಹೋಗುದಿಲ್ಲ. ಉದ್ಯೋಗ ಮೇಳದ ಪ್ರಯೋಜವನ್ನು ಸಂಪೂರ್ಣ ಉಪಯೋಗಿಸಿಕೊಳ್ಳಬೇಕು. ಯಾರೂ ಇದನ್ನು ಲಘುವಾಗಿ ಪರಿಗಣಿಸಬಾರದು. ಸುಮಾರು 20 ವಲಯಗಳಿಂದ 83ಕ್ಕೂ ಮಿಕ್ಕಿ ಕಂಪೆನಿಗಳು ಈ ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿದ್ದು ಸುಮಾರು 2 ಸಾವಿರಕ್ಕೂ ಮಿಕ್ಕಿ ಉದ್ಯೋಗಾಕಾಂಕ್ಷಿಗಳು ನೋಂದಣಿ ಮಾಡಿಸಿಕೊಂಡಿರುವುದು ಉತ್ತಮ ಬೆಳವಣಿಗೆ ಎಂದು ಕುಂದಾಪುರ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ, ಉಡುಪಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ತಾಲೂಕು ಪಂಚಾಯತ್ ಕುಂದಾಪುರ ಇವರ ಆಶ್ರಯದಲ್ಲಿ ಭಂಡಾರ್‌ಕಾರ್ಸ್ ಕಾಲೇಜು ಕುಂದಾಪುರ ಸಹಯೋಗದೊಂದಿಗೆ




ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಕುಂದಾಪುರದ ಭಂಡಾರ್ ಕಾರ್ಸ್ ಕಾಲೇಜಿನಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಉದ್ಯೋಗ ಮೇಳ- 2026ನ್ನು ಗುರುವಾರ ಉದ್ಘಾಟಿಸಿ ಅವರು ಮಾತನಾಡಿದರು.

**ಉದ್ಯೋಗಾವಕಾಶ ಹೆಚ್ಚಾಗಲಿ**

ಬೈಂದೂರು ಶಾಸಕ ಗುರುರಾಜ್ ಶೆಟ್ಟಿ ಗಂಟಿಹೊಳೆ ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸಬೇಕೆಂಬ ಉದ್ದೇಶದಿಂದ ಜಿಲ್ಲಾ ಮಟ್ಟದಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗುತ್ತಿದೆ. ಉದ್ಯೋಗ ಸೃಷ್ಟಿಸುವ ಸಂಸ್ಥೆಗಳು ಕನಿಷ್ಠ ಉದ್ಯೋಗ ಮೇಳಕ್ಕೆ ಸಹಕಾರ ನೀಡುತ್ತಿರುವುದು ಖುಷಿಯ ವಿಷಯ. ಕಾರ್ಯಕ್ರಮಗಳ ಮೂಲಕ ಉದ್ಯೋಗ ಸೃಷ್ಟಿಸುವ ಕೆಲಸ ಆಗಬೇಕು. ಈ ಉದ್ಯೋಗ ಮೇಳದ ಫಲಿತಾಂಶ ಹೆಚ್ಚಾಗಬೇಕು, ನಮ್ಮೂರಿಗೆ ಉದ್ಯೋಗಾವಕಾಶಗಳು ಹೆಚ್ಚಾಗಬೇಕು ಎಂದರು.

> **ಉದ್ಯೋಗ ಮೇಳ ಯಶಸ್ವಿ**
>
> ಗ್ರಾಮಾಂತರ ಮಟ್ಟದ ಯುವಕರಿಗೆ ಉದ್ಯೋಗ ಸಿಗಬೇಕು ಎಂಬ ಉದ್ದೇಶದಿಂದ ಮೇಳ ಆಯೋಜಿಲಸಾಗಿದೆ. ಇದು ಯಶಸ್ವಿಯಾಗಿದ್ದು, ಅನೇಕರಿಗೆ ಉದ್ಯೋಗ ಲಭಿಸಿದೆ.
>
> ● ಗುರುರಾಜ್ ಶೆಟ್ಟಿ ಗಂಟಿಹೊಳೆ

ಕುಂದಾಪುರ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಕಾನ್ಕಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪ್ರತೀಕ್ ಬಾಯಲ್, ಮುಖ್ಯ ಯೋಜನಾಧಿಕಾರಿ ಉದಯ ಶೆಟ್ಟಿ, ಉಡುಪಿ ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕ ವಿಜಯ ಕುಮಾರ್, ಕುಂದಾಪುರ ತಾಪಂ ಇಒ ಮಹೇಶ ಕೆ.ಜಿ., ಬೈಂದೂರು ತಾಪಂ. ಇಒ ರಾಮದಾಸ,

> **2000ಕ್ಕೂ ಅಧಿಕ ಮಂದಿ ಭಾಗಿ**
>
> ಉದ್ಯೋಗ ಮೇಳದಲ್ಲಿ ಸುಮಾರು 20 ವಲಯಗಳಿಂದ 83ಕ್ಕೂ ಮಿಕ್ಕಿ ಕಂಪೆನಿಗಳು ಪಾಲ್ಗೊಂಡಿದ್ದು, 2 ಸಾವಿರಕ್ಕೂ ಮಿಕ್ಕಿ ಉದ್ಯೋಗಾಕಾಂಕ್ಷಿಗಳು ಉದ್ಯೋಗ ಮೇಳದ ಪ್ರಯೋಜನ ಪಡೆದುಕೊಂಡರು. ಆಯ್ಕೆಯಾದ ಉದ್ಯೋಗಾಕಾಂಕ್ಷಿಗಳಿಗೆ ಪ್ರಮಾಣಪತ್ರ ವಿತರಿಸಲಾಯಿತು.

ಕಾಲೇಜಿನ ಆಡಳಿತ ಮಂಡಳಿ ಉಪಾಧ್ಯಕ್ಷ ಕೆ. ಶಾಂತಾರಾಮ ಪ್ರಭು, ಆಡಳಿತ ಮಂಡಳಿ ಕಾರ್ಯದರ್ಶಿ ಯು.ಎಸ್.ಶೆಣೈ, ಪದವಿ ಕಾಲೇಜಿನ ಪ್ರಾಂಶುಪಾಲ ಡಾ. ಶುಭಕರಾಚಾರಿ, ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಡಾ. ಜಿ.ಎಂ. ಗೊಂಡ, ತಾಲೂಕು ಸಂಜೀವಿನ ಒಕ್ಕೂಟದ ಮೈತ್ರಿ ಭಟ್ ಮೊದಲಾದವರು ಇದ್ದರು. ಪಿಡಿಒ ಸತೀಶ್ ವಡ್ಡರ್ಸೆ ಸ್ವಾಗತಿಸಿ, ರೇಡಿಯೋ ಕುಂದಾಪ್ರದ ಜ್ಯೋತಿ ಸಾಲಿಗ್ರಾಮ ವಂದಿಸಿದರು.

---

## ಬ್ರಹ್ಮಾವರ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನಲ್ಲಿ ವಾಣಿಜ್ಯ ಉತ್ಸವ



**ಬ್ರಹ್ಮಾವರ:** ಇಲ್ಲಿನ ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ 'ವಾಣಿಜ್ಯ ಉತ್ಸವ ಅರ್ಥ ಮಂಥನ್ 2025-26' ಅನ್ನು ಆಚರಿಸಲಾಯಿತು.

ರಾಷ್ಟ್ರೋತ್ಥಾನ ಪದವಿ ಪೂರ್ವ ಕಾಲೇಜ್ ಹಾಗೂ ವಿದ್ಯಾಕೇಂದ್ರಗಳ ಸಂಚಾಲನಾ ಸಮಿತಿಯ ಕಾರ್ಯದರ್ಶಿ ರಿಶಿರಾಜ್, ವಾಣಿಜ್ಯ ಉತ್ಸವ ಉದ್ಘಾಟಿಸಿ, ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ಯಾವುದೇ ಒಂದು ವ್ಯವಹಾರ ಮಾರುಕಟ್ಟೆಯಲ್ಲಿ ಯಶಸ್ಸನ್ನು ಸಾಧಿಸಬೇಕಾದರೆ ನಮ್ಮ ಉತ್ಪನ್ನ ಉತ್ತಮವಾಗಿರಬೇಕು. ಉತ್ಪನ್ನ ಉತ್ತಮವಾಗಿದ್ದಾಗ ಮಾತ್ರ ಮಾರುಕಟ್ಟೆಯ ಸ್ಪರ್ಧೆಗಳನ್ನುಎದುರಿಸಲುಸಾಧ್ಯವಾಗುತ್ತದೆ. ವ್ಯವಹಾರದಲ್ಲಿ ಪದವಿ, ವಿದ್ಯೆಗಿಂತಲೂ ಕೌಶಲ್ಯವೇ ಮುಖ್ಯವಾಗುತ್ತದೆ, ಎಂದು ವಿದ್ಯಾರ್ಥಿಗಳಿಗೆ ವ್ಯಾವಹಾರಿಕ ಕೌಶಲ್ಯಗಳ ಬಗ್ಗೆ ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ರಾಷ್ಟ್ರೋತ್ಥಾನ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಭಾಗ್ಯಶ್ರೀ ಐತಾಳ್ ಅಧ್ಯಕ್ಷತೆ ವಹಿಸಿದ್ದರು.

ಸಭೆಯಲ್ಲಿ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದ ಪ್ರಾಂಶುಪಾಲೆ ಪೂರ್ಣಿಮಾ ಎಸ್‌ಡಿ, ರಾಷ್ಟ್ರೋತ್ಥಾನ ಸಮೂಹದ ಆಡಳಿತಾಧಿಕಾರಿ ಸುರೇಶ್ ಹೆಜಮಾಡಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಕಾವ್ಯಾ ಪೈ ಸ್ವಾಗತಿಸಿ, ವಿದ್ಯಾರ್ಥಿ ವೈಭವ್ ಕೊಡವೂರು ವಂದಿಸಿದರು. ವಿದ್ಯಾರ್ಥಿನಿ ಮಾನ್ಯಾ ಎ. ಕಾಂಚನ್ ನಿರೂಪಿಸಿದರು. ವಾಣಿಜ್ಯ ವಿಭಾಗದ ಉಪನ್ಯಾಸಕ ಅಂಬಿಕಾ ರಾವ್, ಶರತ್ ರಾವ್, ಪಲ್ಲವಿ, ಸಂಗೀತಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಸಭಾ ಕಾರ್ಯಕ್ರಮದ ಬಳಿಕ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆ ಆಯೋಜಿಸಿ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

## ಮೂರು ದಿನಗಳ 'ಕ್ರಿಯೇಟಿವ್ ಚಿಲಿಪಿಲಿ' ಬೇಸಿಗೆ ಶಿಬಿರದ ಉದ್ಘಾಟನೆ



**ಕಾರ್ಕಳ:** ಕಾರ್ಕಳದ ಪ್ರತಿಷ್ಠಿತ ಕ್ರಿಯೇಟಿವ್ ಶಿಕ್ಷಣ ಸಂಸ್ಥೆಯ ಕ್ರಿಯೇಟಿವ್ ಗ್ಲೋಬಲ್ ಸ್ಕೂಲ್ ಆಶ್ರಯದಲ್ಲಿ 'ಕ್ರಿಯೇಟಿವ್ ಚಿಲಿಪಿಲಿ-2026' ಮೂರು ದಿನಗಳ ಬೇಸಿಗೆ ಶಿಬಿರ ಹಮ್ಮಿಕೊಳ್ಳಲಾಗಿದೆ.

ಸಂಸ್ಥೆಯ ಸಹ ಸಂಸ್ಥಾಪಕ ಅಶ್ವತ್ ಎಸ್ .ಎಲ್. ಶಿಬಿರ ಉದ್ಘಾಟಿಸಿ, ನಾಲ್ಕು ಗೋಡೆಗಳ ಮಧ್ಯೆ ನಡೆಯುವ ಪಾಠ ಪ್ರವಚನಗಳ ಜೊತೆ ಬದುಕಿನ ಮೌಲ್ಯ ಕಲಿಸಬೇಕು. ಮಕ್ಕಳು ಬಾಲ್ಯವನ್ನು ಮೊಬೈಲ್‌ನಿಂದ ಕಳೆದುಕೊಳ್ಳಬಾರದು. ಈ ಸದಾಶಯ ಇಟ್ಟುಕೊಂಡು ಈ ಚಿಲಿಪಿಲಿ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ ಎಂದರು.

**ಗ್ಲೋಬಲ್ ಸ್ಕೂಲ್ ಆರಂಭ**

ಕ್ರಿಯೇಟಿವ್ ಸಂಸ್ಥೆಯು ಮುಂದೆ ಜಾಗತಿಕ ಮಟ್ಟದಲ್ಲಿ ಸ್ಪರ್ಧೆ ಎದುರಿಸಲು ಮತ್ತು ಸಂಸ್ಕೃತಿ, ದೇಶಾಭಿಮಾನವನ್ನು ಮಕ್ಕಳಲ್ಲಿ ಬೆಳೆಸುವ ನಿಟ್ಟಿನಲ್ಲಿ ಕ್ರಿಯೇಟಿವ್ ಗ್ಲೋಬಲ್ ಸ್ಕೂಲ್ ಅನ್ನು ಪ್ರಾರಂಭಿಸುತ್ತಿದ್ದೇವೆ. ಇದರ ಮೊದಲ ಹೆಜ್ಜೆಯಾಗಿ ಬೇಸಿಗೆ ಶಿಬಿರ ಹಮ್ಮಿಕೊಂಡಿದ್ದೇವೆ ಎಂದು ನುಡಿದರು.

ಸಹ ಸಂಸ್ಥಾಪಕ ಡಾ. ಗಣನಾಥ ಶೆಟ್ಟಿ ಮಾತನಾಡಿ, ಇಂದು ಒತ್ತಡ ಅನ್ನುವುದು ಕೇವಲ ಪಿಯುಸಿ ಮಕ್ಕಳಿಗೆ ಮಾತ್ರವಲ್ಲ, ಬಾಲ್ಯದಲ್ಲಿಯೇ ಪ್ರಾರಂಭವಾಗುತ್ತದೆ. ಇಂತಹ ಒತ್ತಡಗಳಿಂದ ಹೊರಬಂದು ಈ ಶಿಬಿರವು ಅತ್ಯಂತ ಮಹತ್ವದ್ದಾಗಿದೆ. ಮಕ್ಕಳ ಬೌದ್ಧಿಕ ಬೆಳವಣಿಗೆಗೆ ಈ ಶಿಬಿರವು ಒಳ್ಳೆಯ ಕಾರ್ಯಕ್ರಮ ಎಂದು ನುಡಿದರು.

ಸಹ ಸಂಸ್ಥಾಪಕ ಅಮೃತ್ ರೈ ಯು. ಮಾತನಾಡಿದರು. ಈ ಸಂದರ್ಭ ಸಹ ಸಂಸ್ಥಾಪಕ ಆದರ್ಶ ಎಂ. ಕೆ. ಚಿತ್ತಾರ ಸಂಸ್ಥೆಯ ಮುಖ್ಯಸ್ಥ ಸುಚೇಂದ್ರ ಕಾರ್ಕಳ, ಕ್ರಿಯೇಟಿವ್ ಗ್ಲೋಬಲ್ ಸ್ಕೂಲಿನ ಪಿಆರ್‌ಒ ಪ್ರಜ್ಞಾ ಇದ್ದರು. ಕ್ರಿಯೇಟಿವ್ ಗ್ಲೋಬಲ್ ಸ್ಕೂಲಿನ ಪ್ರಾಂಶುಪಾಲ ಅಕ್ಷತಾ ಶೆಣೈ ಕಾರ್ಯಕ್ರಮ ನಿರ್ವಹಿಸಿದರು. ಶಿಬಿರದಲ್ಲಿ 85ಕ್ಕೂ ಅಧಿಕ ಮಕ್ಕಳು, ಪೋಷಕರು ಭಾಗವಹಿಸಿದ್ದರು. ವಿವಿಧ ಮನೋರಂಜನಾ ಚಟುವಟಿಕೆಗಳು ಹಮ್ಮಿಕೊಳ್ಳಲಾಯಿತು.

## ಪಲಿಮಾರು ಮಠದಲ್ಲಿ ಹನುಮ ಜಯಂತಿ, ವಿಶೇಷ ಪ್ರಶಸ್ತಿ ಪ್ರದಾನ



**ಪಡುಬಿದ್ರಿ:** ಶ್ರೀರಾಮ ದೇವರ ಅನುಗ್ರಹದಿಂದ ಚಿರಂಜೀವಿಯಾಗಿರುವ ಹನುಮಂತ ದೇವರ ಆರಾಧನೆಯಿಂದ ಬದುಕು ಹಸನಾಗುತ್ತದೆ ಎಂದು ಪಲಿಮಾರು ಮಠದ ವಿದ್ಯಾಧೀಶತೀರ್ಥ ಶ್ರೀ ಹೇಳಿದರು.

ಗುರುವಾರ ಪಲಿಮಾರು ಮಠದಲ್ಲಿ ನಡೆದ ಹನುಮ ಜಯಂತಿ ಮಹೋತ್ಸವದಲ್ಲಿ ಆಶೀರ್ವಚನ ನೀಡಿದರು.

ಪಲಿಮಾರು ಮಠದ ಕಿರಿಯ ಯತಿ ಶ್ರೀ ವಿದ್ಯಾರಾಜೇಶ್ವರತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ, ಇಡೀ ಜಗತ್ತಿಗೆ ಗುರುವಾದ ವಾಯುದೇವರನ್ನು ವಿಶೇಷವಾಗಿ ಉಪಾಸನೆ ಮಾಡಬೇಕು ಎಂದು ಹೇಳಿದರು.

ಶ್ರೀ ಭೀಮನಕಟ್ಟೆ ಮಠದ ಶ್ರೀ ರಘುವರೇಂದ್ರತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿ, ಮನುಷ್ಯರ ಬದುಕು ಹೇಗಿರಬೇಕೆಂದು ತಿಳಿಸಿಕೊಡಲಿಕ್ಕಾಗಿ ಭಗವಂತನು ಮನುಷ್ಯ ರೂಪದಲ್ಲಿ ಅವತಾರ ತಳೆದಿದ್ದಾರೆ. ಆ ಜೀವನ ಶಿಕ್ಷಣವೇ ನಮಗೆ ಮಾದರಿ ಎಂದರು.

ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದರ ಸ್ಮರಣಾರ್ಥವಾಗಿ ಯಕ್ಷಗಾನ ಕ್ಷೇತ್ರದ ಸಾಧಕ ಪುತ್ತಿಗೆ ರಘುರಾಮ ಹೊಳ್ಳರಿಗೆ ಯಕ್ಷ ವಿದ್ಯಾಮಾನ್ಯ ಮತ್ತು ಪಾಕಶಾಸ್ತ್ರ ತಜ್ಞ, ಪೆರ್ಣಂಕಿಲ ಯಜ್ಞನಾರಾಯಣ ಭಟ್ ಅವರಿಗೆ ಪಲಿಮಾರು ಶ್ರೀಗಳು ಪಾಕ ವಿದ್ಯಾಮಾನ್ಯ ಪ್ರಶಸ್ತಿ ಪ್ರದಾನಿಸಿದರು. ವಾಣಿಶ್ರೀರಘುರಾಮ ಹೊಳ್ಳ, ಅಹಲ್ಯ ಯಜ್ಞನಾರಾಯಣ ಭಟ್ ಇದ್ದರು. ಯಕ್ಷಗಾನ ಕಲಾರಂಗ ಕಾರ್ಯದರ್ಶಿ ಮುರಳಿ ಕಡೆಕಾರು ಅಭಿನಂದನಾ ಭಾಷಣ ಮಾಡಿದರು. ಶಂಕರನಾರಾಯಣ ಭಟ್ ಸನ್ಮಾನ ಪತ್ರ ವಾಚಿಸಿದರು. ಸುದರ್ಶನ ಸಾಮಗ ಸ್ವಾಗತಿಸಿ, ನಿರೂಪಿಸಿದರು.

---

## ಏ.6ರಂದು ಎಲ್ಲಾ ಬೂತ್‌ನಲ್ಲಿ ಬಿಜೆಪಿ ಸ್ಥಾಪನಾ ದಿನ ಆಚರಣೆ: ನವೀನ್ ಶೆಟ್ಟಿ




**ಉಡುಪಿ:** ರಾಷ್ಟ್ರ ನಿರ್ಮಾಣದಲ್ಲಿ ಸಮರ್ಪಿಸಿಕೊಂಡಿರುವ ವಿಶ್ವದ ಅತೀ ದೊಡ್ಡ ರಾಜಕೀಯ ಪಕ್ಷ ಭಾರತೀಯ ಜನತಾ ಪಾರ್ಟಿಯ ಸ್ಥಾಪನಾ ದಿನವನ್ನು ಏ.6ರಂದು ಜಿಲ್ಲೆಯಾದ್ಯಂತ ಸಂಭ್ರಮದಿಂದ ಆಚರಿಸಬೇಕು ಎಂದು ಬಿಜೆಪಿ ಉಡುಪಿ ಜಿಲ್ಲಾಧ್ಯಕ್ಷ ಕುತ್ಯಾರು ನವೀನ್ ಶೆಟ್ಟಿ ಕರೆ ನೀಡಿದರು.

ಅವರು ಜಿಲ್ಲಾ ಕಚೇರಿಯಲ್ಲಿ ನಡೆದ ಬಿಜೆಪಿ ಜಿಲ್ಲಾ ಕಾರ್ಯ ತಂಡದ ಸಭೆಯ ಅಧ್ಯಕ್ಷತೆ ವಹಿಸಿ, ನೂತನ ಮಂಗಳೂರು ವಿಭಾಗ ಪ್ರಭಾರಿ ಭಾರತೀಶ್ ಅವರನ್ನು ಜಿಲ್ಲಾ ಬಿಜೆಪಿ ವತಿಯಿಂದ ಶಾಲು ಹೊದೆಸಿ ಅಭಿನಂದಿಸಿ ಮಾತನಾಡಿದರು.

ಏ.6ರಂದು ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತರೂ ತಮ್ಮ ಮನೆಯ ಮೇಲೆ ಬಿಜೆಪಿ ಧ್ವಜವನ್ನು ಹಾರಿಸುವ ಜೊತೆಗೆ ಜಿಲ್ಲೆಯ ಎಲ್ಲಾ 1,112 ಬೂತ್‌ಗಳ ಅಧ್ಯಕ್ಷರು ತಮ್ಮ ಮನೆಯ ಮೇಲೆ ಪಕ್ಷದ ಧ್ವಜವನ್ನು ಹಾರಿಸಿ, ಬೂತ್ ಸಮಿತಿ ಸಭೆಯನ್ನು ಆಯೋಜಿಸಬೇಕು ಎಂದರು.

ಅದೇ ರೀತಿ ಏ.14ರಂದು ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಜಯಂತಿಯನ್ನು ಜಿಲ್ಲೆಯ ಎಲ್ಲಾ ಬೂತ್‌ಗಳಲ್ಲಿ ವ್ಯವಸ್ಥಿತವಾಗಿ ಆಚರಿಸುವ ಜೊತೆಗೆ ಅಂಬೇಡ್ಕರ್ ಅವರ ಪ್ರತಿಮೆಗಳ ಸ್ವಚ್ಛತೆ ಮತ್ತು ಹಾರಾರ್ಪಣೆಗೆ ಆದ್ಯತೆ ನೀಡಬೇಕು ಎಂದರು. ಮಂಗಳೂರು ವಿಭಾಗ ಪ್ರಭಾರಿ ಭಾರತೀಶ್ ಕೊಡಗು, ವಿವಿಧ ವಿಚಾರಗಳ ಕುರಿತು ಮಾತನಾಡಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶ್ರೀಕಾಂತ್ ನಾಯಕ್, ಪಕ್ಷದ ಪ್ರಮುಖರು ಉಪಸ್ಥಿತರಿದ್ದರು.

ಜಿಲ್ಲಾ ಪ್ರಕೋಷ್ಠಗಳ ಸಹ ಸಂಯೋಜಕ ಶಂಕರ ಅಂಕದಕಟ್ಟೆ ವಂದೇ ಮಾತರಂ ಹಾಡಿದರು. ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕಿರಣ್ ಕುಮಾರ್ ಬೈಲೂರು ಸ್ವಾಗತಿಸಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನಕರ ಶೆಟ್ಟಿ ಹೆರ್ಗ ಕಾರ್ಯಕ್ರಮ ನಿರೂಪಿಸಿ, ಜಿಲ್ಲಾ ಕಾರ್ಯದರ್ಶಿ ಉಮೇಶ್ ಎ. ನಾಯ್ಕ್ ಕಾರ್ಯಕ್ರಮ ವಂದಿಸಿದರು.

## ಏ.23-ಮೇ 5ರ ವರೆಗೆ ಪಡುಬಿದ್ರಿ ದೇವಳದ ಬ್ರಹ್ಮಕಲಶ: ಚಪ್ಪರ ಮುಹೂರ್ತ



**ಪಡುಬಿದ್ರಿ:** ಇತಿಹಾಸಪ್ರಸಿದ್ಧಪಡುಬಿದ್ರಿಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವರ ಪುನಃ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವದ ಪೂರ್ವಭಾವಿಯಾಗಿ ಗುರುವಾರ ಬೆಳಿಗ್ಗೆ ಚಪ್ಪರ ಮುಹೂರ್ತ ನೆರವೇರಿತು.

ದೇವಸ್ಥಾನದ ತಂತ್ರಿ ವೇದಮೂರ್ತಿ ಕೊಡವೂರು ಕಂಬಳಕಟ್ಟ ರಾಧಾಕೃಷ್ಣ ಉಪಾಧ್ಯಾಯರ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳು ಸಂಪನ್ನಗೊಂಡಿತು.

**11 ತಿಂಗಳಲ್ಲಿ ಜೀರ್ಣೋದ್ಧಾರ**

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ದೇವಳದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಬೆಂಗಳೂರು ಉದ್ಯಮಿ ಡಾ. ಪ್ರಕಾಶ್ ಶೆಟ್ಟಿ ಜೀರ್ಣೋದ್ಧಾರ ಕಾರ್ಯವು 11 ತಿಂಗಳ ಒಳಗಾಗಿ ಮುಕ್ತಾಯದ ಹಂತದಲ್ಲಿದೆ. ಪುನಃ ಪ್ರತಿಷ್ಠೆ ಹಾಗೂ ಬ್ರಹ್ಮಕಲಶೋತ್ಸವು ಏ.23ರಿಂದ ಮೇ 5ರವರೆಗೆ 12 ದಿನಗಳ ಕಾಲ ವಿಜೃಂಭಣೆಯಿಂದ ಜರಗಲಿದ್ದು ನಾನಾ ಭಾಗಗಳಿಂದ ಲಕ್ಷಾಂತರ ಭಕ್ತರು ಆಗಮಿಸುವ ನಿರೀಕ್ಷೆಯಿದೆ ಎಂದರು.

ಈ ಸಂದರ್ಭ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲದ ಅನುವಂಶಿಕ ಮೊಕ್ತೇಸರರಾದ ರತ್ನಾಕರ ರಾಜ್ ಅರಸ್ ಕಿನ್ನಿಕ್ಕ ಬಲ್ಲಾಳರು ಮತ್ತು ಪಡುಬಿದ್ರಿ ಪೇಟೆಮನೆ ಭವಾನಿ ಶಂಕರ ಹೆಗ್ಡೆ, ಜೀರ್ಣೋದ್ಧಾರ ಸಮಿತಿಯ ಉಪಾಧ್ಯಕ್ಷ ಪಿ. ರವೀಂದ್ರನಾಥ ಜಿ. ಹೆಗ್ಡೆ ಪ್ರಧಾನ ಕಾರ್ಯದರ್ಶಿ ಮುರಳೀನಾಥ ಶೆಟ್ಟಿ ದೇಗುಲದ ಕಾರ್ಯನಿರ್ವಹಣಾಧಿಕಾರಿ ಕೆ. ರಾಜಗೋಪಾಲ ಉಪಾಧ್ಯಾಯ, ನವೀನ್ ಚಂದ್ರ ಜೆ. ಶೆಟ್ಟಿ ಪಲ್ಲವಿ ಸಂತೋಷ್ ಶೆಟ್ಟಿ ಪುಚ್ಚೊಟ್ಟು ಬೀಡು ಸೀತಾರಾಮ ಶೆಟ್ಟಿ ಇನ್ನಾ ಕುರ್ಕಿಲ ಬೆಟ್ಟು ಸಂತೋಷ್ ಶೆಟ್ಟಿ ವೈ. ಎನ್ ರಾಮಚಂದ್ರ ರಾವ್, ನವೀನ್ ಎನ್ ಶೆಟ್ಟಿ ವೈ. ಸುಕುಮಾರ್, ಜಯ ಶೆಟ್ಟಿ ಪದ್ರ, ಸೀನ ಪೂಜಾರಿ, ಅನಂತ ಪಟ್ಟಾಭಿ ರಾವ್, ಶ್ರೀನಾಥ ಹೆಗ್ಡೆ ಅಶೋಕ್ ಸಾಲ್ಯಾನ್ ಉಪಸ್ಥಿತರಿದ್ದರು.

## ರಾಮರಾಜ್ಯ ಸ್ಥಾಪನೆಗಾಗಿ 'ಗದಾಪೂಜೆ', ಶೌರ್ಯದ ಜಾಗೃತಿ

**ಉಡುಪಿ:** ವಿಶ್ವವು ಯುದ್ಧ ಸದೃಶ ಪರಿಸ್ಥಿತಿ ಎದುರಿಸುತ್ತಿರುವ ಈ ಕಾಲಘಟ್ಟದಲ್ಲಿ, ಹಿಂದೂ ಸಮಾಜದಲ್ಲಿ ಶೌರ್ಯ ಮತ್ತು ಭಕ್ತಿಯನ್ನು ಜಾಗೃತಗೊಳಿಸುವ ಸಂಕಲ್ಪದೊಂದಿಗೆ ಹನುಮ ಜಯಂತಿಯಂದು ಉಡುಪಿ ಜಿಲ್ಲೆಯ ವಿವಿಧೆಡೆ ಸಾಮೂಹಿಕ 'ಗದಾಪೂಜೆ'ಯನ್ನು ಯಶಸ್ವಿಯಾಗಿ ನೆರವೇರಿಸ ಲಾಯಿತು.



ಹಿಂದೂ ಜನಜಾಗೃತಿ ಸಮಿತಿಯಿಂದ ಆಯೋಜಿಸಲಾಗಿದ್ದಈಕಾರ್ಯಕ್ರಮವು ದೇಶಾದ್ಯಂತ ಒಟ್ಟು 850ಕ್ಕೂ ಹೆಚ್ಚು ಸ್ಥಳಗಳಲ್ಲಿ ಸಂಪನ್ನಗೊಂಡಿದೆ.

**ವಿಜಯದ ಸಂಕಲ್ಪ**

ಇತಿಹಾಸದ ಪುಟಗಳನ್ನು ಗಮನಿಸಿದರೆ, ಎಲ್ಲಿ ಹನುಮಂತನ ಉಪಸ್ಥಿತಿ ಇದೆಯೋ ಅಲ್ಲಿ ವಿಜಯ ನಿಶ್ಚಿತ ಎಂಬ ನಂಬಿಕೆಯಿದೆ. ತ್ರೇತಾಯುಗದಲ್ಲಿ ರಾವಣನ ಲಂಕೆಯನ್ನು ದಹಿಸಿದ ಹನುಮಂತನಾಗಲಿ ಅಥವಾ ದ್ವಾಪರದಲ್ಲಿ ಅರ್ಜುನನ ರಥದ ಧ್ವಜದ ಮೇಲೆ ವಿರಾಜಮಾನನಾಗಿ ಅಧರ್ಮದ ವಿರುದ್ಧ ಪಾಂಡವರಿಗೆ ಬಲ ನೀಡಿದ ಮಾರುತಿಯಾಗಲಿ, ವಿಜಯದ ಸಂಕೇತವಾಗಿದ್ದಾರೆ. ಅದೇ ಹಾದಿಯಲ್ಲಿ ಛತ್ರಪತಿ ಶಿವಾಜಿ ಮಹಾರಾಜರ 'ಹಿಂದವಿ ಸ್ವರಾಜ್ಯ'ದ ಸ್ಥಾಪನೆಗಾಗಿ ಸಮರ್ಥ ರಾಮದಾಸ ಸ್ವಾಮಿಗಳು ಗ್ರಾಮ ಗ್ರಾಮಗಳಲ್ಲಿ ಮಾರುತಿ ಮಂದಿರಗಳನ್ನು ಸ್ಥಾಪಿಸಿ ಬಲೋಪಾಸನೆ ಆರಂಭಿಸಿದ್ದರು.

ಇಂದು ದೇಶ ಮತ್ತು ಧರ್ಮವು ಮತ್ತೆ ಸಂಕಷ್ಟದ ಸಮಯದಲ್ಲಿ ಪ್ರತಿಯೊಬ್ಬ ಹಿಂದೂವಿನಲ್ಲಿ ಮಾರುತಿಯಂತಹ ಶಕ್ತಿ, ಭಕ್ತಿಯ ಜಾಗೃತಿಯಾಗಲಿ ಎಂಬ ಆಶಯದೊಂದಿಗೆ ಪೂಜೆ ಹಮ್ಮಿಕೊಳ್ಳಲಾಗಿತ್ತು.

**ಶಾಸ್ತ್ರೋಕ್ತ ವಿಧಿವಿಧಾನ**

ಜಿಲ್ಲೆಯ ವಿವಿಧ ಹನುಮಂತ ದೇವಸ್ಥಾನಗಳಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗದಾಪೂಜೆ ವಿಧಿ, ಶ್ರೀ ಹನುಮಂತನ ಆರತಿ, ಮಾರುತಿ ಸ್ತೋತ್ರ ಪಠಣ ಮತ್ತು ಶಂಖನಾದವನ್ನು ಮಾಡಲಾಯಿತು. ನಂತರ 'ಶ್ರೀ ಹನುಮತೇ ನಮಃ' ಎಂಬ ಸಾಮೂಹಿಕ ನಾಮಜಪದ ಮೂಲಕ ಭಕ್ತಿಯ ವಾತಾವರಣ ನಿರ್ಮಾಣವಾಯಿತು. ಇದೇಸಂದರ್ಭ ಭಕ್ತರೆಲ್ಲರೂ ಸೇರಿ ರಾಮರಾಜ್ಯದ ಸ್ಥಾಪನೆಗಾಗಿ ಸಾಮೂಹಿಕ ಪ್ರತಿಜ್ಞೆಯನ್ನು ಸ್ವೀಕರಿಸಿದರು.

---

#### ಬೈಂದೂರು ವಿಧಾನಸಭಾ ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯತ್ ಎದುರು ಬಿಜೆಪಿಯಿಂದ ಏಕಕಾಲದಲ್ಲಿ ಪ್ರತಿಭಟನೆ

# ಕರಾವಳಿಗೆ ಅನುದಾನ ವಿಚಾರದಲ್ಲಿ ಸರ್ಕಾರದಿಂದ ಮಲತಾಯಿ ಧೋರಣೆ

**ಕುಂದಾಪುರ:** ರಾಜ್ಯ ಬಜೆಟ್‌ನಲ್ಲಿ ಕರಾವಳಿಗರ ನಿರ್ಲಕ್ಷ್ಯ ಮತ್ತು ಕರಾವಳಿ ಜಿಲ್ಲೆಗಳ ಯಾವುದೇ ಯೋಜನೆಗೆ ಅನುದಾನ ನೀಡದೆ ಮಲತಾಯಿ ಧೋರಣೆ ಮಾಡುತ್ತಿರುವ ಕರ್ನಾಟಕದ ಜನ ವಿರೋಧಿ ರಾಜ್ಯ ಸರ್ಕಾರದ ವಿರುದ್ಧ ಮತ್ತು ಗ್ರಾಮೀಣ ಭಾಗದ ರೈತರು, ಜನಸಾಮಾನ್ಯರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು ಮತ್ತು ಬೇಡಿಕೆಗಳ ಈಡೇರಿಸಲು ವಿಫಲವಾಗಿರುವ ಹಿನ್ನೆಲೆಯಲ್ಲಿ ಬಿಜೆಪಿ ಬೈಂದೂರು ವತಿಯಿಂದ ಬೈಂದೂರು ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯತ್ ಎದುರು ಏಕಕಾಲದಲ್ಲಿ ಪ್ರತಿಭಟನೆ ಗುರುವಾರ ನಡೆಯಿತು.

ಇಂದು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಗ್ರಾಮೀಣಜನರುಸರಕಾರದವಿವಿಧಸೌಲಭ್ಯಗಳಿಂದ ವಂಚಿತರಾಗುತ್ತಿದ್ದಾರೆ ಹಾಗೂ ಜನ ಸಾಮಾನ್ಯರ ವಿವಿಧ ಅಭಿವೃದ್ಧಿ ಬೇಡಿಕೆಗಳನ್ನು ಬಜೆಟ್‌ನಲ್ಲಿ




ಸಹ ಈಡೇರಿಸಲು ಸರಕಾರ ವಿಫಲವಾಗಿದೆ. ಆ ಹಿನ್ನಲೆಯಲ್ಲಿ ಬೈಂದೂರು ವಿಧಾನಸಭಾ ಕ್ಷೇತ್ರದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುವ ಮೂಲಕ ಕ್ಷೇತ್ರದ ಹಾಗೂ ಜಿಲ್ಲೆಯ ಈ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸುವಂತೆ ಹಾಗೂ ಜನರ ಅಭಿವೃದ್ಧಿ ಬೇಡಿಕೆ ಈಡೇರಿಸಬೇಕೆಂದು ಬಿಜೆಪಿ ಕಾರ್ಯಕರ್ತರು ಆಗ್ರಹಿಸಿದರು.

**ಜಡ್ಕಲ್‌ನಲ್ಲಿ ಶಾಸಕರು ಭಾಗಿ**

ರಾಜ್ಯ ಸರ್ಕಾರದ ವಿರುದ್ಧ ಜಡ್ಕಲ್ ಮತ್ತು ಮುದೂರು ಭಾಗದ ನೂರಾರು ಬಿಜೆಪಿ ಕಾರ್ಯಕರ್ತರು ಜಡ್ಕಲ್ ಗ್ರಾಮ ಪಂಚಾಯತ್ ಎದುರು ಶಾಸಕ ಗುರುರಾಜ ಗಂಟಿಹೊಳೆ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಕೇವಲ ಗ್ಯಾರಂಟಿಗೋಸ್ಕರ ರಾಜ್ಯದ ಜನರನ್ನು ಬೆಲೆಯೇರಿಕೆ ಕೂಪಕ್ಕೆ ತಳ್ಳಿದ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಪ್ರತಿಭಟನೆ ನಡೆಸಿದರು. ನಂತರ ತಮ್ಮ ಹಲವಾರು ಬೇಡಿಕೆಗಳನ್ನು ಪಂಚಾಯತ್ ಪಿಡಿಒ ಮೂಲಕ ಸರ್ಕಾರಕ್ಕೆ ಸಲ್ಲಿಸಲಾಯಿತು. ಪಕ್ಷದ ಹಿರಿಯರು ಹಾಗೂ ಪದಾಧಿಕಾರಿಗಳು, ಪಂಚಾಯತ್‌ನ ಮಾಜಿ ಸದಸ್ಯರು ಹಾಜರಿದ್ದರು.

> **ವಿವಿಧ ಬೇಡಿಕೆಗಳ ಈಡೇರಿಕೆಗೆ ಸರ್ಕಾರಕ್ಕೆ ಒತ್ತಾಯ**
>
> ಗ್ರಾಮೀಣ ಆಶ್ರಯ, ಅಂಬೇಡ್ಕರ್ ವಸತಿ ಯೋಜನೆಯಡಿ ಮನೆಗಳ ಹಂಚಿಕೆ, ಮತ್ಸ್ಯಾಶ್ರಯ ವಸತಿ ಯೋಜನೆಯಡಿ ಮೀನುಗಾರರಿಗೆ ವಸತಿ ನೀಡಬೇಕು, ಅರ್ಜಿ ಹಾಕಿರುವ ಅರ್ಹ ಎಲ್ಲರಿಗೂ ಬಿಪಿಎಲ್ ಕಾರ್ಡ್ ನೀಡಬೇಕು, ಹದಗೆಟ್ಟ ಗ್ರಾಮೀಣ ರಸ್ತೆಗಳನ್ನು ಅಭಿವೃದ್ಧಿಗೆ ಅನುದಾನ, ಹಿಂದುಳಿದ ವರ್ಗಗಳ ಕಾಲನಿಗಳಲ್ಲಿ ಮೂಲ ಸೌಲಭ್ಯ ಅಭಿವೃದ್ಧಿಗೆ ಅನುದಾನ, ವಿವಿಧ ಹಿಂದುಳಿದ ವರ್ಗಗಳ ಹಾಗೂ ಪ. ಜಾತಿ ಮತ್ತು ಪ.ಪಂಗಡಗಳ ಸಮುದಾಯ ಭವನ ನಿರ್ಮಾಣ, ಅಭಿವೃದ್ಧಿಗೆ ಅನುದಾನ, ಕ್ಷೇತ್ರ ವ್ಯಾಪ್ತಿಯ ಸಾರ್ವಜನಿಕ ಕೆರೆ ಅಭಿವೃದ್ಧಿ ಪಡಿಸಲು ಅನುದಾನ ಒದಗಿಸಬೇಕು, ರೈತರು ಪಡೆಯುತ್ತಿರುವ ಕೃಷಿ ಸಾಲಕ್ಕೆ ಸಂಬಂಧಿಸಿ ಜಿಪಿಎ ಅನ್ನು ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಮಾಡಿಸಲು ಕಡ್ಡಾಯಗೊಳಿಸುವುದನ್ನು ಕೈಬಿಡಬೇಕು ಎಂದು ಪ್ರತಿಭಟನಾ ನಿರತ ಬಿಜೆಪಿ ಕಾರ್ಯಕರ್ತರು ಒತ್ತಾಯಿಸಿದರು.